ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತದ 15ನೇ ಉಪರಾಷ್ಟ್ರಪತಿಯಾಗಿ ಸಿ.ಪಿ.ರಾಧಾಕೃಷ್ಣನ್ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣವಚನ ಬೋಧಿಸಿದರು. ಪ್ರಧಾನಿ ಮೋದಿ, ಗೃಹಸಚಿವ ಅಮಿತ್ ಶಾ ಉಪಸ್ಥಿತರಿದ್ದರು.

## ಸೊಂಪಾದ ಪುಟಗಳು

ಡಾ. ಹೆಡ್ಗೆವಾರ್ ಅವರ ಸ್ವಾತಂತ್ರ್ಯ ಹೋರಾಟ
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ಕನಸು ಕಾಣಲು ಕಾರಣ: ಆಯುರ್ವೇದದ ಕಣ್ಣುಗಳಲ್ಲಿ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ 7

## ದಾರಿದೀಪೋಕ್ತಿ

ನಿಮ್ಮ ಭೂತಕಾಲದೊಂದಿಗೆ ಶಾಂತಿಯನ್ನು ಸ್ಥಾಪಿಸಿಕೊಳ್ಳುವುದು ಜಾಣತನ. ಎಷ್ಟೆಂದರೂ ಅದು ಮುಗಿದ ಅಧ್ಯಾಯ. ಹಾಗೆ ಮಾಡುವುದರಿಂದ ನಿಮ್ಮ ಭವಿಷ್ಯದ ಹಾದಿಯನ್ನು ಸುಗಮಗೊಳಿಸಿಕೊಳ್ಳಬಹುದು.

## ವಕ್ರತುಂಡೋಕ್ತಿ

ಇಪ್ಪತ್ತೈದಕ್ಕೂ ಹೆಚ್ಚು ಆಹಾರಗಳನ್ನು ಇಟ್ಟಿರುವ, ಆದರೆ ತಿನ್ನಲು ಐದಾರು ಮಾತ್ರ ಯೋಗ್ಯವಾಗಿರುವುದಕ್ಕೆ ಫೈವ್ ಸ್ಟಾರ್ ಹೋಟೆಲ್ ಬ್ರೇಕ್ ಫಾಸ್ಟ್ ಎನ್ನಬಹುದು.

### ಒಟ್ಟು ವೆಚ್ಚದಲ್ಲಿ 325 ಕೋಟಿ ರು. ಶಿಕ್ಷಕರಿಗೆ ನೀಡುವ ವಿಶೇಷ ಭತ್ಯೆಗೆ ಬಳಕೆ
### ಸೆ.22ರಿಂದ ಅ.7ರವರೆಗೆ ರಾಜ್ಯಾದ್ಯಂತ ನಡೆಯಲಿರುವ ಸಮೀಕ್ಷಾ ಕಾರ್ಯ

# ಜಾತಿ ಗಣತಿಗೆ 425 ಕೋಟಿ

**ಬೆಂಗಳೂರು:** ಬಹುನಿರೀಕ್ಷಿತ ಜಾತಿ ಗಣತಿಗೆ ರಾಜ್ಯ ಸರಕಾರ ಬರೋಬ್ಬರಿ 425 ಕೋಟಿ ರು.ಗಳನ್ನು ಖರ್ಚು ಮಾಡಲಿದ್ದು, ಈ ಸಮೀಕ್ಷೆಗಾಗಿ 1.75 ಲಕ್ಷ ಶಿಕ್ಷಕರನ್ನು ಬಳಸಿಕೊಳ್ಳಲು ಮುಂದಾಗಿದೆ.

ಸೆ.22ರಿಂದ ಆರಂಭಗೊಳ್ಳಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಈ ಬಾರಿ ಎಷ್ಟು ಖರ್ಚಾಗಲಿದೆ ಎನ್ನುವ ಕುತೂಹಲ ಅನೇಕರಲ್ಲಿತ್ತು. ಆದರೀಗ ಈ ಕುತೂಹಲಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೆರೆ ಎಳೆದಿದ್ದು, ಬರೋಬ್ಬರಿ 425 ಕೋಟಿ ರು. ಮೀಸಲಿಡ ಲಾಗಿದ್ದು, ಇದರಲ್ಲಿ 325 ಕೋಟಿ ರು. ಸಮೀಕ್ಷೆಯಲ್ಲಿ ಭಾಗವಹಿಸುವ ಶಿಕ್ಷಕರಿಗೆ 'ವಿಶೇಷ ಭತ್ಯೆ'ಯ ರೂಪದಲ್ಲಿಯೇ ನೀಡಲಾಗುತ್ತದೆ. ಒಂದು ವೇಳೆ ಈಗ ಮೀಸಲಿಟ್ಟಿರುವ ಅನುದಾನ ಸಾಕಾಗದಿದ್ದರೆ ಹೆಚ್ಚುವರಿ ಅನುದಾನವನ್ನು ನೀಡುವ ಭರವಸೆ ಯನ್ನು ನೀಡಿದ್ದಾರೆ.

ಈ ಬಗ್ಗೆ ಗೃಹ ಕಚೇರಿ ಕೃಷ್ಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ರಾಜ್ಯದಲ್ಲಿ ಎರಡು ಕೋಟಿ ಮನೆಗಳಿದ್ದು, ಏಳು ಕೋಟಿ ಜನಸಂಖ್ಯೆಯಿದೆ. ಎಲ್ಲಾ ಮನೆಗಳ ಸಮೀಕ್ಷೆ ನಡೆಸಲು, ದಸರಾ ರಜೆಯ ಸಂದರ್ಭದಲ್ಲಿ 1.75 ಲಕ್ಷ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರತಿ ಶಿಕ್ಷಕರಿಗೆ 120ರಿಂದ 150 ಮನೆಗಳ ಸಮೀಕ್ಷೆಯ ಜವಾಬ್ದಾರಿಯನ್ನು ವಹಿಸಲಾಗಿದೆ. ಶಿಕ್ಷಕರು, ಆಶಾ ಕಾರ್ಯಕರ್ತರ ಗೌರವ ಧನಕ್ಕಾಗಿಯೇ 325 ಕೋಟಿ ರು. ವೆಚ್ಚವಾಗಲಿದೆ. ಈ ಹಿಂದೆ ಕಾಂತರಾಜು ಆಯೋಗ ನಡೆಸಿದ್ದ 15 ದಿನಗಳ ಸಮೀಕ್ಷೆಗೆ 165 ಕೋಟಿ ರು. ಖರ್ಚಾಗಿತ್ತು. ಆ ವರದಿಗೆ 10 ವರ್ಷ ವಾಗಿದ್ದರಿಂದಾಗಿ ಅವಧಿ ಮೀರಿದೆ ಎಂದು ತಿರಸ್ಕರಿಸಲಾಗಿದೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ಪ್ರಸ್ತುತವಾಗಿ ನಡೆಸಲಾಗುತ್ತಿರುವ ಮರು ಸಮೀಕ್ಷೆಗೆ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಡಿ. ವೇಳೆಗೆ ಸಮೀಕ್ಷಾ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. → 4

- ಸಮಾಜದಲ್ಲಿ ಅನೇಕ ಜಾತಿಗಳು ಇದ್ದು, ವೈರುಧ್ಯತೆಯಿಂದಾಗಿ ಕೂಡಿದ್ದು, ಅಸಮಾನತೆ ಈಗಲೂ ಇದೆ
- ಗ್ಯಾರಂಟಿ ಯೋಜನೆಗಳ ಮೂಲಕ ಅಸಮಾನತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಲು ಪ್ರಯತ್ನ ಮಾಡಿದ್ದೇವೆ
- ದಸರಾ ರಜೆ ಅವಧಿಯಲ್ಲಿ 1.75 ಲಕ್ಷ ಶಿಕ್ಷಕರನ್ನು ಬಳಸಿಕೊಂಡು ಜಾತಿ ಸಮೀಕ್ಷೆಯನ್ನು ನಡೆಸಲಾಗುವುದು
- ಸಮೀಕ್ಷೆ ಸಂದರ್ಭದಲ್ಲಿ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡನ್ನು ಮೊಬೈಲ್ ಸಂಖ್ಯೆಗೆ ಲಿಂಕ್ ಮಾಡುವ ಕಾರ್ಯವನ್ನು ಮಾಡಲಾಗುವುದು
- ಆಯೋಗದ ಸಹಾಯವಾಣಿ ಸಂಖ್ಯೆ 8050770004 ಗೆ ಕರೆ ಮಾಡಿ ಸಾರ್ವಜನಿಕರು ಸಮೀಕ್ಷೆ ಕುರಿತು ಯಾವುದೇ ಮಾಹಿತಿ ಪಡೆಯಬಹುದು.

### ಮತಾಂತರಗೊಂಡಿದ್ದರೆ, ಮತಾಂತರಗೊಂಡ ಧರ್ಮ ನಮೂದಿಸಿ

ಮೀಸಲು ಪಡೆಯುವ ಉದ್ದೇಶದಿಂದ ಅನೇಕರೂ, ಮತಾಂತರಗೊಂಡಿದ್ದರೂ ಮೂಲ ಜಾತಿಯನ್ನು ಈ ಹಿಂದೆ ಬರೆಸಿದ್ದರು. ಇದರಿಂದ ಹಲವು ಗೊಂದಲಗಳು ಉಂಟಾಗಿದ್ದವು. ಆದ್ದರಿಂದ ಇದೀಗ ಮತಾಂತರಗೊಂಡಿರುವವರು ತಾವು ಅನುಸರಿಸುತ್ತಿರುವ ಧರ್ಮವನ್ನು ನಮೂದಿಸಬೇಕು. ಸಮೀಕ್ಷೆಯಲ್ಲಿ ಪ್ರಸ್ತುತ ಪಾಲಿಸುತ್ತಿರುವ ಧರ್ಮವನ್ನು ಮಾತ್ರ ಪರಿಗಣಿಸಲಾಗುತ್ತದೆ ಎಂದು ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು. ಇದರ ಮೇಲೆಯೂ ಗೊಂದಲಗಳಿದ್ದರೆ, ಆಯೋಗ ಈ ಬಗ್ಗೆ ಸೂಕ್ತ ಕ್ರಮವಹಿಸಲಿದೆ ಎಂದಿದ್ದಾರೆ.

ಸೆ.22ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಿಂದುಳಿದಿರುವಿಕೆಯ ಮತ್ತೊಂದು ಸಮೀಕ್ಷೆ ಮಾಡುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಕುರುಬ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಮರಾಠ ಕ್ರಿಶ್ಚಿಯನ್, ಬಲಿಜ ಕ್ರಿಶ್ಚಿಯನ್, ಮಾದಾರ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಬಂಜಾರ ಕ್ರಿಶ್ಚಿಯನ್, ಬೋವಿ ಕ್ರಿಶ್ಚಿಯನ್- ಇಂಥ ಜಾತಿಗಳು ಇವೆಯೇ? ಎಂದು ಮುಖ್ಯಮಂತ್ರಿ ತಿಳಿಸಬೇಕು. ಈ ಥರ 47 ಹೊಸ ಜಾತಿ ನಿರ್ಮಿಸಿದ್ದಾರೆ.
-ಎನ್.ರವಿಕುಮಾರ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯಸಚೇತಕ

ಕೇಂದ್ರ ಸರಕಾರ ಜನಗಣತಿಯ ಜತೆ ಜಾತಿಗಣತಿ ನಡೆಸಲು ನಿರ್ಧರಿಸಿದೆ. ಒಂದು ವೇಳೆ ಜಾತಿ ಹೇಳಲು ಈಗ ಹಿಂದೇಟು ಹಾಕಿದರೆ ಕೇಂದ್ರ ಸರಕಾರ ಸಮೀಕ್ಷೆ ನಡೆಸಿದಾಗಲಾದರೂ ಹೇಳಬೇಕಾಗುತ್ತದೆ. ಕೇಂದ್ರ ಸರಕಾರ ಜನಗಣತಿ ನಡೆಸುತ್ತದೆಯೇ ಹೊರತು ಸಾಮಾಜಿಕ ಶೈಕ್ಷಣಿಕ ಮಾಹಿತಿಗಳನ್ನು ಕಲೆ ಹಾಕುವುದಿಲ್ಲ. ಅಸಮಾನತೆಯನ್ನು ನಿವಾರಣೆ ಮಾಡಲು ಹಾಗೂ ಸಾಮಾಜಿಕ ನ್ಯಾಯ ಕಾಪಾಡಲು ಇಂತಹ ಸಮೀಕ್ಷೆ ಅಗತ್ಯ.
-ಸಿದ್ದರಾಮಯ್ಯ, ಮುಖ್ಯಮಂತ್ರಿ



### ನೇಪಾಳದ ಮೊದಲ ಮಹಿಳಾ ಪ್ರಧಾನಿ ಸುಶೀಲಾ
### ನೆರೆದೇಶದ ಹಲವು ದಿನಗಳ ಅರಾಜಕತ್ವಕ್ಕೆ ತೆರೆ

# ನೇಪಾಳಕ್ಕೆ ನ್ಯಾ.ಸುಶೀಲಾ ಕರ್ಕಿ ಮಧ್ಯಂತರ ಪ್ರಧಾನಿ

**ಕಠ್ಮಂಡು:** ನೇಪಾಳ ಮಧ್ಯಂತರ ಪ್ರಧಾನಿ ಸ್ಥಾನವನ್ನು ಯಾರು ಪಡೆಯುತ್ತಾರೆ ಎಂಬ ಪ್ರಶ್ನೆಗಳಿಗೆ ತೆರೆಬಿದ್ದಿದೆ. ಅಲ್ಲಿನ ಸರ್ವೋಚ್ಚ ನ್ಯಾಯಾಲಯದ

ನಿವೃತ್ತ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕರ್ಕಿಯನ್ನು ಜೆನ್ ಝೀ ತಲೆಮಾರು ತಮ್ಮ ನಾಯಕಿಯನ್ನಾಗಿ ಆಯ್ಕೆ ಮಾಡಿದ್ದಾರೆ. ನೇಪಾಳ ವಿದ್ಯುತ್ ಮಂಡಳಿ ಮುಖ್ಯಸ್ಥರಾಗಿ ಕ್ರಾಂತಿಕಾರಕ ಬದಲಾವಣೆ ಮಾಡಿದ್ದ ಕುಲಮನ ಘಿಸಿಂಗ ಈ ಪೈಪೋಟಿಯಲ್ಲಿ ಹಿನ್ನೆಲೆಗೆ ಸರಿದಿದ್ದಾರೆ. ಬುಧವಾರ ಸುಶೀಲಾ ಹೆಸರಿಗೆ ಹೋರಾಟಗಾರರು ಮೊದಲ ಆದ್ಯತೆ ನೀಡಿದ್ದರೂ, ದಿಢೀರನೆ ಘಿಸಿಂಗ ಹೆಸರು ಮುನ್ನೆಲೆಗೆ ಬಂದಿತ್ತು. ಸುಶೀಲಾ ಆಯ್ಕೆ ಯೊಂದಿಗೆ ಸಂಸತ್ತು ವಿಸರ್ಜನೆಗೊಂಡಿದೆ. ಅಲ್ಲಿಗೆ ಸೋಮವಾರದಿಂದ ಶುರುವಾಗಿದ್ದ ಅರಾಜಕತ್ವಕ್ಕೆ ತೆರೆಬಿದ್ದಿದೆ.

ಸುಶೀಲಾ, ಘಿಸಿಂಗ ಜೊತೆಗೆ ಕಠ್ಮಂಡು ಮೇಯರ್ ಬಲೇಂದ್ರ ಶಾ, ಧರನ್ ಪ್ರದೇಶದ ಮೇಯರ್ ಹರ್ಕಾ ಸಂಪಂಗ್ ಎಂಬ ಹೆಸರೂ ಪರಿಶೀಲನೆಯಲ್ಲಿತ್ತು. ಇವರೆಲ್ಲರನ್ನೂ ಮೀರಿ ಜೆನ್ ಝೀ ಹೋರಾಟಗಾರರು, ಸೇನೆಗೆ ಕರ್ಕಿ ಜೊತೆಗೆ ನಿಂತಿದೆ. ರಾಷ್ಟ್ರಪತಿ ರಾಮಚಂದ್ರ ಪೌಡೆಲ್ ಇದನ್ನು ಸಮ್ಮತಿಸಿದ್ದಾರೆ.

### ಭಾರತದ ವಾಲಿಬಾಲ್ ತಂಡವೊಂದರ ರಕ್ಷಣೆ

ನೇಪಾಳದಲ್ಲಿ ಸಿಲುಕಿ ಪ್ರಾಣಭೀತಿಗೊಳಗಾಗಿದ್ದ ಭಾರತದ ಟಿ.ವಿ ನಿರೂಪಕಿ ಉಪಾಸನಾ ಗಿಲ್ ಸಾಮಾಜಿಕ ತಾಣದಲ್ಲಿ ಮಾಡಿಕೊಂಡ ಮನವಿ ಪರಿಣಾಮ, ಭಾರತೀಯ ವಾಲಿಬಾಲ್ ತಂಡವೊಂದನ್ನು ಸುರಕ್ಷಿತವಾಗಿ ದೇಶಕ್ಕೆ ಕರೆತರಲಾಗಿದೆ. ನೇಪಾಳದ ಗಂಡಕಿ ಪ್ರಾಂತ್ಯದ ಪೋಖಾರ ಎಂಬಲ್ಲಿ ವಾಲಿಬಾಲ್ ಕೂಟವೊಂದಕ್ಕೆ ತೆರಳಿದ್ದ ಉಪಾಸನಾ ಸನಿಹದಲ್ಲಿ ಪ್ರಾಣಭೀತಿಯಿಂದ ಪಾರಾಗಿದ್ದಾರೆ. ಅವರು ಮಾಡಿಕೊಂಡ ಮನವಿಯ ಪ್ರಕಾರ, ಭಾರತೀಯ ರಾಯಭಾರ ಕಚೇರಿ ವಾಲಿಬಾಲ್ ತಂಡ ಹಾಗೂ ಉಪಾಸನಾರನ್ನು ರಕ್ಷಿಸಿದೆ.

**ಸಾವಿನ ಸಂಖ್ಯೆ 51ಕ್ಕೇರಿಕೆ:** ಸಂಘರ್ಷದಲ್ಲಿ ಒಟ್ಟು ಸಾವಿನ ಸಂಖ್ಯೆ 51ಕ್ಕೇರಿದೆ. ಗಾಯ ಗೊಂಡವರ ಸಂಖ್ಯೆ 1000 ದಾಟಿದೆ ಎಂದು ವರದಿ ಗಳು ಹೇಳಿವೆ. ಇವೆಲ್ಲದರ ನಡುವೆ ಶುಕ್ರವಾರ ನೇಪಾಳದಲ್ಲಿ ಪರಿಸ್ಥಿತಿ ಶಾಂತವಾಗಿಯೇ ಇತ್ತು. → 4

### ತಪ್ಪಿಸಿಕೊಳ್ಳಲು ಯತ್ನಿಸಿ ವಿಫಲ: ಉತ್ತರಪ್ರದೇಶದ ಮಹಿಳೆ ಸಾವು

ಸೆ.9ರಂದು ಕಠ್ಮಂಡುವಿನ ಹೋಟೆಲ್‌ವೊಂದಕ್ಕೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದರು. ಈ ವೇಳೆ ಹೋಟೆಲ್‌ನಲ್ಲಿದ್ದ ಭಾರತೀಯ ಮಹಿಳೆ ರಾಜೇಶ್ ಗೋಲಾ ತಪ್ಪಿಸಿಕೊಳ್ಳುವ ಯತ್ನದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಎಲ್ಲ ಕಡೆ ಬೆಂಕಿಯಿದ್ದಿದ್ದರಿಂದ ಹೋಟೆಲ್‌ನಿಂದ ಹೊರಬರಲು ಗೋಲಾಗೆ ಆಗಿಲ್ಲ. ಆಗ ಭದ್ರತಾ ಸಿಬ್ಬಂದಿ ಸುರಕ್ಷಾ ಮ್ಯಾಟ್ ಹಾಕಿ, 4ನೇ ಮಹಡಿಯಿಂದ ನೆಗೆಯಲು

ಸೂಚಿಸಿದ್ದಾರೆ. ಪತಿ ರಾಮವೀರ್ ಗೋಲಾ ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾದರೂ, ಪತ್ನಿ ರಾಜೇಶ್ ಗೋಲಾ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

## ಮದ್ದೂರು ಗಲಭೆ; ಮೊದಲ ತಲೆದಂಡ

**ಬೆಂಗಳೂರು:** ಗಣೇಶ ವಿಸರ್ಜನೆ ವೇಳೆ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ನಡೆದಿದ್ದ ಕೋಮುಗಲಭೆಗೆ ಸಂಬಂಧಿಸಿ ದಂತೆ ಮಂಡ್ಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ ಮಾಡಿದೆ. ಮದ್ದೂರಿನಲ್ಲಿ ನಡೆದ ಕೋಮುಗಲಭೆ ಸರಕಾರಕ್ಕೆ ತೀವ್ರ ಮುಜುಗರವನ್ನು ಉಂಟು ಮಾಡಿದೆ. ಆದ್ದರಿಂದ ಪರಿಸ್ಥಿತಿ ನಿಭಾಯಿಸುವಲ್ಲಿ ಎಡವಿದ್ದಾರೆ ಎನ್ನುವ ಕಾರಣಕ್ಕೆ ಮಂಡ್ಯ ಹೆಚ್ಚುವರಿ ಎಸ್‌ಪಿ ತಿಮ್ಮಯ್ಯ ಅವರನ್ನು ವರ್ಗಾವಣೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ಭಾನುವಾರ ಗಣೇಶ ವಿಸರ್ಜನೆ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿತ್ತು. ಇದು ಕೋಮು ಉದ್ವಿಗ್ನತೆಗೆ ಕಾರಣವಾಯಿತು. ಇದೇ ವಿಷಯವನ್ನು ಮುಂದಿಟ್ಟುಕೊಂಡು, ರಾಜ್ಯ ಸರಕಾರದ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸಿತ್ತು. ಈ ಸಂಬಂಧಿಸಿ ಪ್ರತಿಕ್ರಿಯಿಸಿರುವ ಗೃಹಸಚಿವ ಪರಮೇಶ್ವರ, 'ಲೋಪಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿದರು.

## ಯತ್ನಾಳ್ ವಿರುದ್ಧ ಎಫ್‌ಐಆರ್

**ಮಂಡ್ಯ:** ಮದ್ದೂರು ಪಟ್ಟಣದಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿದಂತೆ ಪ್ರಚೋದನಕಾರಿ ಭಾಷಣ ಮಾಡಿದ್ದ ಸಿ.ಟಿ. ರವಿ ವಿರುದ್ಧ ಎಫ್‌ಐಆರ್ ದಾಖಲಾದ ಬೆನ್ನಲ್ಲೇ, ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧವೂ ಪೊಲೀಸರು ಸ್ವಯಂಪ್ರೇರಿತವಾಗಿ ಎಫ್‌ಐಆರ್ ದಾಖಲಿಸಿದ್ದಾರೆ. ಅನ್ಯಕೋಮಿನ ಭಾವನೆಗಳಿಗೆ ಧಕ್ಕೆ ಉಂಟಾಗುವಂತೆ ಮತ್ತು ನೋವು ಉಂಟಾಗುವಂತೆ ಮಾತನಾಡಿದ್ದಾರೆ' ಎಂದು ಇನ್‌ಸ್ಪೆಕ್ಟರ್ ಮಂಜುನಾಥ್ ನೀಡಿದ ದೂರಿನ ಹಿನ್ನೆಲೆಯಲ್ಲಿ ಮದ್ದೂರು ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಫನ್‌ತರಂಗ
- ರಘುಪತಿ ಶೃಂಗೇರಿ -

ಬಿಡದಿ ಬಳಿ ಭಾರತದ ಮೊದಲ 'ಎಐ ನಗರ' ಸುದ್ದಿ




### ಹಾಸನ ಜಿಲ್ಲೆಯ ಮೊಸಳೆ ಹೊಸಳ್ಳಿ ಗ್ರಾಮದಲ್ಲಿ ಟ್ಯಾಂಕರ್ ಹರಿದು ದುರ್ಘಟನೆ
### ಮೃತರ ಕುಟುಂಬಕ್ಕೆ ಐದು ಲಕ್ಷ ಪರಿಹಾರ: ಮುಖ್ಯಮಂತ್ರಿ ಘೋಷಣೆ

# ಗಣೇಶ ಮೆರವಣಿಗೆಯಲ್ಲಿ ಭೀಕರ ದುರಂತ: 8 ಸಾವು

**ಹಾಸನ:** ಗಣೇಶನ ವಿಸರ್ಜನೆಯ ಮೆರವಣಿಗೆಯ ಸಂಭ್ರಮದಲ್ಲಿದ್ದ ಮೊಸಳೆ ಹೊಸಳ್ಳಿ ಗ್ರಾಮದಲ್ಲಿ, ಶುಕ್ರವಾರ ರಾತ್ರಿ ಕೆಲವೇ ನಿಮಿಷಗಳಲ್ಲಿ ಸೂತಕದ ಛಾಯೆ ಮೂಡಿದೆ. ಹಾಸನ-ಮೈಸೂರು ರಾಜ್ಯ ಹೆದ್ದಾರಿಯಲ್ಲಿರುವ ಮೊಸಳೆ ಹೊಸಳ್ಳಿ ಬಳಿ ಗಣೇಶ ಮೆರವಣಿಗೆ ಹೋಗುತ್ತಿದ್ದಾಗ ಡಿಜೆ ಹಾಕಿಕೊಂಡು ಡಾನ್ಸ್ ಮಾಡುತ್ತಿದ್ದವರ ಮೇಲೆ ಕ್ಯಾಂಟರ್ ಲಾರಿ ಹರಿದಿದೆ. ಈ ವೇಳೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ 8 ಮಂದಿ ಮೃತಪಟ್ಟಿದ್ದು, ಮೃತರ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ. 20ಕ್ಕೂ ಹೆಚ್ಚು ಜನರ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಸೇರಿದ್ದರು. ಏನಾಗುತ್ತಿದೆ ಎಂದು ಅರಿಯುವಷ್ಟರಲ್ಲಿ ಲಾರಿ ಜನರತ್ತ ನುಗ್ಗಿದ್ದು, ಸ್ಥಳದಲ್ಲಿಯೇ 8 ಮಂದಿ ಸಾವನ್ನಪ್ಪಿದ್ದಾರೆ. ಇನ್ನಿತರರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡವರನ್ನು ಹಾಸನ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿದೆ. ಗಾಯಗೊಂಡವರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

**ಮೃತರ ಕುಟುಂಬಕ್ಕೆ ಐದು ಲಕ್ಷ ಪರಿಹಾರ:** ಘಟನೆಯಲ್ಲಿ ಮೃತಪಟ್ಟವರ ಆತ್ಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಕುಟುಂಬಕ್ಕೆ ಐದು ಲಕ್ಷ ಪರಿಹಾರ ಘೋಷಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಹಾಸನದಲ್ಲಿ ಗಣೇಶ ವಿಸರ್ಜನೆಗಾಗಿ ಮೆರವಣಿಗೆಯಲ್ಲಿ ತೆರಳುತ್ತಿದ್ದವರ ಮೇಲೆ ಲಾರಿ ಹರಿದು ಹಲವರು ಸಾವಿಗೀಡಾಗಿ, ಸುಮಾರು 20ಕ್ಕೂ ಹೆಚ್ಚು ಮಂದಿ ಗಂಭೀರ ಗಾಯಗೊಂಡ ಸುದ್ದಿ ತಿಳಿದು ಅತೀವ ದುಃಖವಾಯಿತು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಾಳುಗಳು ಆದಷ್ಟು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಕುಟುಂಬಗಳಿಗೆ ಸರಕಾರದ ವತಿಯಿಂದ ತಲಾ 5 ಲಕ್ಷ ರು.ಪರಿಹಾರ ನೀಡಲಾಗುವುದು. ಘಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಯ ವೆಚ್ಚವನ್ನು ಸರಕಾರವೇ ಭರಿಸಲಿದೆ ಎಂದು ತಿಳಿಸಿದ್ದಾರೆ. → 9

### ಆಗಿದ್ದೇನು?

- ಹಾಸನದ ಮೊಸಳೆ ಹೊಸಳ್ಳಿ ಗ್ರಾಮದಲ್ಲಿ ಘಟನೆ. ಗಣೇಶ ವಿಸರ್ಜನೆ ಮೆರವಣಿಗೆ ನಡೆಯುವಾಗ ಎದುರಿನಿಂದ ನುಗ್ಗಿದ ಕ್ಯಾಂಟರ್ ಲಾರಿ
- ಕ್ಯಾಂಟರ್ ಹರಿದಿದ್ದರಿಂದ ಕನಿಷ್ಠ 8 ಸಾವು, 20ಕ್ಕೂ ಹೆಚ್ಚು ಜನರಿಗೆ ಗಂಭೀರ ಗಾಯ, ಚಿಕಿತ್ಸೆ
- ಘಟನಾ ಸ್ಥಳಕ್ಕೆ ಮಾಜಿ ಸಚಿವ ರೇವಣ್ಣ, ಎಸ್‌ಪಿ ಮಹಮದ್ ಸುಜೇತಾ ಸೇರಿದಂತೆ ಹಲವರ ಭೇಟಿ

### ಕನ್ನಡ ಸೇರಿ ಎಲ್ಲ ಭಾಷೆಯ ಚಿತ್ರಗಳಿಗೆ ಆದೇಶ ಅನ್ವಯ
### ಗೋಲ್ಡ್ ಕ್ಲಾಸ್ ಪರದೆಗೆ ಮಾತ್ರ ಈ ಆದೇಶದಿಂದ ವಿನಾಯಿತಿ

# ಟಿಕೆಟ್ ದರ ₹200 ಫಿಕ್ಸ್

**ಬೆಂಗಳೂರು:** ಬಹುನಿರೀಕ್ಷಿತ ಏಕರೂಪ ಸಿನಿಮಾ ಟಿಕೆಟ್ ದರ ಜಾರಿಗೆ ಬರುವ ಮೂಲಕ ಹಲವು ವರ್ಷಗಳ ಸಿನಿಪ್ರಿಯ ಬೇಡಿಕೆ ಈಡೇರಿದಂತಾಗಿದೆ. ಸ್ಟಾರ್ ನಟರ ಚಿತ್ರಗಳು ತೆರೆಗೆ ಬಂದಾಗ ಒಂದಕ್ಕೆ ನಾಲ್ಕು ಪಟ್ಟು ದರ ಏರಿಸುವ ಚಿತ್ರಮಂದಿರಗಳ ಆಟಾಟೋಪಕ್ಕೆ ಬ್ರೇಕ್ ಹಾಕಿರುವ ರಾಜ್ಯ ಸರಕಾರ ಇನ್ನು ಮುಂದೆ ಟಿಕೆಟ್ ದರ 200 ಮೀರದಂತೆ ಆದೇಶ ಹೊರಡಿಸಿದೆ.

ಈ ಬಗ್ಗೆ ಅಧಿಕೃತ ಆದೇಶ ಹೊರಡಿಸಿರುವ ಸರಕಾರ, ಶುಕ್ರವಾರದಿಂದಲೇ ಏಕರೂಪ ಟಿಕೆಟ್ ದರ ಜಾರಿಗೆ ಬರಲಿದೆ ಎಂದಿದೆ. ಏಕಪರದೆ ಹಾಗೂ ಮಲ್ಟಿಪ್ಲೆಕ್ಸ್‌ನಲ್ಲಿ ಟಿಕೆಟ್‌ನ ಮೂಲ ಬೆಲೆ 200 ರು. ದಾಟುವಂತಿಲ್ಲ. ಶೇ.18 ತೆರಿಗೆಯೂ ಸೇರಿದರೆ ಸಿನಿಮಾದ ಟಿಕೆಟ್ ದರ 236 ರು. ಮೀರುವಂತಿಲ್ಲ ಎನ್ನುವ ಸ್ಪಷ್ಟ ಆದೇಶವನ್ನು ಹೊರಡಿಸಿದೆ. ಮಲ್ಟಿಪ್ಲೆಕ್ಸ್‌ಗಳನ್ನು ಒಳಗೊಂಡು ರಾಜ್ಯದ ಎಲ್ಲಾ ಚಿತ್ರಮಂದಿರಗಳಲ್ಲಿ ಎಲ್ಲಾ ಭಾಷೆಯ ಚಲನಚಿತ್ರಗಳ ಎಲ್ಲಾ ಪ್ರದರ್ಶನಕ್ಕೆ ಈ ಮಿತಿ ಅನ್ವಯವಾಗುತ್ತದೆ. ಈ ಆದೇಶದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿರುವ ಸರಕಾರ, ಗೋಲ್ಡ್ ಕ್ಲಾಸ್ ಆಸನದ ವ್ಯವಸ್ಥೆಯಿರುವ ಮಲ್ಟಿಪ್ಲೆಕ್ಸ್‌ಗಳಿಗೆ ಈ ಆದೇಶ ಅನ್ವಯವಾಗುವುದಿಲ್ಲ. ಉಳಿದೆಡೆ 200 ರು. ಮೀರಬಾರದು ಎಂದಿದೆ.

- ಮಲ್ಟಿಪ್ಲೆಕ್ಸ್ ಸೇರಿ ಎಲ್ಲ ಚಿತ್ರಮಂದಿರಗಳಲ್ಲಿ ಗರಿಷ್ಠ 200 ರು. ದರ ನಿಗದಿ: ಸರಕಾರ ಆದೇಶ
- ಟಿಕೆಟ್ ದರದ ಮೇಲೆ ಶೇ.18 ಜಿಎಸ್‌ಟಿ ವಿಧಿಸಬಹುದು, ಒಟ್ಟು ಬೆಲೆ 236 ರು. ಮೀರುವಂತಿಲ್ಲ
- ಆದೇಶ ಗೋಲ್ಡ್ ಕ್ಲಾಸ್ ಹಾಗೂ 75ಕ್ಕಿಂತ ಕಡಿಮೆ ಆಸನಗಳಿರುವ ಪ್ರೀಮಿಯಂ ಚಿತ್ರಮಂದಿರಗಳಿಗೆ ಅನ್ವಯಿಸುವುದಿಲ್ಲ, ಉಳಿದೆಲ್ಲಡೆ ಜಾರಿಗೆ
- ಕನ್ನಡ ಸೇರಿ ರಾಜ್ಯದಲ್ಲಿ ಬಿಡುಗಡೆ ಯಾಗುವ ಎಲ್ಲ ಭಾಷೆಯ ಚಿತ್ರಗಳಿಗೆ ನಿಯಮ ಅನ್ವಯ.

## ಸಮಾಚಾರ ಸಣ್ಣದಲ್ಲ

### ಮಚ್ಚಿನಿಂದ ಕೊಚ್ಚಿ 2ನೇ ಪತ್ನಿ ಕೊಲೆ: ಬಂಧನ

**ಗುಡಿಬಂಡೆ:** ಪಟ್ಟಣದ ಎಂಟನೇ ವಾರ್ಡಿನಲ್ಲಿ ವಾಸವಿದ್ದ ಮಹಿಳೆಯನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ನಡೆದಿದೆ. ಕೊಲೆಯಾದ ಮಹಿಳೆಯನ್ನು ರನಿಜಾಬಿ (35) ಎಂದು ಗುರ್ತಿಸಲಾಗಿದೆ. ಇನ್ನೂ ಸ್ಥಳಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಡಿವೈಎಸ್ಪಿ ಶಿವಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಆರೋಪಿ ಬಾಬಾಜಾನ್‌ರನ್ನು ಬಂಧಿಸಿದ್ದಾರೆ. ಮೃತ ರನಿಜಾಬಿ ಪಟ್ಟಣದಲ್ಲಿ ಕಳೆದ 3 ವರ್ಷಗಳಿಂದ ಎರಡನೇ ಗಂಡನಾದ ಬಾಬಾ ಜಾನ್‌ರೊಂದಿಗೆ ವಾಸವಾಗಿದ್ದು, ಶುಕ್ರವಾರ ಮಧ್ಯಾಹ್ನ ಸುಮಾರು 4 ಗಂಟೆ ಸಮಯದಲ್ಲಿ ಗಂಡ ಹೆಂಡತಿ ನಡುವೆ ಕ್ಷುಲಕ ಕಾರಣಕ್ಕೆ ಜಗಳವಾಗಿದೆ. ಈ ವೇಳೆ ಪತ್ನಿಯನ್ನು ಗಂಡ ಭೀಕರವಾಗಿ ಕೊಲೆ ಮಾಡಿದ್ದಾನೆ ಎನ್ನಲಾಗಿದೆ. ಕೊಲೆಯಾದ ಮಹಿಳೆ ಮೂಲತಃ ಶ್ರೀನಿವಾಸಪುರ ವಾಸಿಯಾಗಿದ್ದು, ಈ ಮೊದಲು ಮುಳಬಾಗಿಲು ತಾಲೂಕಿನ ಅಲ್ಲಾಬಕಾಶ್ ಎಂಬಾತನೊಂದಿಗೆ ಮದುವೆಯಾಗಿತ್ತು. ನಂತರ ಆತನನ್ನು ಬಿಟ್ಟು ಬಾಬಾಜಾನ್‌ನೊಂದಿಗೆ ಎರಡನೇ ಮದುವೆಯಾಗಿದ್ದಳು.

### ಹಸಿರು ಸಹಕಾರಿ ಸಂಘದ ಸಭೆ 24ಕ್ಕೆ

**ಚಿಕ್ಕನಾಯಕನಹಳ್ಳಿ:** ಹಸಿರು ಸಮೃದ್ಧಿ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸಾಮಾನ್ಯ ಸಭೆ ಸೆ. 24 ರಂದು ಬೆಳಗ್ಗೆ 11 ಗಂಟೆಗೆ ನಗರದ ಸಂಘದ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದೆ. ಸಹಕಾರಿ ಸಂಘದ ಅಧ್ಯಕ್ಷ ಎಲ್.ಎಸ್.ಉಮೇಶ್ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಉಪಾಧ್ಯಕ್ಷ ಪಾಲಾಕ್ಷಮೂರ್ತಿ ರೈತ ಮುಖಂಡರಾದ ಶಿವಶಂಕರಪ್ಪ, ಉಮೇಶಗೌಡ, ಕಾರ್ಯಕಾರಿ ಮಂಡಳಿ ಆಗಮಿಸಲಿದ್ದಾರೆ. ಷೇರುದಾರರು ಸಭೆಯಲ್ಲಿ ಪಾಲ್ಗೊಳ್ಳುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಲ್.ಎಸ್.ರಂಜಿತ್ ವಿನಂತಿಸಿದ್ದಾರೆ.

### ವಿಶ್ವಕರ್ಮ ಜಯಂತಿ ಆಚರಣೆ ಸೆ.17ರಂದು

**ಚಿಕ್ಕಬಳ್ಳಾಪುರ:** ವಿಶ್ವಕರ್ಮ ಜಯಂತಿಯ ದಿನಾಚರಣೆಯನ್ನು ಸೆಪ್ಟೆಂಬರ್ 17 ರಂದು ಹೆಚ್ಚಿನ ಜನರು ಆಗಮಿಸಿ ಅರ್ಥಪೂರ್ಣವಾಗಿ ಆಚರಿಸಲು ನೇರವಾಗಬೇಕು ಎಂದು ಡಾ.ಎನ್. ಭಾಸ್ಕರ್ ಮನವಿ ಮಾಡಿದರು. ಈ ಕುರಿತ ಪೂರ್ವಭಾವಿ ಸಿದ್ದತಾ ಸಭೆಯಲ್ಲಿ ಸಮುದಾಯದ ಮುಖಂಡರ ಸಲಹೆಗಳನ್ನು ಸ್ವೀಕರಿಸಿ ನಂತರ ಅವರು ಮಾತನಾಡಿದರು. ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕಿದೆ. ವೇದಿಕೆ ಸಿದ್ಧತೆ, ಆಹ್ವಾನ ಪತ್ರಿಕೆಗಳ ಮುದ್ರಣ, ವಿತರಣೆ, ಭಾಷಣ, ಎಸ್. ಎಸ್. ಎಲ್. ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ ಮಾಡಲು ತೀರ್ಮಾನಿಸಲಾಗಿದೆ. ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿದರು. ಎಲ್ಲಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿ ಯಶಸ್ವಿಯಾಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೇಮಾವತಿ ಕೆನಾಲ್ ಕಾಮಗಾರಿ ಖುದ್ದು ವೀಕ್ಷಿಸಿದ ಉಪ ಮುಖ್ಯಮಂತ್ರಿ

# ಜಿಲ್ಲೆಯ ಹಿತ ಕಾಯುವೆ: ಡಿಕೆಶಿ

**ತುಮಕೂರು:** ಜಿಲ್ಲೆಯ ಗುಬ್ಬಿ ತಾಲೂಕಿನ ಸುಂಕಾಪುರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ಹಾಗೂ 70ನೇ ಕಿ.ಮೀ.ನಲ್ಲಿ ಹೇಮಾವತಿ ನಾಲೆಯಲ್ಲಿ ನೀರು ಹರಿಯುತ್ತಿರುವುದನ್ನು ವೀಕ್ಷಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಸುಮಾರು 2 ತಿಂಗಳಿನಿಂದ ಕೇಂದ್ರ ಮಂತ್ರಿಗಳು ಹಾಗೂ ಶಾಸಕರು ಲಿಂಕ್ ಕೆನಾಲ್ ಕಾಮಗಾರಿ ಪರಿವೀಕ್ಷಣೆ ಮಾಡುವಂತೆ ಸಲಹೆ ನೀಡಿದ್ದರು. ಅದರಂತೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿದ್ದೇನೆ ಎಂದರು.

ನಾನು ಒಂದು ಕ್ಷೇತ್ರಕ್ಕೆ ಉಪಮುಖ್ಯಮಂತ್ರಿಯಲ್ಲ. ನಾನು ಕರ್ನಾಟಕ ರಾಜ್ಯದ ಉದ್ದಕ್ಕೂ ಕೂಡಾ ನೀರಾವರಿ ಇಲಾಖೆಯ ಮಂತ್ರಿಯಾಗಿದ್ದೇನೆ. ತುಮಕೂರಿನ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿನ ಅಭಿವೃದ್ಧಿ, ಶ್ರೇಯಸ್ಸು ನನಗೆ ಮುಖ್ಯ. ಹಾಗೆಯೇ ತುಮಕೂರು ನನಗೆ ಬಹಳ ಹತ್ತಿರವಾದ ಜಿಲ್ಲೆ ಎಂದು ಹೇಳಿದರು.

ತುಮಕೂರು ಜಿಲ್ಲೆಯ ಜನತೆ ಎಲ್ಲ ಸಂದರ್ಭದಲ್ಲೂ ನನಗೆ ಹಾಗೂ ನಮ್ಮ ಸರಕಾರ ರಚನೆಗೆ ಸಹಕಾರ ನೀಡಿದ್ದಾರೆ. ಅವರ ಹಿತ ಕಾಪಾಡುವುದು ನನ್ನ ಕರ್ತವ್ಯ ಎಂದರು.

ಈ ಹಿಂದೆ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ನಾನು ನೀರಾವರಿ ಸಚಿವನಾಗಿದ್ದೆ. ಆಗ ಈ ಯೋಜನೆಯನ್ನು ಮಂಜೂರಾತಿ ಮಾಡಿದೆವು. ಆ ನಂತರ ಬಂದ ಮುಖ್ಯಮಂತ್ರಿ ಯಡಿಯೂರಪ್ಪನಮ ಹಾಗೂ ಆಗಿನ ಜಿಲ್ಲಾ ಸಚಿವರು ಈ ಕಾಮಗಾರಿ ನಿಲ್ಲಿಸಿದ್ದರಿಂದ ಅಂದು 600 ಕೋಟಿ ಇದ್ದದ್ದು ಈಗ ಒಂದು ಸಾವಿರ ಕೋಟಿಗೆ ಹೋಗಿದೆ. ಕೇವಲ ನಾಲ್ಕೈದು ವರ್ಷಗಳಲ್ಲಿ 400 ಕೋಟಿ ಹೆಚ್ಚಳವಾಗಿದೆ ಎಂದು ಹೇಳಿದರು.

ಗುಬ್ಬಿ ತಾಲೂಕಿನ ಸುಂಕಾಪುರಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ಬಳಿ ತೆರಳಿ ಖುದ್ದು ವೀಕ್ಷಿಸಿದರು.

### ನಾಲ್ಕೈದು ತಿಂಗಳಲ್ಲಿ ಕೆಲಸ ಪೂರ್ಣ

**ಮಾಜಿ ಸಚಿವ ದಿ. ವೈ.ಕೆ. ರಾಮಯ್ಯನವರ ಕಾಲದಿಂದ ಈ ಯೋಜನೆಗಾಗಿ ಹೋರಾಟ ನಡೆದಿದೆ. ಅವರಿಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಕೆಲಸ ಪ್ರಾರಂಭವಾಗಿದ್ದು, 400 ಕೋಟಿ ಹಣ ಕೂಡಾ ಬಿಡುಗಡೆ ಮಾಡಿ ಈಗಾಗಲೇ ಪೈಪ್ ಖರೀದಿ ಮಾಡಿದ್ದೇವೆ. ಇನ್ನು ನಾಲ್ಕೈದು ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳಲಿದೆ ಎಂದು ಡಿಸಿಎಂ ಹೇಳಿದರು.**

ಈ ವೇಳೆ ಶಾಸಕರಾದ ಟಿ.ಬಿ. ಜಯಚಂದ್ರ, ಎಸ್.ಆರ್. ಶ್ರೀನಿವಾಸ್, ಡಾ. ರಂಗನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಅಪರ ಜಿಲ್ಲಾಧಿಕಾರಿ ಡಾ. ತಿಪ್ಪೇಸ್ವಾಮಿ, ರಾಜಣ್ಣ, ಹೇಮಾವತಿ ಅಧಿಕಾರಿಗಳು ಪಾಲ್ಗೊಂಡಿದ್ದರು.

## ‘ಡೆಮಾಕ್ರಸಿ ಡೇ’ 15ರಂದು

**ಚಿಕ್ಕಬಳ್ಳಾಪುರ:** ಜಿಲ್ಲಾಡಳಿತ ಭವನದಲ್ಲಿ ಸೆ. 15 ರಂದು ನಡೆಯುವ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಎಲ್ಲ ಇಲಾಖೆಗಳ ಸಹಯೋಗದಲ್ಲಿ ಅರ್ಥ ಪೂರ್ಣವಾಗಿ ಆಚರಿಸಿ ಯಶಸ್ವಿಗೊಳಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲು ಅಧಿಕಾರಿಗಳು ತುರ್ತು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಪಿ ಎನ್ ರವೀಂದ್ರ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಬಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸೆಪ್ಟೆಂಬರ್ 15 ರಂದು ಬೆಳಿಗ್ಗೆ ಸೈಕಲ್ ರ‍್ಯಾಲಿ ಹಾಗೂ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 8 ಗಂಟೆಗೆ 10 ಮೋಟರ್ ಬೈಕ್‌ಗಳ ರ‍್ಯಾಲಿಗೆ ಚಾಲನೆ ನೀಡಲಾಗುತ್ತದೆ. ಈ ರ‍್ಯಾಲಿಯು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಕಚೇರಿಯಿಂದ ಆರಂಭವಾಗಿ ಬೆಂಗಳೂರಿನ ವಿಧಾನ ಸೌಧದ ವರೆಗೆ ಸಾಗಿ ಅಲ್ಲಿಯ ಕಾರ್ಯಕ್ರಮಕ್ಕೆ ಸೇರ್ಪಡೆ ಆಗಲಿದೆ. ಆಸಕ್ತಿಯುಳ್ಳವರು ಆನ್ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಸೈಕಲ್ ರ‍್ಯಾಲಿಯಲ್ಲಿ ಪಾಲ್ಗೊಳ್ಳುವವರಿಗೆ ಟೀ ಶರ್ಟ್, ಕ್ಯಾಪ್, ಮತ್ತು ಪ್ರಶಸ್ತಿ ಪತ್ರವನ್ನು ನೀಡಲಾಗುತ್ತದೆ. ರ‍್ಯಾಲಿಯು ನಗರದ ಜಿಲ್ಲಾಡಳಿತ ಭವನದಿಂದ ಬೆಳಿಗ್ಗೆ 8.30ಕ್ಕೆ ಪ್ರಾರಂಭಗೊಂಡು ಶಿಡ್ಲಘಟ್ಟ ವೃತ್ತದಿಂದ ಕನ್ನಡ ಭವನವರೆಗೆ ಸಾಗಿ ಅಲ್ಲಿ ತಿರುವು ಪಡೆದು ಮತ್ತೆ ಜಿಲ್ಲಾಡಳಿತ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯುವ ವೇದಿಕೆ ಕಾರ್ಯಕ್ರಮದವರೆಗೆ ಸಾಗಿ ಮುಕ್ತಾಯಗೊಳ್ಳುತ್ತದೆ ಎಂದರು.

ಈ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಸಮಸ್ತ ನಾಗರಿಕರು, ಜನಪ್ರತಿನಿಧಿಗಳು, ಸಂಘ ಸಂಸ್ಥೆಗಳ ಸದಸ್ಯರು, ಪದಾಧಿಕಾರಿಗಳು ಭಾಗವಹಿಸಲು ಡಿಸಿ ಮನವಿ ಮಾಡಿದರು. ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ ವೈ ನವೀನ್ ಭಟ್, ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ತೇಜಾನಂದ ರೆಡ್ಡಿ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ ಡಾ ಮಹೇಶ್ ಕುಮಾರ್ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಪಿ ಎನ್ ರವೀಂದ್ರ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ನಡೆದ ಪೂರ್ವಬಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

## ಕೊಲೆ ಖಂಡಿಸಿ ಪ್ರತಿಭಟನೆ

ಮಾಜಿ ಸಚಿವ ಎನ್ ಮಹೇಶ್ ಮಧುಗಿರಿಗೆ ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ ರವರಿಗೆ ಮನವಿ ಪತ್ರ ಸಲ್ಲಿಸಿದರು.

**ಮಧುಗಿರಿ:** ಕೊಡಿಗೇನಹಳ್ಳಿ ಹೋಬಳಿಯ ಪೋಲೇನಹಳ್ಳಿ ಗ್ರಾಮದ ರಾಮಾಂಜನಪ್ಪ ಎಂಬುವವರ ಪುತ್ರ ಆನಂದ್ ಅವರ ಕೊಲೆ ಘಟನೆ ನಡೆದಿತ್ತು. ಪೋಲೇನಹಳ್ಳಿ ಗ್ರಾಮದಲ್ಲಿ ನೀರಿನ ವಿಚಾರದ ಗಲಾಟೆಗೆ ಹತ್ಯೆ ನಡೆದಿತ್ತು. ಶುಕ್ರವಾರ ಮಾಜಿ ಸಚಿವ ಎನ್. ಮಹೇಶ್ ರವರು ಭೇಟಿ ನೀಡಿದ್ದರು. ಕುಡಿಯುವ ನೀರಿನ ಸಂಪರ್ಕದ ವಿಚಾರವಾಗಿ ನಡೆದ ಆನಂದ್ ಅವರ ಹತ್ಯೆಯನ್ನು ಖಂಡಿಸಿದರು. ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ನಂತರ ಮಧುಗಿರಿಯ ಡಾ. ಬಿ ಆರ್ ಅಂಬೇಡ್ಕರ್ ರವರ ಸರ್ಕಲ್ ನಲ್ಲಿ ನಡೆಯುತ್ತಿದ್ದ ಪ್ರತಿಭಟನೆಯಲ್ಲಿ ಭಾಗಿಯಾಗಿದರು.

ಈ ದುರ್ಘಟನೆಯ ಕುರಿತು ಗ್ರಾಮಸ್ಥರಿಂದ ಮತ್ತು ಸ್ಥಳೀಯ ಮುಖಂಡರಿಂದ ಮಾಹಿತಿ ಪಡೆದು ಸಂಬಂಧಿಸಿದ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಕಾನೂನು ರೀತಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲು ಮಾಜಿ ಸಚಿವ ಎನ್ ಮಹೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ ರವರಿಗೆ ದಲಿತ ಮುಖಂಡರೊಂದಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ನಂತರ ಮೃತ ಪೋಲೇನಹಳ್ಳಿ ಗ್ರಾಮದ ಆನಂದ್ ರವರ ಶವಕ್ಕೆ ಮಧುಗಿರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಮನ ಸಲ್ಲಿಸಿದರು.

## ವಿವೇಕಾನಂದ ಶಾಲೆ ತಂಡ ಜಿಲ್ಲಾ ಮಟ್ಟಕ್ಕೆ

**ಗೌರಿಬಿದನೂರು:** ನಗರದ ನೇತಾಜಿ ಕ್ರೀಡಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ, ಕಬಡ್ಡಿ ವಿಭಾಗದಲ್ಲಿ, ನಗರದ ಶ್ರೀ ವಿವೇಕಾನಂದ ಶಾಲೆಯ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಪಡೆದು, ಜಿಲ್ಲಾ ಹಂತಕ್ಕೆ ಆಯ್ಕೆಯಾಗಿದ್ದರೆ.

ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಸಿಎನ್. ನಂಜೇಗೌಡ ಅವರು ಜಿಲ್ಲಾ ಹಂತಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡುತ್ತಾ, ನಮ್ಮ ಶಾಲೆಯ ಕಬಡ್ಡಿ ತಂಡದ ಕ್ರೀಡಾಪಟುಗಳು ತಾಲೂಕು ಮಟ್ಟದಲ್ಲಿ ಉತ್ತಮ ಸಾಧನೆ ತೋರಿ ಜಿಲ್ಲಾ ಹಂತಕ್ಕೆ ಆಯ್ಕೆಯಾಗಿ ನಮ್ಮ ಶಾಲೆಗೆ ಹೆಸರು ತಂದಿದ್ದಾರೆ ಎಂದರು.

ದೈಹಿಕ ಶಿಕ್ಷಣ ಪರಿವೀಕ್ಷಕರಾದ ಹನುಮಂತರಾಯಪ್ಪ, ಮುಖ್ಯ ಶಿಕ್ಷಕರಾದ ಯಶೋಧ, ಅಂತರಾಷ್ಟ್ರೀಯ ತೀರ್ಪುಗಾರರಾದ ವೈ.ಕೆ. ಪ್ರಕಾಶ್ ತೀರ್ಪುಗಾರರಾದ, ಮಾರುತೇಶ್, ಅಂಜಿನಪ್ಪ, ದಿನೇಶ್, ವಿವೇಕಾನಂದ ಶಾಲೆಯ ಸಂಯೋಜಕರಾದ, ವರದರಾಜ ದೈಹಿಕ ಶಿಕ್ಷಕರಾದ ರಾಮ್ ಪ್ರಸಾದ್ ಅನಿತಾ, ಶಾಲಾ ವ್ಯವಸ್ಥಾಪಕರಾದ ಅನು, ಕೋಚ್ ಗಳಾದ ಗಿರೀಶ್ ನಾಯಕ್, ಭರತ್, ಪವನ್ ಕುಮಾರ್ ಶುಭ ಹಾರೈಸಿದರು.

## ಹಿಂದೂ ವಿರೋಧಿ ಸರಕಾರ: ಟೀಕೆ

**ತುಮಕೂರು:** ಅಲ್ಪಸಂಖ್ಯಾತರನ್ನು ಓಲೈಕೆ ಮಾಡುತ್ತಾ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂಗಳನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಸರ್ಕಾರದ ಈ ವೋಟ್ ಬ್ಯಾಂಕ್ ದೌರ್ಬಲ್ಯ ದುರ್ಬಳಕೆ ಮಾಡಿಕೊಂಡು ಮತೀಯ ಗೂಂಡಾಗಳು ಗಣೇಶೋತ್ಸವದ ಮೇಲೆ ಕಲ್ಲು ತೂರುವುದು, ಹಿಂದೂ ಶ್ರದ್ಧಾ ಕೇಂದ್ರಗಳ ಮೇಲೆ ದಾಳಿ ಮಾಡುತ್ತಿದ್ದಾರೆ. ಇಂತಹ ದುಷ್ಕೃತ್ಯಗಳಿಗೆ ರಾಜ್ಯ ಸರಕಾರವೇ ಹೊಣೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಆಪಾದಿಸಿದರು.

ನಗರದಲ್ಲಿ ಶುಕ್ರವಾರ ನಡೆದ ಹಿಂದೂ ಮಹಾಗಣಪತಿ ವಿಸರ್ಜನಾ ಮಹೋತ್ಸವದಲ್ಲಿ ಭಾಗಿಯಾಗಿ, ನಂತರ ಸಿದ್ಧಗಂಗಾ ಮಠದಲ್ಲಿ ಡಾ.ಶಿವಕುಮಾರ ಸ್ವಾಮೀಜಿಗಳ ಗದ್ದಿಗೆಗೆ ಪೂಜೆ ಸಲ್ಲಿಸಿ, ಸಿದ್ಧಲಿಂಗ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ಮದ್ದೂರಿನ ಗಣೇಶೋತ್ಸವದ ಮೇಲೆ ಕಲ್ಲು ತೂರಾಟ ಪ್ರಕರಣ ರಾಜ್ಯ ಸರ್ಕಾರದ ವೈಫಲ್ಯಕ್ಕೆ ಕಾರಣವಾಗಿದೆ. ಪೂರ್ವಯೋಜಿತ ಕಲ್ಲು ತೂರಾಟ ಪ್ರಕರಣದಲ್ಲಿ ಗುಪ್ತಚರ ಇಲಾಖೆಯ ವೈಫಲ್ಯವಾಗಿದೆ ಎಂದರು.

ಕಲ್ಲುಗಳನ್ನು ಮೊದಲೇ ಸಂಗ್ರಹಿಸಿದ್ದರು. ಈ ವಿಚಾರ ಪೊಲೀಸರು, ಗುಪ್ತಚರ ಇಲಾಖೆಗೆ ತಿಳಿದಿರಲಿಲ್ಲವೇ? ಎಂದು ಪ್ರಶಸ್ನಿಸಿದ ಅವರು, ಧರ್ಮಸ್ಥಳದ ಬುರುಡೆ ಪ್ರಕರಣದ ಹಿಂದೆ ಯಾರ್ಯಾರಿದ್ದಾರೆ ಬಹಿರಂಗ ಪಡಿಸಿ, ಹಿಂದೂ ಧಾರ್ಮಿಕ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ಮಾಡುತ್ತಿರುವ ಮತೀಯ ಗೂಂಡಾಗಳಿಗೆ ಕಾನೂನಿನ ಭಯ ಇಲ್ಲ, ಅಲ್ಪಸಂಖ್ಯಾತ ಗೂಂಡಾಗಳು ದೌರ್ಜನ್ಯ ನಡೆಸುತ್ತಿದ್ದಾರೆ. ಅಂಥವರ ಎಡೆಮುರಿ ಕಟ್ಟಬೇಕು, ಪಾಕಿಸ್ತಾನ ಜಿಂದಾಬಾದ್ ಎಂದು ಕೂಗುವವರನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.


ಸ್ಥಾಪನೆ : 1910 RBI Registration No. ACD/KA 262P Dt. 30.04.1981 ದೂರವಾಣಿ : 2420829

**ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಶ್ರೀ ಹರ್ಷ ರಸ್ತೆ, ಮೈಸೂರು–570001.

ನಿಯಮ 13(4) ಪರಿಶಿಷ್ಟ IV

**ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಕೆಳಸಹಿದಾರರು **ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [4][ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [3][ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ತಿರಾಸ್ಥಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ **ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.** ಈ ಬ್ಯಾಂಕ್‌ಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

| ಕ್ರಮ ಸಂಖ್ಯೆ | ಸಾಲಗಾರರ ಹೆಸರು | ಸ್ಥಿರಾಸ್ತಿ ವಿವರ | ಡಿಮ್ಯಾಂಡ್ ನೋಟೀಸ್ ದಿನಾಂಕ | ಸ್ವಾಧೀನ ಪಡಿಸಿಕೊಂಡಿರುವ ದಿನಾಂಕ | ಬಾಕಿ ಇರುವ ಮೊತ್ತ (ರೂ.ಗಳಲ್ಲಿ) |
|---|---|---|---|---|---|
| 1. | **ಶ್ರೀ ಎಸ್. ಕಿರಣ್ ಬಿನ್ ಜೆ. ಶಿವರಾಮ್** ಮನೆ ನಂ.1181/ಎ, ಕೆ–26, 5ನೇ ಕ್ರಾಸ್, ಸುಣ್ಣದಕೇರಿ, ಕೆ.ಆರ್. ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ನಂ.1181/ಎ, ಕೆ–26, ಸುಣ್ಣದಕೇರಿ, 5ನೇ ಕ್ರಾಸ್, ಕೆ.ಆರ್. ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 23.5 ಅಡಿಗಳು ಮತ್ತು ಉತ್ತರ–ದಕ್ಷಿಣ: 42.00 ಅಡಿಗಳು, **ಚಕ್ಕುಬಂಧಿ: ಪೂರ್ವಕ್ಕೆ:** ಖಾಸಗಿ ಸ್ವತ್ತು, **ಪಶ್ಚಿಮಕ್ಕೆ:** ಜವರಯ್ಯ ರವರ ಮನೆ, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಖಾಸಗಿ ಸ್ವತ್ತು. | 08.07.2025<br>ಎನ್‌ಪಿಎ ದಿನಾಂಕ 02.03.2025 | 09.09.2025 | ಸಾಲದ ಖಾತೆ ಸಂಖ್ಯೆ 632952 ರೂ.4,27,349/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 2. | 1) **ಶ್ರೀಮತಿ ಶಾಂತಮ್ಮ ಕೋಂ ಮಹದೇವ** 2) **ಶ್ರೀ ಮಹದೇವ** 3) **ಶ್ರೀ ಲೋಕೇಶ್** 4) **ಶ್ರೀ ರಘು** ಮನೆ ನಂ.488, 2ನೇ ಕ್ರಾಸ್, ಕಾಮಟಗೇರಿ, ಮರುಗದೇವಿ ಗುಡಿ ಬೀದಿ, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ನಂ.488/2, ಎನ್–6/2, 2ನೇ ಕ್ರಾಸ್, ಮರುಗದೇವಿ ಗುಡಿ ಬೀದಿ, ಕಾಮಟಗೇರಿ, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 10.00 ಅಡಿಗಳು ಮತ್ತು ಉತ್ತರ–ದಕ್ಷಿಣ: 30.00 ಅಡಿಗಳು, **ಚಕ್ಕುಬಂಧಿ: ಪೂರ್ವಕ್ಕೆ:** ಸ್ವತ್ತಿನ ನಂ.488 ಎನ್–6, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ಜನಾರ್ಧನ ರವರ ಸ್ವತ್ತು, **ದಕ್ಷಿಣಕ್ಕೆ:** ವಿ. ವೀರಣ್ಣ ರವರ ಸ್ವತ್ತು. | 08.07.2025<br>ಎನ್‌ಪಿಎ ದಿನಾಂಕ 16.02.2024 | 09.09.2025 | ಸಾಲದ ಖಾತೆ ಸಂಖ್ಯೆ 6321034 ರೂ.12,08,116/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 3. | 1) **ಶ್ರೀಮತಿ ಎಸ್. ರತ್ನ ಕೋಂ ಗೋವಿಂದರಾಜ ಪಿ.** 2) **ಶ್ರೀ ಜಿ. ಶ್ರೀನಿವಾಸ್ ಬಿನ್ ಗೋವಿಂದರಾಜ ಪಿ.** ಮನೆ ನಂ. EWS-297, ಜಯನಗರ, 1ನೇ ಸ್ಟೇಜ್, ಕುವೆಂಪುನಗರ, ಹೊಸ ಕಾಂತರಾಜ ಅರಸ್ ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ಮನೆ ನಂ. EWS-297, ಹೊಸ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ, 1ನೇ ಸ್ಟೇಜ್, ಜಯನಗರ, ಚಾಮರಾಜ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 3.70 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 11.00 ಮೀಟರ್‌ಗಳು, **ಚಕ್ಕುಬಂಧಿ: ಪೂರ್ವಕ್ಕೆ:** EWS-296, **ಪಶ್ಚಿಮಕ್ಕೆ:** EWS-298, **ಉತ್ತರಕ್ಕೆ:** EWS-312, **ದಕ್ಷಿಣಕ್ಕೆ:** 6 ಮೀಟರ್ ರಸ್ತೆ. | 08.07.2025<br>ಎನ್‌ಪಿಎ ದಿನಾಂಕ 02.03.2025 | 09.09.2025 | ಸಾಲದ ಖಾತೆ ಸಂಖ್ಯೆ 6321130 ರೂ.6,31,567/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 4. | **ಶ್ರೀಮತಿ ಕೆ.ಎಸ್. ಸುನೀತ ಕೋಂ ಕೆ. ಅರವಿಂದ್** ಮನೆ ನಂ.363, ಎನ್–18, ಜಟ್ಟಿ ಬೀದಿ, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ಮನೆ ನಂ.363, ಎನ್–18, ದುಗಾಂಬ ದೇವಸ್ಥಾನದ ರಸ್ತೆ, ಜಟ್ಟಿ ಬೀದಿ, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 22.00 ಅಡಿಗಳು ಮತ್ತು ಉತ್ತರ–ದಕ್ಷಿಣ: 19.00 ಅಡಿಗಳು, **ಚಕ್ಕುಬಂಧಿ: ಪೂರ್ವಕ್ಕೆ:** ಜಯರಾಮ್ ರವರ ಸ್ವತ್ತು, **ಪಶ್ಚಿಮಕ್ಕೆ:** ಪ್ಯಾಸೇಜ್ ಮತ್ತು ಖಾಸಗಿ ಸ್ವತ್ತು, **ಉತ್ತರಕ್ಕೆ:** ಪಡುವಟ್ಟಮ್ಮ ದೇವಸ್ಥಾನ, **ದಕ್ಷಿಣಕ್ಕೆ:** ಖಾಸಗಿ ಸ್ವತ್ತು. | 08.07.2025<br>ಎನ್‌ಪಿಎ ದಿನಾಂಕ 21.12.2024 | 09.09.2025 | ಸಾಲದ ಖಾತೆ ಸಂಖ್ಯೆ 6321086 ರೂ.17,86,653/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 5. | **ಶ್ರೀ ಕೆ.ವಿ. ವೆಂಕಟೇಶ್ ಬಿನ್ ಲೇಟ್ ವೆಂಕಟಯ್ಯ** ಮನೆ ನಂ.1431, ಶ್ರೀರಾಂಪುರ ಬಡಾವಣೆ, 2ನೇ ಸ್ಟೇಜ್, ಚಾಮರಾಜ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ನಂ.1431, ಶ್ರೀರಾಂಪುರ ಬಡಾವಣೆ, 2ನೇ ಸ್ಟೇಜ್, ಚಾಮರಾಜ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 6.00 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 9.00 ಮೀಟರ್‌ಗಳು, **ಚಕ್ಕುಬಂಧಿ: ಪೂರ್ವಕ್ಕೆ:** 1430ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** 1432ನೇ ನಂಬರಿನ ಸ್ವತ್ತು, **ಉತ್ತರಕ್ಕೆ:** 1412ನೇ ನಂಬರಿನ ಸ್ವತ್ತು, **ದಕ್ಷಿಣಕ್ಕೆ:** ರಸ್ತೆ. | 08.07.2025<br>ಎನ್‌ಪಿಎ ದಿನಾಂಕ 07.03.2025 | 09.09.2025 | ಸಾಲದ ಖಾತೆ ಸಂಖ್ಯೆ 6321037 ರೂ.12,54,423/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 6. | **ಶ್ರೀಮತಿ ಎಸ್. ಶಾಲಿನಿ ಕೋಂ ಜಿ. ಶ್ರೀಕಾಂತ್** ಮನೆ ನಂ.30, 6ನೇ ಬ್ಲಾಕ್, ಮಧುವನ ಲೇಔಟ್, ಶ್ರೀರಾಂಪುರ, 2ನೇ ಸ್ಟೇಜ್, ಚಾಮರಾಜ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ಮನೆ ನಂ.32 (ಸ್ವತ್ತಿನ ನಂ.11–1–502–45), ಲಿಂಗಾಯಿತ ರುದ್ರ ಭೂಮಿಯ ದಕ್ಷಿಣ ಭಾಗ, ವಿದ್ಯಾರಣ್ಯಪುರಂ, ಫೋರ್ಟ್ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 30+23/2 ಅಡಿಗಳು ಮತ್ತು ಉತ್ತರ–ದಕ್ಷಿಣ: 45.00 ಅಡಿಗಳು, **ಚಕ್ಕುಬಂಧಿ: ಪೂರ್ವಕ್ಕೆ:** ಎಂಸಿಸಿ ಫಾರ್ಮ್, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** 31ನೇ ನಂಬರಿನ ಸ್ವತ್ತು, **ದಕ್ಷಿಣಕ್ಕೆ:** 33ನೇ ನಂಬರಿನ ಸ್ವತ್ತು | 08.07.2025<br>ಎನ್‌ಪಿಎ ದಿನಾಂಕ 27.06.2025 | 09.09.2025 | ಸಾಲದ ಖಾತೆ ಸಂಖ್ಯೆ 6321167 ರೂ.37,11,599/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |
| 7. | **ಶ್ರೀಮತಿ ಎಂ.ಎನ್. ಕೋಮಲ ಕೋಂ ಜಿ. ರಾಚೇಗೌಡ** ಮನೆ ನಂ.55, ‘ಎಫ್’ ಬ್ಲಾಕ್, ಜಾಕಿ ಕ್ವಾರ್ಟರ್ಸ್, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. | ಎಲ್ಲಾ ಭಾಗ ಮತ್ತು ವಿಭಾಗಗಳ ಸ್ವತ್ತು ನಿವೇಶನ ನಂ.73, ಹೊಸ ನಂ.19/1, ಸ್ವತ್ತಿನ ನಂ.63–2–536–19/1, 1ನೇ ಕ್ರಾಸ್, ಕುರುಬರಹಳ್ಳಿ, ನಜ಼ರ್‌ಬಾದ್ ಮೊಹಲ್ಲಾ, ಮೈಸೂರು. ವಿಸ್ತೀರ್ಣ: ಪೂರ್ವ–ಪಶ್ಚಿಮ: 20.72 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 10.66 ಮೀಟರ್‌ಗಳು, **ಚಕ್ಕುಬಂಧಿ: ಪೂರ್ವಕ್ಕೆ:** 70ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** 72ನೇ ನಂಬರಿನ ಸ್ವತ್ತು, **ದಕ್ಷಿಣಕ್ಕೆ:** ಮನೆ ನಂ.1330/1 ಎನ್–19. | 08.07.2025<br>ಎನ್‌ಪಿಎ ದಿನಾಂಕ 27.06.2025 | 09.09.2025 | ಸಾಲದ ಖಾತೆ ಸಂಖ್ಯೆ 63969 ರೂ.37,11,599/– + ದಿನಾಂಕ 05.07.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ |

ದಿನಾಂಕ: 13.09.2025
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.


## ಬಿಡದಿ ಟೌನ್‌ಶಿಪ್ ಬಗ್ಗೆ ವಿಪಕ್ಷ ಅಪ ಪ್ರಚಾರ

**ರಾಮನಗರ:** ಬಿಡದಿ ಟೌನ್‌ಶಿಪ್ ವಿಚಾರವಾಗಿ ವಿರೋಧ ಪಕ್ಷದ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ. ವಿರೋಧಿಗಳ ಅಪಪ್ರಚಾರಕ್ಕೆ ಸಾರ್ವಜನಿಕರು ಹಾಗೂ ದಲಿತ ಸಮುದಾಯದವರು ಕಿವಿಗೊಡಬಾರದು ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಿರ್ದೇಶಕ ಹಾಗೂ ಕಾಂಗ್ರೆಸ್ ಮುಖಂಡ ನರಸಿಂಹಯ್ಯ ಮನವಿ ಮಾಡಿಕೊಂಡರು.

ತಾಲೂಕಿನ ಬಿಡದಿ ಹೋಬಳಿ ಅಂಚೀಪುರ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂ ಸ್ವಾಧೀನ ಕುರಿತು ತಪ್ಪು ಅಭಿಪ್ರಾಯ ಬಿತ್ತರ ಮಾಡಲಾಗುತ್ತಿದೆ. ಈ ಬಗ್ಗೆ ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಡುವ ಕೆಲಸ ಮಾಡಲಾಗಿದೆ. ಜೊತೆಗೆ ಅವರ ಸಮಸ್ಯೆಗಳನ್ನು ಆಲಿಸಲಾಗಿದೆ ಎಂದು ತಿಳಿಸಿದರು.

ಅಂಚೀಪುರ ಗ್ರಾಮದಲ್ಲಿ ಬಹುತೇಕ ಎಲ್ಲರೂ ಜಮೀನು ಅನುಭೋಗದಲ್ಲಿ ಮಾತ್ರ ಇದ್ದಾರೆ. ಅವರ ಬಳಿ ಹಕ್ಕುಪತ್ರ, ಪೋಡಿ ಸೇರಿದಂತೆ ಯಾವುದೇ ದಾಖಲಾತಿ ಇಲ್ಲ. ಜೊತೆಗೆ ಭೂಸ್ವಾಧೀನ ಪ್ರಕ್ರಿಯೇಯು ಸಂಪೂರ್ಣ ಪೇಪರ್ ಲೇಸ್ ಆಗಿದೆ. ಪರಿಹಾರಕ್ಕೆ ಯಾವುದೇ ದಾಖಲಾತಿಗಳ ಅವಶ್ಯಕತೆ ಇಲ್ಲ. ಅನುಭೋಗದಲ್ಲಿದ್ದವರಿಗೆ ಪರಿಹಾರ ಕೊಡಲಾಗುತ್ತಿದೆ. ಜೊತೆಗೆ ಪರಿಹಾರದ ಹಣವೂ ಒಂದೇ ರೀತಿ ಯಲ್ಲಿದ್ದು ಯಾವುದೇ ವ್ಯತ್ಯಾಸ ಹಾಗೂ ತಾರತಮ್ಯ ಇರುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ದಲಿತ ಮುಖಂಡ ಜಯಚಂದ್ರ ಮಾತನಾಡಿ, ಅಂಚೀಪುರದ ಇಡೀ ಗ್ರಾಮವೂ ಸರ್ವೆ ನಂಬರ್‌ನಲ್ಲಿ ಇದೆ. ಯಾರೊಬ್ಬರ ಬಳಿಯು ಪೋಡಿ, ಹಕ್ಕುಪತ್ರ ಇಲ್ಲ. ಹಾಗಾಗಿ ಭೂಸ್ವಾಧೀನ ಮುನ್ನ, ಮನೆಗಳಿಗೆ ಹಕ್ಕುಪತ್ರ ವಿತರಣೆ ಮಾಡಬೇಕು. ಜತೆಗೆ ನಿರ್ಮಾಣವಾಗಲಿರುವ ಟೌನ್‌ಶಿಪ್‌ನಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಿಸಿಕೊಡಬೇಕು. ಭೂಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿದವರು ಯಾವುದೇ ದಾಖಲೆ ನೀಡದೆ ಇದ್ದರೂ, ಕೇವಲ ತಮ್ಮ ಆಧಾರ್ ಕಾರ್ಡ್ ನೀಡಿದರೆ ಬಾಕಿ ಉಳಿದ ದಾಖಲೆಗಳನ್ನು ಸಂಗ್ರಹಿಸುವ ಕೆಲಸವನ್ನು ಪ್ರಾಧಿಕಾರವೇ ನೋಡಿಕೊಳ್ಳಲಿದೆ ಎಂದರು. ಸುದ್ದಿಗೋಷ್ಠಿಗೂ ಮುನ್ನ ಗ್ರಾನದ ದಲಿತ ಸಮುದಾಯದವರೊಂದಿಗೆ ಸಭೆ ನಡೆಸಲಾಯಿತು. ಈ ವೇಳೆ ದಲಿತ ಸಮುದಾಯದ ಮುಖಂಡರಾದ ಲಿಂಗರಾಜು, ರಮೇಶ್, ಶೇಖರ್, ಮಂಜುನಾಥ್ ಮತ್ತಿತರರು ಇದ್ದರು.




**IN THE HON'BLE COURT OF 2ND ADDL. CIVIL JUDGE AND JMFC AT MALUR**
**CMC.NO. 222/2025**
**BETWEEN**
**Petitoner: Smt.Ashwini.S D/o Subbaiah C. And Shobha, aged about 26 years. At present R/at Near Kumbeshwara Chowltry, Sonnappa Dyana Mandira Road, Malur town, Malur, Kolar District.**
**AND**
**Respondent: The Tabasildar Malur Taluk, Malur**
**PUBLIC NOTICE**
The petitioner has filed an application before this Hon'ble court seeking death certificate of the petitioner's mother by name Late Shobha w/o C. Subbaiah who is died on 16-05-2001. Dommaluru Village, Lakkuru Hobli, Malur Taluk, Kolar District. Regarding the above case if any person having any objection can appear before the court on 13-10-25 Personally or through their counsel and file their objection, else the above case will be declared ex -Parte. Issued on this 12th September-2025 As per the orders of the Court with seal and signature.
**By Order Of Court**
**SHERISTEDAR**
Second Addl. Civil Judge and JMFC Malur.


## ಗ್ರೇಟರ್ ಬೆಂಗಳೂರು: ಪ್ರತಿಭಟನೆ

**ರಾಮನಗರ:** ಗ್ರೇಟರ್ ಬೆಂಗಳೂರು ಟೌನ್ ಶಿಪ್ ಯೋಜನೆ ವಿರೋಧಿಸಿ ಬಿಡದಿಯ ಭೈರಮಂಗಲ ಗ್ರಾಮದಲ್ಲಿ ಭೈರಮಂಗಲ ಹಾಗೂ ಕಂಚುಗಾರನಹಳ್ಳಿ ಗ್ರಾಮಗಳ ರೈತರು ಹಾಗೂ ಮಹಿಳೆಯರು ಶುಕ್ರವಾರ ಪ್ರತಿಭಟನೆ ನಡೆಸಿದರು. ರೈತರ ವಿರೋಧದ ನಡುವೆ ಸರಕಾರ ಯೋಜನೆ ಅನುಷ್ಠಾನಗೊಳಿಸುತ್ತಿದೆ. ಕೂಡಲೇ ಈ ಯೋಜನೆ ಕೈಬಿಡಬೇಕೆಂದು ಆಗ್ರಹಪಡಿಸಿದರು.

ರೈತ ಮುಖಂಡ ಪ್ರಕಾಶ್ ಮಾತನಾಡಿ, ರೈತರು ವಿರೋಧ ವ್ಯಕ್ತಪಡಿಸುತ್ತಿದ್ದರೂ ಸರಕಾರ ಟೌನ್ ಶಿಪ್ ಯೋಜನೆ ಜಾರಿ ಮಾಡಲು ಹೊರಟಿದೆ. ಶೇ.80 ರಷ್ಟು ರೈತರು ಯೋಜನೆಗೆ ಒಪ್ಪಿಗೆ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದಾರೆ, ರೈತರ ಬಳಿಗೆ ಬಂದು ಮಾತನಾಡಿದ್ದಾರಾ ಇದುವರೆಗೂ ಸಭೆ ನಡೆಸಿದ್ದಾರಾ ಎಂದು ಪ್ರಶ್ನಿಸಿದರು.

ಈ ಯೋಜನೆ ರೈತರಿಗೆ ಕಂಟಕವಾಗಿದೆ, ಯಾರ ಅನುಮತಿ ಪಡೆಯದೇ ಯೋಜನೆ ಮಾಡುತ್ತಿದ್ದಾರೆ, ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ, ಡಿಸಿಎಂ ಡಿ ಕೆ ಶಿವಕುಮಾರ್ ಅವರು ಈ ಯೋಜನೆಯನ್ನ ಕೈಬಿಡಬೇಕು, ಇಲ್ಲವಾದರೆ ಉಗ್ರ ಹೋರಾಟದ ಮೂಲಕ ಉತ್ತರ ಕೊಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ನಮ್ಮ ಭೂಮಿಯನ್ನು ನಾವು ಕೊಡುವುದಿಲ್ಲ, ನಮ್ಮ ತಂಟೆಗೆ ಬರಬೇಡಿ, ಭೂಮಿ ಕೊಟ್ಟು ನಾವು ನಮ್ಮ ಕುಟುಂಬ ಎಲ್ಲಿಗೆ ಹೋಗಬೇಕು ಎಂದು ಪ್ರಶ್ನಿಸಿದ ಪ್ರಕಾಶ್, ಯಾವುದೇ ಕಾರಣಕ್ಕೂ ಯೋಜನೆ ಜಾರಿಮಾಡಲು ನಾವು ಬಿಡುವುದಿಲ್ಲ ಎಂದರು.

ನಮ್ಮ ಭೂಮಿಯನ್ನು ನಾವು ಯಾರಿಗೂ ಕೊಡುವುದಿಲ್ಲ, ನಾವು ಯೋಜನೆ ಜಾರಿಯಾಗಲು ಬಿಡಲ್ಲ ಎಂದರು. ಈ ಸಂದರ್ಭದಲ್ಲಿ ರೈತ ಮುಖಂಡರು ಹಾಜರಿದ್ದರು.

## ಸಮಾಚಾರ ಸಣ್ಣದಲ್ಲ

### ಗಾಯಾಳು ಮಗುವಿನ ಚಿಕಿತ್ಸೆಗೆ ದೊಡ್ಡಮ್ಮ ಭಿಕ್ಷೆ

**ನಂಜನಗೂಡು:** ತಾಲ್ಲೂಕಿನ ಬದನವಾಳು ಗ್ರಾಮದ ಬಳಿ ಎರಡು ಬೈಕ್ ಗಳ ನಡುವೆ ಅಪಘಾತವಾಗಿ ಗಂಭೀರವಾಗಿ ಗಾಯಗೊಂಡಿದ್ದ ಹೆಡತಲೆ ಗ್ರಾಮದ ಮಹೇಶ್ ಎಂಬುವವರ ಪುತ್ರಿ ಆದ್ಯ (5) ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಸ್ಪತ್ರೆಯ ಬಿಲ್ ಪಾವತಿಸಲು ಹಣವಿಲ್ಲದೇ ಮಗುವಿನ ದೊಡ್ಡಮ್ಮ ಗ್ರಾಮಸ್ಥರ ಬಳಿ ಸೆರಗೊಡ್ಡಿ ಭಿಕ್ಷೆ ಬೇಡಿರುವ ಮನಕಲ ಕುವ ಘಟನೆ ನಡೆದಿದೆ.



ಆದ್ಯ ತಂದೆ ಜೊತೆ ಬೈಕಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದಳು, ಮಗುವಿನ ಚಿಕಿತ್ಸೆಯ ಬಿಲ್ 1.5 ಲಕ್ಷ ಪಾವತಿಸಲು ಪೋಷಕರು ಪರದಾಡುತ್ತಿದ್ದರು. ತಕ್ಷಣ ಮಗುವಿನ ದೊಡ್ಡಮ್ಮ ಮಂಗಳಮ್ಮ ಎಂಬವರು ಗ್ರಾಮದಲ್ಲಿ ಸೆರಗೊಡ್ಡಿ ಭಿಕ್ಷೆ ಬೇಡಿ, ಸುಮಾರು 80 ಸಾವಿರ ಹಣ ಸಂಗ್ರಹಿಸಿದ್ದಾರೆ. ಗ್ರಾಮಸ್ಥರು ಹಣ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಈ ಭಿಕ್ಷೆ ಬೇಡುತ್ತಿರುವ ದೃಶ್ಯ ಇದೀಗ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿದೆ. ಆದ್ಯಳನ್ನು ಸದ್ಯ ಖಾಸಗಿ ಆಸ್ಪತ್ರೆಯಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲು ಮಾಡಲಾಗಿದ್ದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

### ರಾಷ್ಟ್ರೀಯ ಕ್ರಿಕೆಟ್‌ಗೆ ಕೊಡಗು ವಿದ್ಯಾರ್ಥಿ

**ಮಡಿಕೇರಿ:** ಕೊಡಗು ವಿದ್ಯಾಲಯದ ಎಂಟನೇ ತರಗತಿ ವಿದ್ಯಾರ್ಥಿ ದೇವಾವೃತ್ ಡಿ.ಬಿ. ಮಹಾರಾಷ್ಟ್ರದ ಸದ್ವಿಪ್ರೀತಿ ಸುಧಾಜಿ ಇಂಟನ್ಯಾಷನಲ್ ಸ್ಕೂಲ್ ಮೆಹತಾದಲ್ಲಿ ನಡೆದ ಸಿಬಿಎಸ್‌ಸಿ ದಕ್ಷಿಣ ವಲಯ ಮಟ್ಟದ ಅಂಡರ್-14 ಕ್ರಿಕೆಟ್ ಆಯ್ಕೆ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟಕ್ಕೆ ಆಯ್ಕೆಯಾಗಿದ್ದಾನೆ. ಒಟ್ಟು 450 ಆಟಗಾರರು ಪಾಲ್ಗೊಂಡ ಆಯ್ಕೆ ಪ್ರಕ್ರಿಯೆಯಲ್ಲಿ, ಕೇವಲ 18 ಮಂದಿ ತಂಡದಲ್ಲಿ ಸ್ಥಾನ ಪಡೆದಿರುವ ದೇವಾವೃತ್ ದಕ್ಷಿಣ ವಲಯ ಮಟ್ಟದ ಕ್ರಿಕೆಟ್ ತಂಡದಲ್ಲಿ ಲೆಗ್ ಸ್ಪಿನ್ನರ್ ಆಗಿ ಆಡಲಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲೆ ಕೆ.ಎಸ್. ಸುಮಿತ್ರಾ ತಿಳಿಸಿದ್ದಾರೆ. ಸೆಪ್ಟೆಂಬರ್ 15 ರಿಂದ 20 ರವರೆಗೆ ನೋಯಿಡಾದಲ್ಲಿ ನಡೆಯಲಿರುವ ಸಿಬಿಎಸ್‌ಇ ಟಿ-20 ಕ್ರಿಕೆಟ್ ಮ್ಯಾಚ್‌ನಲ್ಲಿ ಆಡಲಿದ್ದಾರೆ. ಈತ ದಂಬೆಕೋಡಿ ಭೀಷ್ಮ ಮತ್ತು ಕವನ ದಂಪತಿಯ ಪುತ್ರನಾಗಿದ್ದಾನೆ.

# ಮಡಿಕೇರಿ ದಸರಾ ಉತ್ಸವಕ್ಕೆ 1.50 ಕೋಟಿ ರು. ಬಿಡುಗಡೆ

## ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ದಸರಾ ಸಮಿತಿಯಿಂದ ಅಭಿನಂದನೆ

**ಮಡಿಕೇರಿ:** ಮಡಿಕೇರಿ ದಸರಾ ಜನೋತ್ಸವಕ್ಕೆ 1.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ.

ಮಡಿಕೇರಿ ದಸರಾ ಸಮಿತಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಅದ್ದೂರಿ ದಸರಾ ಆಚರಣೆಗೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವಂತೆ ಕೋರಿತು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ 1.50 ಕೋಟಿ ರೂ. ಬಿಡುಗಡೆಗೆ ಅನುಮೋದನೆ ನೀಡಲಾಗಿದೆ ಎಂದರು.

ನಿಯೋಗದ ನೇತೃತ್ವ ವಹಿಸಿದ್ದ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಅವರು ಮಾತನಾಡಿ, ಕಳೆದ ವರ್ಷದಂತೆ ಈ ಬಾರಿಯೂ 1.50 ಕೋಟಿ ರೂ. ಬಿಡುಗಡೆ ಮಾಡುವ ಭರವಸೆ ದೊರೆತ್ತಿದೆ. ಹೆಚ್ಚಿನ ಅನುದಾನದ ನಿರೀಕ್ಷೆ ಇತ್ತಾದರೂ ಕಳೆದ ವರ್ಷದ ಮೊತ್ತವನ್ನೇ ನೀಡಲು ಸರಕಾರ ನಿರ್ಧರಿಸಿ ಆಗಿತ್ತು ಎಂದರು.

ದಸರಾ ಸಮಿತಿಯ ಅಧ್ಯಕ್ಷರು ಹಾಗೂ ನಗರಸಭಾ ಅಧ್ಯಕ್ಷರಾದ ಪಿ.ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಖಜಾಂಚಿ ಸಬಿತ, ಉಪಾಧ್ಯಕ್ಷ ಡಿಶು, ಕಾರ್ಯದರ್ಶಿ ಕಾನೆಹಿತ್ಲು ಮೊಣ್ಣಪ್ಪ, ಸಹ ಕಾರ್ಯದರ್ಶಿ ಮುದ್ದುರಾಜು, ದಶಮಂಟಪ ಸಮಿತಿ ಅಧ್ಯಕ್ಷ ಬಿ.ಎಂ.ಹರೀಶ್ ಅಣ್ವೇಕರ್, ವೇದಿಕೆ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಆರ್.ಪಿ ಮತ್ತಿತರರು ನಿಯೋಗದಲ್ಲಿದ್ದರು.

ಮಡಿಕೇರಿ ದಸರಾ ಸಮಿತಿಯು ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಅದ್ದೂರಿ ದಸರಾ ಆಚರಣೆಗೆ ಅನುದಾನ ನೀಡಿದ ಸಿಎಂ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿ ಅಭಿನಂದಿಸಿತು.

# ಟಿವಿ, ಮೊಬೈಲ್ ಹಾವಳಿ: ಪೌರಾಣಿಕ ನಾಟಕ ತೆರೆಮರೆಗೆ

**ಕೆ.ಆರ್.ಪೇಟೆ:** ಇಂದಿನ ದಿನಮಾನಗಳಲ್ಲಿ ಟಿವಿ, ಮೊಬೈಲ್ ಹಾವಳಿಯಿಂದ ಪೌರಾಣಿಕ ನಾಟಕಗಳು ನಶಿಸುತ್ತಿವೆ. ಗ್ರಾಮೀಣ ಭಾಗದ ಪೌರಾಣಿಕ ನಾಟಕಗಳನ್ನು ಉಳಿಸಿ ಬೆಳೆಸುವಲ್ಲಿ ಪ್ರತಿಯೊಬ್ಬರು ಕೈ ಜೋಡಿಸಬೇಕೆಂದು ಸಮಾಜ ಸೇವಕರು ಮನ್ಮುಲ್ ನಿರ್ದೇಶಕ ಡಾಲು ರವಿ ಹೇಳಿದರು.

ಕಸಬಾ ಹೋಬಳಿಯ ಕುಪ್ಪಹಳ್ಳಿ ಗ್ರಾಮದ ಶ್ರೀಬಸವೇಶ್ವರ ಕೃಪೋಸಿತ ನಾಟಕ ಮಂಡಳಿ ವತಿಯಿಂದ ಪಿತೃ ಪಕ್ಷದ ಅಂಗವಾಗಿ ಕುರುಕ್ಷೇತ್ರ ಅಥವಾ ಧರ್ಮ ರಾಜ್ಯ ಸ್ಥಾಪನೆ ಎಂಬ ಸುಂದರ ಪೌರಾಣಿಕ ನಾಟಕವನ್ನು ಉದ್ಘಾಟಿಸಿ ಮಾತನಾಡಿದರು.

ಒಂದು ಕಾಲದಲ್ಲಿ ಪೌರಾಣಿಕ ನಾಟಕಗಳು ಗ್ರಾಮಿಣ ಜನರಿಗೆ ಮನರಂಜನೆಯ ಬಹು ಮುಖ್ಯ ಮಾಧ್ಯಮಗಳಾಗಿದ್ದವು. ನಾಟ ಕಗಳ ಮೂಲಕ ನಮ್ಮ ಹಿರಿಯರು ಜೀವನ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸಿಕೊಡುತ್ತಾ ಅವರಿಗೆ ಬದುಕಿನ ಸನ್ಮಾರ್ಗವನ್ನು ತೋರಿ ಸುತ್ತಿದ್ದರು. ಪುರಾಣದ ಪಾತ್ರಗಳ ಮೂಲಕ ಬದುಕಿನ ಆದರ್ಶಗಳನ್ನು ಮಕ್ಕಳ ಮನಸ್ಸಿಗೆ ತುಂಬಿಸುತ್ತಾ ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬೇರುಗಳನ್ನು ಗಟ್ಟಿಗೊಳಿ ಸುತ್ತಿದ್ದರು. ಇಂದು ಮೊಬೈಲ್ ಸಂಸ್ಕೃತಿ ಎಲ್ಲವನ್ನೂ ಮರೆಮಾಚುತ್ತಿದೆ ಪೌರಾಣಿಕ ನಾಟಕಗಳ ಉಳಿವಿಗೆ ಪ್ರತಿಯೊಬ್ಬರು ಕೈ ಜೋಡಿಸಬೇಕಾದ ಅಗತ್ಯ ಹೆಚ್ಚಾಗಿದೆ ಡಾಲು ರವಿ ತಿಳಿಸಿದರು. ಈ ಸಂದರ್ಭದಲ್ಲಿ ಕುಪ್ಪಹಳ್ಳಿ ಗ್ರಾಮಸ್ಥರು ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಹಾಗೂ ಕಲಾವಿದರು ಹಾಜರಿದ್ದರು.

ಮನ್ಮುಲ್ ನಿರ್ದೇಶಕ ಡಾಲು ರವಿ ಅವರು ಪೌರಾಣಿಕ ನಾಟಕವನ್ನು ಉದ್ಘಾಟಿಸಿ ಮಾತನಾಡಿದರು.

# ಕೊಡಗು ಮಹಿಳಾ ಬ್ಯಾಂಕ್ ವಾರ್ಷಿಕ ಮಹಾಸಭೆ 18ಕ್ಕೆ

**ಮಡಿಕೇರಿ:** ಕೊಡಗು ಜಿಲ್ಲಾ ಮಹಿಳಾ ಬ್ಯಾಂಕ್ 9.45 ಲಕ್ಷ ರು.ನಿವ್ವಳ ಲಾಭ ಗಳಿಸಿದ್ದು, ಸೆ.18 ರಂದು ವಾರ್ಷಿಕ ಮಹಾಸಭೆ

ನಡೆಯಲಿದೆ ಎಂದು ಬ್ಯಾಂಕಿನ ಅಧ್ಯಕ್ಷೆ ಅರವಿಂದ ಅಣ್ಣಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕೊಡವ ಸಮಾಜದಲ್ಲಿ ಮಹಾಸಭೆ ನಡೆಯಲಿದ್ದು, ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಜಿಲ್ಲೆಯ ಏಕೈಕ ಮಹಿಳಾ ಬ್ಯಾಂಕ್ ಇದಾಗಿದ್ದು, 1997ರಲ್ಲಿ ಸ್ಥಾಪನೆ ಮಾಡಲಾಯಿತು. ಜಿಲ್ಲೆಯ ಹಿರಿಯ ಮಹಿಳೆ ಗಂಗಮ್ಮ ಬೋಪಯ್ಯ ಮತ್ತು ಪ್ರೇಮ ಸೋಮಯ್ಯ ಅವರು ಮಹಿಳೆಯರಿಗಾಗಿ ಬ್ಯಾಂಕ್ ಅಗತ್ಯವಿದೆ ಎಂದು ಭಾವಿಸಿ ಅಂದು ಸ್ಥಾಪನೆ ಮಾಡಿದರು ಎಂದು ತಿಳಿಸಿದರು. ಬ್ಯಾಂಕಿನಲ್ಲಿ ಒಟ್ಟು 2376 ಸದಸ್ಯರಿದ್ದು, ಪಾಲುಬಂಡವಾಳ 44.06 ಲಕ್ಷ ರೂ ಆಗಿದೆ. ಬ್ಯಾಂಕ್‌ನ ನಿಧಿಗಳು 32.31 ಲಕ್ಷ ರೂ, ಒಟ್ಟು ಠೇವಣಿ 10.07 ಕೋಟಿ ರೂ. ಆಗಿದೆ. ಒಟ್ಟು ಸಾಲ 7.27 ಕೋಟಿ ಹೊರಬಾಕಿ ಆಗಿದ್ದು, ಶೇ.98.67 ರಷ್ಟು ಸಾಲ ವಸೂಲಾತಿಯಾಗಿದೆ. ಅಲ್ಲದೇ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ನೀಡಲಾಗುವ ಅತ್ಯುತ್ತಮ ಪಟ್ಟಣ ಬ್ಯಾಂಕ್ ಪ್ರಶಸ್ತಿಯನ್ನು ನಮ್ಮ ಬ್ಯಾಂಕ್ 3 ಬಾರಿ ಪಡೆದ ಹೆಮ್ಮೆಗೆ ಪಾತ್ರವಾಗಿದೆ. ಬ್ಯಾಂಕಿನಲ್ಲಿ ಒಟ್ಟು 64 ಸ್ವಸಹಾಯ ಗುಂಪುಗಳು ರಚಿಸಲಾಗಿದ್ದು, 31 ಲಕ್ಷ ರು. ಠೇವಣಿ ಸಂಗ್ರಹವಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್‌ನ ಸಿಇಒ ಬಿ.ಪಿ.ಶೈಲಿ, ನಿರ್ದೇಶಕರುಗಳಾದ ಸಿ.ಲೀಲಾ ಮೇದಪ್ಪ, ಎಂ.ಎಂ.ಶ್ಯಾಮಲ ದಿನೇಶ್, ಆಶಾ ಚಿಣ್ಣಪ್ಪ, ಪಿ.ಪ್ರೇಮ ಕರುಂಬಯ್ಯ ಉಪಸ್ಥಿತರಿದ್ದರು.

# ಮಾದಪ್ಪನ ಕ್ಷೇತ್ರದ ಕಾಮಗಾರಿ ಪೂರ್ಣಗೊಳಿಸಿ

## ವಿಕಾಸಸೌಧದಲ್ಲಿ ಉನ್ನತ ಅಧಿಕಾರಿಗಳ ಜತೆ ಸಭೆ | ಸಚಿವರ ಸೂಚನೆ

**ಚಾಮರಾಜನಗರ:** ಹನೂರು ತಾಲೂಕಿನ ಮಲೆಮ ಹದೇಶ್ವರ ಬೆಟ್ಟದಲ್ಲಿ ಭಕ್ತಾಧಿಗಳ ಅನುಕೂಲಕ್ಕಾಗಿ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಸೂಚಿಸಿದರು.

ಬೆಂಗಳೂರಿನ ವಿಕಾಸಸೌಧದ ಮೂರನೇ ಮಹಡಿಯ ಸಭಾಂಗಣದಲ್ಲಿ ಶ್ರೀ ಮಲೆಮಹದೇಶ್ವರ ಬೆಟ್ಟ ಕ್ಷೇತ್ರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇವಸ್ಥಾನದ ಮಾಸ್ಟರ್ ಪ್ಲಾನ್ ಆವರಣದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ಪಡೆದ ಜಿಲ್ಲಾ ಉಸ್ತುವಾರಿ ಸಚಿವರು 4585 ಲಕ್ಷ ರೂ. ವೆಚ್ಚದಲ್ಲಿ ಸಂಕೀರ್ಣದ ಬಾಕಿ ಕೆಲಸವನ್ನು ಬೇಗನೆ ಮುಗಿಸಬೇಕು. ಗ್ರಾನೈಟ್ ಫ್ಲೋರಿಂಗ್ ಇತರೆ ಬಾಕಿ ಕೆಲಸ ಬೇಗ ಮುಗಿಸಬೇಕು ಎಂದು ತಿಳಿಸಿದರು.

ಕ್ಷೇತ್ರದ ಆವರಣದ ವ್ಯಾಪ್ತಿಯಲ್ಲಿ 935 ಲಕ್ಷ ರೂ. ವೆಚ್ಚದಲ್ಲಿ 6 ವಿವಿಧ ಕೂಡು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಶೀಘ್ರವೇ ಪೂರ್ಣ ಮಾಡಬೇಕು. ಬಸ್ ನಿಲ್ದಾಣದ ಹತ್ತಿರ ಹಾಗೂ ದಾಸೋಹ ಭವನದ ಎದುರು ಶೌಚಾಲಯ ಹಾಗೂ ಸ್ನಾನ ಗೃಹ ಸಹ ತ್ವರಿತವಾಗಿ ಮುಗಿಸಬೇಕು ಎಂದು ಸಚಿವರು ತಿಳಿಸಿದರು.

ಅತ್ಯಂತ ಪ್ರಮುಖವಾದ ಅತ್ಯಾಧುನಿಕ ಸುಸಜ್ಜಿತ ದಾಸೋಹ ಭವನ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಂಬಂಧ ವಿಸ್ತೃತವಾಗಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವರು ಪ್ರಸ್ತುತ ವಿನ್ಯಾಸಗೊಳಿಸಿರುವ ಯೋಜನೆಯ ಸಂಬಂಧ ಕೆಲ ಉತ್ತಮ ಮಾರ್ಪಾಡುಗಳಿಗೆ ಸೂಚಿಸಿದರು.

ಹನೂರು ಶಾಸಕ ಎಂ.ಆರ್. ಮಂಜುನಾಥ್ ಅವರು ಮಾತನಾಡಿ, ದಾಸೋಹಕ್ಕೆ ದಾನಿಗಳಿಂದ ಹೆಚ್ಚು ಪ್ರಮಾಣದಲ್ಲಿ ತರಕಾರಿ, ಇತರೆ ಸಾಮಗ್ರಿಗಳು ಬರುತ್ತಿದೆ. ಈ ಎಲ್ಲವನ್ನು ಸಂಗ್ರಹಿಸಲು ವಿಶಾಲವಾದ ಕೊಠಡಿಗಳ ಅಗತ್ಯವಿದ್ದು, ಆರೋಗ್ಯ ಕೇಂದ್ರ ಕಟ್ಟಡ ಕೆಲಸ ಕೂಡ ನಡೆಯಬೇಕು ಎಂದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಅನುದಾನದ ನೆರವೂ ಸಹ ಪಡೆದುಕೊಂಡು ಪುನರ್ವಸತಿ ಕೇಂದ್ರವನ್ನು ನಿರ್ಮಾಣ ಮಾಡಬೇಕಿದೆ. ಉದ್ದೇಶಿತ ಸುಸಜ್ಜಿತ ದಾಸೋಹ ಭವನಕ್ಕೆ ಪ್ರತ್ಯೇಕ ವಿದ್ಯುತ್ ಹಾಗೂ ಜನರೇಟರ್ ವ್ಯವಸ್ಥೆ ಸಹ ಇರಬೇಕಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಪಿಡಬ್ಲುಡಿ ಕಾರ್ಯದರ್ಶಿ ಸತ್ಯನಾರಾಯಣ, ಪ್ರಾಧಿಕಾರದ ಕಾರ್ಯದರ್ಶಿ ರಘು, ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಇಬ್ರಾಹಿಂ ಮೈಗೂರು, ಕಾರ್ಯಪಾಲಕ ಎಂಜಿನಿಯರ್ ಕಿರಣ್ ಕುಮಾರ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ಡಿಎಚ್‌ಒ ಡಾ. ಎಸ್. ಚಿದಂಬರ್, ಯೋಜನಾ ನಿರ್ದೇಶಕ ಎಂ.ವಿ. ಸುಧಾ, ಇಒ ಉಮೇಶ್ ಇದ್ದರು.

ಬೆಂಗಳೂರಿನ ವಿಕಾಸಸೌಧದ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

# ಸೇಂಟ್ ಫಿಲೋಮಿನಾ ಕಾಲೇಜಿನ ಅಷ್ಟ ದಶಕ ಉತ್ಸವ

**ಮೈಸೂರು:** ಸೇಂಟ್ ಫಿಲೋಮಿನಾ ಕಾಲೇಜು ತನ್ನ ಎಂಟು ದಶಕಗಳ ಶಿಕ್ಷಣ ಮತ್ತು ಸೇವೆಯ ಸಮರ್ಪಣೆಯನ್ನು ಗೌರಸುವ ಅಷ್ಟ ದಶಕ ಆಚರಣೆ ಸಮಾರಂಭ ನಡೆಯಿತು. ಸಾಂಸ್ಕೃತಿಕ, ಕ್ರೀಡೆ, ರೋವರ್‌ಗಳು ಮತ್ತು ರೇಂಜರ್‌ಗಳು, ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತು

ರೆಡ್‌ಕ್ರಾಸ್ ಘಟಕಗಳಿಗೆ ಚಾಲನೆ, ಅಷ್ಟ ದಶಕ ಉತ್ಸವ - (ಸೇಂಟ್ ಫಿಲೋಮಿನಾ ಕಾಲೇಜಿನ 80 ವರ್ಷಗಳು) ಉದ್ಘಾಟನಾ ಸಮಾರಂಭ ನಡೆಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಚಿತ್ರನಟ ಮಂಡ್ಯ ರಮೇಶ್ ಮಾತನಾಡಿ, ಕಾಲೇಜಿನ ಗಮನಾರ್ಹ ಸಾಧನೆಯನ್ನು ಶ್ಲಾಘಿಸಿ ಶಿಕ್ಷಣದೊಂದಿಗೆ ಸಂಸ್ಕೃತಿಯನ್ನು ಸಂಯೋಜಿಸುವ ಮಹತ್ವವನ್ನು ಒತ್ತಿ ಹೇಳಿದರು.

ರೆವರೆಂಡ್ ಫಾದರ್ ರೆಕ್ಟರ್ ಡಾ. ಲೌರ್ದು ಪ್ರಸಾದ್‌ಜೋಸೆಫ್ ಮಾತನಾಡಿ, ಸಂಸ್ಥೆಯ ಎಂಟು ದಶಕಗಳ ಸಮರ್ಪಿತ ಸೇವೆಯನ್ನು ನೆನಪಿಸಿಕೊಂಡರು, ಸಂಘಟಕರನ್ನು ಅಭಿನಂದಿಸಿದರು ಮತ್ತು ಮುಂಬರುವ ಸಹಪಠ್ಯ ಚಟುವಟಿಕೆಗಳಿಗೆ ಯಶಸ್ಸನ್ನು ಹಾರೈಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ರ ಜೆ.ಡಿ. ಸಲ್ಡಾನಾ, ಉಪ ಪ್ರಾಂಶುಪಾಲ ರೊನಾಲ್ಡ್‌ಕುಂಟಿನ್ಹಾ, ಶೈಕ್ಷಣಿಕಡೀನ್ ಆನಂದ್ ಇದ್ದರು. ಪ್ರಾಧ್ಯಾಪಕಿ ಡಾ.ನಂದಿನಿ ಧನ್ಯವಾದ ಅರ್ಪಿಸಿದರು.

ಸೇಂಟ್ ಫಿಲೋಮಿನಾ ಕಾಲೇಜಿನ ಅಷ್ಟ ದಶಕ ಉತ್ಸವ ವನ್ನು ರೆವರೆಂಡ್ ಫಾದರ್ ರೆಕ್ಟರ್ ಡಾ. ಲೌರ್ದು ಪ್ರಸಾದ್‌ಜೋಸೆಫ್ ಉದ್ಘಾಟಿಸಿದರು.

# 15ಕ್ಕೆ ಬೃಹತ್ ಸೈಕಲ್ ಜಾಥಾ

**ಮೈಸೂರು:** ಸೆಪ್ಟೆಂಬರ್ 15ರಂದು ಪ್ರಜಾಪ್ರಭುತ್ವ ದಿನಾಚರಣೆಯನ್ನು ಆಚರಣೆ ಮಾಡಲು ಕರ್ನಾಟಕ ಸರಕಾರ ಆದೇಶ ಮಾಡಿದ್ದು, ಜಿಲ್ಲಾ ಮಟ್ಟದಲ್ಲಿ ಅಂದು ಬೆಳಗ್ಗೆ 6 ಗಂಟೆಗೆ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯಿಂದ 10 ಜನ ಬೈಕ್ ರೈಡರ್ಸ್ ಗಳನ್ನು ಬೈಕ್ ಜಾಥಾದ ಮೂಲಕ ಮೈಸೂರು ನಗರದಿಂದ ಬೆಂಗಳೂರಿಗೆ ಕಳಿಸಲು ಸಿದ್ಧತೆ ಮಾಡಿಕೊಳ್ಳಲಾಗಿದ್ದು ಪ್ರತಿ ಜಿಲ್ಲೆಯಿಂದ ಬರುವ ಬೈಕ್ ಜಾಥಾವನ್ನು ಸೇರಿಕೊಳ್ಳಲಿದ್ದಾರೆ. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನವೆಂಬರ್ 26ರಂದು ಬಹುಮಾನ ವಿತರಣೆ ಮಾಡಲು ನಿರ್ಧರಿಸಿದೆ. ಸೆಪ್ಟೆಂಬರ್ 15 ರಂದು ಜಿಲ್ಲಾಮಟ್ಟದಲ್ಲಿ ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಛಾಯಾಚಿತ್ರ ಸ್ಪರ್ಧೆಗಳಿಗೆ ಚಾಲನೆ ನೀಡಲಾಗುವುದು. ಸೆಪ್ಟೆಂಬರ್ 15ರಿಂದ ನವೆಂಬರ್ 26ರವರೆಗೂ ಜಿಲ್ಲೆಯಲ್ಲಿ ವಿವಿಧ ಹಂತಗಳ ಸ್ಪರ್ಧೆ ನಡೆಸಿ ಬಹುಮಾನ ಕೊಡಲಾಗುವುದು.

# ಬ್ಯಾಡರಹಳ್ಳಿ ಸಂಘದ ಸಭೆ

**ಕೆಆರ್‌ನಗರ::** ಸಂಘದ ವತಿಯಿಂದ ಸದಸ್ಯರಿಗೆ 8.78 ಕೋಟಿ ವಿವಿಧ ರೀತಿಯ ಸಾಲ ವಿತರಿಸಲಾಗಿದ್ದು, 15 ಕೋಟಿ ರೂಗಳಿಗೆ ಹೆಚ್ಚಿಸಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದು ಉಪಾಧ್ಯಕ್ಷ ಎಸ್.ನಾಗರಾಜು ಹೇಳಿದರು. ತಾಲೂಕಿನ ಬ್ಯಾಡರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಕಚೇರಿಯಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘದ ವ್ಯಾಪ್ತಿಗೆ ಸಿದ್ದನಕೊಪ್ಪಲು, ಅಡಗನಹಳ್ಳಿ, ಮಧುವನಹಳ್ಳಿ, ಜೋಡಿಗೌಡನಕೊಪ್ಪಲು, ಅರೇಕಲ್‌ಕೊಪ್ಪಲು, ಬೀರನಹಳ್ಳಿ, ಚನ್ನಪ್ಪನಕೊಪ್ಪಲು ಮತ್ತು ಬ್ಯಾಡರಹಳ್ಳಿ ಗ್ರಾಮಗಳು ಸೇರಿದ್ದು, 86 ಮಹಿಳಾ ಸ್ವ-ಸಹಾಯ ಸಂಘಗಳು ರಚನೆಯಾಗಿದ್ದು, ಕಾರ್ಯನಿರ್ವಹಿಸುತ್ತಿರುವ 68 ಸಂಘಗಳಿಗೂ ಸಾಲ ನೀಡಲು ಸಂಘ ಸಿದ್ಧವಿದೆ ಎಂದು ತಿಳಿಸಿದರು. ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಿಇಒ ಸಚಿನ್ ಕುಮಾರ್ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

# ಕೃಷಿ ಪತ್ತಿನ ಸಂಘಗಳು ರೈತರ ಜೀವನಾಡಿ

**ಪಿರಿಯಾಪಟ್ಟಣ:** ಸದಸ್ಯರ ಸಹಕಾರ ಮತ್ತು ಆಡಳಿತ ಮಂಡಳಿಯಲ್ಲಿ ಒಗ್ಗಟ್ಟು ಇದ್ದಲ್ಲಿ ಸಂಘ ಬೆಳವಣಿಗೆ ಸಾಧಿಸಲು ಸಹಕಾರವಾಗುತ್ತದೆ ಎಂದು ಹಿಟ್ನೆಹೆಬ್ಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಎನ್.ಕುಮಾರ್ ಅಭಿಪ್ರಾಯಪಟ್ಟರು.

ಹಿಟ್ನೆಹೆಬ್ಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದರು.

ಸಂಘದ ಪ್ರಗತಿಗೆ ಸಹಕಾರಿಗಳ ಸಹಕಾರ ಪ್ರಮುಖವಾದದ್ದು. ಸಾಲ ನೀಡುವಲ್ಲಿ ಹಾಗೂ ತಿರುವಳಿ ಮಾಡುವಲ್ಲಿ ನಮ್ಮ ಸಹಕಾರ ಸಂಘ ಮೈಸೂರು ಜಿಲ್ಲೆಯಲ್ಲಿ ಮಾದರಿಯಾಗಿದೆ ಎಂದರು.

ಸಂಘದ ನಿರ್ದೇಶಕ, ಕೆಪಿಸಿಸಿ ಸದಸ್ಯ ಅನಿಲ್ ಕುಮಾರ್ ಮಾತನಾಡಿ, ಕೃಷಿ ಉದ್ಯಮವಾಗಿ ಬೆಳೆಯಲು ಕೃಷಿ ಪತ್ತಿನ ಸಹಕಾರ ಸಂಘಗಳ ಸಹಕಾರ ಮುಖ್ಯ ಪಾತ್ರ ವಹಿಸಿದೆ. ರೈತರು ಆರ್ಥಿಕ ಸೌಲಭ್ಯ ನಡೆಸಬೇಕು. ರೈತರು ತಾವು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಕ್ಕಾಗ ಮಾತ್ರ ಸಂಘ ಸಹ ಅಭಿವೃದ್ಧಿ ಹೊಂದುತ್ತದೆ ಎಂದರು.

ಸಂಘದ ಸಿಇಒ ಕೆ.ಪಿ.ಜಯರಾಮ್ ಮಾತನಾಡಿ, ಸಂಘ ಈ ವರ್ಷ 11 ಕೋಟಿಗೂ ಹೆಚ್ಚು ಸಾಲ ನೀಡಲಾಗಿದ್ದು, ಈ ಬಾರಿ ಮೂರು ಲಕ್ಷಕ್ಕೂ ಹೆಚ್ಚು ನಿವ್ವಳ ಲಾಭದಿಂದ ಕೂಡಿದೆ ಎಂದರು. ಈ ಸಂದರ್ಭದಲ್ಲಿ ಸಹಕಾರ ಸಂಘದ ಉಪಾಧ್ಯಕ್ಷ ಮಹೇಶ್ ನಾಯಕ, ನಿರ್ದೇಶಕರಾದ ಕೆ.ಕೆ.ಹರೀಶ್, ಎಚ್.ಎಂ.ವಿನೋದ್ ಕುಮಾರ್, ಎಚ್.ಪಿ.ಮಹದೇವ್, ಈರೇಗೌಡ, ಚಂದ್ರು, ಪಾರ್ವತಿ, ಕಾವೇರಮ್ಮ, ಮಹಾದೇವ್, ಎಂಡಿಸಿಸಿ ಬ್ಯಾಂಕಿನ ಮೇಲ್ವಿಚಾರಕ ಮಾದೇಹವಯ್ಯ, ಸಹಕಾರ ಸಂಘದ ಗುಮಾಸ್ತರಾದ ಸುರೇಶ್, ಎಚ್.ಕೆ.ನಟರಾಜ್, ಸಂತೋಷ್, ಶ್ರೀನಿವಾಸ್ ಇದ್ದರು.

# ಮದ್ದೂರಲ್ಲಿ ಸೌಹಾರ್ದತೆ ಮರು ಸ್ಥಾಪಿಸೋಣ

**ಮದ್ದೂರು:** ಸೌಹಾರ್ದತೆಯನ್ನು ನಾಶ ಮಾಡುವ ಕೆಲಸದಲ್ಲಿ ಕೋಮುವಾದಿ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ನಿರತವಾಗಿವೆಯೆಂದು ಕರ್ನಾಟಕ ಪ್ರಾಂತ ಸಂಘದ ಜಿಲ್ಲಾ ಸಂಚಾಲಕ ಭರತ್‌ರಾಜ್ ಆರೋಪಿಸಿದರು. ಮದ್ದೂರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಶುಕ್ರವಾರ ಸಂಜೆ ನಡೆದ ಸಭೆ ವೇಳೆ ಅವರು ಮಾತನಾಡಿದರು. ಕೆಲ ಶಕ್ತಿಗಳು ಮದ್ದೂರಿನ ಸೌಹಾರ್ದತೆಯನ್ನು ಹಾಳುಮಾಡುವ ಕೃತ್ಯಗಳು ಕಳೆದ ಮೂರು ದಿನಗಳಿಂದಲೂ ನಡೆದಿದ್ದು ಮತ್ತೊಮ್ಮೆ ಮದ್ದೂರು ಪಟ್ಟಣದಲ್ಲಿ ಸ್ನೇಹ ಸೌಹಾರ್ದತೆ ಬಾಂಧವ್ಯವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳು ಕೈಜೋಡಿಸುವ ಕೆಲಸವಾಗಬೇಕಿದೆ ಎಂದರು.

# ಭಿಕ್ಷೆ ಎತ್ತಿ ಚಿಕಿತ್ಸೆ: ಮಗು ಸಾವು

**ಮೈಸೂರು:** ಗ್ರಾಮದಲ್ಲಿ ಭಿಕ್ಷೆ ಬೇಡಿ ಮಗುವಿನ ಚಿಕಿತ್ಸೆಗೆ ಹಣ ಹೊಂದಿಸಿದರು ಚಿಕಿತ್ಸೆ ಫಲಿಸದೆ ಮಗು ಮೃತಪಟ್ಟಿದೆ. ಆಸ್ಪತ್ರೆ ಬಿಲ್‌ನ ಹಣಕ್ಕಾಗಿ ಗ್ರಾಮದಲ್ಲಿ ಭಿಕ್ಷೆ ಬೇಡಿದ ಪ್ರಕರಣದ ಹಿಂದಿನ ಮಗು ಚಿಕಿತ್ಸೆ ಫಲಿಸದೆ ಸಾವಿಗೀಡಾಗಿದೆ. ಮೂರು ದಿನಗಳ ಹಿಂದೆ ಅಪಘಾತದಲ್ಲಿ ಗಾಯಗೊಂಡಿದ್ದ ಮಗುವನ್ನು ಮೈಸೂರು ನಗರದ ಬೃಂದಾವನ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸಾ ವೆಚ್ಚವೆಂದು ಆಸ್ಪತ್ರೆ ಆಡಳಿತ ಮಂಡಳಿ 1,80,000 ರು. ಚಿಕಿತ್ಸಾ ವೆಚ್ಚ ಕೇಳಿದ್ದರು. ಸಂಬಂಧಿಯೊಬ್ಬರು ಭಿಕ್ಷೆ ಬೇಡಿ ಚಿಕಿತ್ಸೆಗೆ ಹಣ ಹೊಂದಿಸಲು ಹರಸಾಹಸ ಪಟ್ಟಿದ್ದರು. ಹಣ ಹೊಂದಿಸಲಾಗದೆ ಮಗುವನ್ನು ಚೆಲುವಾಂಬ ಆಸ್ಪತ್ರೆಗೆ ದಾಖಲು ಮಾಡಲಾಯಿತು. ದುರಾದೃಷ್ಟವಶಾತ್ ಶುಕ್ರವಾರ ಮಗು ಚಿಕಿತ್ಸೆ ಫಲಿಸದೆ ಮೃತಪಟ್ಟಿದೆ. ಸೆಪ್ಟೆಂಬರ್ 9ರಂದು ಚಾಮರಾಜನಗರದ ನಂಜನಗೂಡು ಮುಖ್ಯರಸ್ತೆಯ ಬದನವಾಳು ಬಳಿ ಅಪಘಾತ ನಡೆದಿತ್ತು. ಈ ವೇಳೆ ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ದಂಪತಿ ಮಹೇಶ್ (38), ರಾಣಿ (32), ಮಗಳು ಆದ್ಯ (5) ಗಾಯಗೊಂಡಿದ್ದರು. ಆದರೆ ಚಿಕಿತ್ಸೆ ಫಲಿಸದೇ ಮಗು ಆದ್ಯ ಸಾವನ್ನಪ್ಪಿದೆ.

**ಕರ್ನಾಟಕ ಗೃಹ ಮಂಡಳಿ**
Karnataka Housing Board Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

**ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)**

**Notification No.: KHB/CE/AEF/Prajasoudha/TAC/KHB/2025-26/SE0310 Dated: 06.09.2025**

ಕರ್ನಾಟಕ ಗೃಹ ಮಂಡಳಿ ವತಿಯಿಂದ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಲಕ್ಷ್ಮೇಶ್ವರ ತಾಲ್ಲೂಕು ಆಡಳಿತ ಕೇಂದ್ರ "ಪ್ರಜಾಸೌಧ" ಕಟ್ಟಡ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ.

**ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 20.09.2025 ಸಂಜೆ 4.00 ಗಂಟೆಯವರೆಗೆ.**

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2798/ಆಕಾರ್/2025–26

**ನಗರಸಭಾ ಕಾರ್ಯಾಲಯ ಹೊಸಪೇಟೆ.**
No: CMC HPT/WS/AMRUTH/2025-26 Dated: 10-09-2025.

**ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ**
(ಇ–ಪ್ರೋಕ್ಯೂರಮೆಂಟ್ ಮುಖಾಂತರ)

2025–26ನೇ ಸಾಲಿನ ಜಲ್ ಹಿ ಅಮೃತ್ ಯೋಜನೆಯಡಿಯಲ್ಲಿ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:25–09–2025 ಸಂಜೆ 5.00 ಗಂಟೆ ವರೆಗೆ** (2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:26–09–2025 ಸಂಜೆ 5.00 ಗಂಟೆ** (3) ಆರ್ಥಿಕ ಬಿಡ್ ತೆರೆಯುವ **ದಿನಾಂಕ:29–09–2025 ಸಂಜೆ 5.30 ಗಂಟೆ,** ಸ್ಥಳ ನಗರಸಭೆ, ಹೊಸಪೇಟೆ. **1) DMA/2025-26/SE6039** ಕಾಯ್ದಿರಿಸಿದ ಮೊತ್ತ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 193.93 ಲಕ್ಷ,** ಇ.ಎಂ.ಡಿ(90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 3,87,860.00 ಟೆಂಡರ್ ಪ್ರೋಸೆಸ್ಸಿಂಗ್ ಫೀ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ ಹೊಸಪೇಟೆ
ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/242

**ಕರ್ನಾಟಕ ಸರಕಾರ**
**(ಲೋಕೋಪಯೋಗಿ ಇಲಾಖೆ)**
**ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ**
ದೂರವಾಣಿ ಸಂ: 08338/ 273859 ಇ–ಮೇಲ್: eepwdckd@gmail.com
ಕ್ರಸಂ.ಲೋ.ಇ./ಚಿ.ವಿ./ಸ.ಇಂ – 1/ ಟೆಂಡರ್/2025–26/3227 ದಿನಾಂಕ: 11/09/2025

**ಅವಧಿ ವಿಸ್ತರಣೆ–1/ತಿದ್ದು ಪಡಿ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ**

ಈ ಕಚೇರಿ ಅಲಾವಧಿ ಇ–ಟೆಂಡರ್ ಪ್ರಕಟಣೆ ಕ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2025–26/3097 ದಿನಾಂಕ: 02/09/2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. ಕ್ರ.ಸಂ. 1 ರಿಂದ 5 ಹಾಗೂ 7 ರಿಂದ 15 ರಲ್ಲಿನ ಕಾಮಗಾರಿಗಳಿಗೆ ಹೆಚ್ಚಿನ ಬಿಡ್‌ಗಳನ್ನು ಆಕರ್ಷಿಸುವ ಸಲುವಾಗಿ ಈ ಕೆಳಗಿನಂತೆ ಅವಧಿ ವಿಸ್ತರಣೆ–1/ತಿದ್ದುಪಡಿ ಅಲ್ಪಾವಧಿ ಟಂಡರ್ ಪ್ರಕಟಣೆ ಹೊರಡಿಸಲಾಗಿದೆ.

**ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.**

1. ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 17–09–2025 (ಸಾಯಂಕಾಲ 5.00 ಗಂಟೆಯವರೆಗೆ)
2. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 19–09–2025 (ಸಾಯಂಕಾಲ 4.30 ಗಂಟೆಗೆ)
3. ಹಣಕಾಸು ಬಿಡ್ರನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
4. ಯಾವುದೇ ಗುತ್ತಿಗೆ ಅಂತಿಮ ದಿನಾಂಕದೆದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸರಣೆಯಾಗುವುದು.

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ.
DIPR/ BGM/ RO-NO- 1014- 2025-26

ಜಿಲ್ಲಾ ಪಂಚಾಯತ ಬಾಗಲಕೋಟೆ
**ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ**
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com
ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–1/ಟೆಂಡರ್/2025–26/2589
ದಿನಾಂಕ : 09–09–2025

**ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**
**(ದ್ವಿ-ಲಕೋಟೆ) ಕೆ.ಡಬ್ಲ್ಯೂ. 4 ಬಿಡ್ ಡಾಕ್ಯೂಮೆಂಟ್**

**ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ** ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2021–22 ನೇ ಸಾಲಿನ **ಲೆಕ್ಕಶೀರ್ಷಿಕೆ : 5054 ಯೋಜನೆಯಡಿ ರೂ. 10.00 ಕೋಟಿ ಅನುಮೋದನೆ ಅನುದಾನ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಹುನಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಅನುದಾನದ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಉಪ ವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗೆ** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ **ದ್ವಿ–ಲಕೋಟೆ ಪದ್ಧತಿಯನ್ವಯ** ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

**ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ. : RDPR/2025-26/RD/WORK_INDENT17638 ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 253.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.**

**1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 22–09–2025 ರ ಸಂಜೆ 5.30 ಗಂಟೆವರೆಗೆ. 3) ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 19–09–2025 ರ ಬೆಳಿಗ್ಗೆ 11.00 ಗಂಟೆಯ ನಂತರ. 4) ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 24–09–2025 ರ ಬೆಳಿಗ್ಗೆ 11.00 ಗಂಟೆಯ ನಂತರ.**

**ಸೂಚನೆ** : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟ/272/ಮಣಿಪಾಲ್/2025–26

ರಾಜ್ಯದಲ್ಲಿ ಹೆಚ್ಚಾಗಿರುವ ಅತ್ಯಾಚಾರ ಪ್ರಕರಣಗಳು | ಸಂಬಂಧಿಕರು, ಪರಿಚಯಸ್ಥರಿಂದಲೇ ಲೈಂಗಿಕ ದೌರ್ಜನ್ಯ

# ಪತ್ನಿಗೆ ಪತಿ ಕಿರುಕುಳ: ಸುಳ್ಳು ಪ್ರಕರಣಗಳದ್ದೆ ಬಹುಪಾಲು!

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಪತಿಯಿಂದ ಪತ್ನಿಗೆ ಕಿರುಕುಳ ನೀಡುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ದಾಖಲಾಗುತ್ತಿದ್ದು, ಈ ಪೈಕಿ ಸುಳ್ಳು ಪ್ರಕರಣಗಳೆ ಹೆಚ್ಚಾಗಿದೆ. 2025ರ ಜುಲೈವರೆಗೆ 1677 ಪ್ರಕರಣಗಳು ವರದಿಯಾಗಿದ್ದು, ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಈ ಮೂಲಕ ಮಹಿಳೆಯ ರಕ್ಷಣೆಗೆ ರೂಪಿಸಿರುವ ಕಾನೂನು ದುರ್ಬಳಕೆಯಾಗುತ್ತಿರುವುದು ಸ್ಪಷ್ಟವಾಗಿದೆ.

ಪತಿಯಿಂದ ಪತ್ನಿಗೆ ನೀಡುವ ಕಿರುಕುಳ ಪ್ರಕರಣಗಳು ಎರಡೂವರೆ ವರ್ಷಗಳಲ್ಲಿ 7,516 ಪ್ರಕರಣಗಳು ದಾಖಲಾಗಿದೆ. ಪ್ರತಿನಿತ್ಯ 8 ಪ್ರಕರಣ ಪತಿಯಿಂದ ಕಿರುಕುಳ ಬಗ್ಗೆ ವರದಿಯಾಗುತ್ತಿವೆ. ಇಂತಹ ಪ್ರಕರಣದಲ್ಲಿ 16 ಮಂದಿ ಅಪರಾಧಿಗಳಿಗೆ ಮಾತ್ರ ಶಿಕ್ಷೆಯಾಗಿದೆ. ಇನ್ನುಳಿದ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ಆದರೆ ಒಟ್ಟಾರೆ ಅಂಕಿ ಅಂಶಗಳ ಪೈಕಿ ಪತಿಯಿಂದ ಪತ್ನಿ ಕಿರುಕುಳ ಅನುಭವಿಸುತ್ತಿರುವ ಪ್ರಕರಣಗಳ ಪೈಕಿ ಹೆಚ್ಚಿನ ಪಾಲು ಸುಳ್ಳು ಪ್ರಕರಣಗಳದ್ದಾಗಿದೆ.

ಪತಿಯಿಂದಲೇ ಕಿರುಕುಳ ನಡೆದ ಪ್ರಕರಣಗಳ ಸಂಖ್ಯೆ ಗಮನಿಸಿದರೆ 2023ರಲ್ಲಿ 2959 ಪ್ರಕರಣಗಳು ವರದಿಯಾಗಿದೆ. 10 ಮಂದಿಗೆ ಶಿಕ್ಷೆಯಾದರೆ 364 ಮಂದಿ ಖುಲಾಸೆಗೊಂಡಿದ್ದಾರೆ. 2024ರಲ್ಲಿ 2910 ಪ್ರಕರಣ ದಾಖಲಾಗಿದೆ. 6 ಮಂದಿಗೆ ಮಾತ್ರ ಶಿಕ್ಷೆಯಾದರೆ 130 ಮಂದಿ ಖುಲಾಸೆಗೊಂಡಿದ್ದಾರೆ. 2025ರ ಜುಲೈವರೆಗೆ 1677 ಪ್ರಕರಣಗಳು ವರದಿಯಾಗಿದ್ದು, ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಇಬ್ಬರು ಖುಲಾಸೆಗೊಂಡಿದ್ದಾರೆ.

**2143 ಮಂದಿ ಬಂಧನ:** ಕಳೆದ ಎರಡೂವರೆ ವರ್ಷಗಳಲ್ಲಿ ದಾಖಲಾಗಿರುವ 1,888 ಅತ್ಯಾಚಾರ ಪ್ರಕರಣಗಳಲ್ಲಿ 2,143 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ, ಆಶ್ಚರ್ಯಕರ ಸಂಗತಿ ಎಂದರೆ ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆ ಪ್ರಮಾಣ ಮಾತ್ರ ಶೂನ್ಯ. ಗೃಹ ಇಲಾಖೆ ನೀಡಿರುವ ಮಾಹಿತಿ ಪ್ರಕಾರ 2025ರ ಜುಲೈ ಅಂತ್ಯಕ್ಕೆ ರಾಜ್ಯದಲ್ಲಿ 549 ಪ್ರಕರಣಗಳಲ್ಲಿ 407 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. 2024ರಲ್ಲಿ 739 ಪ್ರಕರಣಗಳಿಂದ 969 ಹಾಗೂ 2023ರಲ್ಲಿ 600 ಪ್ರಕರಣಗಳಿಂದ 767 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಒಟ್ಟು ದಾಖಲಾಗಿರುವ 1,888 ಪ್ರಕರಣಗಳಲ್ಲಿ 2,143 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. 83 ಪ್ರಕರಣಗಳು ಖುಲಾಸೆಗೊಂಡಿದ್ದು, ಇನ್ನುಳಿದ ಪ್ರಕರಣಗಳು ವಿಚಾರಣೆ ಹಂತದಲ್ಲಿದೆ ಎಂದು ಅಂಕಿ–ಅಂಶಗಳಿಂದ ಬಹಿರಂಗವಾಗಿದೆ.

**ಪ್ರತಿದಿನ ಮೂರು ಅತ್ಯಾಚಾರ ಪ್ರಕರಣ ದಾಖಲು:** ಈಗ ರಾಜ್ಯದಲ್ಲಿ ಪ್ರತಿದಿನ ಸರಾಸರಿ ಮೂರು ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ಕಳೆದ ವರ್ಷ 2 ಪ್ರಕರಣಗಳಿಗೆ ಸೀಮಿತವಾಗಿತ್ತು. ವಿವಿಧ ವ್ಯಕ್ತಿಗಳಿಂದ ಲೈಂಗಿಕ ಕಿರುಕುಳ ಹಾಗೂ ಪತಿಯಿಂದ ಕಿರುಕುಳ ಪ್ರಕರಣ ಸಂಖ್ಯೆ ಯಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಎರಡೂ ವರೆ ವರ್ಷಗಳಲ್ಲಿ 16,273 ಪ್ರಕರಣಗಳಿಂದ 19,312 ಆರೋಪಿಗಳನ್ನು ಬಂಧಿಸಲಾಗಿದೆ. ದಿನಕ್ಕೆ ಸರಾಸರಿ 16 ಮಂದಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ವಾಗುತ್ತಿದೆ.

ಅತ್ಯಾಚಾರ ಪ್ರಕರಣಗಳ ಬಗ್ಗೆ ಗೃಹ ಇಲಾಖೆ ನೀಡಿರುವ ಮಾಹಿತಿಯನ್ನು ಗಮನಿಸಿದರೆ 2023ರಲ್ಲಿ 600 ಪ್ರಕರಣಗಳು ದಾಖಲಾಗಿದ್ದು, 767 ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. 55 ಮಂದಿ ಖುಲಾಸೆಯಾಗಿದ್ದಾರೆ. 2024ರಲ್ಲಿ 739 ಪ್ರಕರಣಗಳು ದಾಖಲಾಗಿದ್ದು, 969 ಆರೋಪಿಗಳನ್ನು ಬಂಧಿಸಲಾಗಿದೆ. ಈ ವರ್ಷದಲ್ಲಿಯೂ ಸಹ ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. 28 ಮಂದಿ ಖುಲಾಸೆಯಾಗಿದ್ದಾರೆ. 2025ರಲ್ಲಿ ಜುಲೈವರೆಗೆ 549 ಪ್ರಕರಣಗಳು ದಾಖಲಾಗಿದ್ದು, 407 ಆರೋಪಿಗಳನ್ನು ಬಂಧಿಸಲಾಗಿದೆ.

- ಕಳೆದ ಎರಡೂವರೆ ವರ್ಷಗಳಲ್ಲಿ 1,888 ಅತ್ಯಾಚಾರ
- 83 ಪ್ರಕರಣಗಳ ಖುಲಾಸೆ, ಇನ್ನುಳಿದ ಕೇಸ್ ವಿಚಾರಣೆ
- 2143 ಆರೋಪಿಗಳ ಬಂಧನ, ಶಿಕ್ಷೆ ಪ್ರಮಾಣ ಶೂನ್ಯ
- ರಾಜ್ಯದಲ್ಲಿ ನಿತ್ಯ ಸರಾಸರಿ 16 ಮಹಿಳೆಯರ ಮೇಲೆ ದೌರ್ಜನ್ಯ

## ಶಿಕ್ಷೆಯಾಗದಿರುವುದಕ್ಕೆ ಕಾರಣವೇನು?

ಅತ್ಯಾಚಾರ ಪ್ರಕರಣ ದಾಖಲಾದ ಬಳಿಕ ಬಹಳಷ್ಟು ಬಾರಿ ರಾಜೀ ಸಂಧಾನದಿಂದಾಗಿ ಆರೋಪಿಗಳಿಗೆ ಶಿಕ್ಷೆಯಾಗುವುದಿಲ್ಲ. ಕೆಲವು ಬಾರಿ ಹಣ ಬಲದಿಂದಲೂ ಶಿಕ್ಷೆಯಾಗುವುದಿಲ್ಲ. ಇದಲ್ಲದೇ, ನ್ಯಾಯಾಲಯದಲ್ಲಿ ವಕೀಲರ ವಾದವೂ ಸಹ ಕೆಲಸ ಮಾಡುತ್ತಿದೆ. ಹೀಗೆ ಹಲವು ಕಾರಣಗಳಿಂದಾಗಿ ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಯಾಗುವುದಿಲ್ಲ. ಅಲ್ಲದೇ, ಪೊಲೀಸರ ಏಕಪಕ್ಷೀಯ ಕೆಲಸಗಳು ಸಹ ಇದಕ್ಕೆ ಕಾರಣವಾಗಿರುತ್ತದೆ. ಕೆಲವೊಮ್ಮೆ ಕಾನೂನಿನ ದುರ್ಬಳಕೆ ಯಾದರೂ ಒತ್ತಡ ಹಾಗೂ ಆ ಹೊತ್ತಿನ ಕಾರಣಗಳಿಂದ ಕೇಸು ದಾಖಲಿಸಲೇಬೇಕಾಗುತ್ತದೆ ಎಂದು ಪೊಲೀಸ್ ಇಲಾಖೆಯ ಮೂಲಗಳು ಹೇಳಿವೆ.

## ಮದುವೆ ನೆಪದಲ್ಲಿ ಅತ್ಯಾಚಾರ, ವಂಚನೆ

ಪೊಲೀಸ್ ಮೂಲಗಳ ಪ್ರಕಾರ, ದಾಖಲಾಗುವ ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳು ಸಂತ್ರಸ್ತೆಗೆ ಸಂಬಂಧಿಗಳು ಹಾಗೂ ಪರಿಚಯಸ್ಥರಾಗಿದ್ದಾರೆ. ಮದುವೆಯಾಗುವುದಾಗಿ ನಂಬಿಸಿ ಒಟ್ಟಿಗೆ ಸುತ್ತಾಡುವ ಯುವ ಜೋಡಿಗಳು ದೈಹಿಕ ಸಂಪರ್ಕದ ಬಳಿಕ ವಿವಾಹವಾಗದೆ, ನುಣುಚಿಕೊಳ್ಳುವ ಪ್ರಹಸನಗಳು ಹೆಚ್ಚಾಗುತ್ತಿವೆ. ಬಳಿಕ ಠಾಣೆಗೆ ಹೋಗಿ ಸಂತ್ರಸ್ತೆಯು ಪ್ರಿಯಕರನ ವಿರುದ್ಧ ಅತ್ಯಾಚಾರ ಮಾಡಿರುವುದಾಗಿ ದೂರು ನೀಡುವುದು ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯವೆನಿಸಿದೆ. ಬಹುತೇಕ ಇಂತಹ ಪ್ರಕರಣಗಳು ವರದಿಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

## ಪ್ರಿಯತಮೆ ಕೊಂದ ಪ್ರಿಯಕರ

**ಚಿಕ್ಕಬಳ್ಳಾಪುರ:** ಮದ್ಯಕ್ಕಾಗಿ ಪೀಡಿಸಿದ ಪ್ರಿಯತಮೆಯನ್ನ ಪ್ರಿಯಕರ ಮಚ್ಚಿನಿಂದ ಮನಸ್ಸೋಇಚ್ಛೆ ಕೊಚ್ಚಿ ಕೊಲೆ ಮಾಡಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ಪಟ್ಟಣದ ವಾರ್ಡ್ ನಂಬರ್ 8ರಲ್ಲಿ ನಡೆದಿದೆ. ರಮಿಜಾಬಿ (25) ಮೃತ ಪ್ರಿಯತಮೆ. ಬಾಬಾಜಾನ್ (40) ಕೊಲೆ ಮಾಡಿದ ಪ್ರಿಯಕರ. ಮೂಲತಃ ಶ್ರೀನಿವಾಸಪುರದ ರಮಿಜಾಬಿಗೆ ಬೇರೊಬ್ಬರ ಜತೆ ವಿವಾಹವಾಗಿ ಮಕ್ಕಳಿದ್ದರು. ಇತ್ತ ಬಾಬಾಜಾನ್‌ಗೂ ಮದುವೆಯಾಗಿ ಮಕ್ಕಳಿದ್ದರು. ಆದರೂ ಇಬ್ಬರೂ, ಗಂಡ, ಹೆಂಡತಿ ಮತ್ತು ಮಕ್ಕಳನ್ನ ಬಿಟ್ಟು ಲಿವಿಂಗ್ ರಿಲೇಶನ್‌ಶಿಪ್‌ನಲ್ಲಿದ್ದರು. ಇಬ್ಬರು ಸಹ ಕುಡಿತದ ಚಟಕ್ಕೆ ಬಿದ್ದಿದ್ದರು. ಪದೇ ಪದೇ ಕುಡಿದು ಗಲಾಟೆ ಮಾಡಿಕೊಳ್ಳುತ್ತಿದ್ದರು ಎನ್ನಲಾಗಿದೆ. ಶುಕ್ರವಾರ ಸಂಜೆ ಸಹ ಕುಡಿದು ಗಲಾಟೆ ಮಾಡಿಕೊಂಡಿದ್ದು, ರಮಿಜಾಬಿ ತನಗೆ ಮತ್ತಷ್ಟು ಎಣ್ಣೆ ಬೇಕೆಂದು ಪೀಡಿಸಿದ್ದಳಂತೆ. ಇದರಿಂದ ಸಿಟ್ಟಿಗೆದ್ದ ಬಾಬಾಜಾನ್ ಮಚ್ಚಿನಿಂದ ಮನಸ್ಸೋಇಚ್ಛೆ ಕೊಚ್ಚಿ ಕೊಂದಿದ್ದಾನೆ. ಘಟನಾ ಸ್ಥಳಕ್ಕೆ ಗುಡಿಬಂಡೆ ಪೊಲೀಸರು ಹಾಗೂ ಎಸ್ಪಿ ಕುಶಲ್ ಚೌಕ್ಸಿ ಭೇಟಿ ನೀಡಿ, ಬಾಬಾಜಾನ್‌ನನ್ನ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

## ಅಪ್ರಾಪ್ತೆ ಕೊಲೆ ಪ್ರಕರಣ: ಮರಣ ದಂಡನೆ

**ಮಂಗಳೂರು:** ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ ಎಸಗಿ, ಭೀಕರವಾಗಿ ಹಲ್ಲೆ ನಡೆಸಿ ಕೊಲೆಗೈದ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿದೆ. ಸವದತ್ತಿ ತಾಲೂಕು ಹಂಚಿನಾಳ ಗ್ರಾಮ ಮಾದರ ನಿವಾಸಿ ಫಕೀರಪ್ಪ ಹಣಮಪ್ಪ ಮಾದರ (58) ಶಿಕ್ಷೆಗೊಳಗಾದ ಅಪರಾಧಿ. ಅಪ್ರಾಪ್ತೆ ಬೆಳಗಾವಿ ಜಿಲ್ಲೆಯ ಚುಂಚನೂರು ಗ್ರಾಮದ ನಿವಾಸಿಯಾಗಿದ್ದು, ಕೊಣಾಜೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 9ನೇ ತರಗತಿಯಲ್ಲಿ ಕಲಿಯುತ್ತಿದ್ದಳು. ಬಾಲಕಿಯ ತಾಯಿ ತನ್ನ ಮಗಳನ್ನು ತನ್ನ ಸೋದರ ಸಂಬಂಧಿಯ ಮನೆಯಲ್ಲಿ ಬಿಟ್ಟು ವಸತಿ ಶಾಲೆಗೆ ಕರೆದುಕೊಂಡು ಹೋಗುವಂತೆ ಹೇಳಿ ಊರಿಗೆ ತೆರಳಿದ್ದರು. 2024ರ ಆ.6ರಂದು ಬೆಳಗ್ಗೆ ಬಾಲಕಿಯ ಮಾವ ಗಾರೆ ಕೆಲಸಕ್ಕೆ ಹೊರಟಿದ್ದರೆ, ಅವರ ಹೆಂಡತಿ ಊರಿಗೆ ಹೋಗಿದ್ದರು. ಹಾಗಾಗಿ ಆ ಮನೆಯಲ್ಲಿ ಬಾಲಕಿ ಒಬ್ಬಳೇ ಇರುವುದನ್ನು ಖಚಿತಪಡಿಸಿಕೊಂಡ ಪಕ್ಕದ ಬಾಡಿಗೆ ಮನೆಯಲ್ಲಿದ್ದ ಆರೋಪಿ ಫಕೀರಪ್ಪ ಹಣಮಪ್ಪ ಮಾದರ ಬಾಲಕಿಯಿದ್ದ ಮನೆಗೆ ಅಕ್ರಮ ಪ್ರವೇಶ ಮಾಡಿ ಲೈಂಗಿಕ ದೌರ್ಜನ್ಯ ಎಸಗಿ ಆಕೆಗೆ ಮುಖಕ್ಕೆ ಕಚ್ಚಿ ಗಾಯಗೊಳಿಸಿದ್ದ. ಬಳಿಕ ಬಾಲಕಿಯ ಕುತ್ತಿಗೆಗೆ ಬಟ್ಟೆಯಿಂದ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ.

# ರಾಜಮನೆತನದವರ ಪೂಜೆ ಅರಮನೆಗೆ ನಿರ್ಬಂಧ

**ಮೈಸೂರು:** ಮೈಸೂರು ರಾಜಮನೆತನದವರು ಅರಮನೆಯಲ್ಲಿ ದಸರಾ ಅಂಗವಾಗಿ ಧಾರ್ಮಿಕ ಕೈಂಕರ್ಯಗಳನ್ನು ಕೈಗೊಳ್ಳುವುದರಿಂದ, ಆ ದಿನಗಳಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ವೀಕ್ಷಣೆಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಸಿಂಹಾಸನ ಜೋಡಣೆ ಪ್ರಯುಕ್ತ ಸೆ.16ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ, ಖಾಸಗಿ ದರ್ಬಾರ್' ನಲ್ಲಿ ರಾಜವಂಶಸ್ಥರ ಪೂಜಾ ಕೈಂಕರ್ಯದ ಪ್ರಯುಕ್ತ ಸೆ.22ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಪ್ರವೇಶ ಇರುವುದಿಲ್ಲ. ಅ.1ರಂದು ಆಯುಧಪೂಜೆ ಅಂಗವಾಗಿ ಸಂಪೂರ್ಣ ದಿನ ಪ್ರವೇಶ ಇರುವುದಿಲ್ಲ. ಅ.2ರಂದು ದಸರಾ ಪಾಸ್, ಟಿಕೆಟ್ ಪಡೆದವರಿಗೆ ಮಾತ್ರವೇ ಪ್ರವೇಶ ಇರಲಿದೆ. ಅ.31ರಂದು ಸಿಂಹಾಸನ ವಿಸರ್ಜನೆ ಪ್ರಯುಕ್ತ ಬೆಳಗ್ಗೆ 10ರಿಂದ 12ರವರೆಗೆ ಪ್ರವೇಶ ನೀಡಲಾಗುವುದಿಲ್ಲ ಎಂದು ಮೈಸೂರು ಅರಮನೆ ಮಂಡಳಿ ಕಾರ್ಯನಿರ್ವಾಹಕ ಅಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದಸರಾ ಅಂಗ ವಾಗಿ ಸೆ.15ರಿಂದ ಅ.12ರವರೆಗೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಅ.13ರಿಂದ ಎಂದಿನಂತೆ ಕಾರ್ಯಕ್ರಮವನ್ನು ಸಂಜೆ 7ರಿಂದ 8ರವರೆಗೆ ನಡೆಯಲಿದೆ ಎಂದು ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ತಿಳಿಸಿದ್ದಾರೆ.



## ಕಾಡಾನೆ ದಾಳಿ: ಅರಣ್ಯ ವೀಕ್ಷಕ ಸಾವು

**ಮೈಸೂರು:** ಕಾಡಾನೆ ದಾಳಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿ, ಭಯದಲ್ಲಿಯೇ ಅರಣ್ಯ ವೀಕ್ಷಕರೊಬ್ಬರು ಮೃತಪಟ್ಟಿರುವ ಘಟನೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಎಚ್. ಡಿ. ಕೋಟೆ ತಾಲೂಕಿನ ಡಿ. ಬಿ. ಕುಪ್ಪೆ ವನ್ಯಜೀವಿ ವಲಯದಲ್ಲಿ ನಡೆದಿದೆ. ಮಾನೆಮೂಲೆ ಹಾಡಿಯ ನಿವಾಸಿಯಾಗಿದ್ದ ಅರಣ್ಯ ವೀಕ್ಷಕ ರಾಜು (45) ಸಾವಿಗೀಡಾದವರು. ಎಂದಿನಂತೆ ಇತರ ಸಿಬ್ಬಂದಿಯೊಂದಿಗೆ ರಾಜು ಅವರು ಕಾಡಿನಲ್ಲಿ ಗಸ್ತು ತಿರುಗಲು ಹೋಗಿದ್ದರು. ಈ ವೇಳೆ ಕಾಡಾನೆಯೊಂದು ಸಿಬ್ಬಂದಿಯ ಮೇಲೆ ದಾಳಿಗೆ ಮುಂದಾಯಿತು. ಆನೆಯಿಂದ ತಪ್ಪಿಸಿ ಕೊಳ್ಳಲು ಓಡುವಾಗ ಗಾಬರಿಯಿಂದ ಕುಸಿದು ಬಿದ್ದು ರಾಜು ಸ್ಥಳದಲ್ಲೇ ಮೃತಪಟ್ಟರು ಎನ್ನಲಾಗಿದೆ. ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೇಪಾಳಕ್ಕೆ ನ್ಯಾ.ಸುಶೀಲಾ ಕರ್ಕಿ ಮಧ್ಯಂತರ ಪ್ರಧಾನಿ

← ಮೊದಲಪುಟದಿಂದ

**ಬನಾರಸ್ ಹಿಂದೂ ವಿವಿ ಎಂಎ ಪದವೀಧರೆ:** ಭಾರತದ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದಲ್ಲಿ ಎಂಎ ಪದವಿಯನ್ನು ಪಡೆದಿರುವ ಸುಶೀಲಾ ಕರ್ಕಿ, ನೇಪಾಳ ಸರ್ವೋಚ್ಚ ಮುಖ್ಯ ನ್ಯಾಯಮೂರ್ತಿ ದೊಡ್ಡ ಹೆಸರು ಮಾಡಿದ್ದಾರೆ. ಹಲವು ಕಠಿಣ ತೀರ್ಪುಗಳನ್ನು ನೀಡುವ ಮೂಲಕ ರಾಜಕೀಯ ನಾಯಕರ ಕೆಂಗಣ್ಣಿಗೆ ತುತ್ತಾಗಿದ್ದರು. ಪೊಲೀಸ್ ಮುಖ್ಯಸ್ಥರ ಆಯ್ಕೆಯಲ್ಲಿ ಹಿರಿತನವನ್ನು ಪರಿಗಣಿಸಿಲ್ಲ ಎಂದು ಸರ್ಕಾರದ ನಡೆ ಯನ್ನು ಕರ್ಕಿ ಬದಿಗೆ ಸರಿಸಿದ್ದರು. ಇವರ ವಿರುದ್ಧ ವಾಗ್ದಂಡನೆಗೂ ನೇಪಾಳ ಸಂಸತ್ತು ಮುಂದಾಗಿತ್ತು. ಆದರೆ ಸದಸ್ಯರ ಬೆಂಬಲ ಸಿಕ್ಕಿರಲಿಲ್ಲ.

## ಜಾತಿ ಗಣತಿಗೆ 425 ಕೋಟಿ ರು. ವೆಚ್ಚ!

← ಮೊದಲಪುಟದಿಂದ

**ಪ್ರತಿಪಕ್ಷಗಳಿಂದ ಆಕ್ಷೇಪ ಸಾಧ್ಯತೆ:** ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ ಅವರು ಕಾಂತರಾಜ್ ಅವರ ನೇತೃತ್ವದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದ್ದರು. 10 ವರ್ಷದ ಹಿಂದೆ ನಡೆದಿದ್ದ ಆ ಸಮೀಕ್ಷೆಗೆ 160 ಕೋಟಿ ರು. ಖರ್ಚು ಮಾಡಿದ್ದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. 22ರಿಂದ ಆರಂಭವಾಗಲಿರುವ ಸಮೀಕ್ಷೆಗೆ 425 ಕೋಟಿ ರು. ನೀಡಿರುವುದಾಗಿ ಸಿದ್ದರಾಮಯ್ಯ ಅವರು ಘೋಷಿಸಿದ್ದು, ಅಗತ್ಯ ಬಿದ್ದರೆ ಹೆಚ್ಚಿಸುವ ಮಾತುಗಳನ್ನು ಹೇಳಿದ್ದಾರೆ. ಆದ್ದರಿಂದ ಸರಕಾರದ ಈ ನಡೆಗೆ ಪ್ರತಿಪಕ್ಷಗಳು ಹಾಗೂ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗುವ ಸಾಧ್ಯತೆಯಿದೆ.

ಕರ್ನಾಟಕ ಸರ್ಕಾರ
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.**
ಸಂಖ್ಯೆ: ಕಾಇಂ/ಗ್ರಾಕುನೀ&ನೈ.ವಿ/ದಾ/ /ಸ.ಇಂ–1,2/ಕಿ,ಇಂ–1/ ಜೆ.ಜೆ.ಎಂ & ತುಕುನೀಟೆಂಡರ್:2025–26/820 : ದಿನಾಂಕ:–11.09.2025

**ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)**

2020–21 ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಒಟ್ಟು 5 ಗ್ರಾಮಕ್ಕೆ 5 ಕಾಮಗಾರಿಯಗಳು ಮತ್ತು ಜಗಳೂರು ತಾಲ್ಲೂಕಿನ 1 ಗ್ರಾಮ 1 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳು (ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ) ಹಾಗೂ 2025–26 ನೇ ಸಾಲಿನ ತುರ್ತು ಕುಡಿಯುವ ನೀರು ಯೋಜನೆಯಡಿ ದಾವಣಗೆರೆ ತಾಲ್ಲೂಕಿನ 1 ಕಾಮಗಾರಿ ರೂ.177.50 ಲಕ್ಷಗಳಿಗೆ ಅನುಮೋದನೆಯಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 24.09.2025 ರ ಸಂಜೆ5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ http//kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/342/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

**ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ**
ನಂ: 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.
ಫೋನ್ ನಂ: 080 22341230/35 ಇ–ಮೈಲ್ : bmicapa@gmail.com
ಸಂಖ್ಯೆ: ಬಿಎಂಐಸಿಪಿಎ/ಭೂಉಬ–04/30/2025–26/923 ದಿನಾಂಕ: 11–09–2025

**ಸಾರ್ವಜನಿಕ ಪ್ರಕಟಣೆ**

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3)ರ ಪ್ರಕಾರ]

ಶ್ರೀಮತಿ ನೂರ್‌ಉಜ್ಮ ಬಿನ್ ಲೇಟ್ ಮಹಮ್ಮದ್ ಸುಲ್ತಾನ್ ಇವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 158/4ರ 0ಎ–16ಗು (0ಎ–01ಗು 'ಅ' ಖರಾಬು ಸೇರಿ) ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 69(3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಯಾಗಿರುವ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಪ್ರಸ್ತುತ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯದಲ್ಲಿ ಮೀಸಲಿಡಲಾಗಿದೆ. ಪ್ರಶ್ನಿತ ಜಮೀನಿಗೆ ಹೊಂದಿಕೊಂಡಂತೆ ಸುತ್ತಮುತ್ತ ವಾಣಿಜ್ಯ ಬೆಳವಣಿಗೆಗಳಿರುತ್ತವೆ.

ಹಾಗಾಗಿ, ಪ್ರಸ್ತಾಪಿತ ಜಮೀನಿನ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಭೂ ಉಪಯೋಗವನ್ನು ವಾಣಿಜ್ಯ ಉದ್ದೇಶಕ್ಕೆ ನಿಗಧಿಪಡಿಸುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಪಿ.ಎ., ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2799/ಆಕಾರ್/2025–26

ಚಿಕ್ಕೋಡಿ ತಾಲೂಕಿನ ಹಿರೇಕೋಡಿಯ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಯಲ್ಲಿ ಶುಕ್ರವಾರ ಉಪಾಹಾರ ಸೇವಿಸಿ ಅಸ್ವಸ್ಥಗೊಂಡ ವಿದ್ಯಾರ್ಥಿಗಳಿಗೆ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

## ವಿಷಾಹಾರ ಸೇವನೆ: 80 ವಿದ್ಯಾರ್ಥಿಗಳು ಅಸ್ವಸ್ಥ

**ಚಿಕ್ಕೋಡಿ:** ತಾಲೂಕಿನ ಹಿರೇಕೋಡಿಯ ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ಶಾಲೆಯ 80 ವಿದ್ಯಾರ್ಥಿಗಳು ಶುಕ್ರವಾರ ಬೆಳಗ್ಗೆ ಉಪಾಹಾರ ಸೇವಿಸಿ ಅಸ್ವಸ್ಥರಾಗಿದ್ದಾರೆ. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರ ಅಸ್ವಸ್ಥಗೊಂಡ ಒಬ್ಬ ವಿದ್ಯಾರ್ಥಿನಿಯನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಲು ಕರೆದೊಯ್ಯಲಾಗಿದೆ.

ತಾಲೂಕು ಆಸ್ಪತ್ರೆಯಲ್ಲಿ 37 ಬಾಲಕರು ಹಾಗೂ 33 ಬಾಲಕಿಯರು, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ 3 ಬಾಲಕರು ಹಾಗೂ 7 ಬಾಲಕಿಯರಿಗೆ ಚಿಕಿತ್ಸೆ ನೀಡಲಾಗಿದೆ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಬೆಳಗ್ಗೆ ಉಪ್ಪಿಟ್ಟು ಸೇವನೆ ಮಾಡಿದ ವಿದ್ಯಾರ್ಥಿಗಳು ವಾಂತಿ– ಭೇದಿಯಿಂದ ತೀವ್ರ ಅಸ್ವಸ್ಥರಾಗಿದ್ದರಿಂದ ತಾಲೂಕು ಆಸ್ಪತ್ರೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಹೆಚ್ಚುವರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಎಸ್. ಗಡದ ತಿಳಿಸಿದ್ದಾರೆ. ಹಿರೇಕೋಡಿಯ ಅಲ್ಪಸಂಖ್ಯಾತರ ವಸತಿ ಶಾಲೆಯಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಉಪಾಹಾರ ಸೇವಿಸಿ ಅಸ್ವಸ್ಥಗೊಂಡ 101 ಬಾಲಕರನ್ನು ಹಾಗೂ 76 ಬಾಲಕಿಯರು ಸೇರಿದಂತೆ 177 ವಿದ್ಯಾರ್ಥಿಗಳು ಸ್ಥಳಕ್ಕೆ ಭೇಟಿ ನೀಡಿದ ವೈದ್ಯರ ತಂಡ ಹೊರ ರೋಗಿಗಳ ವಿಭಾಗದಲ್ಲಿ ಚಿಕಿತ್ಸೆ ನೀಡಿದ್ದಾರೆ ಎಂದೂ ಅವರು ವಿವರಿಸಿದರು.

## ನದಿ ಜೋಡಣೆ: ರಾಜ್ಯಕ್ಕೆ ಅನ್ಯಾಯವಾಗಬಾರದು



**ಹಾವೇರಿ:** ನದಿ ಜೋಡಣೆ ವಿಚಾರದಲ್ಲಿ ರಾಜ್ಯ ಸರಕಾರ ಕರ್ನಾಟಕಕ್ಕೆ ಅನ್ಯಾಯ ಆಗಲು ಬಿಡಬಾರದು. ಕೃಷ್ಣಾ ಹಾಗೂ ಕಾವೇರಿ ಜಲಾನಯನದಿಂದ ನಮಗೆ ಹೆಚ್ಚು ನೀರು ಸಿಗುತ್ತದೆ. ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ವ ಪಕ್ಷ ಸಭೆ ಕರೆಯಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಅಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ,ನದಿ ಜೋಡಣೆ ನ್ಯಾಯಬದ್ದ ಹಂಚಿಕೆ ಕರಡು ಒಪ್ಪಂದಕ್ಕೆ ರಾಜ್ಯ ಸರಕಾರ ಸಹಿ ಮಾಡಲು ನಿರಾಕರಣೆ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ನ್ಯಾಷನಲ್ ವಾಟರ್ ಡೆವಲಪ್‌ಮೆಂಟ್ ಅಥಾರಿಟಿಯವರು ಮಾಡಿದ್ದರು. ಕಾವೇರಿ, ಗೋದಾವರಿ, ಕೃಷ್ಣಾ ಮಹಾನದಿ ನಾಲ್ಕು ನದಿಗಳ ಜೋಡಣೆ ಮಾಡಿದರೆ, ಆಯಾ ಎಲ್ಲಾ ರಾಜ್ಯಗಳಿಗೆ ಪಾಲು ಹಂಚಬೇಕು ಅಂತ ಒಂದು ನೀತಿ ಇತ್ತು. ಮೊದಲನೇ ಡಿಪಿಆರ್ ಮಾಡಿದಾಗ ನಮ್ಮ ರಾಜ್ಯಕ್ಕೆ 130 ಟಿಎಂಸಿ ನೀರು ಸಿಗುತ್ತದೆ ಅಂತ ಇತ್ತು. ಎರಡನೇ ಬಾರಿಗೆ ಮತ್ತೆ ಕಡಿಮೆ ಮಾಡಿದರು. ಹೀಗಾಗಿ ನಾನು ನೀರಾವರಿ ಸಚಿವನಿದ್ದಾಗ ಅದನ್ನು ವಿರೋಧ ಮಾಡಿದ್ದೆಎಂದರು.

**ನದಿ ನೀರಿನ ಹಂಚಿಕೆಯಲ್ಲಿ ಕರ್ನಾಟಕದ ಪಾಲು ಸಿಗಲೇಬೇಕು. ರಾಜ್ಯ ಸರಕಾರ ಇದಕ್ಕೆ ಒಪ್ಪಿಗೆ ಸೂಚಿಸಬಾರದು. ಕೇವಲ ಆಂಧ್ರ ಹಾಗೂ ತಮಿಳುನಾಡಿಗೆ ಮಾತ್ರ ಪ್ರಯೋಜನ ಆಗುತ್ತದೆ. ನಮ್ಮ ಕರ್ನಾಟಕಕ್ಕೆ ಅನ್ಯಾಯ ಆಗಲು ಬಿಡಬಾರದು. ಕೃಷ್ಣಾ ಹಾಗೂ ಕಾವೇರಿ ಜಲಾನಯನದಿಂದ ನಮಗೆ ಹೆಚ್ಚು ನೀರು ಸಿಗುತ್ತದೆ. ಈ ವಿಚಾರದಲ್ಲಿ ನಮ್ಮ ನಿಲುವನ್ನು ಗಟ್ಟಿಯಾಗಿ ಹೇಳಬೇಕು. ಈ ಬಗ್ಗೆ ಚರ್ಚಿಸಲು ಸಿಎಂ ಸಿದ್ದರಾಮಯ್ಯ ಅವರು ಸರ್ವ ಪಕ್ಷ ಸಭೆ ಕರೆಯಬೇಕು.**

**–ಬಸವರಾಜ ಬೊಮ್ಮಾಯಿ,** ಸಂಸದ

## ಕುಮಾರೇಶ್ವರ ಮಠಕ್ಕೆ ಹುಸಿ ಬಾಂಬ್ ಕರೆ

**ಹಾವೇರಿ:** ಜಿಲ್ಲೆಯ ಹಾನಗಲ್ ಪಟ್ಟಣದ ಕುಮಾರೇಶ್ವರ ಮಠ ಸೇರಿ ಕಾರು, ಬಸ್, ಶಾಲೆಗೆ ಆರ್‌ಡಿಎಕ್ಸ್ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಕರೆ ಬಂದಿದ್ದು, ಶುಕ್ರವಾರ ಮಠದಲ್ಲಿ ಆತಂಕದ ವಾತಾವಣರ ನಿರ್ಮಾಣವಾಗಿತ್ತು. ತಕ್ಷಣವೇ ಎಚ್ಚೆತ್ತ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಡಾಗ್ ಸ್ಕ್ವಾಡ್ ಜತೆ ತೆರಳಿ ತಪಾಸಣೆ ನಡೆಸಿದ್ದಾರೆ. ಈ ಬಗ್ಗೆ ಎಸ್ಪಿ ಯಶೋಧಾ ವಂಟಗೋಡಿ ಪ್ರತಿಕ್ರಿಯಿಸಿ, ಹಾನಗಲ್ ಜನರು ಆತಂಕಪಡುವ ಅವಶ್ಯಕತೆ ಇಲ್ಲ. ಕರೆ ಮಾಡಿರುವ ನಂಬರ್ ಟ್ರೇಸ್ ಮಾಡಿದ್ದು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರ ಮಾಡಲಾಗಿದೆ. ಆತ ಮಾನಸಿಕ ಅಸ್ವಸ್ಥತೆಯಿಂದ ಕೂಡಿದವನೆಂದು ತಿಳಿದುಬಂದಿದ್ದು, ಹೆಚ್ಚಿನ ತನಿಖೆ ನಡೆಸಿ ಅವರ ಸಂಬಂಧಿಕರನ್ನು ವಿಚಾರಿಸಲಾಗಿದೆ. ಹರೀಶ ಎಂಬಾತ ಹುಸಿ ಬಾಂಬ್ ಬೆದರಿಕೆ ಕರೆ ಮಾಡಿದ್ದ. ಈತ ಡಿಆರ್‌ಡಿಒದಲ್ಲಿ ಡ್ರೈವರ್ ಆಗಿದ್ದ. ಆತನಿಗೆ ಮಾನಸಿಕ ಅಸ್ವಸ್ಥತೆ ಇದೆ ಎನ್ನಲಾಗಿದೆ.

ನಮ್ಮ ಮೇಲೆ ಯಾಕೆ ಎಫ್‌ಐಆರ್: ಪೊಲೀಸರಿಗೆ ಸಿ.ಟಿ.ರವಿ ಪ್ರಶ್ನೆ

## ಪ್ರಧಾನಿಯನ್ನು ಕೊಲ್ಲಲಿ ಎಂದವರಿಗೆ ಕೇಸ್ ಹಾಕಿಲ್ಲ

**ಚಿಕ್ಕಮಗಳೂರು:** ಪ್ರಧಾನಿ ಅವರನ್ನು ಕೊಲ್ಲಬೇಕು ಎಂದವರ ಮೇಲೆ ಸುಮೋಟೋ ಕೇಸ್ ಹಾಕಲಿಲ್ಲ. ಆದರೆ ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಕೊಟ್ಟವರ ಮೇಲೆ ಎಫ್‌ಐಆರ್ ಆಗಿದೆ ಎಂದು ಎಂಎಲ್ಸಿ ಸಿ.ಟಿ.ರವಿ, ಯತ್ನಾಳ್ ಹಾಗೂ ತಮ್ಮ ಮೇಲೆ ದಾಖಲಾದ ಸುಮೋಟೋ ಸಂಬಂಧ ಸರಕಾರದ ವಿರುದ್ಧ ಕಿಡಿಕಾರಿದ್ದಾರೆ.

ಈ ಬಗ್ಗೆ ಚಿಕ್ಕಮಗಳೂರಿನಲ್ಲಿ ಪ್ರತಿಕ್ರಿಯಿಸಿದ ಅವರು, ಪಾಕಿಸ್ತಾನ ಜಿಂದಾಬಾದ್ ಎಂದರೂ ಸುಮ್ಮನಿರಬೇಕು. ಕಲ್ಲು ಹೊಡೆದು, ಪೆಟ್ರೋಲ್ ಬಾಂಬ್ ಹಾಕಿದರೂ ಸಹಿಸಿಕೊಳ್ಳಬೇಕು. ಸಹನೆಗೂ ಒಂದು ಮಿತಿ ಇದೆ ಅಲ್ವಾ? ಎಷ್ಟು ದಿನ ಸಹಿಸಿಕೊಳ್ಳೋದು? ಯಾವ ಮತಗ್ರಂಥಗಳು ತಾನೇ ಅಸಹಿಷ್ಣತೆಯನ್ನ ಪ್ರಚೋದನೆ ಮಾಡುತ್ತವೆ. ಗಣಪತಿ ನೋಡಿದ ಕೂಡಲೇ ಉಗಿಯ ಬೇಕು ಅನ್ನುತ್ತೆ ಎಂದರೆ ಆ ಪ್ರಚೋದನೆ ಎಲ್ಲಿಂದ ಬರುತ್ತೆ. ಮನೆಯಲ್ಲೇ ಅಪ್ಪ–ಅಮ್ಮ ಹೇಳಿ ಕೊಟ್ಟಿದ್ದಾರಾ? ಮದರಸಾಗಳಲ್ಲಿ ಹೇಳಿಕೊಟ್ಟಿದ್ದಾರಾ? ಅಥವಾ ಹುಟ್ಟುವಾಗಲೇ ಭಯೋತ್ಪಾದಕರ ಬ್ಲಡ್ ಬೆರಕೆಯಾಗಿ ಹುಟ್ಟಿವೆಯೋ ಎಂದು ವಾಗ್ದಾಳಿ ನಡೆಸಿದ್ದಾರೆ.

### ಸರಕಾರದ ವಿರುದ್ಧ ಕಿಡಿ

ಕಲ್ಲು ಹೊಡೆದವರೇ ಒಪ್ಪಿಕೊಂಡರು ನಮ್ಮಿಂದ ತಪ್ಪಾಗಿದೆ ಎಂದು. ಆದರೆ ಅವರ ಮೇಲೆ ಮಾತ್ರ ಕೇಸ್ ಹಾಕಿದರೆ ಬೇಜಾರಾಗ್ತಾರೆ ಎಂದು ನನ್ನ ಮೇಲೆ ಹಾಗೂ ಯತ್ನಾಳ್ ಮೇಲೆ ಪ್ರಕರಣ ದಾಖಲು ಮಾಡಿದ್ದಾರೆ. ಪಾಪ ಅವರಿಗೆ ಸಂಕಟ ಆಗುತ್ತಿದೆ. ಉದಯಗಿರಿ- ಹುಬ್ಬಳ್ಳಿ ಠಾಣೆ ಮೇಲೆ ದಾಳಿ ಮಾಡಿ ರುವವರ ಮೇಲಿನ ಪ್ರಕರಣ ಹಿಂಪಡೆಯಲು ಶಿಫಾರಸು ಮಾಡಿದ್ದೀರಿ. ನಮ್ಮ ಮೇಲೆ ಕೇಸ್ ಹಾಕೋಕೆ ನಿಮಗ್ಯಾವ ನೈತಿಕತೆ ಇದೆ ಎಂದು ಎಂಎಲ್‌ಸಿ ಸಿ.ಟಿ.ರವಿ ಸರಕಾರವನ್ನು ಪ್ರಶ್ನಿಸಿದ್ದಾರೆ.

## ಸಮಾಚಾರ ಸಣ್ಣದಲ್ಲ

### ರಿಪ್ಪನ್ ಪೇಟೆ: ಆಕಸ್ಮಿಕ ಗುಂಡು ಹಾರಿ ವ್ಯಕ್ತಿ ಸಾವು

**ರಿಪ್ಪನ್ ಪೇಟೆ:** ಅನಧಿಕೃತ ನಾಡ ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಹಾರಿದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಶುಕ್ರವಾರ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಹಿರಿಯೋಗಿ ಗ್ರಾಮದಲ್ಲಿ ನಡೆದಿದೆ. ಕೋಡೂರು

ಸಮೀಪದ ಹಿರಿಯೋಗಿ ಗ್ರಾಮದ ದೇವರಾಜ (47) ಮೃತಪಟ್ಟವರು ಎಂದು ಗುರುತಿಸಲಾಗಿದೆ. ನಾಡ ಬಂದೂಕಿನಿಂದ ಆಕಸ್ಮಿಕವಾಗಿ ಸಿಡಿದ ಗುಂಡಿನಿಂದ ದೇವರಾಜ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲೋಡ್ ಆಗಿದ್ದ ಅನಧಿಕೃತ ನಾಡ ಬಂದೂಕನ್ನು ಹಿಡಿದುಕೊಂಡು ಮನೆಯ ಮೆಟ್ಟಿಲು ಹತ್ತುವಾಗ ಟ್ರಿಗರ್ ಎಳೆಯಲ್ಪಟ್ಟು ಗುಂಡು ಹಣೆಗೆ ತಾಗಿ ತಕ್ಷಣ ದೇವರಾಜ್ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ. ಈ ಕುರಿತಂತೆ ಪತ್ನಿ ನೀಡಿದ ದೂರಿನ ಆಧಾರದಲ್ಲಿ ರಿಪ್ಪನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪಾಕಿಸ್ತಾನ ಜಿಂದಾಬಾದ್ ಎಂದವರಿಗೆ ಗುಂಡಿಕ್ಕಿ

**ಸಾಗರ:** ನಮ್ಮ ದೇಶದಲ್ಲಿದ್ದು ಪಾಕಿಸ್ತಾನ ಜಿಂದಾಬಾದ್ ಎನ್ನುವವರು ದೇಶದ್ರೋಹಿಗಳು. ಅವರು ನಮ್ಮ ದೇಶದಲ್ಲಿ ಇರಲು ಅರ್ಹರಲ್ಲ. ಅಂತಹವರನ್ನು ಗುಂಡಿಟ್ಟು ಕೊಲ್ಲಬೇಕು ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ಖಾರವಾಗಿ

ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಭದ್ರಾವತಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿರುವುದು ಖಂಡನೀಯ. ಅಂತಹರಿಗೆ ಕಠಿಣ ಶಿಕ್ಷೆ ನೀಡಲು ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುತ್ತದೆ ಎಂದರು. ರಾಜ್ಯದ ಮದ್ದೂರು ಮಂಡ್ಯ ಇನ್ನಿತರ ಕಡೆಗಳಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಕೆಲವು ಘಟನೆಗಳು ನಡೆದಿದೆ. ಎಲ್ಲಾ ಧರ್ಮದಲ್ಲೂ ಕಿಡಿಗೇಡಿಗಳು ಇರುತ್ತಾರೆ. ಯಾರೋ ಒಬ್ಬಿಬ್ಬರು ಮಾಡುವ ಕಿಡಿಗೇಡಿತನದಿಂದ ಇಡೀ ಸಮಾಜಕ್ಕೆ ಕೆಟ್ಟ ಹೆಸರು ಬರುತ್ತದೆ. ಅಂತಹವರನ್ನು ಸಮಾಜ ಬಾಂಧವರು ದೂರ ಇರಿಸಬೇಕು. ಸಾಗರದಲ್ಲಿ ಸಹ ಮಕ್ಕಳಿಬ್ಬರು ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಉಗುಳಿದ್ದಾರೆ ಎನ್ನುವ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಮಕ್ಕಳ ತಾಯಿ ಕ್ಷಮಾಪಣೆ ಕೇಳಿದ್ದಾರೆ. ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವವರು ಯಾವುದೇ ಧರ್ಮದಲ್ಲಿದ್ದರೂ ಅವರ ವಿರುದ್ಧ ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದರು.

### ಚೂರಿ ಇರಿತ: ಯುವತಿ ಸಾವು, ಯುವಕ ಆತ್ಮಹತ್ಯೆ

**ಉಡುಪಿ:** ಬ್ರಹ್ಮಾವರ ತಾಲೂಕಿನ ಕೊಕ್ಕರ್ಣೆಯಲ್ಲಿ ಶುಕ್ರವಾರ ಮದುವೆಗೆ ನಿರಾಕರಿಸಿದ ಕಾರಣಕ್ಕಾಗಿ ಯುವಕನಿಂದ ಚೂರಿ ಇರಿತಕ್ಕೊಳಗಾಯಿದ್ದ



ಯುವತಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾಳೆ. ಇರಿತ ನಡೆಸಿದ ಆರೋಪಿಯ ಶವ ಯುವತಿ ಮನೆಯ ಬಾವಿಯಲ್ಲಿ ಪತ್ತೆಯಾಗಿದೆ. ಮೃತ ಯುವತಿಯನ್ನು ಕೊಕ್ಕರ್ಣೆ ಚೆಗ್ರಿಬೆಟ್ಟು ನಿವಾಸಿ ರಕ್ಷಿತಾ (24) ಎಂಬಾಕೆಯಾಗಿದ್ದು, ಆಕೆಯ ನೆರೆ ಮನೆಯ ಯುವಕ ಕಾರ್ತಿಕ್ ಪೂಜಾರಿ ಎಂಬಾತ ಇರಿತ ನಡೆಸಿ ಪರಾರಿಯಾಗಿದ್ದ. ಸಂಜೆ ವೇಳೆಗೆ ಬಾವಿಯಲ್ಲಿ ಶವವಾಗಿ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಪ್ರೀತಿಯ ವಿಚಾರದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ. ಆರೋಪಿಯು ರಕ್ಷಿತಾಳನ್ನು ಮದುವೆಯಾಗುವ ಇಚ್ಛೆ ವ್ಯಕ್ತಪಡಿಸಿದ್ದ. ಆದರೆ ಆಕೆಯ ಮನೆಯವರು ನಿರಾಕರಿಸಿದ್ದರು. ರಕ್ಷಿತಾ ಕೂಡಾ ಆತನನ್ನು ಬ್ಲಾಕ್ ಮಾಡಿದ್ದಳು.ಇದರಿಂದ ಕುಪಿತಗೊಂಡಿದ್ದ ಕಾರ್ತಿಕ್, ರಕ್ಷಿತಾ ಶುಕ್ರವಾರ ಬೆಳಗ್ಗೆ ಕೆಲಸಕ್ಕೆಂದು ಬಸ್ ನಿಲ್ದಾಣಕ್ಕೆ ಹೋಗುತ್ತಿದ್ದಾಗ ಬಂದು ಚಾಕುವಿನಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದ. ಆಕೆಯ ಹುಟ್ಟಿದ ದಿನದಂದೇ ಆಕೆಯ ಕುತ್ತಿಗೆ ಮತ್ತು ಎದೆಗೆ ಚಾಕುವಿನಿಂದ ಇರಿದಿದ್ದ. ಕುತ್ತಿಗೆ ಮತ್ತು ಎದೆಯ ಸುತ್ತ ಬಲ ಮತ್ತು ಎಡ ಪಕ್ಕೆಲುಬಿನ ಪ್ರದೇಶದಲ್ಲಿ ತೀವ್ರ ಇರಿತದ ಗಾಯವಾಗಿತ್ತು. ಅಲ್ಲೇ ಕುಸಿದು ಬಿದ್ದಿದ್ದ ಆಕೆಯನ್ನು, ಮಣಿಪಾಲದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಚಿಕಿತ್ಸೆ ಕೊನೆಯುಸಿರೆಳೆದಿದ್ದಾಳೆ.

### ಹಾಸನ: ಅತ್ತೆಯನ್ನು ಕೊಂದ ಅಳಿಯ

**ಹಾಸನ:** ಮಗಳ ಜೀವ ಉಳಿಸಲು ಹೋಗಿ ಅಳಿಯನಿಂದ ಅತ್ತೆ ಹತ್ಯೆಯಾದ ಘಟನೆ ಅರಕಲಗೂಡಿನ ರಾಮನಾಥಪುರದಲ್ಲಿ ನಡೆದಿದೆ. ಹತ್ಯೆಯಾದ ಮಹಿಳೆಯನ್ನು ಫೈರೋಜಾಅಹದ್



(55) ಎಂದು ಗುರುತಿಸಲಾಗಿದೆ. ರಸೂಲ್ ಕೊಲೆಗೈದ ಆರೋಪಿಯಾಗಿದ್ದಾನೆ. ಈತ ಪತ್ನಿಗೆ ನೀಡುತ್ತಿದ್ದ ಕಿರಿಕುಳದಿಂದ ಬೇಸತ್ತ ಅತ್ತೆ, ತನ್ನ ಮಗಳನ್ನು ತವರು ಮನೆಗೆ ಕರೆದುಕೊಂಡು ಬರುತ್ತಿದ್ದರು. ಇದರಿಂದ ಕೋಪಗೊಂಡ ಅಳಿಯ ಹಿಂಬಾಲಿಸಿಕೊಂಡು ಬಂದು ಪತ್ನಿಯನ್ನು ಕೊಲ್ಲಲು ಯತ್ನಿಸಿದ್ದಾನೆ. ಈ ವೇಳೆ ಮಗಳ ರಕ್ಷಣೆಗೆ ಬಂದ ಮಹಿಳೆಯನ್ನು ಚಾಕುವಿನಿಂದ ಇರಿದು ಕೊಂದಿದ್ದಾನೆ. ಪತ್ನಿ ಸಮೀನಾ ಹಾಗೂ ಆಕೆಯ ಅಕ್ಕ ಸುಮಯ್ಯತಾಜಾ ಮೇಲೂ ಆರೋಪಿ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ. ಈ ಸಂಬಂಧ ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

# 22ರಿಂದ ರಾಜ್ಯಾದ್ಯಂತ ಜಾತಿ ಗಣತಿ

## ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸಮೀಕ್ಷೆ | 1 ಲಕ್ಷ 75 ಸಾವಿರ ಶಿಕ್ಷಕರ ಬಳಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗೃಹಕಚೇರಿ ಕೃಷ್ಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

- **ಸೆ. 22ರಿಂದ ಅ.7ರವರೆಗೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ**
- **ಪ್ರತಿ ಶಿಕ್ಷಕರಿಗೆ ಸಮೀಕ್ಷೆ 120 ರಿಂದ 150 ಮನೆಗಳ ವ್ಯಾಪ್ತಿ ನಿಗದಿ**
- **ಯಾರೂ ಕೂಡ ಸಮೀಕ್ಷೆಯಿಂದ ಹೊರಗುಳಿಯದಂತೆ ಸೂಚನೆ**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸೆ. 22ರಿಂದ ಅ.7ರವರೆಗೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಗೃಹ ಕಚೇರಿ ಕೃಷ್ಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷಾ ವರದಿಯನ್ನು ಡಿಸೆಂಬರ್‌ನೊಳಗೆ ಆಯೋಗ ಸಲ್ಲಿಸಲಿದೆ. ಎಲ್ಲ ಜಾತಿ ಧರ್ಮದವರ ದತ್ತಾಂಶ ಅಂಗೈಯಲ್ಲಿದ್ದರೆ, ಮಾತ್ರ ಸಾಮಾಜಿಕ ನ್ಯಾಯದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯ. ಆದ್ದರಿಂದ ರಾಜ್ಯದ ಏಳು ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಅರಿಯಲು ಈ ಸಮೀಕ್ಷೆ ನಡೆಸಲಾಗುತ್ತದೆ. ಅತ್ಯಂತ ವೈಜ್ಞಾನಿಕವಾಗಿ ಆದಷ್ಟು ಜಾಗ್ರತೆಯಿಂದ ಸಮೀಕ್ಷೆ ನಡೆಸಿ ವರದಿ ಕೊಡುವಂತೆ ಹಿಂದುಳಿದ ವರ್ಗದ ಆಯೋಗಕ್ಕೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಸಮೀಕ್ಷಾ ಕಾರ್ಯಕ್ಕೆ 1 ಲಕ್ಷ 75 ಸಾವಿರ ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತದೆ. ದಸರಾ ರಜವನ್ನು ಗಮನದಲ್ಲಿಟ್ಟುಕೊಂಡು ಸೆ. 22 ರಿಂದ ಅ. 7ರವರೆಗೆ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತದೆ. ಪ್ರತಿ ಶಿಕ್ಷಕರಿಗೆ ಸಮೀಕ್ಷೆ 120 ರಿಂದ 150 ಮನೆಗಳ ವ್ಯಾಪ್ತಿಯನ್ನು ನಿಗದಿಪಡಿಸಲಾಗಿದೆ. ಸಮೀಕ್ಷಾ ಕಾರ್ಯದಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳಬೇಕು. ಯಾರೂ ಕೂಡ ಸಮೀಕ್ಷೆಯಿಂದ ಹೊರಗುಳಿಯಬಾರದು. ಸಮೀಕ್ಷೆಯಲ್ಲಿ 60 ಪ್ರಶ್ನೆಗಳನ್ನು ಕೇಳಲಾಗುವುದು. ಎಲ್ಲರೂ ಪ್ರತಿಯೊಂದು ಪ್ರಶ್ನೆಗಳಿಗೆ ಸಮರ್ಪಕ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಸಮೀಕ್ಷಾ ಪೂರ್ವದಲ್ಲಿ ಪ್ರತಿಯೊಂದು ಮನೆಯ ವಿದ್ಯುತ್ ಮೀಟರ್ ಆಧಾರದಲ್ಲಿ ಮನೆಯ ಜಿಯೋ ಟ್ಯಾಗ್ ಮಾಡಿ ಯುಎಚ್‌ಐಡಿ ವಿಶೇಷ ಸಂಖ್ಯೆಯನ್ನು ನಮೂದಿಸಲಾಗುವುದು. ಈಗಾಗಲೇ 1 ಕೋಟಿ 55 ಲಕ್ಷ ಮನೆಗಳಿಗೆ ಯುಎಚ್‌ಐಡಿ ಸಂಖ್ಯೆಯನ್ನು ಅಳವಡಿಸಲಾಗಿದೆ. ವಿದ್ಯುತ್ ಸಂಪರ್ಕ ಇಲ್ಲದ ಮನೆಯ ಸಮೀಕ್ಷೆಯನ್ನು ಮಾಡಲಾಗುವುದು. ಸಮೀಕ್ಷಾ ಸಂದರ್ಭದಲ್ಲಿ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಮೊಬೈಲ್ ಸಂಖ್ಯೆಗೆ ಲಿಂಕ್ ಮಾಡುವ ಕಾರ್ಯವನ್ನು ಮಾಡಲಾಗುವುದು ಎಂದರು.

**ವೈಜ್ಞಾನಿಕ ಸಮೀಕ್ಷೆಗೆ ಒತ್ತು:** ಆಯೋಗ ವೈಜ್ಞಾನಿಕವಾಗಿ ಯಾವುದೇ ಲೋಪವಾಗದಂತೆ ಸಮೀಕ್ಷೆ ನಡೆಸಬೇಕು. ನಿಗದಿತ ಅವಧಿಯ ಒಳಗಾಗಿ ಸಮೀಕ್ಷಾ ಕಾರ್ಯ ನಡೆಸಬೇಕು. ಈ ಹಿಂದೆ 2015 ರಲ್ಲಿ ಕಾಂತರಾಜ್ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯನ್ನು ನಡೆಸಲಾಗಿತ್ತು. ಅವರು ವರದಿಯನ್ನು ಸಲ್ಲಿಸಿ 10 ವರ್ಷ ಆದ ಕಾರಣ ಹೊಸದಾಗಿ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎಂದೂ ಅವರು ಹೇಳಿದರು.

ಯಾರೂ ಸಮೀಕ್ಷೆಯಿಂದ ಹೊರಗುಳಿಯಬಾರದು. ಆ ರೀತಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಾತಿ ಹೇಳಿಕೊಳ್ಳಲು ಕಷ್ಟವಾದರೆ ಸಹಾಯವಾಣಿಗೆ ಕರೆ ಮಾಡಿ ಜಾತಿ ಹೇಳಬಹುದು. ಆಶಾ ಕಾರ್ಯಕರ್ತರು ಶನಿವಾರದಿಂದಲೇ ಮನೆ ಮನೆಗೆ ಹೋಗಿ 60 ಪ್ರಶ್ನೆಗಳ ನಮೂನೆಯನ್ನು ಪ್ರತಿ ಮನೆಗೆ ತಲುಪಿಸುತ್ತಾರೆ. ನಂತರ ಶಿಕ್ಷಕರು ಸಮೀಕ್ಷೆಗೆ ಹೋಗುತ್ತಾರೆ. ಮತಾಂತರಗೊಂಡವರು ಅಥವಾ ಜಾತಿ ಗೊಂದಲ ಇದ್ದುದ್ದನ್ನು ಆಯೋಗದ ತಜ್ಞರ ತಂಡ ವಿಶ್ಲೇಷಣೆ ಮಾಡಿ ಎಲ್ಲವನ್ನೂ ತೀರ್ಮಾನಿಸುತ್ತದೆ ಎಂದರು.

### ವಿಶೇಷ ಕಾರ್ಯಕ್ರಮ ರೂಪಿಸಬೇಕು

**ಅಮೆರಿಕದಲ್ಲಿಯೂ ಕರಿಯರಿಗೆ ಅಫರ್ಮೆಟಿವ್ ಆಕ್ಷನ್ ಅಂತ ಇದೆ. ನಮ್ಮಲ್ಲಿ ಮೀಸಲಾತಿ ಇದೆ, ನಾವು ಬಡತನ, ನಿರುದ್ಯೋಗ, ಅನಕ್ಷರತೆ ಹೋಗಲಾಡಿಸಲು ಸಂವಿಧಾನದ ಪ್ರಕಾರ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ. ಅಸಮಾನತೆಯನ್ನು ತೊಲಗಿಸಲು ಸ್ವಾತಂತ್ರ್ಯ ದೊರೆತು ಇಷ್ಟು ವರ್ಷಗಳಾದರು ಸಾಧ್ಯವಾಗಿಲ್ಲ. ಸಮಾನತೆಯನ್ನು ಸಮಾನ ಅವಕಾಶವನ್ನು ಒದಗಿಸಲು ಜನರ ಆರ್ಥಿಕ ಸ್ಥಿತಿ, ಶೈಕ್ಷಣಿಕ ಸ್ಥಿತಿ ಜಾತಿ ಧರ್ಮ ಎಲ್ಲದರ ಮಾಹಿತಿ ಬೇಕಿದೆ. ಹಾಗಾಗಿಯೇ ಈ ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆ ನಡೆಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.**

> ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ, ನಾವು ಅಸಮಾನತೆಯನ್ನು ತೊಲಗಿಸಲೇಬೇಕು.ಹಾಗಾಗಿ ಸಮಾನ ಅವಕಾಶ ಒದಗಿಸಲು ದತ್ತಾಂಶಗಳ ಮಾಹಿತಿ ಅಗತ್ಯವಿದೆ. ಈ ಸಮೀಕ್ಷೆಯಿಂದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅರಿತು ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸಲು ಸಾಧ್ಯವಾಗುತ್ತದೆ.
>
> - ಸಿದ್ದರಾಮಯ್ಯ ಮುಖ್ಯಮಂತ್ರಿ

# ಜಡ್ಜ್ ಮುಂದೆ ಸಾಕ್ಷಿ ಹೇಳಿಕೆ ದಾಖಲಿಸಿದ ಬಂಟ್ವಾಳದ ಪ್ರದೀಪ್

## ಧರ್ಮಸ್ಥಳ ಬುರುಡೆ ಪ್ರಕರಣ ತನಿಖೆ ಚುರುಕು

**ಬೆಳ್ತಂಗಡಿ:** ಧರ್ಮಸ್ಥಳದ ಬಂಗ್ಲೆಗುಡ್ಡದಿಂದ ತಂದ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಧೀಶರ ಮುಂದೆ ಸೂತ್ರದಾರಿಗಳ ಬಗ್ಗೆ ಬಂಟ್ವಾಳದ ಪ್ರದೀಪ್ ಎಂಬಾತ ಮಹತ್ವದ ಸಾಕ್ಷಿ ಹೇಳಿಕೆ ನೀಡಿದ್ದಾರೆ.

ಬೆಳ್ತಂಗಡಿ ನ್ಯಾಯಾಲಯದಲ್ಲಿ ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆ.12ರಂದು ಸಂಜೆ 3.30 ರಿಂದ 5.30 ರವರಗೆ ಬಿಎನ್‌ಎಸ್ 183ರಡಿಯಲ್ಲಿ ಬಂಟ್ವಾಳ ತಾಲೂಕಿನ ಭಂಡಾರಿಬೆಟ್ಟು ನಿವಾಸಿ ಪ್ರದೀಪ್ ಕುಲಾಲ್ ಯಾನೆ ಪ್ರದೀಪ್ ಕೋಟ್ಯಾನ್ ಹೇಳಿಕೆ ನೀಡಿದ್ದಾರೆ. ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟ ಬಳಿಕ ಹೇಳಿಕೆಯ ಪ್ರತಿಗೆ ಸಹಿ ಹಾಕಿ ಅದನ್ನು ನ್ಯಾಯಾಲಯ ಸಾಕ್ಷೀಕರಿಸಿದೆ.

**ಮತ್ತೆ ಚುರುಕುಗೊಂಡ ತನಿಖೆ:** ಕಳೆದ 8 ದಿನಗಳಿಂದ ಮೀನಮೇಷ ಎಣಿಸುತ್ತಿದ್ದ ಎಸ್‌ಐಟಿ ಶುಕ್ರವಾರದ ಬೆಳವಣಿಗೆ ಕಂಡಾಗ ಚುರುಕುಗೊಂಡಂತೆ ಕಾಣಿಸಿದೆ. ನ್ಯಾಯಾಲಯಕ್ಕೆ ತನಿಖಾಧಿಕಾರಿ ಜಿತೇಂದ್ರ ಕುಮಾರ್ ದಯಾಮ ಅವರು ಹಾಜರಾಗಿದ್ದರು. ಪ್ರದೀಪ್ ಹೇಳಿಕೆ ಮೇಲೆ ಮತ್ತೆ ಉಳಿದವರ ಭವಿಷ್ಯ ಇಂದು ಅಥವಾ ನಾಳೆ ನಿರ್ಧಾರವಾಗಲಿದೆ ಎಂದು ಹೇಳಲಾಗಿದೆ.

### ಚಿನ್ನಯ್ಯನ ಜಾಮೀನು ಆದೇಶ 16ಕ್ಕೆ

**ಚಿನ್ನಯ್ಯ ಬುರುಡೆ ತಂದ ಪ್ರಕರಣದಲ್ಲಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ಈತನ ಜಾಮೀನು ಅರ್ಜಿ ಬೆಳ್ತಂಗಡಿ**

**ನ್ಯಾಯಾಲಯದಲ್ಲಿ ಶನಿವಾರ ವಿಚಾರಣೆಗೆ ಬಂದಿತು. ಎಸ್‌ಐಟಿ ಪೊಲೀಸರು ಚಿನ್ನಯ್ಯಗೆ ಜಾಮೀನು ನೀಡದಂತೆ ಕೋರ್ಟ್‌ಗೆ ಆಕ್ಷೇಪಣೆ ಸಲ್ಲಿಸಿದ್ದಾರೆ. ಶನಿವಾರ ಸರಕಾರಿ ವಕೀಲರು ಮತ್ತು ಚಿನ್ನಯ್ಯ ಪರ ಉಚಿತ ಕಾನೂನು ಸೇವಗಳ ಪ್ರಾಧಿಕಾರದ ವಕೀಲರು ವಾದ ಪ್ರತಿವಾದ ನಡೆಸಿದರು. ಸದ್ಯ ಪ್ರಕರಣದ ಜಾಮೀನು ಅರ್ಜಿ ಅದೇಶವನ್ನು ನ್ಯಾಯಾಧೀಶ ವಿಜಯೇಂದ್ರ ಟಿ.ಎಚ್ ಅವರು ಸೆ.16ಕ್ಕೆ ಕಾಯ್ದಿರಿಸಿದ್ದಾರೆ.**

# ನೇಪಾಳದ ಕ್ರಾಂತಿ ರಾಜ್ಯಕ್ಕೂ ಬರಲಿದೆ

## ಶೀಘ್ರವೇ ಸರಕಾರ ಪತನ: ಯತ್ನಾಳ್ ಭವಿಷ್ಯ

**ಮೈಸೂರು:** ಸಿದ್ದರಾಮಯ್ಯನವರ ಭ್ರಷ್ಟಾಚಾರ ಮುಗಿಲು ಮುಟ್ಟಿದ್ದು, ನೇಪಾಳದ ಪರಿಸ್ಥಿತಿ ರಾಜ್ಯಕ್ಕೂ ಬರಲಿದೆ. ರಾಜ್ಯದಲ್ಲಿ ಜನರಿಂದ ಕ್ರಾಂತಿ ಆಗಲಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭವಿಷ್ಯ ನುಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯಗೆ ತಾಯಿ ಚಾಮುಂಡಿಯ ಶಾಪ ತಟ್ಟಲಿದೆ. ತಾಯಿ ಚಾಮುಂಡೇಶ್ವರಿಯಿಂದ ಸಿದ್ದರಾಮಯ್ಯ ರಾಜಕೀಯ ಅಂತ್ಯವಾಗಲಿದೆ. ಸಿದ್ದರಾಮಯ್ಯ ಇದೇ ಧೋರಣೆಯಲ್ಲಿದ್ದರೆ ಶೀಘ್ರವೇ ಸಿದ್ದರಾಮಯ್ಯ ಸರಕಾರ ಪತನವಾಗ ಲಿದೆ. ರಾಜ್ಯದ ಜನರು ತಾಳ್ಮೆ ಕಳೆದುಕೊಂಡಿದ್ದಾರೆ. ಸದ್ಯದಲ್ಲೇ ಕ್ರಾಂತಿಯ ಹಾದಿ ಹಿಡಿಯಲಿದ್ದಾರೆ ಎಂದರು.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಕುರಿತು ಪ್ರತಿಕ್ರಿಯಿಸಿ, ನನ್ನ ಮೇಲೆ ಎಷ್ಟು ಕೇಸ್ ಬೇಕಾದರೂ ಹಾಕಲಿ. ಈಗಾಗಲೇ 70 ಕೇಸ್‌ಗಳಿವೆ. ಇದಕ್ಕೆಲ್ಲಾ ನಾನು ಹೆದರುವುದಿಲ್ಲ . ಗುರುವಾರ ಮದ್ದೂರಿಗೆ ಕಾರ್ಯಕರ್ತರು ಬರುವಂತೆ ಕೇಳಿಕೊಂಡರು, ನಾನು ಹೋಗಿದ್ದೆ. ಅಲ್ಲಿರುವ ಮಸೀದಿ ಅಕ್ರಮವಾಗಿದ್ದು, ಆ ಕಡೆಯಿಂದಲೇ ಕಲ್ಲು ಹೊಡೆದಿದ್ದಾರೆ. ನಾನು ಈ ಹಿಂದೆಯೇ ಅಕ್ರಮ ಮಸೀದಿಗಳ ತಪಾಸಣೆ ಮಾಡಬೇಕು ಎಂದು ಸರಕಾರಕ್ಕೆ ಪತ್ರ ಬರೆದಿದ್ದೆ. ಆದರೆ ಅದು ಆಗಿಲ್ಲ. ಮದ್ದೂರಿನಲ್ಲಿ ನನ್ನ ವಿರುದ್ಧ ಎಫ್‌ಐಆರ್ ಹಾಕಿದ್ದಾರೆ. ಈಗಾಗಲೇ 70 ಕೇಸ್‌ಗಳಿವೆ. ಇದಕ್ಕೆಲ್ಲಾ ಹೆದರುವುದಿಲ್ಲ. ಎಷ್ಟು ಕೇಸ್ ಬೇಕಾದರೂ ಹಾಕಿಕೊಳ್ಳಲಿ ಎಂದು ಹೇಳಿದರು.

### ಬಾನು ಮುಷ್ತಾಕ್ ಹಿಂದೆ ಸರಿಯಲಿ

**ಸಾಹಿತಿ ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ದಸರಾ ಉದ್ಘಾಟನೆಯಿಂದ ಬಾನು ಮುಷ್ತಾಕ್ ಹಿಂದೆ ಸರಿಯಲಿ. ಮೂರ್ತಿ ಪೂಜೆ ಮಾಡುವವರು ಇಸ್ಲಾಮ್ ಪ್ರಕಾರ ಕಾಫೀರರು. ಮೂರ್ತಿ ಪೂಜೆ ಮಾಡುವವರನ್ನು ಕೊಲ್ಲಿ ಎಂದು ಇಸ್ಲಾಮ್ ಹೇಳುತ್ತದೆ. ಈಗ ಬಾನು ಮುಷ್ತಾಕ್ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಮಾಡಲು ಮುಂದಾಗಿದ್ದಾರೆ. ಮೌಲ್ವಿಗಳು ಈ ಬಗ್ಗೆ ಮಾತನಾಡಬೇಕು ಎಂದು ಹೇಳಿದರು.**

# ವಿಮಾನ ದುರಂತ: ಮಡಿದವರ ಸದ್ಗತಿಗಾಗಿ ಕರ್ಮಾಂಗ

ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಮಡಿದವರಿಗೆ ಸದ್ಗತಿಗಾಗಿ ಗೋಕರ್ಣದ ಪುಣ್ಯಾಶ್ರಮದಲ್ಲಿ ಕರ್ಮಾಂಗ ವಿಧಿವಿಧಾನ ನೆರವೇರಿಸಲಾಯಿತು.

**ಗೋಕರ್ಣ:** ಕಳೆದ ಜೂನ್ 12 ರಂದು ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಮೃತಪಟ್ಟ ಎಲ್ಲರಿಗೆ ಕ್ಷೇತ್ರದ ಪುಣ್ಯಾಶ್ರಮದ ವತಿಯಿಂದ ಶ್ರೀದುರ್ಗಾಲಯದಲ್ಲಿ ಪಿತೃಪಕ್ಷ ನಿಮಿತ್ತ ಸದ್ಗತಿ ಕಾರ್ಯಕ್ರಮ ಗುರುವಾರ ಮತ್ತು ಶುಕ್ರವಾರ ನಡೆಯಿತು.

ವೇ.ರಾಜಗೋಪಾಲ ಅಡಿ ಗುರೂಜಿಯವರ ಮಾರ್ಗದರ್ಶನದಲ್ಲಿ ಕ್ಷೇತ್ರದ 33 ವೈದಿಕರ ಸಹಯೋಗದಲ್ಲಿ ವಿವಿಧ ಕರ್ಮಾಂಗಗಳನ್ನು ನೆರವೇರಿಸಲಾಯಿತು. ವಿಮಾನ ದುರಂತದಲ್ಲಿ ಸಾವನ್ನಪ್ಪಿದ 241 ಪ್ರಯಾಣಿಕರು ಮತ್ತು 12 ಜನ ಸಿಬ್ಬಂದಿ ಹೆಸರಿನಲ್ಲಿ ಸಂಕಲ್ಪ ಕೈಗೊಂಡು ಅವರ ಪರವಾಗಿ ವೇ.ಗಿರೀಶ ಭಟ್ ಕೃತ್ರುವಾಗಿ ಎಲ್ಲಾ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಿದರು.

ಮೃತರ ಉತ್ತರೋತ್ತರ ಸದ್ಗತಿಗಾಗಿ ಪಿಂಡ ಪ್ರದಾನ ಮೂಲಕ ನಾರಾಯಣ ಬಲಿ, ನಾರಾಯಣ ಬಲಿ ಹೋಮ, ದ್ವಾದಶ ಮೂರ್ತಿ ಆರಾಧನೆ, ಪಂಚಸೂಕ್ತ ಪಾರಾಯಣ ನೆರವೇರಿದವು. ದುರ್ಘಟನೆಯ ಶಮನಕ್ಕಾಗಿ ಪ್ರಾಯಶ್ಚಿತ್ತ ತಿಲಕಹೋಮವನ್ನು ಕೈಗೊಂಡು ದಶದಾನ ಮತ್ತು ಬ್ರಾಹ್ಮಣ ಆರಾಧನೆ ನಡೆಯಿತು.

ಈ ಹಿಂದೆ ಕೂಡ ಪುಣ್ಯಾಶ್ರಮದ ವತಿಯಿಂದ ವೇ. ರಾಜಗೋಪಾಲ ಅಡಿಯವರು ಪಹಲ್ಗಾಮ್ ಭಯೋತ್ಪಾದಕರ ದಾಳಿಯಲ್ಲಿ ಮೃತರಾದವರಿಗೆ ಸಹ ಇದೆ ರೀತಿಯಲ್ಲಿ ಕ್ಷೇತ್ರದ ವತಿಯಿಂದ ಕರ್ಮಾಂಗಗಳನ್ನು ಆಯೋಜಿಸಿದ್ದು ವಿಶೇಷವಾಗಿದೆ. ಕರ್ಮಾಂಗಗಳನ್ನು ವೇ. ರಾಮ ಶಾಸ್ತ್ರೀ, ವೇ. ಗುರುದತ್ತ ಹಿರೇ ಮತ್ತು ವೈದಿಕ ಪುರೋಹಿತರು ಶಾಸ್ತ್ರೋಕ್ತವಾಗಿ ನಡೆಸಿಕೊಟ್ಟರು. ಮೃತರ ಸ್ಮರಣಾರ್ಥ ಕೈಗೊಳ್ಳಲಾದ ಕಾರ್ಯಕ್ರಮದ ತರುವಾಯ ಇಲ್ಲಿನ ಸಮುದ್ರ ತೀರದಲ್ಲಿ ಪಿಂಡ ವಿಸರ್ಜನೆ ನೆರವೇರಿಸಲಾಯಿತು.

### ಮತ್ತೊಂದು ದುರಂತ ಸಂಭವಿಸಿದಂತೆ ಪ್ರಾರ್ಥನೆ

**2 ದಿನ ನಡೆದ ಈ ಕಾರ್ಯಕ್ರಮದ ಕೊನೆಯ ದಿನವಾದ ಶುಕ್ರವಾರ ಬ್ರಾಹ್ಮಣ ಭೋಜನ ನಡೆಯಿತು. ಈ ವೇಳೆ ಸಮಸ್ತ ವೈದಿಕರ ವತಿಯಿಂದ ನಡೆದ ಮಂತ್ರಾಕ್ಷತೆ ಆಶೀರ್ವಚನದಲ್ಲಿ ವೇ.ರಾಜಗೋಪಾಲ ಅಡಿ ಗುರೂಜಿ ಪ್ರಾರ್ಥನೆ ಕೈಗೊಂಡು ದೇಶದಲ್ಲಿ ಇನ್ನೆಂದಿಗೂ ಇಂತಹ ದುರ್ಘಟನೆ ನಡೆಯದಿರಲಿ. ಈ ಆಕಸ್ಮಿಕದಲ್ಲಿ ಸಾವನ್ನಪ್ಪಿದ ಎಲ್ಲರ ಸದ್ಗತಿಗಾಗಿ ಮತ್ತು ಶಾಶ್ವತ ವಿಷ್ಣು ಸಾಯುಜ್ಯ ದೊರೆಯುವಂತೆ ಪ್ರಾರ್ಥಿಸಿಕೊಂಡರು. ಇದರ ಜತೆಗೆ 2 ದಿನ ನಡೆದ ಕರ್ಮಾಂಗಗಳಿಂದ ಮೃತರಾದವರ ಮರಣಕಾಲದಲ್ಲಿ ಉಂಟಾಗಿರಬಹುದಾದ ಎಲ್ಲಾ ದೋಷಗಳು ಪರಿಹಾರಗೊಂಡು ಅವರಿಗೆ ಮುಕ್ತಿಪದ ಲಭಿಸುವಂತಾಗಲಿ ಎಂದು ವೈದಿಕರನ್ನು, ಭಗವಾನ ವಿಷ್ಣುವನ್ನು ಪ್ರಾರ್ಥಿಸಿಕೊಂಡರು.**

# ಹಿಂದೂ ವಿರೋಧಿ ಪಟ್ಟ ಕಟ್ಟುವ ಯತ್ನ

## ಬಿಜೆಪಿಯಿಂದ ಅನಾವಶ್ಯಕವಾಗಿ ಅಪಪ್ರಚಾರ

**ಉಡುಪಿ:** ರಾಜ್ಯ ಸರಕಾರಕ್ಕೆ ಹಿಂದೂ ವಿರೋಧಿ ಪಟ್ಟ ಕಟ್ಟುವ ಪ್ರಯತ್ನಗಳಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರದ ಜನಪ್ರಿಯತೆಯನ್ನು ಸಹಿಸದ ಬಿಜೆಪಿ ನಾಯಕರು ಅನವಶ್ಯಕವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಅಲ್ಲದೇ ಸಮಾಜದ ಕೋಮು ಸೌಹಾರ್ದತೆಯನ್ನು ಕೆಡಿಸುತ್ತಿದ್ದಾರೆ ಎಂದರು.

ಸರಕಾರದ ವಿರುದ್ಧ ಆರೋಪ ಮಾಡಲು ವಿಪಕ್ಷಗಳಿಗೆ ಬೇರೆ ವಿಚಾರ ಇಲ್ಲ. ರಾಜ್ಯ ಸರಕಾರ ಬೀಳುತ್ತದೆ, ಗ್ಯಾರಂಟಿ ಯೋಜನೆಗಳು ಜಾರಿ ಆಗಲ್ಲ, ಒಂದು ವೇಳೆ ಜಾರಿಯಾದರೂ ನಾಲ್ಕು ತಿಂಗಳಿಗೆ ಯೋಜನೆಗಳನ್ನು ನಿಲ್ಲಿಸಲಾಗುತ್ತದೆ ಎಂದು ಅಪಪ್ರಚಾರ ಮಾಡಲಾಯಿತು. ರಾಜ್ಯದ ಜನತೆಗೆ ನಮ್ಮ ಸರಕಾರ ಸಾಕಷ್ಟು ಅನುಕೂಲ ಮಾಡಿಕೊಟ್ಟಿದೆ. ಇದನ್ನು ಸಹಿಸದ ಬಿಜೆಪಿ ನಾಯಕರು ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

**ಧರ್ಮಸ್ಥಳ ನಮ್ಮೆಲ್ಲರ ಆರಾಧ್ಯ ಸ್ಥಳ:** ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ಧರ್ಮಸ್ಥಳ ನಮ್ಮೆಲ್ಲರ ಆರಾಧ್ಯ ಸ್ಥಳ, ಬಹಳಷ್ಟು ಭಕ್ತಿಯಿಂದ ನಡೆದುಕೊಳ್ಳುವ ಸ್ಥಳ. ಏನೆಲ್ಲಾ ಷಡ್ಯಂತ್ರ ಆಗಿದೆ, ಇದೆಲ್ಲಾ ಹೊರ ಬರುತ್ತೆ ಸ್ವಲ್ಪ ಕಾಯಿರಿ. ಎಸ್‌ಐಟಿ ತನ್ನ ಕೆಲಸ ಮಾಡುತ್ತಿದೆ. ಇದನ್ನು ಸಾರ್ವಜನಿಕವಾಗಿ ಹೇಳಲು ಬರಲ್ಲ. ಸ್ವಲ್ಪ ದಿನ ಕಾಯಿರಿ ಎಲ್ಲಾ ಸತ್ಯಾಸತ್ಯತೆ ಹೊರಬರುತ್ತದೆ ಎಂದರು

### ಕಾನೂನಿಗಿಂತ ದೊಡ್ಡವರು ಇಲ್ಲ

**ಬಿಜೆಪಿ ಶಾಸಕ ಸಿ.ಟಿ.ರವಿ ವಿರುದ್ಧ ಎಫ್‌ಐಆರ್ ದಾಖಲಿಸಿರುವುದಕ್ಕೆ ವಿಪಕ್ಷಗಳು ಖಂಡಿಸಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಅವರು ದ್ವೇಷಪೂರಿತ ಭಾಷಣ ಮಾಡಿದರೆ ಕ್ರಮ ಕೈಗೊಳ್ಳಲು ವಿಧಾನಸಭೆಯಲ್ಲಿ ಶಾಸನ ತರಲಾಗಿದೆ. ದ್ವೇಷಪೂರಿತ ಭಾಷಣವನ್ನು ಬಿಜೆಪಿ-ಕಾಂಗ್ರೆಸ್ ನಾಯಕರು ಯಾರೇ ಆಗಲಿ ಕ್ರಮ ಕೈಗೊಳ್ಳಲಾಗುತ್ತದೆ. ನಾಳೆ ಕಾಂಗ್ರೆಸ್ಸಿಗರು ಮಾತನಾಡಿದರೂ ಕ್ರಮ ಆಗುತ್ತದೆ. ಕಾನೂನು ಎಲ್ಲರಿಗೂ ಒಂದೇ ಅಲ್ವಾ? ಶಾಂತಿಯನ್ನು ಕದಡುವ ಕೆಲಸ ಮಾಡಿದರೆ ಖಂಡಿತ ಎಫ್‌ಐಆರ್ ಆಗುತ್ತದೆ ಎಂದು ಹೇಳಿದರು.**

# ಹೇಮಾವತಿ ಕಾಲುವೆ ಬಗ್ಗೆ ರೈತರಿಗೆ ಆತಂಕ ಬೇಡ

## ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರಿಗೆ ಭರವಸೆ | ರಾಜ್ಯದ ಎಲ್ಲ ರೈತರಿಗೆ ಅನುಕೂಲವಾಗುವಂತೆ ನೀರಾವರಿ ಯೋಜನೆ

**ತುಮಕೂರು:** ಹೇಮಾವತಿ ಲಿಂಕ್ ಕೆನಾಲ್ ಯೋಜನೆಯ ಬಗ್ಗೆ ತುಮಕೂರು ಜಿಲ್ಲೆಯ ಯೋಜನೆ ವ್ಯಾಪ್ತಿ ಪ್ರದೇಶದ ರೈತರು ಗಾಬರಿಪಡುವ ಅಗತ್ಯವಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರೈತರಿಗೆ ಭರವಸೆ ನೀಡಿದರು.

ಶುಕ್ರವಾರ ಗುಬ್ಬಿ ತಾಲೂಕಿನ ಸುಂಕಾಪುರದ ಟಿ.ಬಿ. ಕೆನಾಲ್ 70ನೇ ಕಿ.ಮೀ.ನಲ್ಲಿ ಹೇಮಾವತಿ ಲಿಂಕ್ ಕೆನಾಲ್ ಕಾಮಗಾರಿಯ ಪರಿವೀಕ್ಷಣೆ ನಡೆಸಿ ಮಾತನಾಡಿ, ತುಮಕೂರು ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಹೇಮಾವತಿ ಲಿಂಕ್ ಕೆನಾಲ್ ಯೋಜನೆಯಿಂದ ಯಾವ ರೈತರಿಗೂ ಅನ್ಯಾಯವಾಗುವುದಿಲ್ಲ. ಈ ವಿಷಯದಲ್ಲಿ ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯದ ನೀರಾವರಿ ಸಚಿವನಾಗಿ ರಾಜ್ಯದ ಎಲ್ಲ ರೈತರಿಗೆ ಅನುಕೂಲವಾಗುವಂತೆ ನೀರಾವರಿ ಯೋಜನೆಗಳನ್ನು ರೂಪಿಸುವುದು ನಮ್ಮ ಜವಾಬ್ದಾರಿಯಾಗಿದೆ. ತುಮಕೂರಿನ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದ್ದು, ತುಮಕೂರು ತಮಗೆ ಅತ್ಯಂತ ಆಪ್ತ ಜಿಲ್ಲೆ . ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸರಕಾರ ಈ ಯೋಜನೆಗೆ ಮಂಜೂರಾತಿ ನೀಡಲಾಗಿತ್ತು. ಆದರೆ ನಂತರ ಅಧಿಕಾರಕ್ಕೆ ಬಂದ ಯಡಿಯೂರಪ್ಪ ಅವರ ಸರಕಾರ ಈ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ಆಗ ಕೇವಲ 600 ಕೋಟಿ ರು.ಗಳಲ್ಲಿ ಮುಗಿಯಬೇಕಿದ್ದ ಈ ಕಾಮಗಾರಿಯ ವೆಚ್ಚ ಈಗ 1000 ಕೋಟಿ ರು. ಗಳಿಗೆ ಏರಿಕೆಯಾಗಿದೆ ಎಂದು ಹೇಳಿದರು.

ಈಗಾಗಲೇ ಈ ಯೋಜನೆಗಾಗಿ 400 ಕೋಟಿ ರು.ಗಳನ್ನು ಬಿಡುಗಡೆ ಮಾಡಿದ್ದು, ಪೈಪ್‌ಗಳ ಖರೀದಿ ಮಾಡಲಾಗಿದೆ. ಮುಂದಿನ ನಾಲ್ಕೈದು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

**ಬಿಜೆಪಿ ಸಂಸದರು ರಾಜೀನಾಮೆ ಕೊಡಲಿ: ಶಿವಮೊಗ್ಗ:** ರಾಜ್ಯದ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅನುದಾನ ಕೊಡಲು ಬಿಜೆಪಿ ಸಂಸದರು ಕೇಂದ್ರಕ್ಕೆ ಒತ್ತಡ ಹೇರಬೇಕು. ಇಲ್ಲವಾದರೆ, ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿ ಮರು ಚುನಾವಣೆ ಎದುರಿಸಲಿ. ಭದ್ರಾ ಮೇಲ್ದಂಡೆ ಯೋಜನೆಗೆ ಬಸವರಾಜ್ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಬಜೆಟ್ ನಲ್ಲಿ 5300 ಕೋಟಿ ಅನುದಾನ ಕೊಡುವ ಬಗ್ಗೆ ಘೋಷಿಸಿದ್ದರು. ಆದರೆ, ಆ ಹಣ ಬಿಡುಗಡೆಯೇ ಆಗಿಲ್ಲ. ರಾಜ್ಯದ ಜನರ ಋಣ ಬಿಜೆಪಿ ಸಂಸದರ ಮೇಲಿದೆ. ಇದನ್ನು ಮರೆಯಬಾರದು ಎಂದು ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಹೇಳಿದರು.

ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ ಶುಕ್ರವಾರ ಬಾಗಿನ ಅರ್ಪಿಸಿದರು. ಈ ವೇಳೆ ತೋಟಗಾರಿಕೆ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್‌ಮಲ್ಲಿಕಾರ್ಜುನ ಇದ್ದರು.

> ಜಿಲ್ಲೆಯಲ್ಲಿ ನೀರಿನ ಅಭಾವವನ್ನು ತಗ್ಗಿಸಲು ಚಿಕ್ಕನಾಯಕನಹಳ್ಳಿ, ಮಧುಗಿರಿ, ಪಾವಗಡ, ಸಿರಾ ಹಾಗೂ ಕೊರಟಗೆರೆ ತಾಲೂಕುಗಳ ಪ್ರಮುಖ ಕೆರೆಗಳಿಗೆ ನೀರು ತುಂಬಿಸಲು ಸರಕಾರ ಮಹತ್ವಾಕಾಂಕ್ಷಿ ಯೋಜನೆ ರೂಪಿಸಿದೆ. ಈ ಯೋಜನೆಗೆ ಸುಮಾರು 20 ಸಾವಿರ ಕೋಟಿ ರು. ವೆಚ್ಚ ಮಾಡಲಾಗುತ್ತಿದೆ.
>
> -ಡಿ.ಕೆ.ಶಿವಕುಮಾರ್ ಡಿಸಿಎಂ

### ನದಿಗೆ ಹಾರಿ ಪ್ರಾಣ ಬಿಟ್ಟ ಯುವಕ

**ಬೀದರ್:** ಕುಡಿದ ಅಮಲಿನಲ್ಲಿ ಯುವಕನೊಬ್ಬ ಮಾಂಜ್ರಾ ನದಿಗೆ ಹಾರಿ ಪ್ರಾಣ ಬಿಟ್ಟಿರುವ ಘಟನೆ ತಾಲೂಕಿನ ಹಲಸಿ ತೂಗಾಂವ್‌ನಲ್ಲಿ ನಡೆದಿದೆ. ಪ್ರಭಾಕರ್ ಸುಭಾಷ ಸೂರ್ಯವಂಶಿ (38) ಮೃತ ವ್ಯಕ್ತಿ. ಅಲ್ಲೇ ಇದ್ದ ಕೆಲವರು ಮೊಬೈಲ್‌ನಲ್ಲಿ ವ್ಯಕ್ತಿ ಮುಳುಗುವ ದೃಶ್ಯ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಮೃತದೇಹ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳಿಸಿದ್ದಾರೆ. ಮೆಹಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವವಾಣಿ

ಸಂಪಾದಕೀಯ

## ಮಾರ್ಗದರ್ಶನದ ಅಗತ್ಯವಿದೆ

ಇದು ನಿಜಕ್ಕೂ ಗಾಬರಿಗೊಳಿಸುವ ಸಂಗತಿ. ಆತ್ಮಹತ್ಯೆಗೆ ಯತ್ನಿಸುವವರ ಪೈಕಿ 25ರಿಂದ 39 ವರ್ಷ ವಯಸ್ಸಿನವರೇ ಹೆಚ್ಚು, ಅದರಲ್ಲಿಯೂ ಪುರುಷರ ಸಂಖ್ಯೆಯೇ ಅಧಿಕ ಎಂದು ವರದಿಯೊಂದು ಹೇಳಿದೆ. 'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ'ಯ (ನಿಮ್ಹಾನ್ಸ್) ಅಧೀನದ ಕೇಂದ್ರವೊಂದು ನೀಡಿರುವ ಈ ವರದಿಯಲ್ಲಿ, ದೇಶದ ಪ್ರಮುಖ ನಗರಗಳ ಪೈಕಿ ಬೆಂಗಳೂರಿನಲ್ಲೇ ಆತ್ಮಹತ್ಯೆ ಯತ್ನಗಳು ಹೆಚ್ಚಾಗಿವೆ ಎಂಬ ಅಂಶವನ್ನು ಉಲ್ಲೇಖಿಸಲಾಗಿದೆ. ದುಡಿಮೆಗೆ ವಿಪುಲ ಅವಕಾಶ, ಐಷಾರಾಮಿ ಬದುಕಿನ ಸಾಧ್ಯತೆ, ಎಲ್ಲ ತೆರನಾದ ಮೂಲಭೂತ ಸೌಕರ್ಯಗಳ ಲಭ್ಯತೆ, ಒಂದು ಫೋನ್ ಕರೆಯಲ್ಲೇ ಸರಕು-ಸಾಮಗ್ರಿಗಳನ್ನೂ, ವೈವಿಧ್ಯಮಯ ಸೇವೆಗಳನ್ನೂ ಮನೆಬಾಗಿಲಿಗೇ ತಂದೊದಗಿಸುವ ಸ್ಪರ್ಧಾತ್ಮಕತೆ ಹೀಗೆ ಹಲವು ಆಕರ್ಷಕ ಬಾಬತ್ತುಗಳ ಕೇಂದ್ರಬಿಂದುವಾಗಿದೆ ಎಂಬ ಕಾರಣಕ್ಕೆ ಬೆಂಗಳೂರಿನೆಡೆಗೆ ಧಾವಿಸಿ ಬರುವವರು, ಇಲ್ಲೇ ನೆಲೆಯೂರುವವರು ಸಾಕಷ್ಟಿದ್ದಾರೆ. ಆದರೆ, ಇವುಗಳ ಪೈಕಿ ಯಾವುದಾದರೊಂದು ಕೈಗೆಟುಕದ ಕಾರಣಕ್ಕೇ ಅವರಲ್ಲಿ ಹತಾಶೆ ಮಡುಗಟ್ಟಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರಾ? ಪ್ರೇಮ ಪ್ರಕರಣದಲ್ಲಿನ ಅಥವಾ ವೈವಾಹಿಕ ಜೀವನದಲ್ಲಿನ ವೈಫಲ್ಯವೇ ಇದಕ್ಕೆ ಕಾರಣವಾಗಿರಬಹುದೇ? ಅಥವಾ ಮತ್ತಾವುದಾದರೂ ವಿಲಕ್ಷಣ ಅಂಶವು ಆತ್ಮಹತ್ಯೆಗೆ ಚಿತಾವಣೆ ನೀಡುತ್ತಿದೆಯಾ? ಎಂಬ ಪ್ರಶ್ನೆಗಳಿಗೆ ಸಂಬಂಧಪಟ್ಟವರು ಉತ್ತರಿಸಬೇಕಿದೆ. ಹೇಳಿ ಕೇಳಿ ಇಂದಿನದು ಧಾವಂತದ ಬದುಕು. ಹೀಗಾಗಿ, ಕಾಲಿಗೆ ಚಕ್ರಗಳನ್ನು ಕಟ್ಟಿಕೊಂಡವರ ರೀತಿ ಯಲ್ಲಿ ಓಡುತ್ತಾ, ಬದುಕಿನ ಬುತ್ತಿಯನ್ನು ಹೊಂದಿಸಿಕೊಳ್ಳಬೇಕಾದ ಅನಿವಾರ್ಯತೆ ಕೆಲವರದ್ದಾದರೆ, ನಿರಂತರ ಒತ್ತಡದ ಕೂಪದಲ್ಲೇ ದಿನದೂಡಬೇಕಾದ ಪರಿಸ್ಥಿತಿಯ ಬಲಿಪಶುಗಳಾಗಿದ್ದಾರೆ ಇನ್ನು ಕೆಲವರು. ಇಂಥವರ ಪೈಕಿ ದುರ್ಬಲ ಮನಸ್ಸಿನವರೇ ಹೆಚ್ಚಾಗಿದ್ದರೆ ಅದು ಆತ್ಮಹತ್ಯೆಗೆ ಒಂದು ಕಾರಣವಾಗಿ ಪರಿಣಮಿಸಿಬಿಡಲು ಸಾಧ್ಯವಿದೆ. 'ಆನಂದಮಯ ಈ ಜಗ ಹೃದಯ, ಏತಕೆ ಭಯ ಮಾಣೋ' ಎಂಬ ಕವಿವಾಣಿಯು ಇಂಥ ದುರ್ಬಲ ಮನಸ್ಸುಗಳಿಗೆ ದಾರಿ ತೋರಿಸಲಿ. 'ಎಂಥದೇ ಸವಾಲು ಬಂದರೂ ಮೆಟ್ಟಿ, ಬದುಕನ್ನು ಮುನ್ನಡೆಸಬೇಕು' ಎಂಬಂಥ ಮಾರ್ಗದರ್ಶನ ನೀಡುವವರು ಇಂಥವರ ಕೈಹಿಡಿಯಲಿ ಎಂದು ಆಶಿಸೋಣ...

ಸೊಂಪಾದಕೀಯ

## ಲೀಲಾ-ಜಾಲ

ಗಂಡ ಹೆಂಡಿರ ಜಗಳ ಉಂಡು ಮಲಗೋ ತನಕ' ಅನ್ನೋ ಮಾತನ್ನು ಎಲ್ಲರೂ ಕೇಳಿರುತ್ತೇವೆ. ಆದರೆ ಇಲ್ಲೊಂದು ಜಗಳ ಉಂಡು ಮಲಗಿ ಎದ್ದ ಮೇಲೂ ಟಿವಿ ಚಾನೆಲ್‌ಗಳಲ್ಲಿ ಕೂತು ಮುಲುಗುವವರೆಗೆ ಹೋಗಿರೋದು ವಿಶೇಷ. ಲೀಲಾವತಿ ಅನ್ನೋ ಹೆಂಗಸು ಮೊದಲ ಗಂಡನ್ನ ಬಿಟ್ಟು, ಇನ್ನೊಂದು ಮದುವೆ ಆಗಿ, 2ನೇ ಗಂಡನನ್ನೂ ಬಿಟ್ಟು 3ನೇ ಪಾರ್ಟಿ ಜತೆ ಪರಾರಿ ಆಗಿದ್ದ ಕಥೆ ಇದು. ಈಕೆ ಮೊದಲು ಒಬ್ಬನನ್ನು ಪ್ರೀತಿಸುತ್ತಿದ್ದಳಂತೆ. ಆದರೆ ಅವನ ಜತೆ ಮದುವೆಯಾಗದೆ ತನ್ನ ಮಾವನನ್ನೇ ಮದುವೆಯಾಗಿ 5 ವರ್ಷ ಸಂಸಾರ ಮಾಡಿ, ಯಾಕೋ ಇದು ಸರಿ ಹೋಗ್ತಾ ಇಲ್ಲ ಅನ್ನಿಸಿ ಗಂಡನನ್ನು ಬಿಟ್ಟು ಮೊದಲ ಲವರ್‌ನನ್ನೇ ಮದುವೆ ಆಗಿದ್ದಾಳೆ. ಅವನಿಂದ 3 ಮಕ್ಕಳನ್ನು ಪಡೆದ ಮೇಲೆ ಹಡೆದಿದ್ದು ಸಾಕು ಅನ್ನಿಸಿ ಹೊಸ ಪ್ರಿಯಕರನನ್ನು ಹುಡುಕಿಕೊಂಡಿದ್ದಾಳೆ. ಆದರೆ ಅವನ ಜತೆ ಪರಾರಿ ಆದಮೇಲೆ ಅವರಿಬ್ಬರನ್ನೂ ಹುಡುಕುತ್ತಾ ಅವಳ ಗಂಡ ಹಳಹಳಿಸುತ್ತಿದ್ದ. ಅತ್ತ ಪ್ರಿಯಕರನಿಗೆ ಇದು ಹಳಸಿದ ಸಂಬಂಧ ಅಂತ ಅರಿವಾಗಿ ಆಕೆಯ ಜತೆ ಸಂಸಾರ ಮಾಡೋ ಐಡಿಯಾವನ್ನು ಡ್ರಾಪ್ ಮಾಡಿದ್ದಾನೆ. ಇತ್ತ ಗಂಡ ಟಿವಿ ಚಾನೆಲ್‌ಗಳಲ್ಲಿ ಹೆಂಡತಿಯ ಕರ್ಮಕಾಂಡವನ್ನು ಬಿಚ್ಚಿಟ್ಟಿದ್ದಕ್ಕೆ, ಈಕೆ ಕೆಂಡಾಮಂಡಲವಾಗಿ, ಗಂಡ ನನ್ನ ಮರ್ಯಾದೆ ತೆಗೆಯುತ್ತಿದ್ದಾನೆ ಅಂತ ಚಾನೆಲ್ಲಿಗೆ ಬಂದು ಕೂತಿದ್ದಾಳೆ. ಒಟ್ಟಿನಲ್ಲಿ ಇಷ್ಟೆಲ್ಲಾ ಆದ್ರೂ ಈಕೆಯ ಅಹಂ ಕಮ್ಮಿ ಆಗಿಲ್ಲ. ಮತ್ತೊಂದೆಡೆ, ಟಿವಿ ಆ್ಯಂಕರ್‌ಗಳು 'ದಿಸ್ ಈಸ್ ದ ಬಿಗ್ಗೆಸ್ಟ್ ಇಶ್ಯೂ, ದಿಸ್ ಈಸ್ ದ ನ್ಯಾಷನಲ್ ಕ್ರೈಸಿಸ್' ಎಂಬಂತೆ ಎಲ್ಲಾ ವಿಷಯ ಬಿಟ್ಟು ಈಕೆಯ ಜತೆ ಮಾತಾಡ್ತಾ ಇದ್ದಾರೆ.

ಸಂಪಾದಕರ ಸದ್ಯಶೋಧನೆ

## ಟೇಕಾಫ್ ಪ್ರಕ್ರಿಯೆಗಳು

ಟೇಕಾಫ್ ಆಗುವಾಗ ವಿಮಾನವು ಯಾವ ವೇಗದಲ್ಲಿ ರನ್‌ವೇ ಮೇಲೆ ಓಡಬೇಕು? ಪೈಲಟ್‌ಗಳು ಯಾವತ್ತೂ ಕೇವಲ ಒಂದೇ ವೇಗವನ್ನು ಗಮನಿಸುವುದಿಲ್ಲ. ಟೇಕಾಫ್ ಪ್ರಕ್ರಿಯೆಯಲ್ಲಿ ಮೂರು ನಿರ್ಣಾಯಕ ವೇಗಗಳಿವೆ. ಇವನ್ನು ವಿಮಾನಯಾನ ಪರಿಭಾಷೆಯಲ್ಲಿ V-Speeds ಅಂತ ಕರೆಯುತ್ತಾರೆ. ಇವುಗಳನ್ನು ಪ್ರತಿ ಹಾರಾಟಕ್ಕೂ ಮೊದಲು ವಿಮಾನದ ತೂಕ, ಹವಾಮಾನ ಮತ್ತು ರನ್‌ವೇ ಸ್ಥಿತಿಗೆ ಅನುಗುಣವಾಗಿ ಲೆಕ್ಕಹಾಕಲಾಗುತ್ತದೆ. ಉದಾಹರಣೆಗೆ, V1 (ನಿರ್ಧಾರಕ ವೇಗ). ಇದು 'Go/No-Go' ವೇಗ. ಈ ವೇಗವನ್ನು ತಲುಪುವ ಮೊದಲು ಎಂಜಿನ್ ವಿಫಲವಾದರೆ ಅಥವಾ ಬೇರೆ ಯಾವುದೇ ಗಂಭೀರ ಸಮಸ್ಯೆಗೆ ತುತ್ತಾದರೆ, ಪೈಲಟ್ ಟೇಕಾಫ್ ಅನ್ನು ರದ್ದುಗೊಳಿಸಿ ರನ್‌ವೇಯಲ್ಲೇ ವಿಮಾನವನ್ನು ಸುರಕ್ಷಿತವಾಗಿ ನಿಲ್ಲಿಸಲು ಸಾಕಷ್ಟು ಸ್ಥಳಾವಕಾಶವಿರುತ್ತದೆ. V1 ವೇಗವನ್ನು ದಾಟಿದ ನಂತರ, ಯಾವುದೇ ಸಮಸ್ಯೆ ಬಂದರೂ ವಿಮಾನವು ಟೇಕಾಫ್ ಆಗಲೇಬೇಕು. ನಂತರ ಗಾಳಿಯಲ್ಲಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಚಿಕ್ಕ ರನ್‌ವೇಯಲ್ಲಿ V1 ವೇಗವು ಕಡಿಮೆ ಇರುತ್ತದೆ. ಇನ್ನು VR (Rotation Speed). ಈ ವೇಗದಲ್ಲಿ ಪೈಲಟ್ ವಿಮಾನದ ನಿಯಂತ್ರಣವನ್ನು (Control Column) ಹಿಂದಕ್ಕೆ ಎಳೆಯುತ್ತಾರೆ, ಇದರಿಂದ ವಿಮಾನದ ಮೂಗು ಮೇಲಕ್ಕೆ ಬಂದು ರೆಕ್ಕೆಗಳು ಗಾಳಿಯೊಂದಿಗೆ ಸರಿಯಾದ ಕೋನವನ್ನು (Angle of Attack) ಸೃಷ್ಟಿಸಿ 'Lift' ಉತ್ಪಾದಿಸುತ್ತವೆ. ನಂತರ V2 (ಸುರಕ್ಷತಾ ವೇಗ ಅಥವಾ Safety Speed). ಇದು ಟೇಕಾಫ್ ಆದ ನಂತರ, ಒಂದು ಎಂಜಿನ್ ವಿಫಲವಾದರೂ ವಿಮಾನವು ಸುರಕ್ಷಿತವಾಗಿ ಏರಲು ಬೇಕಾದ ಕನಿಷ್ಠ ವೇಗವಾಗಿದೆ. ಈ ಮೂರು ವೇಗಗಳನ್ನು ತಲುಪಲು ಬೇಕಾದ ಒಟ್ಟು ದೂರವೇ ಟೇಕಾಫ್ ದೂರ (Takeoff Distance Required). ಈ ದೂರವು ಲಭ್ಯವಿರುವ ರನ್‌ವೇ ಉದ್ದಕ್ಕಿಂತ ಕಡಿಮೆ ಇರಬೇಕು. ಈ ಹಂತದಲ್ಲಿ ಪರಿಸರದ ಅಂಶಗಳು ಸಹ ದೊಡ್ಡ ಪಾತ್ರವಹಿಸುತ್ತವೆ. ಇದನ್ನು ವಾಯುಯಾನದಲ್ಲಿ 'ಸಾಂದ್ರತೆಯ ಎತ್ತರ' (Density Altitude) ಎಂದು ಕರೆಯಲಾಗುತ್ತದೆ. ಬಿಸಿಗಾಳಿ ಮತ್ತು ಎತ್ತರದ ಪ್ರದೇಶಗಳಲ್ಲಿನ ಗಾಳಿಯು ಕಡಿಮೆ ಸಾಂದ್ರವಾಗಿರುತ್ತದೆ. ಕಡಿಮೆ ಸಾಂದ್ರತೆಯ ಗಾಳಿಯಿಂದಾಗಿ, ರೆಕ್ಕೆಗಳಿಗೆ ಬೇಕಾದ 'Lift' ಉತ್ಪಾದಿಸಲು ವಿಮಾನವು ನೆಲದ ಮೇಲೆ ಹೆಚ್ಚು ವೇಗವಾಗಿ ಚಲಿಸಬೇಕಾಗುತ್ತದೆ. ಎಂಜಿನ್‌ಗಳು ಕಾರ್ಯನಿರ್ವಹಿಸಲು ಗಾಳಿಯಲ್ಲಿನ ಆಮ್ಲಜನಕವನ್ನು ಬಳಸುತ್ತವೆ. ಕಡಿಮೆ ಸಾಂದ್ರತೆಯ ಗಾಳಿಯಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆ ಇರುವುದರಿಂದ ಎಂಜಿನ್‌ಗಳ ಕಾರ್ಯಕ್ಷಮತೆ (Thrust) ಕುಸಿಯುತ್ತದೆ. ಉದಾಹರಣೆಗೆ, ಬೊಲಿವಿಯಾದ ಲಾ ಪಾಜ್ ವಿಮಾನ ನಿಲ್ದಾಣವು ಸಮುದ್ರದಿಂದ 13,325 ಅಡಿ ಎತ್ತರದಲ್ಲಿದೆ. ಇಲ್ಲಿನ ರನ್‌ವೇ ಸುಮಾರು 4 ಕಿಲೋಮೀಟರ್ ಉದ್ದವಿದ್ದರೂ, ಕಡಿಮೆ ಗಾಳಿಯ ಸಾಂದ್ರತೆಯಿಂದಾಗಿ ವಿಮಾನವನ್ನು ಪೂರ್ಣ ತೂಕದೊಂದಿಗೆ ಟೇಕಾಫ್ ಮಾಡಲು ಸಾಧ್ಯವಾಗುವುದಿಲ್ಲ. ವಿಮಾನದ ಎದುರಿನಿಂದ ಬೀಸುವ ಗಾಳಿ (Headwind)ಯು ರೆಕ್ಕೆಗಳ ಮೇಲೆ ಗಾಳಿಯ ಹರಿವನ್ನು ಹೆಚ್ಚಿಸುತ್ತದೆ. ಇದರಿಂದ ವಿಮಾನವು ಕಡಿಮೆ ರನ್‌ವೇ ದೂರದಲ್ಲೇ ಟೇಕಾಫ್ ವೇಗವನ್ನು ತಲುಪಲು ಸಾಧ್ಯವಾಗುತ್ತದೆ. ಇದು ಪೈಲಟ್‌ಗಳಿಗೆ ಅನುಕೂಲಕರ. ವಿಮಾನದ ಹಿಂದಿನಿಂದ ಬೀಸುವ ಗಾಳಿ (Tailwind)ಯು ಟೇಕಾಫ್‌ಗೆ ಬೇಕಾದ ವೇಗವನ್ನು ತಲುಪಲು ಹೆಚ್ಚಿನ ರನ್‌ವೇ ದೂರವನ್ನು ಬಳಸುವಂತೆ ಮಾಡುತ್ತದೆ. ಇದು ಅಪಾಯಕಾರಿ. ಆದ್ದರಿಂದ ಸಾಮಾನ್ಯವಾಗಿ ವಿಮಾನಗಳು Headwind ದಿಕ್ಕಿನಲ್ಲೇ ಟೇಕಾಫ್ ಆಗುತ್ತವೆ. ಇಂಥ ಸಂದರ್ಭಗಳಲ್ಲಿ ಟೈರುಗಳ ಹಿಡಿತ (friction) ಕಡಿಮೆಯಾಗುತ್ತದೆ. ಇದು ಟೇಕಾಫ್ ಅನ್ನು ರದ್ದುಗೊಳಿಸಬೇಕಾದ (aborted takeoff) ಸಂದರ್ಭದಲ್ಲಿ ವಿಮಾನವನ್ನು ನಿಲ್ಲಿಸಲು ಬೇಕಾದ ದೂರವನ್ನು ಹೆಚ್ಚಿಸುತ್ತದೆ. ಹೀಗಾಗಿ ಸುರಕ್ಷತೆಗಾಗಿ ಟೇಕಾಫ್ ತೂಕವನ್ನು ಕಡಿಮೆ ಮಾಡಲಾಗುತ್ತದೆ. ಮೇಲ್ಮುಖ ಇಳಿಜಾರು ಟೇಕಾಫ್‌ಗೆ ಹೆಚ್ಚಿನ ದೂರವನ್ನು ಬೇಡಿದರೆ, ಕೆಳಮುಖ ಇಳಿಜಾರು ಸಹಕಾರಿಯಾಗುತ್ತದೆ. ದೊಡ್ಡ ವಿಮಾನಗಳಿಗೆ ಕೇವಲ ಉದ್ದವಾದ ರನ್‌ವೇ ಇದ್ದರೆ ಸಾಲದು, ಪೂರಕ ಸೌಕರ್ಯಗಳೂ ಅಷ್ಟೇ ಮುಖ್ಯ. ರನ್‌ವೇಯಿಂದ ಟರ್ಮಿನಲ್‌ಗೆ ಸಾಗುವ ದಾರಿ (ಟ್ಯಾಕ್ಸಿವೇ) ಮತ್ತು ವಿಮಾನ ನಿಲ್ಲುವ ಸ್ಥಳ (ಏಪ್ರನ್) ಏರ್‌ಬಸ್ ಎ-380 ಅಥವಾ ಬೋಯಿಂಗ್ 747ನಂಥ ದೈತ್ಯ ವಿಮಾನಗಳ ಅಗಾಧ ತೂಕವನ್ನು ತಡೆದುಕೊಳ್ಳುವಷ್ಟು ಗಟ್ಟಿಯಾಗಿರಬೇಕು. ಹೀಗಾಗಿ ವಿಮಾನದ ಗರಿಷ್ಠ ಟೇಕಾಫ್ ತೂಕವು ಕೇವಲ ಒಂದು ಅಂಶದ ಮೇಲೆ ನಿಂತಿಲ್ಲ. ಇದು ವಿಮಾನದ ವಿನ್ಯಾಸ, ರನ್‌ವೇಯ ಗುಣಲಕ್ಷಣಗಳು, ಆ ದಿನದ ಹವಾಮಾನ ಮತ್ತು ವಿಮಾನ ನಿಲ್ದಾಣದ ಒಟ್ಟಾರೆ ಸಾಮರ್ಥ್ಯಗಳ ಒಂದು ಸಂಕೀರ್ಣ ಸಮೀಕರಣವಾಗಿದೆ.

# ಡಾ. ಹೆಡ್ಗೆವಾರ್ ಅವರ ಸ್ವಾತಂತ್ರ್ಯ ಹೋರಾಟ

**ಬ್ರಿಟಿಷರ ವಿರುದ್ಧದ ಭಾರತೀಯರ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಿದ್ದ ಹೆಡ್ಗೆವಾರ್, ತಮ್ಮ ವಲಯದಲ್ಲಿ ಬ್ರಿಟಿಷರ ವಿರುದ್ಧ ಯುವಕರನ್ನು ಒಂದುಗೂಡಿಸುವುದರಲ್ಲಿ ಯಶಸ್ವಿಯಾಗಿದ್ದರು. 1920ರವರೆಗೆ ಬ್ರಿಟಿಷರ ಆಡಳಿತದ ಕೆಳಗೆ 'ಸ್ವಯಂ ನಿಯಮ' ಬೇಕೆಂದು ಮಾತ್ರ ಆಗ್ರಹಿಸುತ್ತಿದ ಕಾಂಗ್ರೆಸ್ ಪಕ್ಷಕ್ಕೆ, ಬ್ರಿಟಿಷರಿಂದ 'ಸಂಪೂರ್ಣ ಸ್ವಾತಂತ್ರ್ಯ' ಬೇಕೆಂದು ಮೊಟ್ಟ ಮೊದಲ ಬಾರಿಗೆ ಹೇಳಿದ್ದೇ ಹೆಡ್ಗೆವಾರ್ ಅವರು.**

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಡಾ. ಕೇಶವ್ ಬಲಿರಾಮ್ ಹೆಡ್ಗೆವಾರ್ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ (ಆರೆಸ್ಸೆಸ್) 'ಡಾಕ್ಟರ್ ಜಿ' ಎಂದೇ ಕರೆಯಲ್ಪಡುತ್ತಿದ್ದವರು. ಎಂಟನೇ ವಯಸ್ಸಿನಲ್ಲಿದ್ದಾಗ, ತಮ್ಮ ಶಾಲೆಯಲ್ಲಿ ಇಂಗ್ಲೆಂಡಿನ ರಾಣಿಯ ಹುಟ್ಟುಹಬ್ಬವನ್ನು ಆಚರಿಸಿ ನೀಡಿದ ಸಿಹಿತಿನಿಸನ್ನು ಮನೆಗೆ ತಂದು ಕಸದ ಬುಟ್ಟಿಗೆ ಎಸೆದು, ''ಬ್ರಿಟಿಷರ ರಾಣಿಯ ಹುಟ್ಟುಹಬ್ಬವನ್ನು ನಾವೇಕೆ ಆಚರಿಸಬೇಕು?'' ಎಂದು ಕೇಳಿದ್ದವರು. ರೈಸಲೇ ಸರ್ಕ್ಯುಲರ್ 'ವಂದೇ ಮಾತರಂ' ಘೋಷಣೆಯನ್ನು ನಿಷೇಧಿಸಿತ್ತು. ಹತ್ತನೆಯ ತರಗತಿಯಲ್ಲಿ ಓದುತ್ತಿದ ಹೆಡ್ಗೆವಾರ್ ಶಾಲೆಯಲ್ಲಿ ತಮ್ಮ ಸಹಪಾಠಿಗಳೊಡನೆ ಸೇರಿಕೊಂಡು, ಬ್ರಿಟಿಷರ ನಿಷೇಧಕ್ಕೆ ತಲೆ ಕೆಡಿಸಿಕೊಳ್ಳದೆ 'ವಂದೇ ಮಾತರಂ' ಘೋಷಣೆಯನ್ನು ಕೂಗುತ್ತಿದ್ದರು. ತಿಂಗಳುಗಳ ಕಾಲ ಬ್ರಿಟಿಷರ ವಿರುದ್ಧ ತಮ್ಮ ಶಾಲೆಯಲ್ಲಿ ಹೀಗೆ ಘೋಷಣೆಗಳನ್ನು ಕೂಗಿದ್ದರ ಪರಿಣಾಮ, ಶಾಲೆಯು ಅವರನ್ನು ಅಮಾನತುಗೊಳಿಸುವ ಆದೇಶ ಹೊರಡಿಸಿತ್ತು. ನಂತರ ಕೋಲ್ಕತ್ತಾದ ಮೆಡಿಕಲ್ ಕಾಲೇಜಿಗೆ ಸೇರಿದ ಹೆಡ್ಗೆವಾರ್, ಮತ್ತಷ್ಟು ಹೋರಾಟದ ವಿಷಯಗಳನ್ನು ಅಧ್ಯಯನ ಮಾಡಿದರು. ದೇಶದ ವಿವಿಧ ರಾಜ್ಯಗಳಿಂದ ಬರುವ ವಿದ್ಯಾರ್ಥಿಗಳ ಬಳಿ ಆಯಾ ರಾಜ್ಯಗಳಲ್ಲಿ ಬ್ರಿಟಿಷರ ವಿರುದ್ಧ ನಡೆಯುತ್ತಿರುವ ಹೋರಾಟಗಳ ಬಗ್ಗೆ ಚರ್ಚಿಸಿ, ಹೇಗೆ ತಾವೂ ಸ್ನೇಹಿತರ ಜತೆಗೂಡಿ ಬ್ರಿಟಿಷರ ವಿರುದ್ಧ ಹೋರಾಟವನ್ನು ರೂಪಿಸಬಹುದೆಂಬ ಉದ್ದೇಶ ಅವರದ್ದಾಗಿತ್ತು. ಹೋರಾಟದ ನಡುವೆಯೂ ಹೆಡ್ಗೆವಾರ್ ತಮ್ಮ ಮೆಡಿಕಲ್ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರು. ತಮ್ಮ ವೈದ್ಯಕೀಯ ಅಧ್ಯಯನ ಮುಗಿಸಿದ ಕೆಲ ವರ್ಷಗಳ ನಂತರ ಬ್ರಿಟಿಷರು, ಕೋಲ್ಕತ್ತಾದ ಮೆಡಿಕಲ್ ಕಾಲೇಜಿನಿಂದ ಹೊರಬಂದಂಥ ವಿದ್ಯಾರ್ಥಿಗಳು ವೈದ್ಯಕೀಯ ವೃತ್ತಿಯನ್ನು ನಡೆಸಬಹುದು, ಆದರೆ 'ಅನಾರೋಗ್ಯ ಪ್ರಮಾಣಪತ್ರ' ನೀಡುವ ಹಕ್ಕನ್ನು ಹೊಂದಿಲ್ಲವೆಂಬ ನಿಯಮವನ್ನು ತಂದುಬಿಟ್ಟರು. ಬ್ರಿಟಿಷರ ಈ ನಿಯಮದ ವಿರುದ್ಧ ಹೋರಾಟ ಮಾಡಲು ನಿರ್ಧರಿಸಿದ್ದ ಹೆಡ್ಗೆವಾರ್, ಅಂದಿನ ಕಾಲದ ದೊಡ್ಡ ದೊಡ್ಡ ದಿನಪತ್ರಿಕೆಗಳಲ್ಲಿ ಬ್ರಿಟಿಷರ ಈ ನಿಯಮದ ವಿರುದ್ಧ ವೈದ್ಯರು ಹೋರಾಟ ಮಾಡುತ್ತಿದ್ದಾರೆಂಬ ವಿಷಯಗಳನ್ನು ಪ್ರಕಟಿಸಿ ಬ್ರಿಟಿಷರ ಮೇಲೆ ಒತ್ತಡ ಹೇರಿದ್ದರು. ಅವರ ಒತ್ತಡಕ್ಕೆ ಮಣಿದ ಬ್ರಿಟಿಷ್ ಸರಕಾರ ತಕ್ಷಣ ತಾನು ಮಾಡಿದ್ದ ನಿಯಮವನ್ನು ವಾಪಸ್ ಪಡೆದು ಕೋಲ್ಕತ್ತಾದ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು 'ಅನಾರೋಗ್ಯ ಪ್ರಮಾಣಪತ್ರ' ನೀಡಬಹುದೆಂದು ಹೇಳಿತು.

ಬ್ರಿಟಿಷರ ವಿರುದ್ಧದ ಭಾರತೀಯರ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ನಿರ್ಧರಿಸಿದ್ದ ಹೆಡ್ಗೆವಾರ್, ತಮ್ಮ ವಲಯದಲ್ಲಿ ಬ್ರಿಟಿಷರ ವಿರುದ್ಧ ಯುವಕರನ್ನು ಒಂದುಗೂಡಿಸುವುದರಲ್ಲಿ ಯಶಸ್ವಿಯಾಗಿದ್ದರು. 1920ರವರೆಗೆ ಬ್ರಿಟಿಷರ ಆಡಳಿತದ ಕೆಳಗೆ 'ಸ್ವಯಂ ನಿಯಮ' ಬೇಕೆಂದು ಮಾತ್ರ ಆಗ್ರಹಿಸುತ್ತಿದ ಕಾಂಗ್ರೆಸ್ ಪಕ್ಷಕ್ಕೆ, ಬ್ರಿಟಿಷರಿಂದ 'ಸಂಪೂರ್ಣ ಸ್ವಾತಂತ್ರ್ಯ' ಬೇಕೆಂದು ಮೊಟ್ಟ ಮೊದಲ ಬಾರಿಗೆ ಹೇಳಿದ್ದೇ ಹೆಡ್ಗೆವಾರ್ ಅವರು. ಅವರ ಮಾತನ್ನು ಅಂದು ಗಂಭೀರವಾಗಿ ತೆಗೆದುಕೊಳ್ಳದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು 1929ರಲ್ಲಿ ಹೆಡ್ಗೆವಾರ್ ಹೇಳಿದ ಮಾತನ್ನೇ ಲಾಹೋರ್ ಸಮ್ಮೇಳನದಲ್ಲಿ ತಮ್ಮ ಉದ್ದೇಶವನ್ನಾಗಿ ಘೋಷಿಸಿದರು. ಒಂಬತ್ತು ವರ್ಷಗಳ ಹಿಂದೆಯೇ, ಬ್ರಿಟಿಷರನ್ನು ಸಂಪೂರ್ಣವಾಗಿ ಓಡಿಸಬೇಕೆಂಬ ಸ್ಪಷ್ಟ ಉದ್ದೇಶವನ್ನು ಹೆಡ್ಗೆವಾರ್ ಹೊಂದಿದ್ದರು. ಅಂದಿನ ಕಾಲದಲ್ಲಿಯೇ ಒಂಬತ್ತು ವರ್ಷ ಮುಂದಿದ್ದ ಹೆಡ್ಗೆವಾರ್ ಅವರ ಮಾತುಗಳನ್ನು ಕೇಳಿದ್ದಿದ್ದರೆ ಬಹುಶಃ ನಮಗೆ ಸ್ವಾತಂತ್ರ್ಯವು ಒಂಬತ್ತು ವರ್ಷ ಮುಂಚೆಯೇ ಸಿಗುತ್ತಿತ್ತು.

1920ರಲ್ಲಿ ಖಿಲಾಫತ್ ಚಳವಳಿಯನ್ನು ಹೆಡ್ಗೆವಾರ್ ಅವರು ವಿರೋಧಿಸದಿದ್ದರೂ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಮಹಾತ್ಮ ಗಾಂಧಿಯವರಿಗೆ ನೆರವಾಗುವುದನ್ನು ಬಿಡಲಿಲ್ಲ. ಮಹಾತ್ಮ ಗಾಂಧಿಯವರ ಅಸಹಕಾರ ಚಳವಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದ್ದರು. ಈ ಚಳವಳಿಯಲ್ಲಿ ಹೆಡ್ಗೆವಾರ್ ಅವರು ಅತ್ಯುತ್ಸಾಹದಿಂದ ಗಾಂಧಿಯವರ ಪರವಾಗಿ ನಿಂತರು. ಬ್ರಿಟಿಷರ ವಿರುದ್ಧ ಕ್ರಾಂತಿಕಾರಿ ಭಾಷಣಗಳನ್ನು ಮಾಡುವ ಮೂಲಕ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿದ್ದರು. ಬ್ರಿಟಿಷ್ ಸರಕಾರ ಮೂರು ಬಾರಿ ನೋಟಿಸ್ ನೀಡಿದರೂ ತಲೆ ಕೆಡಿಸಿಕೊಳ್ಳದೆ, ಬ್ರಿಟಿಷರ ವಿರುದ್ಧದ ತಮ್ಮ ಭಾಷಣಗಳನ್ನು ಹೆಡ್ಗೆವಾರ್ ಮಾಡುತ್ತಲೇ ಇದ್ದರು. ಬ್ರಿಟಿಷ್ ಕೋರ್ಟ್ ಹೆಡ್ಗೆವಾರ್ ಅವರಿಗೆ, 'ಇಂಥ ಭಾಷಣಗಳನ್ನು ಮಾಡಬಾರದು, ಜಾಮೀನಿನ ಹಣವಾಗಿ 1,000 ರುಪಾಯಿಯನ್ನು ಕಟ್ಟಬೇಕು' ಎಂದು ಆದೇಶ ಹೊರಡಿಸಿತ್ತು. ಬ್ರಿಟಿಷ್ ಕೋರ್ಟಿನ ಈ ಆದೇಶಕ್ಕೂ ಕ್ಯಾರೆ ಅನ್ನದ ಹೆಡ್ಗೆವಾರ್ ತಮ್ಮ ಭಾಷಣಗಳನ್ನು ಮಾಡುತ್ತಿದ್ದರು. ಹೆಡ್ಗೆವಾರ್ ಅವರನ್ನು ಬ್ರಿಟಿಷರು ಅಷ್ಟಕ್ಕೇ ಬಿಡಲಿಲ್ಲ, ಅವರನ್ನು ಬಂಧಿಸಿ ಒಂದು ವರ್ಷ ಕಾಲ ಜೈಲಿನಲ್ಲಿರಿಸಿದ್ದರು.

'ಸ್ವಾತಂತ್ರ್ಯ ಹೋರಾಟದಲ್ಲಿ ಆರೆಸ್ಸೆಸ್‌ನವರು ಜೈಲಿಗೆ ಹೋಗಲಿಲ್ಲ' ಎಂದು ಮಲ್ಲಿಕಾರ್ಜುನ ಖರ್ಗೆಯವರು ಸಂಸತ್ತಿನಲ್ಲಿ ಸುಳ್ಳು ಹೇಳಿದ್ದನ್ನು ಕೇಳಿ, ಹೆಡ್ಗೆವಾರ್ ಅವರನ್ನು ಬ್ರಿಟಿಷರು ಜೈಲಿಗೆ ಕಳುಹಿಸಿದ ಈ ವಿಷಯ ನೆನಪಾಯಿತು. ಜೈಲಿಗೆ ಹೋಗುವುದರಿಂದ ಮಾತ್ರ ನಮಗೆ ಸ್ವಾತಂತ್ರ್ಯ ಬರುವುದಿಲ್ಲವೆಂಬ ವಿಷಯ ಹೆಡ್ಗೆವಾರ್ ಅವರಿಗೆ ಚೆನ್ನಾಗಿ ಗೊತ್ತಿತ್ತು. ''ಜೈಲಿಗೆ ಹೋಗುವುದೊಂದೇ ಸ್ವಾತಂತ್ರ್ಯ ಹೋರಾಟದ ಭಾಗವಲ್ಲ. ದೇಶಕ್ಕಾಗಿ ಸೇವೆ ಸಲ್ಲಿಸಲು ಜೈಲಿನಿಂದ ಹೊರಗಡೆ ಹೆಚ್ಚಿನ ಕೆಲಸ ಮಾಡುವ ಅಗತ್ಯವಿದೆ'' ಎಂದು ತಮ್ಮನ್ನು ನೋಡಲು ಜೈಲಿಗೆ ಬರುವವರಿಗೆ ಹೆಡ್ಗೆವಾರ್ ಅವರು ಹೇಳುತ್ತಿದ್ದರು. ಜೈಲಿನಿಂದ ಬಿಡುಗಡೆಯಾದ ನಂತರ ಹೆಡ್ಗೆವಾರ್ ತಮ್ಮ ಛಲವನ್ನು ಬಿಡಲಿಲ್ಲ, ಹಿಂದಿಗಿಂತಲೂ ಹೆಚ್ಚಿನ ಉತ್ಸಾಹದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. 18-03-1922ರಲ್ಲಿ ಮಹಾತ್ಮ ಗಾಂಧಿಯವರಿಗೆ ಆರು ವರ್ಷಗಳ ಸೆರೆವಾಸವಾದಾಗ ಹೆಡ್ಗೆವಾರ್ ಅವರು ಪ್ರತಿ ತಿಂಗಳ 18ನೆಯ ದಿನದಂದು 'ಗಾಂಧಿ ದಿನ'ವೆಂದು ಆಚರಿಸುತ್ತಿದ್ದರು.

ಖಿಲಾಫತ್ ಚಳವಳಿಯ ವೈಫಲ್ಯ ಹಾಗೂ ಮೋಪ್ಲಾ ಹತ್ಯಾಕಾಂಡದ ಪರಿಣಾಮ, 1924ರ ಹೊತ್ತಿಗೆ ಭಾರತದಲ್ಲಿ ಕೋಮುಗಲಭೆಗಳು ಹೆಚ್ಚಾಗಿದ್ದವು. ಸುಮ್ಮ ಸುಮ್ಮನೆ ಹಿಂದೂ-ಮುಸ್ಲಿಂ ಗಲಭೆಗಳಾಗುತ್ತಿದ್ದವು, ಸಾವಿರಾರು ಹಿಂದೂಗಳ ಹತ್ಯೆಯಾಯಿತು. ಮುಸಲ್ಮಾನರಲ್ಲಿದ್ದಂಥ ಒಗ್ಗಟ್ಟು ಹಿಂದೂಗಳಲ್ಲಿರಲಿಲ್ಲ. ಸ್ವತಃ ನೆಹರು ತಮ್ಮ ಪುಸ್ತಕವೊಂದರಲ್ಲಿ 'ಹಿಂದೂಗಳು ಕಚೇರಿಗಳಲ್ಲಿ ಕೆಲಸ ಮಾಡುವುದರಲ್ಲಿ ಮಾತ್ರ ನಿರತರಾಗಿರುತ್ತಾರೆ' ಎಂದು ಹೇಳಿದ್ದಾರೆ. ಹಿಂದೂಗಳಲ್ಲಿ ಒಗ್ಗಟ್ಟು ಇಲ್ಲದ ಪರಿಣಾಮ ಬ್ರಿಟಿಷರು ಇಷ್ಟು ವರ್ಷಗಳ ಕಾಲ ನಮ್ಮನ್ನು ಆಳಲು ಸಾಧ್ಯವಾಗಿದೆಯೆಂಬ ವಿಷಯ ಹೆಡ್ಗೆವಾರ್ ಅವರ ಮನಸ್ಸಿನಲ್ಲಿ ಯಾವಾಗಲೂ ಕೊರೆಯುತ್ತಿತ್ತು. ಹಿಂದೂಗಳಲ್ಲಿನ ಒಗ್ಗಟ್ಟನ್ನು ಒಂದು ಸಂಘಟನೆಯ ಮೂಲಕ ಮಾಡಿಸಿದರೆ ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯಗಳಿಸುವುದು ಸುಲಭವೆಂದು ಹೆಡ್ಗೆವಾರ್ ಯೋಚಿಸಿದ್ದರು. ಸ್ವಾತಂತ್ರ್ಯಾ ನಂತರದಲ್ಲಿ ಸುದೀರ್ಘವಾದ ಅಭಿವೃದ್ಧಿ ಹೊಂದಿದ ದೇಶವನ್ನು ಕಟ್ಟಲು ಹಿಂದೂಗಳ ಒಗ್ಗೂಡುವಿಗೆ ಅತಿ ಮುಖ್ಯವೆಂಬುದು ಹೆಡ್ಗೆವಾರ್ ಅವರಿಗೆ ತಿಳಿದಿತ್ತು. ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತಂದು 1925ರ 'ವಿಜಯದಶಮಿ'ಯಂದು ಅವರು 'ರಾಷ್ಟ್ರೀಯ ಸ್ವಯಂಸೇವಕ ಸಂಘ'ವನ್ನು ಸ್ಥಾಪಿಸಿದರು.

ಸಂಘವನ್ನು ಸ್ಥಾಪಿಸಿದ ನಂತರವೂ ಹೆಡ್ಗೆವಾರ್ ಅವರು ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಮಹಾತ್ಮ ಗಾಂಧಿಯವರ

ನೇತೃತ್ವದಲ್ಲಿಯೇ ಮಾಡಲು ನಿರ್ಧರಿಸಿದ್ದರು. ಹಿಂದೂ ಯುವಕರನ್ನು ಒಗ್ಗೂಡಿಸುವ ಕೆಲಸ ಒಂದೆಡೆ ನಡೆಯುತ್ತಿದ್ದರೆ, ಬ್ರಿಟಿಷರ ವಿರುದ್ಧ ಹೋರಾಡಲು ಮಾಡಬೇಕಾದ ಕೆಲಸಗಳನ್ನು ಹೆಡ್ಗೆವಾರ್ ಅವರು ಚಾಚೂ ತಪ್ಪದೆ ಮಾಡುತ್ತಿದ್ದರು. ನೋಡನೋಡುತ್ತಲೇ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಪ್ರಾಧ್ಯಾಪಕರು, ವೈದ್ಯರು, ವಕೀಲರು, ವ್ಯಾಪಾರಸ್ಥರು, ದೊಡ್ಡ ದೊಡ್ಡ ವಿದ್ವಾಂಸರು ಸೇರಿಕೊಂಡರು. ಯಾರೂ ಊಹಿಸದ ರೀತಿಯಲ್ಲಿ ಸಂಘ ಬೆಳೆಯತೊಡಗಿತು. ಹೆಡ್ಗೆವಾರ್ ಅವರು 1930ರಲ್ಲಿ ಸರಸಂಘಚಾಲಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬ್ರಿಟಿಷರ ವಿರುದ್ಧದ 'ಜಂಗಲ್ ಸತ್ಯಾಗ್ರಹ'ಕ್ಕೆ ಧುಮುಕಿದರು. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿಯೇ ಹೋರಾಟ ನಡೆಯುತ್ತಿದ್ದುದರಿಂದ ತಾವೂ ಅವರೊಟ್ಟಿಗೆ ಹೋರಾಡಬೇಕೆಂದು ಹೆಡ್ಗೆವಾರ್ ನಿರ್ಧರಿಸಿದ್ದರು. ಸಂಘದ ಸ್ವಯಂಸೇವಕರು ಸ್ವಾತಂತ್ರ್ಯ ಹೋರಾಟದಲ್ಲಿ ಜೈಲಿಗೆ ಹೋಗಲು ತಯಾರಿದ್ದೇವೆಂದು ಹೇಳಿದಾಗ, 1920ರಲ್ಲಿ ಹೇಳಿದ ಮಾತುಗಳನ್ನೇ ಪುನಃ ಹೇಳಿದರು. ಅಂದರೆ, ''ಕೇವಲ ಜೈಲಿಗೆ ಹೋಗುವುದರಿಂದ ನಮಗೆ ಸ್ವಾತಂತ್ರ್ಯ ಸಿಗುವುದಿಲ್ಲ, ಜೈಲಿನ ಒಳಗೆ ಹಾಗೂ ಹೊರಗೆ ಎರಡೂ ಕಡೆ ಬ್ರಿಟಿಷರನ್ನು ಓಡಿಸುವ ಕಾರ್ಯದಲ್ಲಿ ನೀವೆಲ್ಲರೂ ಪಾಲ್ಗೊಳ್ಳಬೇಕು'' ಎಂದು ಹೇಳಿದ್ದರು. ನೂರಾರು ಸ್ವಯಂಸೇವಕರ ಜತೆಗೆ ಹೆಡ್ಗೆವಾರ್ ಅವರು ಒಂಬತ್ತು ತಿಂಗಳುಗಳ ಜೈಲುವಾಸವನ್ನು ಜಂಗಲ್ ಸತ್ಯಾಗ್ರಹದಲ್ಲಿ ಅನುಭವಿಸಿದ್ದರು. ಜೈಲಿನಿಂದ ಬಿಡುಗಡೆಯಾದ ಹೆಡ್ಗೆವಾರ್, ಕಾಶಿ ವಿಶ್ವನಾಥನ ಸನ್ನಿಧಿಗೆ ಭೇಟಿ ನೀಡಿದ್ದರು. ವಿಶ್ವನಾಥನ ಮಂದಿರದ ಪಕ್ಕದಲ್ಲಿದ್ದ ಮಸೀದಿಯನ್ನು ನೋಡಿದ ಹೆಡ್ಗೆವಾರ್, ಹಿಂದೂಗಳ ಮೇಲಿನ ಸತತ ಆಕ್ರಮಣಗಳನ್ನು ನೆನೆದಿದ್ದರು. ಜಂಗಲ್ ಸತ್ಯಾಗ್ರಹದ ಸೆರೆಮನೆವಾಸದ ನಂತರ ಹೆಡ್ಗೆವಾರ್ ಅವರು 'ಉಪ್ಪಿನ ಸತ್ಯಾಗ್ರಹ'ದಲ್ಲಿಯೂ ಪಾಲ್ಗೊಂಡಿದ್ದರು.

ನಿಧಾನವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವು ಎಲ್ಲೆಲ್ಲೂ ಹಬ್ಬಲು ಶುರುವಾಯಿತು. 1932ರ ಹೊತ್ತಿಗೆ, ಬ್ರಿಟಿಷರಿಗೆ ಸಂಘವು ಅಪಾಯಕಾರಿಯಾಗಿ ಕಂಡಿತು. 1932ರಲ್ಲಿ ಬ್ರಿಟಿಷರು ಒಂದು ಸುತ್ತೋಲೆಯನ್ನು ಹೊರಡಿಸಿದರು. ಅದರನ್ವಯ ಸರಕಾರಿ ನೌಕರರು ಸಂಘದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಿರಲಿಲ್ಲ. ಹೆಡ್ಗೆವಾರ್ ಸುಮ್ಮನೆ ಕೂರಲಿಲ್ಲ. ಮಧ್ಯ ಪ್ರಾಂತ್ಯದ ಗೃಹ ಸಚಿವರನ್ನು ಕರೆಸಿ, ಕಾರ್ಯಕ್ರಮವೊಂದರಲ್ಲಿ ಸಂಘವು ಯಾವುದಾದರೊಂದು ರಾಜಕೀಯ ಚಳವಳಿಯನ್ನು ಮಾಡಿರುವ ಉದಾಹರಣೆಯನ್ನು ನೀಡುವಂತೆ ಹೇಳಿದರು. ಸರಕಾರದ ಬಳಿ ಉತ್ತರವಿರಲಿಲ್ಲ. ಬಳಿಕ ಬ್ರಿಟಿಷರು ಹೊರಡಿಸಿದ ಸುತ್ತೋಲೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಸಂಘವು ತನ್ನ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಲೇ ಇತ್ತು. ಇದರಿಂದ ಬೇಸತ್ತ ಬ್ರಿಟಿಷ್ ಸರಕಾರ ಮತ್ತೊಮ್ಮೆ 1933ರಲ್ಲಿ 'ಸರಕಾರಿ ಶಾಲೆಯ ಅಧ್ಯಾಪಕರೂ ಸಂಘದ ಕೆಲಸದಲ್ಲಿ ತೊಡಗಿಸಿಕೊಳ್ಳಬಾರದು' ಎಂಬ ಸುತ್ತೋಲೆಯನ್ನು ಹೊರಡಿಸಿತು. ತಾವು ಏನೇ ಮಾಡಿದರೂ ಸಂಘದ ಸ್ವಯಂಸೇವಕರು ಸ್ವಾತಂತ್ರ್ಯದ ಪರವಾಗಿ ಕೆಲಸ ಮಾಡುವುದನ್ನು ಬಿಡುವುದಿಲ್ಲವೆಂಬ ವಿಷಯ ಬ್ರಿಟಿಷರಿಗೆ ತಿಳಿಯಿತು. 1937ರಲ್ಲಿ ವೀರ ಸಾವರ್ಕರ್ ಗೃಹ ಬಂಧನದಿಂದ ಮುಕ್ತರಾದಾಗ ದೇಶದೆಲ್ಲೆಡೆ ಪ್ರಯಾಣ ಮಾಡುತ್ತಿದ್ದರು. ಆ ಸಮಯದಲ್ಲಿ ಅವರು ನಾಗಪುರಕ್ಕೆ ಬಂದಾಗ ಹೆಡ್ಗೆವಾರ್ ಅವರ ಜತೆಗೂಡಿದರು. ನಾಗಪುರದ ಅಕ್ಕಪಕ್ಕದ ಭಾಗಗಳಲ್ಲಿ ಸಾವರ್ಕರ್‌ರ ಜತೆಗಿದ್ದ ಹೆಡ್ಗೆವಾರ್, ತಮ್ಮ ಸಾವಿರಾರು ಸ್ವಯಂಸೇವಕರ ಜತೆಗೆ ಹಲವು ಕಾರ್ಯಕ್ರಮಗಳನ್ನು ಮಾಡಿಸಿದ್ದರು. ಸಾವರ್ಕರ್ ಅವರಿಗೆ ಬೇಕಿದ್ದ ಬೆಂಬಲವನ್ನು ಹೆಡ್ಗೆವಾರ್ ತಮ್ಮ ಸ್ವಯಂಸೇವಕರ ಮೂಲಕ ನೀಡುತ್ತಿದ್ದರು. ಸಾವರ್ಕರ್‌ರ ಜತೆಗೆ ಕಳೆದ ಸಮಯವನ್ನು ಹೆಡ್ಗೆವಾರ್ ಅವರು ತಮ್ಮ ಜೀವನದ ಅಮೂಲ್ಯ ಕ್ಷಣಗಳೆಂದು ಹೇಳಿಕೊಂಡಿದ್ದಾರೆ.

'ಆರೆಸ್ಸೆಸ್‌ನವರು ಸ್ವಾತಂತ್ರ್ಯಕ್ಕಾಗಿ ಏನು ಮಾಡಿದ್ದಾರೆ?' ಎಂದು ಪದೇಪದೆ ಕೇಳುವ ಕಾಂಗ್ರೆಸ್ ಮತ್ತು ಎಡಚರ ಪಟಾಲಂ, ಇತಿಹಾಸವನ್ನು ಒಮ್ಮೆ ಸರಿಯಾಗಿ ತಿಳಿದುಕೊಳ್ಳಬೇಕು. ಎಡಚರು ಬರೆದಿರುವ ಇತಿಹಾಸದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅನೇಕ ಹೋರಾಟಗಾರರ ಹೆಸರನ್ನು ಬೇಕಂತಲೇ ಕೈಬಿಡಲಾಯಿತು ಮತ್ತು ಮಕ್ಕಳ ಶಾಲಾ ಪಠ್ಯದಲ್ಲಿ ಅನೇಕ ಸತ್ಯಗಳನ್ನು ಮರೆಮಾಚಲಾಯಿತು. ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾದ ಡಾ. ಹೆಡ್ಗೆವಾರ್ ಅವರ ಇತಿಹಾಸವನ್ನು, ಎಡಚರ ಮತ್ತು ಕಾಂಗ್ರೆಸ್ಸಿನ ಟೂಲ್‌ಕಿಟ್ ಭಾಗವಾಗಿ ಮರೆಮಾಚಿ, ಸಂಘದ ವಿರುದ್ಧ ಸುಳ್ಳುಸುದ್ದಿಗಳನ್ನು ಸಮಾಜದಲ್ಲಿ ಹಬ್ಬಿಸಲಾಯಿತು.

# ಫೇಕ್ ನ್ಯೂಸ್ ಫ್ಯಾಕ್ಟರಿಗೆ ಇನ್ನೆಷ್ಟು ಬಲಿ ಬೇಕು?

**ನಮ್ಮ ದೇಶದಲ್ಲಿ ಫೇಕ್ ನ್ಯೂಸ್ ಫ್ಯಾಕ್ಟರಿಗಳನ್ನು ಬಂದ್ ಮಾಡುವ ಕಠಿಣ ಕಾನೂನು ಎಷ್ಟರ ಮಟ್ಟಿಗೆ ಅಗತ್ಯ ಇದೆ ಎನ್ನುವುದಕ್ಕೆ ಬುರುಡೆ ಮತ್ತು ಸುಜಾತ ಭಟ್ ಕೇಸ್ ತಾಜಾ ಉದಾಹರಣೆ. ಮಾಧ್ಯಮ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ದಾಖಲೆ ಸಮೇತ ಸತ್ಯ ಹೇಳುವುದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ, ದುರುದ್ದೇಶದಿಂದ ವ್ಯೂಸ್, ಲೈಕ್‌ಗಳನ್ನು ಹೆಚ್ಚಿಸಿಕೊಳ್ಳಲು, ಆ ಮೂಲಕ ದುಡ್ಡು ಮಾಡಲು, ಕಾಲ್ಪನಿಕ ಕಂಟೆಂಟ್ ಸೃಷ್ಟಿಸುವವರ ಹೆಡೆಮುರಿ ಕಟ್ಟುವ ಕಾನೂನು ಸಾಮಾಜಿಕ ಆರೋಗ್ಯ ಕಾಪಾಡಲು ಅತ್ಯವಶ್ಯಕ.**

ಚರ್ಚಾವೇದಿಕೆ
ರಾಘವ ಶರ್ಮ ನಿಡ್ಲೆ
vveditoped@gmail.com

ಕೆಲ ದಿನಗಳ ಹಿಂದೆ ಪ್ರಕರಣವೊಂದರ ವಿಚಾರಣೆ ನಡೆಸುತ್ತಿದ್ದ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ.ಐ. ಅರುಣ್ ಅವರು, ''ಇಂದಿನ ಡಿಜಿಟಲ್ ಯುಗದಲ್ಲಿ ಮಾನಹಾನಿ ಮಾಡುವಂಥ ಕಂಟೆಂಟ್‌ಗಳು ಯೂಟ್ಯೂಬ್‌ನಂಥ ಡಿಜಿಟಲ್ ಮೀಡಿಯಾ ವೇದಿಕೆಗಳಲ್ಲಿ ಅನಿಯಂತ್ರಿತವಾಗಿ ಕಾಣಿಸಿಕೊಳ್ಳುತ್ತಿರುವುದು ಕಳವಳಕಾರಿ ವಿದ್ಯಮಾನ'' ಎಂಬ ಆತಂಕವನ್ನು ಹೊರಹಾಕಿದ್ದರು. ಯಾವುದೇ ಹೊಣೆಗಾರಿಕೆಯಿಲ್ಲದೆ, ಮಾನಹಾನಿ ಮಾಡುವ ವಿಷಯಗಳು ಬಿರುಗಾಳಿಯ ವೇಗದಲ್ಲಿ ಯೂಟ್ಯೂಬ್‌ಗಳ ಮೂಲಕ ಹರಿದಾಡುತ್ತಿವೆ. ದುರಂತ ಎಂದರೆ ಇಂಥವುಗಳನ್ನು ತಡೆಹಿಡಿಯಲು ಅಸ್ತಿತ್ವದಲ್ಲಿರುವ ಮಾನನಷ್ಟ ಕಾನೂನು ಕೂಡ ಅಸಮರ್ಪಕವಾಗಿದೆ ಎಂದವರು ತಿಳಿಸಿದ್ದರು. ಇತರರನ್ನು ವಿನಾಕಾರಣ ದೂಷಿಸಿ, ನಂತರ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿರುವುದಕ್ಕೆ ಸಮಗ್ರ, ಸ್ಪಷ್ಟ ಕಾನೂನಿನ ಕೊರತೆ ಕಾರಣ ಎನ್ನುವುದು ಅವರ ಅನಿಸಿಕೆಯಾಗಿತ್ತು. ಇದಕ್ಕೆ ಸಂಬಂಧಿಸಿ ನ್ಯಾ. ಅರುಣ್ ಅವರು ಯಾವುದೇ ತೀರ್ಪನ್ನು ನೀಡದಿದ್ದರೂ, ಡಿಜಿಟಲ್ ಕಂಟೆಂಟ್‌ಗಳು ಸೃಷ್ಟಿಸುತ್ತಿರುವ ಅವಾಂತರ/ಅನಾಹುತಗಳನ್ನು ತಡೆಯಲು ಕಠಿಣ ಕಾನೂನಿನ ಅಗತ್ಯವಿದೆ ಎಂಬ ಅಭಿಪ್ರಾಯಗಳು ನ್ಯಾಯಾಂಗದ ಕಡೆಯಿಂದ ಬರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ.

ಧರ್ಮಸ್ಥಳದ ಆಸುಪಾಸು ನೂರಾರು ಶವಗಳನ್ನು ಹೂತುಹಾಕಿದ್ದೇನೆ ಎಂದು ದೂರು ಸಲ್ಲಿಸಿ, ಈಗ ಆರೋಪಿಯಾಗಿ ಶಿವಮೊಗ್ಗ ಜೈಲು ಸೇರಿರುವ (ಮುಸುಕುಧಾರಿ) ಸಿ.ಎನ್. ಚಿನ್ನಯ್ಯ ಹಾಗೂ ಆತನ ಸಹಚರರು ಯೂಟ್ಯೂಬ್ ಚಾನೆಲ್‌ಗಳನ್ನು ಬಳಸಿಕೊಂಡು ಧರ್ಮಸ್ಥಳದ ಬಗ್ಗೆ ಎಂತೆಂಥಾ ಕಥೆಗಳನ್ನು ಹೆಣೆದರು ಎಂಬುದನ್ನು ಇಡೀ ದೇಶವೇ ನೋಡಿದೆ. ಧರ್ಮಸ್ಥಳ ಪ್ರಕರಣ ತೆಗೆದುಕೊಂಡಿರುವ ವಿವಿಧ ತಿರುವುಗಳನ್ನು ಕಂಡಾಗ ನ್ಯಾ. ಅರುಣ್ ಅವರ ಅಭಿಪ್ರಾಯ ಇಲ್ಲಿ ಮತ್ತಷ್ಟು ಮಹತ್ವ ಪಡೆದುಕೊಳ್ಳುತ್ತದೆ.

ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತನಿಖೆಯ ಆರಂಭಕ್ಕೆ ಮುನ್ನ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಸ್ಪರ್ಧೆಗೆ ಬಿದ್ದವರಂತೆ ಕಥಾನಕಗಳನ್ನು ಸೃಷ್ಟಿಸಿದ್ದ ಯೂಟ್ಯೂಬ್ ಚಾನೆಲ್‌ಗಳ 'ಸ್ವತಂತ್ರ ಪತ್ರಕರ್ತ'ರು, ನೇತ್ರಾವತಿ ನದಿ ಆಸುಪಾಸು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕೊಂದು ಅವರ ಶವಗಳನ್ನು ಹೂತುಹಾಕಲಾಗಿದೆ ಎಂದು ಅಕ್ಷರಶಃ ನಂಬುವಂತೆ ವಿವರಣೆ ನೀಡುತ್ತಿದ್ದರು. ಭಾರಿ ಕುತೂಹಲ ಕೆರಳಿಸುವಂಥ ವಾಯ್ಸ್ ಓವರ್ ಹಾಗೂ ಮ್ಯೂಸಿಕ್‌ಗಳನ್ನು ಬಳಸಿ ಕಥೆಗೆ ರೋಚಕತೆ ನೀಡುತ್ತಾ, ದೂರದ ಊರಿನಲ್ಲೆಲ್ಲೋ ಕುಳಿತ ನೈಜ ಭಕ್ತರೂ ಅನುಮಾನದಿಂದ ನೋಡುವಂತೆ ಮಾಡಿದ್ದರು. ನಂತರದಲ್ಲಿ ಎಸ್‌ಐಟಿ ರಚನೆಯಾಗಿ, ಧರ್ಮಸ್ಥಳ ಗ್ರಾಮದ ಸುತ್ತಮುತ್ತ 17 ಕಡೆ ಭೂಮಿ ಅಗೆದು, ಇತಿಹಾಸದಲ್ಲೇ ಮೊದಲು ಎಂಬಂತೆ ಭಾರಿ ದೊಡ್ಡ ಪ್ರಹಸನವೊಂದಕ್ಕೆ ಸ್ಥಳೀಯರು ಸಾಕ್ಷಿಯಾಗುವಂತೆ ಮಾಡಲಾಯಿತು. ದೂರದ ಊರು, ಜಿಲ್ಲೆ, ರಾಜ್ಯಗಳಲ್ಲೂ 'ಧರ್ಮಸ್ಥಳದಲ್ಲಿ ಏನಾಗುತ್ತಿದೆ?' ಎಂಬ ಚರ್ಚೆಗಳು ವ್ಯಾಪಕವಾಗಿ ನಡೆದವು.

ಆರಂಭದಲ್ಲಿ ಮುಸುಕುಧಾರಿ ಹೇಳಿದಂತೆ ಭೂಮಿ ಅಗೆಯುತ್ತಿದ್ದ ಎಸ್‌ಐಟಿ ತನಿಖಾಧಿಕಾರಿಗಳು, ಈಗ ಮುಸುಕುಧಾರಿಯ ಮುಖವಾಡ ಕಳಚುವ ಕೆಲಸದಲ್ಲಿದ್ದಾರೆ. ಇಡೀ ಪ್ರಹಸನವು ನೈಜ ಪಾತ್ರಧಾರಿಗಳನ್ನು ತನಿಖೆಗೊಳಪಡಿಸಿ, ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಒಳಸಂಚು ರೂಪಿಸಿದ ಜಾಲಗಳನ್ನು ಬಗೆಯುತ್ತಿದೆ. ಧರ್ಮಸ್ಥಳ ಕೇಸಿಗೆ ಕೇರಳ-ದೆಹಲಿಯ ನಂಟು ಹೇಗಿತ್ತು ಎಂಬುದೂ ಒಂದೊಂದಾಗಿಯೇ ಈಗ ಹೊರಬರುತ್ತಿದೆ. ಕೇರಳದ ಯೂಟ್ಯೂಬರ್ ಮತ್ತು ಲಾರಿ ಮಾಲೀಕ ಮನಾಫ್ ಎಂಬಾತ ಈ ಪ್ರಕರಣದಲ್ಲಿ ಏನೆಲ್ಲಾ ಕಿತಾಪತಿಗಳನ್ನು ಮಾಡಿದ್ದಾನೆ ಎನ್ನುವುದೂ ಬೆಳಕಿಗೆ ಬರುತ್ತಿದೆ. ಈತ ಕೇರಳದ ಮುಖ್ಯವಾಹಿನಿ ಮಾಧ್ಯಮದಲ್ಲೂ ಬಂದು ಸಂದರ್ಶನದ ಮೇಲೆ ಸಂದರ್ಶನ ನೀಡಿ, 'ಧರ್ಮಸ್ಥಳವು ನೂರಾರು ಕೊಲೆಗಳ ತಾಣ' ಎಂಬ ಯೋಜಿತ ನಿರೂಪಣೆಯನ್ನು (ನರೇಟಿವ್) ಬಹಳ ವ್ಯವಸ್ಥಿತವಾಗಿ ಹರಿಬಿಟ್ಟಿದ್ದ.

ಕೆಲ ದಿನಗಳ ಹಿಂದೆ ಧರ್ಮಸ್ಥಳದ ಅರಣ್ಯ ಪ್ರದೇಶದಿಂದ ತಲೆಬುರುಡೆ ಹೊರತರುವ ವಿಡಿಯೋ ಹೊರಬಂದಿದ್ದು, ಪ್ರಕರಣಕ್ಕೆ ನಾಟಕೀಯ ತಿರುವು ಸಿಕ್ಕಿದೆ. ಜುಲೈ 11ರಂದು ಯೂಟ್ಯೂಬರ್ ಮನಾಫ್ ತನ್ನ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದ್ದ ವಿಡಿಯೋದಲ್ಲಿ, ಜಯಂತ್ ತಂಗಚ್ಚನ್ ಎಂಬ ವ್ಯಕ್ತಿ (ಈಗ ಎಸ್‌ಐಟಿ ತನಿಖೆಗೊಳಪಟ್ಟಿದ್ದಾನೆ) ಧರ್ಮಸ್ಥಳದ ಬಂಗ್ಲೆಗುಡ್ಡೆಯ ಮೇಲ್ಭಾಗದಿಂದ ಚಾಕುವಿನ ಸಹಾಯದಿಂದ ತಲೆಬುರುಡೆ ಎತ್ತುತ್ತಿರುವ ದೃಶ್ಯವಿದೆ. ಸೀರೆಯನ್ನು ಕಟ್ಟಲಾಗಿದ್ದ ಮರದ ಬಳಿ ತಲೆಬುರುಡೆ ಪತ್ತೆಯಾಗಿದ್ದು, ಇದು ತನಿಖೆಯ ಮೇಲೆ ಹೊಸ ಬೆಳಕು ಚೆಲ್ಲಿದೆ. ಹಾಗಿದ್ದರೆ, ಈ ಬುರುಡೆ ಯಾರದ್ದು? ಬುರುಡೆಯೊಂದನ್ನು ಎತ್ತಿ ತರುವ ಅಧಿಕಾರವನ್ನು ಅವರಿಗೆ ನೀಡಿದ್ದು ಯಾರು? ಅದನ್ನು ವಿಡಿಯೋ ಮಾಡಿ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡುವುದರ ಹಿಂದಿನ ಉದ್ದೇಶ ಏನು? ಮನಾಫ್-ಸಿ.ಎನ್. ಚಿನ್ನಯ್ಯ-ಜಯಂತ್ ತಂಗಚ್ಚನ್-ಮಹೇಶ್ ಶೆಟ್ಟಿ ತಿಮರೋಡಿ-ಗಿರೀಶ್ ಮಟ್ಟಣ್ಣನವರ್-ವಿಠಲ ಗೌಡರಿಗೂ (ಅತ್ಯಾಚಾರ-ಹತ್ಯೆಗೊಳಗಾಗಿದ್ದ ಸೌಜನ್ಯಳ ಮಾವ) ಇರುವ ನಂಟೇನು? ಇವರೆಲ್ಲರಿಗೂ ಬುರುಡೆ ವೃತ್ತಾಂತವನ್ನು ಯೂಟ್ಯೂಬ್‌ಗಳಲ್ಲಿ ಸೃಷ್ಟಿಸಬೇಕು ಎಂದು ಹೇಳಿದ ತಲೆ ಯಾವುದು ಎಂಬುದೆಲ್ಲಾ ಎಸ್‌ಐಟಿ ತನಿಖೆಯಿಂದಷ್ಟೇ ಬೆಳಕಿಗೆ ಬರಬೇಕಿದೆ. ನೂರಾರು ಕೊಲೆಗಳು ನಡೆದಿವೆ ಎಂಬ ವಾದವನ್ನು ಪುಷ್ಟೀಕರಿಸಲು ಉತ್ಖನನ ಮಾಡಿದ್ದ ಸ್ಥಳಗಳಲ್ಲಿ ಕನಿಷ್ಠ 10 ಬುರುಡೆಯೂ ಸಿಗದಿರುವುದು ದೂರುದಾರರ ದುರುದ್ದೇಶಗಳನ್ನು ಬೆತ್ತಲು ಮಾಡಿದೆ. ಈ ನಡುವೆ, 2 ಸ್ಥಳಗಳಿಗೆ ಸೌಜನ್ಯ ತಾಯಿ ಕುಸುಮಾವತಿ ಸೋದರ ವಿಠಲ ಗೌಡರನ್ನು ಕರೆದೊಯ್ದ ಎಸ್‌ಐಟಿ, ಸ್ಥಳ ಮಹಜರು ಮಾಡಿದೆ. ಅಲ್ಲಿ ಹಲವಾರು ಬುರುಡೆ, ಕಳೇಬರ ಪತ್ತೆಯಾಗಿವೆ ಎಂದು ವಿಠಲರು ಮಾಧ್ಯಮ ಸಂದರ್ಶನದಲ್ಲಿ ಹೇಳಿದ್ದು, ಕೇಸಿಗೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ.

ಇರಲಿ, ಇಲ್ಲಿ ಕೇರಳದ ಮನಾಫ್ ಬಗ್ಗೆಯೂ ಹೇಳಬೇಕು. ಕರ್ನಾಟಕದ ಶಿರೂರು ಭೂಕುಸಿತ ಪ್ರಕರಣದಲ್ಲೂ ಆತ ಭಾರಿ ಸದ್ದು ಮಾಡಿದ್ದ. ಆತ ತನ್ನ ಲಾರಿಯು ಮಣ್ಣಿನ ಅಡಿಯಲ್ಲಿ ಹೂತುಹೋಗಿದೆ ಎಂದೆಲ್ಲಾ ಕಥೆ ಕಟ್ಟಿ, ಆ ಮೂಲಕ ಪೊಲೀಸರ ಮೇಲೆ ಒತ್ತಡ ಹೇರಿ, ಜಿಲ್ಲಾಡಳಿತವನ್ನೂ ದಾರಿ ತಪ್ಪಿಸಿದ್ದ. ತನ್ನ ಯೂಟ್ಯೂಬ್ ಚಾನೆಲ್‌ನಲ್ಲೂ 'ನನ್ನ ಲಾರಿ ಹೂತುಹೋಗಿದೆ, ಮಣ್ಣನ್ನು ಇವರು ಅಗೆಯುತ್ತಿಲ್ಲ' ಎಂದೆಲ್ಲಾ ಹೇಳಿದ್ದ. ಇದು ಜಿಲ್ಲಾಡಳಿತವನ್ನು ವಿಪರೀತ ಒತ್ತಡಕ್ಕೆ ಸಿಲುಕಿಸಿತ್ತು. ಆತನ ಲಾರಿ ಚಾಲಕ ಅರ್ಜುನ್ ಘಟನೆಯಲ್ಲಿ ಮೃತಪಟ್ಟಿದ್ದ ಮತ್ತು ಕೊನೆಯಲ್ಲಿ ಲಾರಿಯು ಪಕ್ಕದ ಹೊಳೆಯಲ್ಲಿ ಪತ್ತೆಯಾಗಿತ್ತು. ಅಲ್ಲಿಗೆ ಲಾರಿ ಬಗ್ಗೆ ಆತ

ಹೇಳಿದ್ದೆಲ್ಲಾ ಸುಳ್ಳು ಎನ್ನುವುದು ಬಯಲಾಗಿತ್ತು. ಮೃತ ಲಾರಿ ಚಾಲಕ ಅರ್ಜುನ್ ಹೆಸರಲ್ಲಿ ಹಣ ಸಂಗ್ರಹ ಮಾಡಿ, ನಂತರ ಅದನ್ನು ಕುಟುಂಬದವರಿಗೆ ನೀಡಿಲ್ಲ ಎಂಬ ಆಪಾದನೆಯೂ ಅವನ ಮೇಲಿದೆ. ಅರ್ಜುನ್ ಕುಟುಂಬದವರು ಮನಾಫ್ ಖಾತೆಗೆ ದುಡ್ಡು ಹಾಕಬೇಡಿ ಎಂದೂ ಕೇಳಿಕೊಂಡಿದ್ದರು. ಇದರಿಂದ ಸಿಟ್ಟಾಗಿದ್ದ ಮನಾಫ್, 'ಅರ್ಜುನ್ ಮನೆಯವರು ಸಂಘ ಪರಿವಾರದ ಪ್ರಭಾವದಲ್ಲಿದ್ದಾರೆ. ನಾನು ಮುಸ್ಲಿಂ ಎಂಬ ಕಾರಣಕ್ಕೆ ದೂರ ಮಾಡಿದ್ದಾರೆ' ಎಂದು ಆರೋಪ ಮಾಡಿದ್ದ.

ಧರ್ಮಸ್ಥಳ ಕೇಸಿಗೆ ಸಂಬಂಧಿಸಿ ಜಯಂತ್ ತಂಗಚ್ಚನ್ ಅನ್ನು ಭೇಟಿ ಮಾಡಿದ್ದ ಮನಾಫ್, ಸುಜಾತ ಭಟ್ ಪುತ್ರಿ ಅನನ್ಯಾ ಭಟ್ ಹತ್ಯೆಗೆ ನ್ಯಾಯ ಸಿಗಬೇಕು ಎಂಬ ಅಭಿಯಾನ ಶುರು ಮಾಡಿದ್ದ. 'ಧರ್ಮಸ್ಥಳ ಆಕ್ಷನ್ ಕಮಿಟಿ' ಎಂಬ ಸಮಿತಿ ರಚನೆ ಮಾಡಿ, ಆ ಮೂಲಕ ಕೇರಳದಲ್ಲಿ ಕಥಾನಕಗಳನ್ನು ಸೃಷ್ಟಿಸಿದ್ದ. ಒಟ್ಟಿನಲ್ಲಿ, ತಾನೊಬ್ಬ ಸಾಮಾಜಿಕ ಹೋರಾಟಗಾರ, ಹೀರೋ ಎಂದು ಬಿಂಬಿಸಿಕೊಳ್ಳುವುದು ಆತನ ಉದ್ದೇಶ ಎನ್ನುವುದು ಸ್ಪಷ್ಟ. ಅದನ್ನು ಈಡೇರಿಸಿಕೊಳ್ಳಲು ಯೂಟ್ಯೂಬ್ ಎಂಬ ಬ್ರಹ್ಮಾಸ್ತ್ರವೂ ಆತನ ಕೈಯಲ್ಲಿತ್ತು. ಧರ್ಮಸ್ಥಳ ಪ್ರಕರಣದಲ್ಲಿ ಮನಾಫ್ ಪಾತ್ರವನ್ನು ಪರಿಶೀಲಿಸುತ್ತಿರುವ ಎಸ್‌ಐಟಿ, ಆತನನ್ನು ಬೆಳ್ತಂಗಡಿಗೆ ಕರೆಸಿಕೊಂಡು ಹಲವು ಸುತ್ತಿನ ವಿಚಾರಣೆ ನಡೆಸಿದೆ. ಯೂಟ್ಯೂಬ್ ವಿಡಿಯೋಗಳನ್ನೂ ಅವಲೋಕಿಸುತ್ತಿದೆ. ಧರ್ಮಸ್ಥಳದಲ್ಲಿ ಅಸಹಜ ಸಾವುಗಳಾಗಿವೆ ಎಂಬ ವಿಷಯದಲ್ಲಿ ಧರ್ಮಸ್ಥಳದ ವಿರುದ್ಧ ಕಂಟೆಂಟ್ ರಚಿಸಲು ಆನ್‌ಲೈನ್ ಕಂಟೆಂಟ್‌ವೀರರಿಗೆ ಹಣ ನೀಡಲಾಗಿದೆ ಎಂದು 'ಗೋಲ್ಡನ್ ಕನ್ನಡಿಗ' ಎಂಬ ಯೂಟ್ಯೂಬ್ ಚಾನೆಲ್‌ನ ಸುಮಂತ್ ಗೌಡ ಹೇಳಿರುವುದು ಇಲ್ಲಿ ಉಲ್ಲೇಖಾರ್ಹ. ಈ ಪ್ರಚಾರ ಅಭಿಯಾನಕ್ಕೆ ಕಂಟೆಂಟ್ ಮಾಡಲು ನನಗೂ ಹಣದ ಆಫರ್ ನೀಡಲಾಗಿತ್ತು ಎಂಬುದಾಗಿ ಆತ ಹೇಳಿದ್ದಾನೆ.

ನಮ್ಮ ದೇಶದಲ್ಲಿ ಫೇಕ್ ನ್ಯೂಸ್ ಫ್ಯಾಕ್ಟರಿಗಳನ್ನು ಬಂದ್ ಮಾಡುವ ಕಠಿಣ ಕಾನೂನು ಎಷ್ಟರ ಮಟ್ಟಿಗೆ ಅಗತ್ಯ ಇದೆ ಎನ್ನುವುದಕ್ಕೆ ಬುರುಡೆ ಮತ್ತು ಸುಜಾತ ಭಟ್ ಕೇಸ್ ತಾಜಾ ಉದಾಹರಣೆ. ಮಾಧ್ಯಮ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ದಾಖಲೆ ಸಮೇತ ಸತ್ಯ ಹೇಳುವುದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ, ದುರುದ್ದೇಶದಿಂದ ವ್ಯೂಸ್, ಲೈಕ್‌ಗಳನ್ನು ಹೆಚ್ಚಿಸಿಕೊಳ್ಳಲು, ಆ ಮೂಲಕ ದುಡ್ಡು ಮಾಡಲು, ಕಾಲ್ಪನಿಕ ಕಂಟೆಂಟ್ ಸೃಷ್ಟಿಸುವವರ ಹೆಡೆಮುರಿ ಕಟ್ಟುವ ಕಾನೂನು ಸಾಮಾಜಿಕ ಆರೋಗ್ಯ ಕಾಪಾಡಲು ಅತ್ಯವಶ್ಯಕ.

ಈಚಿನ ವರ್ಷಗಳಲ್ಲಿ ನಕಲಿ ಸುದ್ದಿಗಳ ಹಾವಳಿ ಹೆಚ್ಚುತ್ತಿದ್ದುದರಿಂದಲೇ ಕೇಂದ್ರ ಸರಕಾರವು, ಮಾಹಿತಿ ತಂತ್ರಜ್ಞಾನ (Intermediary Guidelines and Digital Media Ethics Code) ನಿಯಮಗಳು, 2021 (ಐಟಿ ನಿಯಮಗಳು) ತಿದ್ದುಪಡಿ ಕಾನೂನನ್ನು 2023ರಲ್ಲಿ ಪರಿಚಯಿಸಿತ್ತು. ಈ ಮೂಲಕ ಸುಳ್ಳು ಮತ್ತು ದಾರಿತಪ್ಪಿಸುವ ಮಾಹಿತಿಯನ್ನು ಗುರುತಿಸಲು ಕೇಂದ್ರ ಸರಕಾರ ನೇಮಿಸಿದ ಫ್ಯಾಕ್ಟ್ ಚೆಕಿಂಗ್ ಯೂನಿಟ್‌ಗಳಿಗೆ ಅಧಿಕಾರ ನೀಡಲಾಗಿತ್ತು. ಆದರೆ ಈ ತಿದ್ದುಪಡಿ ಕಾನೂನನ್ನು ಬಾಂಬೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಅರ್ಜಿದಾರರ ಪರ ತೀರ್ಪು ನೀಡಿದ್ದ ಹೈಕೋರ್ಟ್, ''ಈ ಕಾನೂನು ಸಂವಿಧಾನದ 14 ಮತ್ತು 19ನೇ ವಿಧಿಗಳ ಅಡಿಯಲ್ಲಿ ಸಮಾನತೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಹಾಗಾಗಿ ಕಾನೂನು ಅಸಾಂವಿಧಾನಿಕ'' ಎಂದು ತೀರ್ಪು ನೀಡಿತು. ಹೀಗಾಗಿ, ಇದಕ್ಕೀಗ ಕೇಂದ್ರ ಸರಕಾರ ಸುಪ್ರೀಂಕೋರ್ಟ್‌ನಿಂದಲೇ ಪರಿಹಾರ ಕಂಡುಕೊಳ್ಳಬೇಕಿದೆ. ಈ ನಡುವೆ, ಕರ್ನಾಟಕ ಸರಕಾರ ಕೂಡ ಸುಳ್ಳು ಸುದ್ದಿ ತಡೆ ವಿಧೇಯಕ ಮಂಡಿಸಲು ತಯಾರಿ ನಡೆಸಿದೆ. ಯೂಟ್ಯೂಬ್, ಫೇಸ್‌ಬುಕ್‌ಗಳಲ್ಲಿ ವಿಡಿಯೋ ಹಂಚಿಕೊಂಡು, ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬಿಸುವ ಸುಳ್ಳುಗಳನ್ನು ಇದು ಎಷ್ಟರಮಟ್ಟಿಗೆ ನಿಯಂತ್ರಿಸಲಿದೆ ಮತ್ತು ಸುಳ್ಳು ಸುದ್ದಿಯನ್ನು ಗುರುತಿಸುವ ಇದರ ಮಾನದಂಡ ಯಾವುದು ಎನ್ನುವುದನ್ನೆಲ್ಲಾ ಕಾದುನೋಡಬೇಕಿದೆ.

(ಲೇಖಕರು ಹಿರಿಯ ಪತ್ರಕರ್ತರು)

## ಭಟ್ಟರ್ ಸ್ಕಾಚ್

- **ಶ್ರೀದೇವಿ ಚಾಳೇಕೊಪ್ಪೂರು, (ಇಮೇಲ್ ಮೂಲಕ)**
ಭಟ್ರೇ, ಮನುಷ್ಯ ಅಲ್ಪತೃಪ್ತನಾಗಿದ್ದರೆ?
– **ಚಾಕೊಲೇಟ್ ಅಥವಾ ಐಸ್‌ಕ್ರೀಮ್ ತಿಂದು ಮಲಗಿಬಿಡುತ್ತಿದ್ದ!**

- **ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ಹಾಸ್ಟೆಲ್ ಹುಡುಗಿಯರು ಸದಾ ಎದ್ದಿರುತ್ತಾರಲ್ಲ?
– **ಹೂಂ.. ಅವರ ವಾಟ್ಸಾಪ್ ನೋಡಿದ್ರೆ ಎಲ್ಲರೂ ಆನ್‌ಲೈನ್‌ನಲ್ಲೆ ಇರ್ತಾರೆ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕೆಲವರು ಮಾತ್ರ ವಿಸರ್ಜನೆ ಮಾಡುವಾಗ ಹೂಸುತ್ತಾರಲ್ಲ?
– **ಮಳೆ ಬರುವಾಗ ಗುಡುಗು ಬರುವುದು ಸಹಜ ತಾನೇ?!**

- **ಜಾಫ್ರು ಜಹಗೀರದಾರ್, ಮೈಸೂರು**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಮನೆ ಅಂದ್ರೆ ಯಾವುದು?
– **ಟಾಯ್ಲೆಟ್ ಸೀಟ್ ಮೇಲೆ ಆರಾಮವಾಗಿ ಕುಳಿತುಕೊಳ್ಳುವ ಫೀಲಿಂಗ್ ಸಿಗುತ್ತಲ್ಲ, ಅದೇ ಮನೆ!**

- **ವಿಜಯ್ ಕಾಂಬ್ಳೆ, ಶಿವಮೊಗ್ಗ**
ಭಟ್ರೇ, 'ಸ್ಲೀಪ್ ಡಿವೋರ್ಸ್' ಅಂತ ವಿಮಾನದಲ್ಲಿ ಆಗೋಲ್ಲ ಮಾತ್ರಾಲ್ವಾ?
– **ಟಾಯ್ಲೆಟ್‌ನಲ್ಲಿ ಕುಳಿತವರಿಗೆ ಹಾಗೆ ಹೇಳಬೇಡಿ!**

- **ಪೂರ್ಣಯ್ಯ, ಮೈಸೂರು**
ಭಟ್ರೇ, ನಾನು ತಾಳಿ ಕಟ್ಟುವಾಗ ಮೂರೇ ಗಂಟು ಹಾಕಿದೆನೆಯಲ್ಲ?
– **ಹೆಚ್ಚಿನ ಗಂಟು ಹಾಕಿದ್ರೆ ಪುರೋಹಿತರ ಗಂಟೇನು ಹೋಗುತ್ತಿತ್ತು?**

- **ರಾಘಣ್ಣ, ಮೈಸೂರು**
ಭಟ್ರೇ, ಶ್ರೀರಾಮಚಂದ್ರನ ಕಾಲದಲ್ಲಿ ಸೀತಾ ಮಾತೆಯನ್ನು ಸಂಶಯಿಸಿದವರು ನರೇಂದ್ರನ ಕಾಲದಲ್ಲಿ ಏನು ಮಾಡುತ್ತಿದ್ದರು?
– **ಡೋಂಟ್ ವರಿ.. ಇವಿಎಂ ಮಷೀನ್ ಅನ್ನು ಸಂಶಯಿಸುತ್ತಿದ್ದಾರಲ್ಲ!?**

- **ರಘು, ಗುಬ್ಬಿ**
ಭಟ್ರೇ, ಮಾಡ್ಬಿಟ್ಟ, ಅಗ್ಬಿಟ್ಟ, ಹೋಗ್ಬಿಟ್ಟ, ಹೇಳ್ಬಿಟ್ಟ ಅಂತಾರಲ್ಲ.. ಯಾಕೆ?
– **ಅದು 'ಹುಟ್ಟಿ'ನ ಸಮಸ್ಯೆ!**

# ಕನಸು ಕಾಣಲು ಕಾರಣ: ಆಯುರ್ವೇದದ ಕಣ್ಣುಗಳಲ್ಲಿ

**ಆಯುರ್ವೇದವು ಕನಸುಗಳನ್ನು ವಿಭಿನ್ನವಾಗಿ ಅರ್ಥೈಸುತ್ತದೆ. ದೇಹದ ಮೂರು ದೋಷಗಳಾದ ವಾತ, ಪಿತ್ತ, ಕಫಗಳ ಪ್ರಮಾಣವು ಕನಸುಗಳ ಸ್ವರೂಪವನ್ನು ಬದಲಿಸುತ್ತವೆ. ವಾತ ದೋಷದ ಪ್ರಾಬಲ್ಯವಿದ್ದಾಗ ಓಡುವ, ಹಾರಾಡುವ, ಕುಣಿಯುವ, ಜಿಗಿಯುವ, ಕೂಗುವ ಕನಸುಗಳು ಬೀಳುತ್ತವೆ. ಪಿತ್ತ ಪ್ರಾಬಲ್ಯವಿದ್ದಾಗ ಬೆಂಕಿ, ಯುದ್ಧ, ಬಿಸಿಲು, ಕೋಪ ಅಥವಾ ತೀಕ್ಷ್ಣ ದೃಶ್ಯಗಳ ಕನಸುಗಳನ್ನು ನೋಡುತ್ತಾರೆ.**

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಒಮ್ಮೆ ಹಳ್ಳಿ ಬದಿಯ ಚಿಕ್ಕ ಮನೆಯೊಂದರಲ್ಲಿ ವಯೋವೃದ್ಧನೊಬ್ಬ ವಾಸಿಸುತ್ತಿದ್ದ. ಅವನ ಜೀವನ ಸರಳವಾಗಿತ್ತು– ಬೆಳಗ್ಗೆ ಹೊಲಕ್ಕೆ ಹೋಗುವುದು, ಸಂಜೆ ಕೆರೆಯ ತೀರದಲ್ಲಿ ಕುಳಿತು ಜಪ ಮಾಡುವುದು. ಆದರೆ ಅವನಿಗೆ ಪ್ರತಿ ರಾತ್ರಿಯೂ ವಿಚಿತ್ರ ಕನಸುಗಳು. ಒಮ್ಮೆ ಹಸಿರು ತೋಟದಲ್ಲಿ ಹಕ್ಕಿಗಳೊಂದಿಗೆ ಮಾತನಾಡುತ್ತಿದ ಹಾಗೆ, ಮತ್ತೊಮ್ಮೆ ಕತ್ತಲೆಯ ಅರಣ್ಯದಲ್ಲಿ ದಾರಿ ತಪ್ಪಿತ್ತಿದ್ದ ಹಾಗೆ, ಕೆಲವೊಮ್ಮೆ ನದಿಯ ತೀರದಲ್ಲಿ ಹಸಿದ ಹುಲಿಯು ಹಿಂದೆ ಓಡುತ್ತಿದ್ದ ಹಾಗೆ. ಬೆಳಗ್ಗೆ ಎದ್ದಾಗ ಅವನ ಮನಸ್ಸು ಗೊಂದಲದಿಂದ ತುಂಬಿ, ಈ ಕನಸುಗಳ ಅರ್ಥವೇನು? ಇವು ಯಾಕೆ ನನ್ನನ್ನು ಕಾಡುತ್ತಿವೆ? ಎಂದು ಆತನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಆದರೆ ಸಮಾಧಾನಕರವಾದ ಅರ್ಥ ಸಿಗಲಿಲ್ಲ.

ಒಂದು ದಿನ ಹಳ್ಳಿಗೆ ಬಂದ ಆಯುರ್ವೇದ ವೈದ್ಯರು ಈ ವೃದ್ಧನ ಮಾತುಗಳನ್ನು ಶ್ರದ್ಧೆಯಿಂದ ಕೇಳಿ ಹೀಗೆಂದರು: ''ಕನಸುಗಳು ನಮ್ಮ ಅಂತರಂಗದ ದರ್ಪಣ. ಕನಸು ಎಂಬುದು ಕೆಲವೊಮ್ಮೆ, ದೇಹದಲ್ಲಿ ನಡೆಯುತ್ತಿರುವ ಅಸಮತೋಲನದ ಸೂಚನೆಯೂ ಆಗಿರಬಹುದು, ಮತ್ತೊಮ್ಮೆ ಅದು ಶಾಂತಿ ಮತ್ತು ಆರೋಗ್ಯದ ಸಂಕೇತವೂ ಆಗಿರಬಹುದು. ನೀನು ಹುಲಿಯ ಹಿಂದೆ ಓಡುವ ಕನಸು ಕಾಣುವುದು ನಿನ್ನ ಮನಸ್ಸಿನ ಭಯದ ಪ್ರತಿರೂಪ. ನದಿಯ ಕನಸು ನಿನ್ನ ಜೀವನದ ಹರಿವಿನ ಸೂಚನೆ. ಹಸಿರು ತೋಟದ ಕನಸು ನಿನ್ನ ಹೃದಯದ ಶಾಂತಿಯನ್ನು ತೋರಿಸುತ್ತದೆ. ದೇಹ, ಮನಸ್ಸು, ಇಂದ್ರಿಯ– ಈ ಮೂರೂ ಸಮತೋಲನದಲ್ಲಿದ್ದಾಗ ಕನಸುಗಳೂ ಸುಂದರವಾಗುತ್ತವೆ''.

ಸ್ನೇಹಿತರೆ, ಆಯುರ್ವೇದದಲ್ಲಿ 'ಕನಸು' ಎಂಬ ವಿಷಯವನ್ನು ನಮ್ಮ ಆಚಾರ್ಯರು ಸವಿಸ್ತಾರವಾಗಿ ತಿಳಿಸಿಕೊಟ್ಟಿದ್ದಾರೆ. ಕಾರಣ, ನಮ್ಮ ಅಂತರ್ಯದ ಆರೋಗ್ಯಕ್ಕೂ ಮತ್ತು ಕನಸುಗಳಿಗೂ ನೇರವಾದ ಸಂಬಂಧವಿದೆ. ಅದರಲ್ಲೂ ವಿಶೇಷವಾಗಿ ನಮ್ಮ ಹೃದಯ, ಮನಸ್ಸು, ನಿದ್ರೆ ಮತ್ತು ಕನಸು– ಇವುಗಳಿಗೆ ಬಿಡಿಸಲಾರದ ನಂಟು. ಆಯುರ್ವೇದವು ಉಲ್ಲೇಖಿಸುವ ಪ್ರಕಾರ ಗರ್ಭಾವಸ್ಥೆಯಲ್ಲಿ ಹಿಡಿದು ನಾವು ಸಾಯುವವರೆಗೆ ನಮಗಾಗಿ ದುಡಿದು, ಮಿಡಿದು, ನಮ್ಮನ್ನು ರಕ್ಷಿಸುವ ಅಂಗವೆಂದರೆ ಅದು ಹೃದಯ. ಈ ಹೃದಯವೇ ಮನಸ್ಸಿನ ವಾಸಸ್ಥಾನ. ಆದ್ದರಿಂದಲೇ ಮನಸ್ಸಿಗೆ ನೋವಾದರೆ ಅದರ ನೇರ ಪರಿಣಾಮ ಹೃದಯದ ಮೇಲೆ. ಅಂತೆಯೇ, ನಮ್ಮ ಭಾವನೆಗಳು ಮನಸ್ಸಿನ ಬಹುಮುಖ್ಯ ಅಂಶ. ಆದ್ದರಿಂದ, ಭಾವನೆಗಳ ಮೂಲಸ್ಥಾನ ನಮ್ಮ ಹೃದಯವೇ. ಹೃದಯವು ಮನಸ್ಸಿನ ವಾಸಸ್ಥಾನ. ಇನ್ನು ಮನಸ್ಸಿನ ಕಾರ್ಯಕ್ಷೇತ್ರದ ಬಗ್ಗೆ ಹೇಳುವುದಾದರೆ, ಅದು ನಮ್ಮ ಸಂಪೂರ್ಣ ಶರೀರ. ಹಗಲಿನ ಸಮಯದಲ್ಲಿ ಮನಸ್ಸು ಮತ್ತು ಹೃದಯ ಎರಡೂ ಒಂದಲ್ಲ ಒಂದು ರೀತಿಯ ಕೆಲಸದಲ್ಲಿ ತೊಡಗಿಕೊಂಡಿರುತ್ತದೆ. ಇನ್ನು ರಾತ್ರಿಯ ಸಮಯದಲ್ಲಿ ಕತ್ತಲೆ ಆವರಿಸಿದಂತೆ ಹೃದಯವು ತನ್ನ ಕಾರ್ಯವನ್ನು ಕಡಿಮೆ ಮಾಡುತ್ತದೆ. ಅಂತೆಯೇ ಮನಸ್ಸನ್ನು ಒಂದು ರೀತಿಯ ಜಡತ್ವ ಆವರಿಸುತ್ತದೆ. ನಮ್ಮ ಎಲ್ಲಾ ದೈಹಿಕ ಕ್ರಿಯೆಗಳು ನಿಧಾನವಾಗುತ್ತವೆ. ರಾತ್ರಿಯಲ್ಲಿ ಹೃದಯದ ಚಟುವಟಿಕೆ ಕಡಿಮೆಯಾಗುವುದರಿಂದ ಹೃದಯದ ಅಧೀನದಲ್ಲಿರುವ ಮನಸ್ಸಿನ ಕೆಲಸವೂ ಕುಗ್ಗುತ್ತದೆ. ಆದ್ದರಿಂದ, ಮನಸ್ಸಿನ ಹತೋಟಿಯಲ್ಲಿರುವ ಐದು ಇಂದ್ರಿಯಗಳು– ಅಂದರೆ (ಶಬ್ದ)

ಕಿವಿ, (ಸ್ಪರ್ಶ) ಚರ್ಮ, (ರೂಪ) ಕಣ್ಣು, (ರಸ) ನಾಲಿಗೆ ಮತ್ತು (ಗಂಧ) ಮೂಗು– ಹೀಗೆ ಅವುಗಳ ಕೆಲಸವು ಕಡಿತವಾಗುತ್ತದೆ. ಇದರಿಂದ ನಿದ್ರಿಸುವಾಗ ನಮಗೆ ಇಂದ್ರಿಯಗಳ ಮೂಲಕ ಯಾವುದೇ ಅನುಭವ ಆಗುವುದಿಲ್ಲ.

ವಾಸ್ತವವಾಗಿ ನಿದ್ರೆಯು ಅನುಭವಶೂನ್ಯ ಸ್ಥಿತಿಯಾಗಬೇಕು. ಹೀಗೆ ಹೆಚ್ಚು ಸ್ವಪ್ನಗಳಿಲ್ಲದ ಯಾವುದೇ ರೀತಿಯ ಅನುಭವಗಳಿಲ್ಲದ ನಿದ್ದೆಯು ಆರೋಗ್ಯಕರವಾದ ನಿದ್ರೆ ಎನಿಸುತ್ತದೆ. ಇಂಥ ನಿದ್ರೆಯಿಂದಲೇ ನಮ್ಮ ಶರೀರ, ಇಂದ್ರಿಯ ಮತ್ತು ಮನಸ್ಸುಗಳಿಗೆ ಪೋಷಣೆ ದೊರಕುವುದು. ಇಡೀ ದಿನ ನಮ್ಮಲ್ಲಾದ ಏರುಪೇರುಗಳು ಶಮನಗೊಂಡು ನಮ್ಮನ್ನು ಮುಂದಿನ ದಿನದ ಕೆಲಸಕ್ಕೆ ಸಿದ್ಧಮಾಡುತ್ತವೆ. ಇಂಥ ಗಾಢವಾದ ನಿದ್ರಾಸ್ಥಿತಿಯನ್ನು ನಾವು ಅನುಭವಿಸಿದಾಗ ನಮ್ಮಲ್ಲಿ ಚೈತನ್ಯ ಉತ್ಸಾಹಗಳು ತುಂಬಿಕೊಂಡು ಇಡೀ ದಿನ ಲವಲವಿಕೆಯಿಂದ ಇರಲು ಸಾಧ್ಯವಾಗುತ್ತದೆ. ಆದರೆ ಮಲಗುವ ಮುನ್ನ, ಕೊನೆಯ ಕ್ಷಣದವರೆಗೂ ನಾವು ನಮ್ಮ ಮನಸ್ಸನ್ನು ಬಾಹ್ಯ ಚಟುವಟಿಕೆಗಳಿಂದ ಬಿಡುವು ಮಾಡದಿದ್ದರೆ ಇಂಥ ಉತ್ತಮ ನಿದ್ದೆಯನ್ನು ಅನುಭವಿಸಲು ಸಾಧ್ಯವಿಲ್ಲ. ಮಲಗುವವರೆಗೂ ಮೊಬೈಲ್, ಮನೆ ಕೆಲಸ, ಟಿವಿ ಸೀರಿಯಲ್, ಆಫೀಸ್ ಕೆಲಸ, ಸಿನಿಮಾ ಹಾಡು, ಬೇರೆ ಬೇರೆ ರೀತಿಯ ಚಿಂತನೆಗಳು– ಹೀಗೆ ಮನಸ್ಸು ಚಟುವಟಿಕೆಯಲ್ಲೇ ಇದ್ದರೆ ಆಗ ಮನಸ್ಸು ರಜಸ್ಸಿನಿಂದ ಉತ್ತೇಜನಗೊಳ್ಳುತ್ತದೆ. ಇಂಥ ಮಾನಸಿಕ ಸ್ಥಿತಿಯಲ್ಲಿ ವ್ಯಕ್ತಿಯು ಮಲಗಿದಾಗ ಎಲ್ಲಾ ವಿವಿಧ ಅನುಭವಗಳನ್ನು ಮನಸ್ಸು ಆ ವ್ಯಕ್ತಿಯ ಅನುಭವಕ್ಕೆ ಪುನಃ ರವಾನಿಸುತ್ತದೆ. ಕನಸಿನಲ್ಲಿ ನಮಗೆ ಸಿಗುವ ಅನುಭವಗಳು ಮಲಗುವ ಮುನ್ನ ಆಗುವ ಅನುಭವಗಳಿರಬಹುದು, ಅಥವಾ ಆ ದಿನದ ಘಟನೆಗಳ ಪ್ರಭಾವವಿರಬಹುದು, ನಮ್ಮ ಜೀವನದ ಹಿಂದೆ ಯಾವಾಗಲೋ ಸಿಕ್ಕಿದ ಅನುಭವವಾಗಿರಬಹುದು. ಒಟ್ಟಾರೆ, ಇಂಥ ಅನುಭವಗಳು ಒಬ್ಬ ವ್ಯಕ್ತಿಗೆ ಆಯಾ ಇಂದ್ರಿಯಗಳಿಂದ ಸಿಗುವುದರಿಂದ ಕನಸು ನಿಜವೇನೋ ಎಂಬಂತೆ ಭಾಸವಾಗುತ್ತದೆ. ಆದ್ದರಿಂದ ಕನಸುಗಳಿಲ್ಲದೆ ಗಾಢ ನಿದ್ರೆಗೆ ಜಾರಬೇಕಾದರೆ ನಾವು ಮಲಗುವ ಮುನ್ನ ಶಾಂತವಾಗಿ, ಒಳಮುಖಿಗೊಂಡು, ಬಾಹ್ಯ ಚಟುವಟಿಕೆಗಳನ್ನು ತ್ಯಜಿಸಿ, ಮನಸ್ಸನ್ನು ಖಾಲಿ ಮಾಡಿಕೊಂಡು, ತಿಳಿನೀರಿನಂಥ ಮನೋಸ್ಥಿತಿಯಲ್ಲಿ ಮಲಗುವ ಪ್ರಯತ್ನ ಮಾಡಿದರೆ ಆಗ ನಮಗೆ ಕನಸುಗಳು ಬಾಧಿಸುವುದಿಲ್ಲ. ಗಾಢನಿದ್ರೆಯಲ್ಲಿ ಕನಸುಗಳು ಶೂನ್ಯ. ಆರೋಗ್ಯಕರ ನಿದ್ರೆ ಎಂದರೆ ಕನಸುಗಳಿಲ್ಲದ ಗಾಢ ಮತ್ತು ದೀರ್ಘ ನಿದ್ರೆ.

ಆಯುರ್ವೇದವು ಕನಸುಗಳನ್ನು ಬೇರೆ ಬೇರೆ ರೀತಿಯಾಗಿ ಅರ್ಥೈಸುತ್ತದೆ. ದೇಹದ ಮೂರು ದೋಷಗಳು– ವಾತ, ಪಿತ್ತ, ಕಫ; ದೇಹದಲ್ಲಿನ ಇವುಗಳ ಪ್ರಮಾಣವು ಕನಸುಗಳ ಸ್ವರೂಪವನ್ನು ಬದಲಿಸುತ್ತವೆ. ವಾತ ದೋಷದ ಪ್ರಾಬಲ್ಯವಿದ್ದಾಗ ಓಡುವ, ಹಾರಾಡುವ, ಕುಣಿಯುವ, ಜಿಗಿಯುವ, ಕೂಗುವ ಚಲನೆಯುಕ್ತವಾದ ಕನಸುಗಳು ಬೀಳುತ್ತವೆ. ಪಿತ್ತ ಪ್ರಾಬಲ್ಯವಿದ್ದಾಗ ಬೆಂಕಿ, ಯುದ್ಧ, ಬಿಸಿಲು, ಕೋಪ ಅಥವಾ ತೀಕ್ಷ್ಣ ದೃಶ್ಯಗಳ ಕನಸುಗಳನ್ನು ನೋಡುತ್ತಾರೆ. ಕಫದ ಪ್ರಾಬಲ್ಯವು ನೀರು, ಹಸಿರು ಅರಣ್ಯ, ಕಮಲ, ಹಂಸ,ಬಾತುಕೋಳಿ ಮತ್ತು ಶಾಂತ ಸ್ಥಳದ ಕನಸುಗಳನ್ನು ನೀಡುತ್ತದೆ.

ಆದರೆ ದೇಹವು ಆರೋಗ್ಯವಾಗಿದ್ದಾಗ, ಸುಸ್ಥಿತಿಯಲ್ಲಿದ್ದಾಗ ಕಾಡುವ ಕನಸುಗಳು ಆ ವ್ಯಕ್ತಿಯ ಪ್ರಕೃತಿಯನ್ನು ಸೂಚಿಸುತ್ತವೆ. ವಾತ ಪ್ರಕೃತಿಯವರು ಕನಸಿನಲ್ಲಿ ಸಾಮಾನ್ಯವಾಗಿ ಹಾರಾಡುವಂತೆ ವಿಹರಿಸುತ್ತಾರೆ. ಪಿತ್ತ ಪ್ರಕೃತಿಯವರ ಕನಸು ಹೆಚ್ಚಾಗಿ ಭಯಂಕರವಾಗಿರುತ್ತದೆ. ಕಫ ಪ್ರಕೃತಿಯ ವ್ಯಕ್ತಿಯ ಕನಸುಗಳು ಸುಮಧುರ ಮತ್ತು ಪ್ರಶಾಂತವಾಗಿರುತ್ತವೆ. ಆದರೆ ರೋಗಕಾರಕ ದೋಷಗಳಿಂದ ಉಂಟಾದ ಕನಸುಗಳು ರೋಗಸೂಚಕ.

ಆಯುರ್ವೇದವು ಕನಸುಗಳನ್ನು ಇನ್ನೊಂದು ರೀತಿಯಾಗಿ ವಿಂಗಡಿಸುತ್ತದೆ:

1. ದೃಷ್ಟ: ಜಾಗೃತಾವಸ್ಥೆಯಲ್ಲಿ ಯಾವಾಗಲೋ ಕಂಡದ್ದೇ ಕನಸಿನಲ್ಲಿ ಕಾಣಿಸುವುದು. ಉದಾಹರಣೆಗೆ, ಹಗಲು ಹೊತ್ತಿನಲ್ಲಿ ಕಂಡ ಹಕ್ಕಿ, ರಾತ್ರಿ ಕನಸಿನಲ್ಲಿ ಕಾಣುವುದು.
2. ಶ್ರುತ: ಹಿಂದೆ ಕೇಳಿದ ಸಂಗತಿಗಳು ಕನಸಿನಲ್ಲಿ ವ್ಯಕ್ತವಾಗುವುದು. ಉದಾಹರಣೆಗೆ, ಯಾರಾದರೂ ಒಂದು ಕಥೆ ಹೇಳಿದರೆ, ಅದು ರಾತ್ರಿ ಕನಸಿನಲ್ಲಿ ರೂಪ ಪಡೆಯುವುದು.
3. ಅನುಭೂತ: ಉಳಿದ ಇಂದ್ರಿಯಗಳಾದ ರುಚಿ, ವಾಸನೆ, ಸ್ಪರ್ಶೇಂದ್ರಿಯಗಳಿಂದ ನೇರವಾಗಿ ಅನುಭವಿಸಿದ ವಿಷಯಗಳು ಅಥವಾ ಜೀವನದ ಯಾವುದೋ ಘಟನೆ, ಹಿಂದಿನ ಜನುಮದ ಅನುಭವಗಳು ಕನಸಿನಲ್ಲಿ ಪುನಃ ಕಾಣಿಸಿಕೊಳ್ಳುವುದು. ಉದಾಹರಣೆಗೆ, ದಿನದ ಹೊತ್ತಿನಲ್ಲಿ ಹೊಲದಲ್ಲಿ ಕೆಲಸ ಮಾಡಿದ ಅನುಭವ, ರಾತ್ರಿ ಕನಸಿನಲ್ಲಿ ಮತ್ತೆ ನಡೆಯುವುದು.
4. ಪ್ರಾರ್ಥಿತ: ಮನಸ್ಸಿನ ಆಕಾಂಕ್ಷೆ, ಬೇಡಿಕೆ ಅಥವಾ ಬಯಕೆಗಳಿಂದ ಹುಟ್ಟುವ ಕನಸುಗಳು. ಉದಾಹರಣೆಗೆ, ಸಂಪತ್ತು ಬಯಸುವವನು ಧನದ ಕನಸು ಕಾಣುವುದು.
5. ಕಲ್ಪಿತ: ಮನಸ್ಸಿನಲ್ಲಿ ಹುಟ್ಟುವ ಕಲ್ಪನೆಗಳಿಂದ ಅಥವಾ ಗಾಢವಾದ ಚಿಂತನೆಗಳಿಂದ ಬಂದ ಕನಸುಗಳು. ಉದಾಹರಣೆಗೆ, ಹಾರುವ ಕನಸು, ಅಸಾಧ್ಯವಾದ ಘಟನೆಗಳ ಕನಸು.
6. ಭಾವಿಕ: ಮುನ್ಸೂಚನೆ ಅಥವಾ ಭವಿಷ್ಯದ ಸೂಚನೆ ನೀಡುವ ಕನಸುಗಳು. ಉದಾಹರಣೆಗೆ, ಅನಾರೋಗ್ಯ ಬರಬಹುದೆಂಬ ಮುನ್ನೋಟ ಅಥವಾ ಶುಭಕಾರ್ಯಕ್ಕೆ ಸಂಕೇತ ನೀಡುವ ಕನಸು.
7. ದೋಷಜ: ಆಗಲೇ ಹೇಳಿದ ಹಾಗೆ ದೇಹದ ದೋಷಗಳ (ವಾತ, ಪಿತ್ತ, ಕಫ) ಅಸಮತೋಲನದಿಂದ ಉಂಟಾಗುವ ಕನಸುಗಳು. ಇದು ಅನಾರೋಗ್ಯ ಸೂಚಕ ಮತ್ತು ದೋಷಜನಿತವಾದದ್ದು.

**ಕನಸುಗಳಿಗೆ ಫಲವಿದೆಯೇ? ಅರ್ಥವಿದೆಯೇ?**

- ದೃಷ್ಟ, ಶ್ರುತ, ಅನುಭೂತ, ಪ್ರಾರ್ಥಿತ, ಕಲ್ಪಿತ ಇಂಥ ಕನಸುಗಳಿಗೆ ಯಾವುದೇ ವಿಶೇಷ ಫಲವಿಲ್ಲ; ಅವು ಕೇವಲ ಮನಸ್ಸಿನ ಕಲ್ಪನೆಗಳು.
- ಹಗಲು ಹೊತ್ತಿನಲ್ಲಿ ಕಂಡ ಕನಸುಗಳನ್ನು ಸಾಮಾನ್ಯವಾಗಿ ಫಲಪ್ರದವೆಂದು ಪರಿಗಣಿಸುವುದಿಲ್ಲ.
- ರಾತ್ರಿಯಲ್ಲಿ ಕಂಡ ಕನಸುಗಳು ಅತಿ ಉದ್ದವಾದವು, ಅತಿ ಚಿಕ್ಕದಾದವು, ಅಥವಾ ನಿದ್ರೆಯ ಮಧ್ಯದಲ್ಲಿ ಕಂಡವು– ಇವುಗಳಿಗೆ ವಿಶೇಷ ಅರ್ಥವಿಲ್ಲ, ಫಲವಿಲ್ಲ.
- ಆದರೆ ರಾತ್ರಿಯ ನಿದ್ರೆಯ ಅಂತ್ಯದ ವೇಳೆ ಕಾಣುವ ಕನಸುಗಳು ಸಾಮಾನ್ಯವಾಗಿ ನಿಜವಾಗುವ ಸ್ವಭಾವ ಹೊಂದುತ್ತವೆ.
- ಕನಸು ಕಂಡ ನಂತರ ನಿದ್ರೆಯಿಂದ ಎದ್ದಿದ್ದರೆ, ಆ ಕನಸು ಹೆಚ್ಚು ದೃಢವಾಗಿ ಫಲಿಸುವ ಸಾಧ್ಯತೆ ಇರುತ್ತದೆ.
- ಶುಭ ಕನಸು ಬೆಳಗಿನ ಹೊತ್ತಿನಲ್ಲಿ, ಹಿತವಾದ, ಸಾತ್ವಿಕ ಮನಸ್ಥಿತಿಯಲ್ಲಿ ಕಂಡರೆ, ಅವು ಶುಭಫಲಗಳನ್ನು ನೀಡುವ ಸಾಧ್ಯತೆ ಹೆಚ್ಚು.

ಸ್ನೇಹಿತರೆ, ಕನಸುಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ, ಆದರೆ ಅವುಗಳ ಸ್ವರೂಪವನ್ನು ಸುಧಾರಿಸಲು ಜೀವನಶೈಲಿಯ ಬದಲಾವಣೆ ಅಗತ್ಯ. ಅವೆಂದರೆ–

- **ನಿದ್ರೆಯ ಶಿಸ್ತಿನ ಪ್ರಾಮುಖ್ಯ:** ಸರಿಯಾದ ಸಮಯಕ್ಕೆ ರಾತ್ರಿ ಮಲಗುವುದು, ಪ್ರಶಾಂತ ಮನಃಸ್ಥಿತಿಯಲ್ಲಿ ಮಲಗುವುದು.
- **ಆಹಾರ ಮತ್ತು ದಿನಚರ್ಯೆ:** ತೀವ್ರ ಉಪ್ಪು, ಹುಳಿ, ಮಸಾಲೆಯ ಆಹಾರವನ್ನು ಹೆಚ್ಚು ತಿಂದರೆ ಅಶಾಂತ ಕನಸುಗಳು ಬರುತ್ತವೆ. ಸಾತ್ವಿಕ ಆಹಾರವು ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ
- **ಧ್ಯಾನ ಮತ್ತು ಪ್ರಾಣಾಯಾಮ:** ಮನಸ್ಸಿನ ಸಮತೋಲನವು ಶುಭ ಕನಸುಗಳಿಗೆ ದಾರಿ ಮಾಡಿಕೊಡುತ್ತದೆ.

ಕನಸುಗಳು ನಮ್ಮ ಜೀವನದ ಅಂತರಂಗದ ನುಡಿಗಳು. ಅವು ಕೇವಲ ನಿದ್ರೆಯಲ್ಲಿನ ಕಲ್ಪನೆಗಳಲ್ಲದೆ, ದೇಹದ ದೋಷಗಳ, ಮನಸ್ಸಿನ ಭಾವನೆಗಳ ಮತ್ತು ಆತ್ಮದ ಆಳವಾದ ಸ್ಥಿತಿಯ ಪ್ರತಿಬಿಂಬಗಳಾಗಿವೆ. ಆಯುರ್ವೇದವು ಕನಸುಗಳನ್ನು ಆರೋಗ್ಯದ ದರ್ಶನಗಳೆಂದು ನೋಡುತ್ತದೆ– ಅವು ಎಚ್ಚರಿಕೆಯ ಸಂಕೇತವಾಗಬಹುದು. ಕನಸುಗಳನ್ನು ಅರ್ಥಮಾಡಿಕೊಳ್ಳುವುದು ಎಂದರೆ ನಮ್ಮ ಅಂತರಂಗವನ್ನು ತಿಳಿಯುವ ಒಂದು ಪಯಣ. ಪ್ರತಿಯೊಂದು ಕನಸೂ ನಮಗೆ ಯಾವುದೋ ಪಾಠವನ್ನು ನೀಡುತ್ತದೆ– ಭಯವನ್ನು ಎದುರಿಸಲು, ಬಯಕೆಯನ್ನು ಅರಿಯಲು, ಶಾಂತಿಯನ್ನು ಉಳಿಸಿಕೊಳ್ಳಲು. ಜಾಗೃತಿಯ ಬೆಳಕಿನಂತೆ ಕನಸುಗಳು ಕತ್ತಲಿನಲ್ಲಿಯೂ ದಾರಿದೀಪವಾಗಬಹುದು. ಕನಸುಗಳ ದ್ವಾರವು ನಮ್ಮ ದೇಹ, ಮನಸ್ಸು, ಇಂದ್ರಿಯಗಳನ್ನು ಸಮತೋಲನದತ್ತ ಕೊಂಡೊಯ್ಯುವ ಪವಿತ್ರ ಸೇತುವೆಯಾಗಬಹುದು! ಕನಸುಗಳ ಸಾರ್ಥಕತೆ ನಮ್ಮ ಕಣ್ಣುಗಳಿಗೆ ಕಾಣಬೇಕಷ್ಟೇ!

# ರಾಸಾಯನಿಕ ಎಂದಮಾತ್ರಕ್ಕೇ ವಿಷವಲ್ಲ, ಅದು ಬದುಕಿನ ಮೂಲ...

ವಿಶ್ಲೇಷಣೆ
ಡಾ. ರೋಹಿತ್‌ಕುಮಾರ್ ಎಚ್.ಜಿ.
vveditoped@gmail.com

ನನ್ನೊಬ್ಬ ಸ್ನೇಹಿತ ಅಂಗಡಿಯಿಂದ ಹರ್ಬಲ್ ನೋವಿನ ಎಣ್ಣೆಯನ್ನು ತಂದಿದ್ದ. ಅದನ್ನು ನೋಡಿದ ಇನ್ನೊಬ್ಬ ''ಇದರಿಂದೆಲ್ಲ ನೋವು ಕಮ್ಮಿಯಾಗೊಲ್ಲ. ಶೀಘ್ರವಾಗಿ ನೋವು ಕಡಿಮೆಯಾಗಬೇಕೆಂದರೆ ನೋವು ನಿವಾರಕ ಸ್ಪ್ರೇ ಬಳಸು'' ಎಂದ. ಅದಕ್ಕೆ, ''ಅವೆಲ್ಲ ಕೆಮಿಕಲ್ ಸ್ಪ್ರೇ ಕಣೋ, ನಾನು ತಂದಿರುವುದು ನೈಸರ್ಗಿಕ ಎಣ್ಣೆ. ಇದೇ ಸುರಕ್ಷಿತ ಮತ್ತು ಉತ್ತಮ'' ಎಂದ ಮೊದಲನೆಯವ. ಆ ಎಣ್ಣೆ ಬಾಟಲಿ ಮೇಲೆ ನೋಡಿದಾಗ ಅದರ ಮೇಲೆ ದಪ್ಪಕ್ಷರಗಳಲ್ಲಿ '100% ನ್ಯಾಚುರಲ್' ಮತ್ತು 'ರಾಸಾಯನಿಕ ಮುಕ್ತ' ಎಂದು ಬರೆದಿತ್ತು.

ಇಂದು ಸೂಪರ್ ಮಾರ್ಕೆಟ್‌ಗಳಲ್ಲಿ ಹಲವಾರು ಉತ್ಪನ್ನಗಳ ಮೇಲೆ ಈ ರೀತಿಯ ಲೇಬಲ್ ಇರುವುದನ್ನು ನೀವು ಗಮನಿಸಿರಬಹುದು. ನಿಮ್ಮಲ್ಲಿ ಹಲವರು ನನ್ನ ಸ್ನೇಹಿತನಂತೆ ನೈಸರ್ಗಿಕವಾದ ಉತ್ಪನ್ನಗಳು ಹೆಚ್ಚು ಸುರಕ್ಷಿತವೆಂದೂ, ರಾಸಾಯನಿಕಗಳಿರುವ ಉತ್ಪನ್ನಗಳು ನೈಸರ್ಗಿಕವಲ್ಲವೆಂದೂ ನಂಬಿರಬಹುದು. ರಾಸಾಯನಿಕಗಳು ಎಂದ ಕೂಡಲೇ ಇವು ಪ್ರಯೋಗಾಲಯಗಳಲ್ಲಿರುವ ವಸ್ತು ಅಥವಾ ನೈಸರ್ಗಿಕವಲ್ಲದ ವಸ್ತು ಎಂದೂ ಅಂದುಕೊಂಡಿರಬಹುದು. ಆದರೆ, ಈ ನಂಬಿಕೆಗಳು ಎಷ್ಟು ಸತ್ಯ? ಎಷ್ಟು ಮಿಥ್ಯ?

## ಸರ್ವವೂ ರಾಸಾಯನಿಕವೇ!

ಮೊದಲಿಗೆ, ಜಗತ್ತಿನಲ್ಲಿ ಸರ್ವವೂ ರಾಸಾಯನಿಕಗಳೇ! ಹಾಗಾಗಿ, 'ರಾಸಾಯನಿಕ-ಮುಕ್ತ' ಎಂಬುದು ಅಸಾಧ್ಯ ಹಾಗೂ ಈ ರೀತಿಯ ಉತ್ಪನ್ನಗಳು ಇಲ್ಲವೇ ಇಲ್ಲ! ನಾವು ಕುಡಿಯುವ ನೀರಿನಿಂದ ಹಿಡಿದು ಉಸಿರಾಡೋ ಗಾಳಿಯವರೆಗೂ ಎಲ್ಲವೂ ರಾಸಾಯನಿಕಗಳೇ! ಎರಡು ಜಲಜನಕ (H) ಮತ್ತು ಒಂದು ಆಮ್ಲಜನಕ (O) ಹೊಂದಿರುವ ನೀರಿನ ರಾಸಾಯನಿಕ ಸೂತ್ರ $H_2O$. ಗಾಳಿಯಲ್ಲಿ ಸಾರಜನಕ ($N_2$), ಆಮ್ಲಜನಕ ($O_2$), ಇಂಗಾಲದ ಡೈ ಆಕ್ಸೈಡ್ ($CO_2$) ಮುಂತಾದ ಅನಿಲಗಳಿವೆ. ಹಾಗೆ ನೋಡಿದರೆ ನಮ್ಮ ದೇಹವೂ ರಾಸಾಯನಿಕಗಳ ಸಂಕೀರ್ಣ ವ್ಯವಸ್ಥೆಯೇ ಆಗಿದೆ. ಅಮೆರಿಕದ ಕೆಮಿಕಲ್ ಸೊಸೈಟಿಯ ಪ್ರಕಾರ, ನೀವು ಕೇಳುವ, ನೋಡುವ, ವಾಸನೆ ಗ್ರಹಿಸುವ, ರುಚಿ ನೋಡುವ ಮತ್ತು ಸ್ಪರ್ಶಿಸುವ ಎಲ್ಲವೂ ರಾಸಾಯನಿಕಗಳೇ ಆಗಿವೆ. ಅಲ್ಲದೆ, ಈ ಎಲ್ಲಾ ಪ್ರಕ್ರಿಯೆಗಳು ರಾಸಾಯನಿಕ ಕ್ರಿಯೆಗಳಿಂದಲೇ ನಡೆಯುತ್ತವೆ.

2010ರಲ್ಲಿ, ಯುನೈಟೆಡ್ ಕಿಂಗ್‌ಡಮ್‌ನ ಶೇಕಡಾ 84ರಷ್ಟು ಜನರು ತಾವು ದಿನನಿತ್ಯ ಬಳಸುವ ಉತ್ಪನ್ನಗಳಲ್ಲಿರುವ ರಾಸಾಯನಿಕಗಳು ಆರೋಗ್ಯಕ್ಕೆ ಮಾರಕವಾಗಿವೆ ಎಂಬ ಅಭಿಪ್ರಾಯ ಹೊಂದಿದ್ದರು. ಈ ಸಂದರ್ಭದಲ್ಲಿ ರಾಸಾಯನಿಕಗಳಿಲ್ಲದ ಉತ್ಪನ್ನವನ್ನು ಯಾರಾದರೂ ತಯಾರಿಸಿದರೆ ಅವರಿಗೆ 1 ಮಿಲಿಯನ್ ಪೌಂಡ್‌ಗಳನ್ನು (2010ರಲ್ಲಿ ಅಂದಾಜು 7 ಕೋಟಿ ರುಪಾಯಿಗಳು) ಬಹುಮಾನವಾಗಿ ನೀಡುವುದಾಗಿ ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯು ಘೋಷಿಸಿತು. ಆ ಮೂಲಕ 'ರಾಸಾಯನಿಕ-ಮುಕ್ತ' ಉತ್ಪನ್ನಗಳನ್ನು ತಯಾರಿಸಲು ಸಾಧ್ಯವೇ ಇಲ್ಲ ಎನ್ನುವುದನ್ನು ಜನರಲ್ಲಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿತು. ಅಂದ ಹಾಗೆ, ಇದುವರೆಗೂ ಈ ಬಹುಮಾನ ಪಡೆಯಲು ಯಾರಿಗೂ ಸಾಧ್ಯವಾಗಿಲ್ಲ. ಬಹೂಪಯೋಗಿ ವಸ್ತುಗಳ ಕಂಪನಿಗಳು ತಮ್ಮ ಉತ್ಪನ್ನಗಳ ಮೇಲೆ 'ರಾಸಾಯನಿಕ-ಮುಕ್ತ' ಅಥವಾ 'ಯಾವುದೇ ರಾಸಾಯನಿಕಗಳನ್ನು ಬಳಸಿಲ್ಲ/ಸೇರಿಸಿಲ್ಲ' ಎಂದು ದೊಡ್ಡಕ್ಷರಗಳಲ್ಲಿ ಬರೆದಿದ್ದಾರೆ ಎಂದರೆ ಒಂದೋ ಅವರು ತಮ್ಮ ವೈಜ್ಞಾನಿಕ ಅನಕ್ಷರತೆಯನ್ನು ಪ್ರದರ್ಶಿಸುತ್ತಿರುತ್ತಾರೆ ಅಥವಾ ಗ್ರಾಹಕರನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸುತ್ತಿರುತ್ತಾರೆ. ವಾಸ್ತವವಾಗಿ, ತಮ್ಮ ಉತ್ಪನ್ನದಲ್ಲಿ ಹಾನಿಕಾರಕವೆಂದು ಪರಿಗಣಿಸಲಾದ ಕೃತಕ ಅಥವಾ ಸಂಶ್ಲೇಷಿತ ರಾಸಾಯನಿಕಗಳಿಲ್ಲ ಎಂದು ಸೂಚಿಸಲು ಅವರು ಈ ರೀತಿಯಾಗಿ ನಮೂದಿಸುತ್ತಾರೆ. ಆದರೆ, ಹೀಗೆ ಸೂಚಿಸುವ ಭರದಲ್ಲಿ ಎಲ್ಲಾ ರಾಸಾಯನಿಕಗಳು ಹಾನಿಕಾರಕವೆಂದೂ, ತಮ್ಮ ಉತ್ಪನ್ನದಲ್ಲಿ ರಾಸಾಯನಿಕಗಳೇ ಇಲ್ಲವೆಂದೂ ತಪ್ಪು ಮಾಹಿತಿ ನೀಡುತ್ತಾರೆ. ಆದರೆ, 'ಸರ್ವಂ ರಾಸಾಯನಿಕಮಯಂ' ಎಂಬುದು ಸತ್ಯ.

## ನೈಸರ್ಗಿಕವೆಲ್ಲವೂ ಸುರಕ್ಷಿತವೇ?

ನೈಸರ್ಗಿಕ ಮೂಲಗಳಿಂದ ಹೊರತೆಗೆಯಲಾದ ರಾಸಾಯನಿಕ ದ್ರವ್ಯಗಳು, ಕೃತಕವಾಗಿ ತಯಾರಿಸಿದವುಗಳಿಗಿಂತ ಉತ್ತಮ ಮತ್ತು ಆರೋಗ್ಯಕರ ಎಂಬುದು ಇನ್ನೊಂದು ವಾದ. ಮನುಷ್ಯನು ತಯಾರಿಸಿದ ರಾಸಾಯನಿಕಗಳೇ ಅತ್ಯಂತ ಅಪಾಯಕಾರಿ ಎಂದು ಹಲವರು ಭಾವಿಸುತ್ತಾರೆ. ನಿಜವೇ ಎಂದು ನೋಡುವುದಾದರೆ, ಇದು ಕೂಡ ಸತ್ಯಕ್ಕೆ ದೂರವಾದುದು. ಭೂಮಿಯಲ್ಲಿನ ಐದು ಅತ್ಯಂತ ಮಾರಕ ವಿಷಗಳೂ ಪ್ರಕೃತಿದತ್ತವಾದಂಥವು ಎಂದರೆ ನೀವು ನಂಬಲೇಬೇಕು.

ಜಗತ್ತಿನಲ್ಲಿ ಅತಿ ಮಾರಕವಾದ ವಿಷವೆಂದು ಪ್ರಖ್ಯಾತವಾಗಿರುವುದು 'ಬೊಟುಲಿನಮ್ ಟಾಕ್ಸಿನ್'! ಇದು 'ಕ್ಲೋಸ್ಟ್ರಿಡಿಯಮ್ ಬೊಟುಲಿನಮ್' ಎಂಬ ಚಿಕ್ಕ ಬ್ಯಾಕ್ಟೀರಿಯದಿಂದ ಉತ್ಪತ್ತಿಯಾಗುತ್ತದೆ. ಇದು ಎಷ್ಟು ಮಾರಣಾಂತಿಕವೆಂದರೆ, ಒಬ್ಬ ವ್ಯಕ್ತಿಯ ಸಾವಿಗೆ ಆತನ ಪ್ರತಿ ಕಿಲೋ ತೂಕಕ್ಕೆ ಕೇವಲ ಒಂದು ನ್ಯಾನೋ ಗ್ರಾಂನಷ್ಟು ಈ ವಿಷ ಕೊಟ್ಟರೆ ಸಾಕು! ಅಂದರೆ, 80 ಕಿಲೋ ತೂಕದ ಒಬ್ಬ ವ್ಯಕ್ತಿಯ ದೇಹಕ್ಕೆ ಒಂದು ಧೂಳಿನ ಕಣದಷ್ಟು ಈ ವಿಷ ಸೇರಿದರೂ ಪ್ರಾಣಪಕ್ಷಿ ಹಾರಿಹೋಗುತ್ತದೆ.

ಇದರಷ್ಟೇ ಅಪಾಯಕಾರಿಯಾದ ಮತ್ತೊಂದು ನೈಸರ್ಗಿಕ ವಿಷವೆಂದರೆ ಹರಳೆ (ಕಾಸ್ಟರ್) ಬೀಜದಲ್ಲಿರುವ ರೈಸಿನ್. ಒಬ್ಬ ವಯಸ್ಕ ವ್ಯಕ್ತಿ ಸಾವನ್ನಪ್ಪಲು ಕೆಲವೇ ಕೆಲವು ಹರಳೆ ಬೀಜಗಳಲ್ಲಿನ ರೈಸಿನ್ ಸಾಕು! ಇದೇ ರೀತಿ ಬಣ್ಣ ಬಣ್ಣದ ಡಾರ್ಟ್ ಕಪ್ಪೆಗಳ ದೇಹದಲ್ಲಿರುವ ಬಟ್ರಕೋಟಾಕ್ಸಿನ್‌ಗೆ ನಿಮ್ಮ ಹೃದಯವನ್ನು ಕ್ಷಣಾರ್ಧದಲ್ಲಿ ನಿಲ್ಲಿಸುವ ಶಕ್ತಿ ಇದ್ದರೆ, 'ಡೆತ್ ಕ್ಯಾಪ್ ಮಶ್ರೂಮ್' ಎಂಬ ಬಗೆಯ ಅಣಬೆಯಲ್ಲಿ ಇರುವ ಅಮಾಟಾಕ್ಸಿನ್ ಜಗತ್ತಿನಲ್ಲಿ ಹಲವಾರು ಸಾವಿಗೆ ಕಾರಣವಾಗಿದೆ. ಕೊನೆಗೆ, ಕಾಸರಕ (Strychnine) ಮರದಲ್ಲಿನ ವಿಷ ದೇಹಕ್ಕೆ ಸೇರಿದರೆ ವಿಪರೀತ ಸ್ನಾಯುಸೆಳೆತ ಶುರುವಾಗಿ ಕೇವಲ 15 ನಿಮಿಷಗಳಲ್ಲೇ ಸಾವುಂಟು ಮಾಡುತ್ತದೆ. ಇವೆಲ್ಲದರ ನಂತರವೇ ನೀವೆಲ್ಲಾ ಕಾರ್ಕೋಟಕ ವಿಷವೆಂದು ನಂಬಿರುವ ಹಾವಿನ ವಿಷಗಳು ಬರುವಂಥದ್ದು! ಹೀಗಾಗಿ ನೈಸರ್ಗಿಕವಾಗಿರುವುದೆಲ್ಲ ಅಥವಾ ಸಸ್ಯಾಧಾರಿತವೆಲ್ಲಾ ಸುರಕ್ಷಿತ ಎಂಬ ಕಲ್ಪನೆ ಸಂಪೂರ್ಣ ತಪ್ಪು. ಇದೊಂದು ಸಸ್ಯದ ಬೀಜ ಎಂದು ಯಾವ್ಯಾವುದೋ ಬೀಜ ಅಥವಾ ಸಸ್ಯಗಳ ಭಾಗಗಳನ್ನು ಸೇವಿಸುವುದು ಪ್ರಾಣಕ್ಕೆ ಘಾತಕವಾಗಬಹುದು.

## ನೈಸರ್ಗಿಕ V/s ಕೃತಕ

ಒಂದು ರಾಸಾಯನಿಕ ಪದಾರ್ಥವು, ನೈಸರ್ಗಿಕವಾಗಿಯೂ (ಉದಾಹರಣೆಗೆ ಸಸ್ಯಮೂಲದ್ದು) ಮತ್ತು ಸಂಶ್ಲೇಷಿತವಾಗಿಯೂ (ಪ್ರಯೋಗಾಲಯಗಳಲ್ಲಿ ತಯಾರಿಸಿದ್ದು) ಲಭ್ಯವಿದ್ದರೆ ಅವುಗಳಲ್ಲಿ ಯಾವುದು ಉತ್ತಮ? ಎಂದು ನೀವು ಕೇಳಬಹುದು. ಇದನ್ನು ಒಂದು ಉದಾಹರಣೆಯೊಂದಿಗೆ ತಿಳಿಯೋಣ.

ನಮ್ಮ ದೇಹಕ್ಕೆ ಅಗತ್ಯವಿರುವ ಪ್ರಮುಖ ಪೋಷಕಾಂಶಗಳಲ್ಲಿ ಒಂದಾದ ವಿಟಮಿನ್ 'ಸಿ' ಬಗ್ಗೆ ನಿಮಗೆಲ್ಲ ಗೊತ್ತು. ವಿಟಮಿನ್ 'ಸಿ'ಯ ರಾಸಾಯನಿಕ ಹೆಸರು ಆಸ್ಕಾರ್ಬಿಕ್ ಆಮ್ಲ. ಕಿತ್ತಳೆ ಹಣ್ಣು ಸೇರಿದಂತೆ ವಿವಿಧ ಹಣ್ಣುಗಳಲ್ಲಿ ಮತ್ತು ತರಕಾರಿಗಳಲ್ಲಿ ವಿಟಮಿನ್ 'ಸಿ' ಇರುತ್ತದೆ. ಅಂತೆಯೇ ಇದನ್ನು ಪ್ರಯೋಗಾಲಯದಲ್ಲಿ ಕೃತಕವಾಗಿಯೂ ತಯಾರಿಸುತ್ತಾರೆ. ಆದರೆ, ಎರಡರ ರಾಸಾಯನಿಕ ರಚನೆಗಳು ಒಂದೇ ಆಗಿರುತ್ತವೆ. ಮೂಲ ಮಾತ್ರ ಬೇರೆ. ಇವುಗಳಲ್ಲಿ ಯಾವ ವಿಧದ ವಿಟಮಿನ್ 'ಸಿ' ದೇಹಕ್ಕೆ ಉತ್ತಮ ಎಂಬ ಪ್ರಶ್ನೆಗೆ ಉತ್ತರ– ಎರಡೂ! ಏಕೆಂದರೆ, ದೇಹದೊಳಗಿನ ವ್ಯವಸ್ಥೆಯು ರಾಸಾಯನಿಕಗಳನ್ನು ಅವುಗಳ ಮೂಲದ ಆಧಾರದಲ್ಲಿ ವಿಭಿನ್ನವಾಗಿ ಪರಿಗಣಿಸುವುದಿಲ್ಲ. ಒಂದೇ ರಾಸಾಯನಿಕ ರಚನೆ ಹೊಂದಿರುವ ನೈಸರ್ಗಿಕ ಮತ್ತು ಸಂಶ್ಲೇಷಿತ ಸಂಯುಕ್ತಗಳು ದೇಹದಲ್ಲಿ ಒಂದೇ ಬಗೆಯ ರಾಸಾಯನಿಕ ಕ್ರಿಯೆಗೆ ಒಳಗಾಗುತ್ತವೆ. ಜತೆಗೆ ಒಂದೇ ರೀತಿಯ ಪರಿಣಾಮವನ್ನುಂಟುಮಾಡುತ್ತವೆ. ಹಾಗಾಗಿ, ಹಣ್ಣಿನಿಂದ ಬಂದರೂ, ಕೃತಕವಾಗಿ ತಯಾರಿಸಿದ್ದರೂ, ಆಸ್ಕಾರ್ಬಿಕ್ ಆಮ್ಲದ ಹೀರಿಕೊಳ್ಳುವಿಕೆಯಲ್ಲಾಗಲಿ, ಅದು ದೇಹದಲ್ಲಿ ತೋರಿಸುವ ಪರಿಣಾಮಗಳಲ್ಲಾಗಲಿ ಬದಲಾವಣೆಯಿರುವುದಿಲ್ಲ. ಹಾಗೆಂದು, ಹಣ್ಣನ್ನು ತಿನ್ನುವ ಬದಲು ವಿಟಮಿನ್ 'ಸಿ' ಮಾತ್ರೆ ತೆಗೆದುಕೊಳ್ಳಿ ಎಂಬರ್ಥದಲ್ಲಿ ಇದನ್ನು ಅರ್ಥೈಸಬೇಕಿಲ್ಲ. ಕಿತ್ತಳೆ ಹಣ್ಣಿನಲ್ಲಿ ವಿಟಮಿನ್ 'ಸಿ' ಜತೆಗೆ ಫೈಬರ್, ಫೋಲೇಟ್, ಪೊಟ್ಯಾಸಿಯಮ್, ಕ್ಯಾಲ್ಸಿಯಂ ಮುಂತಾದ ಹಲವಾರು ಉತ್ತಮ ಅಂಶಗಳಿರುತ್ತವೆ. ಹಾಗಾಗಿ ಹಣ್ಣನ್ನು ತಿನ್ನುವುದು ಒಳ್ಳೆಯ ಅಭ್ಯಾಸವೇ. ಆದರೆ, ಕೃತಕವಾಗಿ ತಯಾರಿಸಲಾಗಿದೆ ಎಂಬ ಕಾರಣಕ್ಕೆ ವಿಟಮಿನ್ 'ಸಿ' ಅಥವಾ ಇನ್ಯಾವುದೇ ಸಂಶ್ಲೇಷಿತ ದ್ರವ್ಯಗಳನ್ನು ಹಾನಿಕಾರಕ ಎನ್ನುವುದು ಸೂಕ್ತವಲ್ಲ.

ರೋಗವೊಂದರ ಚಿಕಿತ್ಸೆಗೆ ವಿಭಿನ್ನ ರಚನೆಗಳುಳ್ಳ ಒಂದು ನೈಸರ್ಗಿಕ ಹಾಗೂ ಒಂದು ಸಂಶ್ಲೇಷಿತ ಔಷಧ ಲಭ್ಯವಿದ್ದರೆ ಅವುಗಳಲ್ಲಿ ಯಾವುದು ಉತ್ತಮ? ಕ್ಯಾನ್ಸರ್ ರೋಗದ ಚಿಕಿತ್ಸೆಗೆ ಪ್ರಸ್ತುತ ನೈಸರ್ಗಿಕ ಮೂಲದಿಂದ ಹೊರತೆಗೆದ ಮತ್ತು ಸಂಶ್ಲೇಷಿತ ಹಲವಾರು ದ್ರವ್ಯಗಳು ಔಷಧಗಳಾಗಿ ಬಳಕೆಯಲ್ಲಿವೆ. ಆದರೆ, ಅವುಗಳ ಚಿಕಿತ್ಸಕ ಅಥವಾ ಅಡ್ಡ ಪರಿಣಾಮಗಳ ತೀವ್ರತೆಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಅಂದರೆ, ಒಂದು ಔಷಧ ಇನ್ನೊಂದಕ್ಕಿಂತ ವಿಭಿನ್ನವಾಗಿ ಕಾರ್ಯನಿರ್ವಹಿಸಬಹುದು ಅಥವಾ ಬೇರೆ ರೀತಿಯ ಅಡ್ಡ ಪರಿಣಾಮ ತೋರಬಹುದು. ಆದರೆ, ಕೃತಕಕ್ಕಿಂತ ನೈಸರ್ಗಿಕವಾದುದು ಬೇಗ ಕ್ಯಾನ್ಸರ್ ಅನ್ನು ಗುಣಪಡಿಸುತ್ತದೆ ಅಥವಾ ಕಡಿಮೆ ಅಡ್ಡ ಪರಿಣಾಮ ಹೊಂದಿದೆ ಎನ್ನುವುದಕ್ಕೆ ಯಾವುದೇ ಪುರಾವೆಗಳಿಲ್ಲ. ಎರಡೂ ಸರಿಸಮಾನ ಹಂತದ ಅಡ್ಡ ಪರಿಣಾಮಗಳನ್ನೇ ತೋರಿಸುತ್ತವೆ ಹಾಗೂ ಔಷಧಗಳ ಮೂಲದಿಂದ ಯಾವುದು ಹೆಚ್ಚು ಉತ್ತಮ ಎಂದು ನಿರ್ಧರಿಸಲು ಸಾಧ್ಯವಿಲ್ಲ.

ಇನ್ನೂ ಒಂದು ಆಯಾಮದಲ್ಲಿ ನೋಡುವುದಾದರೆ, ಕೆಲವೊಮ್ಮೆ 'ಸಂಪೂರ್ಣ ನೈಸರ್ಗಿಕ' ಎಂದು ಕರೆಯಲಾಗುವ ಮತ್ತು ಸಂಶ್ಲೇಷಿತ ಉತ್ಪನ್ನಗಳಲ್ಲಿ ಒಂದೇ ಅಂಶಗಳಿರುತ್ತವೆ. ಉದಾಹರಣೆಗೆ ಲೇಖನದ ಮೊದಲ ಭಾಗದಲ್ಲಿ ಉಲ್ಲೇಖಿಸಲಾದ ನೋವು ನಿವಾರಕ ಸ್ಪ್ರೇ ಮತ್ತು ಹರ್ಬಲ್ ನೋವಿನ ಎಣ್ಣೆ ಎರಡರಲ್ಲೂ ಕಾಂಫೊರ್, ಮೆಂಥಾಲ್, ಮೀಥೈಲ್ ಸ್ಯಾಲಿಸಿಲೇಟ್, ಯುಕಲಿಪ್ಟಾಲ್ ಮುಂತಾದ ಪದಾರ್ಥಗಳಿರುತ್ತವೆ. ಹರ್ಬಲ್ ಎಣ್ಣೆಯಲ್ಲಿ ಇವುಗಳನ್ನು ಕ್ರಮವಾಗಿ ಕರ್ಪೂರ, ಪುದೀನಾ, ಗಂಧಪೂರಾ ಮತ್ತು ನೀಲಗಿರಿ ಮರಗಳಿಂದ ಪಡೆಯಲಾಗುತ್ತವೆ. ಅದೇ ಸ್ಪ್ರೇಗಳಲ್ಲಿ ಇವುಗಳನ್ನು ಕೃತಕವಾಗಿ ತಯಾರಿಸಿ ಬಳಸುತ್ತಾರೆ. ಹಾಗಾಗಿ, ಎರಡೂ ಉತ್ಪನ್ನಗಳಲ್ಲಿ ಒಂದೇ ರಾಸಾಯನಿಕಗಳಿರುವುದರಿಂದ ವಿಟಮಿನ್ 'ಸಿ' ವಿಷಯದಲ್ಲಿ ತಿಳಿದುಕೊಂಡಂತೆ ಎರಡೂ ಉತ್ಪನ್ನಗಳು ತೋರಿಸುವ ಪರಿಣಾಮಗಳು ಒಂದೇ ಸಮನಾಗಿರುತ್ತವೆ. ಕೆಲವು ಸ್ಪ್ರೇಗಳಲ್ಲಿ ಶೀಘ್ರ ಉಪಶಮನಕ್ಕಾಗಿ ಈ ಎಲ್ಲಾ ಪದಾರ್ಥಗಳ ಜತೆಗೆ ಹೆಚ್ಚುವರಿಯಾಗಿ ಸಂಶ್ಲೇಷಿತ ನೋವು ನಿವಾರಕ ಔಷಧಗಳನ್ನು ಸೇರಿಸುತ್ತಾರೆ.

## ಅನುಕೂಲತೆಗಳು

ಮುಂದಿನ ಪ್ರಶ್ನೆ, ಕೃತಕ ರಾಸಾಯನಿಕಗಳು ಮತ್ತು ಅವುಗಳನ್ನು ತಯಾರಿಸುವ ಪ್ರಕ್ರಿಯೆಗಳ ಅನುಕೂಲಗಳೇನು?

ಶ್ವಾಸಕೋಶ, ಅಂಡಾಶಯ ಮತ್ತು ಸ್ತನ ಕ್ಯಾನ್ಸರ್‌ಗಳ ಚಿಕಿತ್ಸೆಯಲ್ಲಿ ಪ್ರಮುಖವಾಗಿ ಬಳಸುವ ಪ್ಯಾಕ್ಲಿಟಾಕ್ಸೆಲ್ ಎಂಬ ಔಷಧದ ಕಥೆ ಕೃತಕ ಸಂಶ್ಲೇಷಣೆಯ ಮಹತ್ವವನ್ನು ಸಾರುತ್ತದೆ. ಉತ್ತರ ಅಮೆರಿಕದಲ್ಲಿ ಕಾಣಸಿಗುವ ಟ್ಯಾಕ್ಸಸ್ ಬ್ರೆವಿಫೋಲಿಯಾ ಎಂಬ ಪ್ರಭೇದದ ಮರಗಳು ಈ ಔಷಧದ ಮೂಲ. ಮೊದಲಿಗೆ ಪ್ಯಾಕ್ಲಿಟಾಕ್ಸೆಲ್ ಅನ್ನು ಈ ಮರಗಳ ತೊಗಟೆಯಿಂದ ಪ್ರತ್ಯೇಕಿಸಲಾಗುತ್ತಿತ್ತು. ಆದರೆ, ಹೀಗೆ ಪ್ರತ್ಯೇಕಿಸುವಾಗ ಅಲ್ಪ ಪ್ರಮಾಣದಲ್ಲಿ ಮಾತ್ರ ಇದು ಸಿಗುತ್ತಿದ್ದುದರಿಂದ, ಹೆಚ್ಚಿನ ಪ್ರಮಾಣದಲ್ಲಿ ಈ ಔಷಧವನ್ನು ಪಡೆಯಲು ಸಾವಿರಾರು ಮರಗಳನ್ನು ಕತ್ತರಿಸಬೇಕಾಗುತ್ತಿತ್ತು. ಹಾಗಾಗಿ, ಈ ಪ್ರಕ್ರಿಯೆ ಪರಿಸರಕ್ಕೆ ಹಾನಿಕಾರಕವಾಗಿದ್ದಲ್ಲದೆ ಅಗತ್ಯತೆಯನ್ನು ಪೂರೈಸಲು ಹೆಚ್ಚಿನ ಸಮಯವೂ ಬೇಕಾಗಿತ್ತು. ಇದಕ್ಕೆ ಪರಿಹಾರವಾಗಿ ಸಿಕ್ಕಿದ್ದು ಅರೆ-ಸಂಶ್ಲೇಷಣೆ (ಅರ್ಧ ನೈಸರ್ಗಿಕ-ಅರ್ಧ ಕೃತಕ) ವಿಧಾನ. ಈ ವಿಧಾನದಲ್ಲಿ ಮರದ ಎಲೆಗಳಿಂದ ನಿರ್ದಿಷ್ಟ ರಾಸಾಯನಿಕಗಳನ್ನು (10-ಡಿಅಸಿಟೈಲ್ ಬಕಾಟಿನ್ III ಅಥವಾ ಬಕಾಟಿನ್ III) ಹೊರತೆಗೆದು, ಪ್ರಯೋಗಾಲಯದಲ್ಲಿ ಇವನ್ನು ಪ್ಯಾಕ್ಲಿಟಾಕ್ಸೆಲ್ ಆಗಿ ಪರಿವರ್ತಿಸಲಾಗುತ್ತದೆ. ಇದರಿಂದ ಇಡೀ ಮರಗಳನ್ನು ಕಡಿಯುವ ಬದಲು ಮತ್ತೆ ಮತ್ತೆ ಹುಟ್ಟುವ ಎಲೆಗಳನ್ನು ಬಳಸಿ ಅಗತ್ಯ ಪ್ಯಾಕ್ಲಿಟಾಕ್ಸೆಲ್ ಅನ್ನು ಪಡೆಯುವುದು ಸಾಧ್ಯವಾಗುತ್ತದೆ. ಇಂದು ಮಾರುಕಟ್ಟೆಯಲ್ಲಿ ದೊರಕುತ್ತಿರುವ ಸುಮಾರು ಶೇ.80 ರಷ್ಟು ಈ ಔಷಧವನ್ನು ಈ ರೀತಿಯಲ್ಲಿಯೇ ಕೃತಕ ಸಂಶ್ಲೇಷಣೆಯನ್ನು ಬಳಸಿ ಸುಸ್ಥಿರವಾಗಿ ತಯಾರಿಸಲಾಗುತ್ತಿದೆ.

ನೋವು ನಿವಾರಕ ಆಸ್ಪಿರಿನ್‌ನ ಅಭಿವೃದ್ಧಿ ಕೂಡಾ ರಾಸಾಯನಿಕ ಸಂಶ್ಲೇಷಣೆಯ ಅನುಕೂಲವನ್ನು ಸ್ಪಷ್ಟವಾಗಿ ಅರ್ಥಮಾಡಿಸುತ್ತದೆ. ಶತಮಾನಗಳಿಂದ ಜನರು ನೋವು ಕಡಿಮೆ ಮಾಡಲು ವಿಲೋ (Salix) ಮರದ ಸಿಪ್ಪೆ/ತೊಗಟೆಯನ್ನು ಜಗಿಯುತ್ತಿದ್ದರು. ಇದರಲ್ಲಿ ನೋವನ್ನು ತಗ್ಗಿಸುವ 'ಸಲಿಸಿನ್' ಎಂಬ ಸಂಯುಕ್ತವಿರುವುದರಿಂದ ನೋವು ಶಮನಗೊಳ್ಳುತ್ತಿತ್ತು. ಆದರೆ ಸಿಪ್ಪೆಯಲ್ಲಿ ಈ ಅಂಶದ ಪ್ರಮಾಣ ಬಹಳ ಕಡಿಮೆಯಿದ್ದುದರಿಂದ, ಹೆಚ್ಚು ತೊಗಟೆಯನ್ನು ಸೇವಿಸಬೇಕಾಗುತ್ತಿತ್ತು ಮತ್ತು ಪರಿಣಾಮವೂ ತೃಪ್ತಿಕರವಾಗಿರಲಿಲ್ಲ. ಅಲ್ಲದೆ, ಈ ಮರಗಳು ಮಣ್ಣಿನಿಂದ ಸೀಸ ಮತ್ತು ಕ್ಯಾಡ್ಮಿಯಂಗಳಂಥ ಹಾನಿಕಾರಕ ಲೋಹಗಳನ್ನು ಹೀರಿಕೊಳ್ಳುತ್ತಿದ್ದುದರಿಂದ, ನೇರವಾಗಿ ಸಿಪ್ಪೆಯನ್ನು ಜಗಿಯುವುದು ಆರೋಗ್ಯಕ್ಕೆ ಅಪಾಯಕಾರಿ ಆಗಬಹುದಾಗಿತ್ತು. ಪ್ರಯೋಗಾಲಯದಲ್ಲಿ ಆಸ್ಪಿರಿನ್ ಅನ್ನು ಕೃತಕವಾಗಿ ತಯಾರಿಸುವ ಮಾರ್ಗವನ್ನು ವಿಜ್ಞಾನಿಗಳು ಕಂಡುಹಿಡಿದಿದ್ದರಿಂದ, ಈ ಎಲ್ಲಾ ಸಮಸ್ಯೆಗಳು ಪರಿಹಾರವಾಗಿವೆ. ಯಾವುದೇ ಹಾನಿಕಾರಕಗಳಿಲ್ಲದೆ, ವ್ಯಕ್ತಿಗೆ ಅಗತ್ಯವಿರುವ ಪ್ರಮಾಣದ ಔಷಧವಿರುವ ಮಾತ್ರೆಗಳು ದೊರಕುವಂತಾಗಿದೆ. ಈ ಮಾತ್ರೆಗಳು ಪರಿಣಾಮಕಾರಿಯಾಗಿ ನೋವನ್ನು ಉಪಶಮನಗೊಳಿಸುವುದರ ಜತೆಗೆ ನೈಸರ್ಗಿಕ ತೊಗಟೆಗಿಂತ ಹೆಚ್ಚು ಸುರಕ್ಷಿತವೂ ಆಗಿವೆ.

ಇದೇ ರಾಸಾಯನಿಕ ಸಂಶ್ಲೇಷಣೆಯ ಶಕ್ತಿ. ಇದರಿಂದ ಸುರಕ್ಷಿತ ಮತ್ತು ಪರಿಣಾಮಕಾರಿ ಔಷಧಿಗಳನ್ನು ಕಡಿಮೆ ದರದಲ್ಲಿ ತಯಾರಿಸಬಹುದಾಗಿದೆ. ಇಲ್ಲದಿದ್ದರೆ, ಎಷ್ಟೋ ಉಪಯುಕ್ತ ಔಷದಿಗಳು ಜಗತ್ತಿನಾದ್ಯಂತ ರೋಗಿಗಳಿಗೆ ದೊರಕಲು ಸಾಧ್ಯವಾಗುತ್ತಿರಲಿಲ್ಲ.

## ಸಂಶ್ಲೇಷಿತ ರಾಸಾಯನಿಕಗಳು ಸುರಕ್ಷಿತವೇ?

ಹೇಗೆ ಎಲ್ಲಾ ನೈಸರ್ಗಿಕ ಪದಾರ್ಥಗಳು ಸುರಕ್ಷಿತವಲ್ಲವೋ, ಹಾಗೆಯೆ ಎಲ್ಲಾ ಸಂಶ್ಲೇಷಿತ ದ್ರವ್ಯಗಳು ಅಪಾಯಕಾರಿಯಾಗಿರುವುದಿಲ್ಲ.

ಮೊದಲಿಗೆ, ಕೃತಕವಾಗಿ ತಯಾರಿಸಲಾದ ಎಲ್ಲಾ ರಾಸಾಯನಿಕಗಳಿಗೆ ಅಧ್ಯಯನಗಳ ಆಧಾರವಿರುತ್ತದೆ. ಅಂದರೆ, ಅವುಗಳ ವಿವಿಧ ಗುಣಲಕ್ಷಣಗಳು, ಹಾನಿಕಾರಕ ಅಂಶಗಳು, ಆರೋಗ್ಯದ ಮೇಲಾಗುವ ಪರಿಣಾಮಗಳು, ಎಷ್ಟು ಪ್ರಮಾಣದಲ್ಲಿ ಸೇವಿಸಬಹುದು (ಆಹಾರ ಅಥವಾ ಔಷಧಿಯ ಭಾಗವಾಗಿದ್ದರೆ) ಎನ್ನುವಂಥಾ ವಿವರಗಳು ಲಭ್ಯವಿರುತ್ತವೆ.

ಕೃತಕ ರಾಸಾಯನಿಕಗಳ ತಯಾರಿ ಮತ್ತು ಅದರ ಪ್ರಕ್ರಿಯೆಗಳು, ಸೂಕ್ತ ಸಂಸ್ಥೆಗಳ ನಿಯಂತ್ರಣದಲ್ಲಿರುತ್ತವೆ. ಅಲ್ಲದೆ, ಮಾರುಕಟ್ಟೆಗೆ ಒಂದು ರಾಸಾಯನಿಕವು ಯಾವ ರೀತಿಯ ಬಳಕೆಗೆ ಬಿಡುಗಡೆಯಾಗಬಹುದು ಎಂಬುದು ಕೂಡ ವ್ಯವಸ್ಥಿತವೂ, ನಿಯಂತ್ರಿತವೂ ಆಗಿರುತ್ತದೆ. ನಮ್ಮ ದೇಶದಲ್ಲಿ 'ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ' (ಎಫ್‌ಎಸ್‌ಎಸ್‌ಎಐ) ಮತ್ತು ಕೇಂದ್ರ ಔಷಧಿ ಗುಣಮಟ್ಟ ನಿಯಂತ್ರಣ ಸಂಸ್ಥೆಗಳು ಕ್ರಮವಾಗಿ ಆಹಾರ ಮತ್ತು ಔಷಧಿಗಳ ಮೇಲ್ವಿಚಾರಣೆಯನ್ನು ನಿರಂತರವಾಗಿ ಕೈಗೊಳ್ಳುತ್ತವೆ. ಯಾವುದೇ ಹೊಸ ವೈಜ್ಞಾನಿಕ ಅಧ್ಯಯನಗಳು ರಾಸಾಯನಿಕಗಳ ದುಷ್ಪರಿಣಾಮಗಳನ್ನು ತೋರಿಸಿದರೆ, ಅಂಥವುಗಳ ಬಳಕೆಯನ್ನು ಈ ಸಂಸ್ಥೆಗಳು ನಿರ್ಬಂಧಿಸಬಹುದು, ನಿಷೇಧಿಸಬಹುದು ಅಥವಾ ಅದಕ್ಕೆ ಸುರಕ್ಷಿತ ಪರ್ಯಾಯಗಳನ್ನು ಸೂಚಿಸಬಹುದು. ಎಲ್ಲಾ ಮೇಲ್ವಿಚಾರಣೆ ದಾಟಿ ಮಾರುಕಟ್ಟೆಗೆ ಒಂದು ಉತ್ಪನ್ನ ಬಂದರೆ ಅದರಲ್ಲಿರುವ ಎಲ್ಲ ಅಂಶಗಳು ಉತ್ತಮ ಗುಣಮಟ್ಟದ, ನಿರ್ದಿಷ್ಟ ರಾಸಾಯನಿಕಗಳ ಮತ್ತು ನಿಖರ ಪ್ರಮಾಣದ್ದಾಗಿದ್ದು, ನಿಗದಿತ ಬಳಕೆಗೆ ಮಾತ್ರ ಸೀಮಿತವಾಗಿರುತ್ತವೆ. ಹೀಗೆ ತಯಾರಿಸಲಾದ ರಾಸಾಯನಿಕಗಳು ಯಾವುದೇ ಅನಿರೀಕ್ಷಿತ ಮಾಲಿನ್ಯಕಾರಕಗಳಿಲ್ಲದ ಶುದ್ಧ ಉತ್ಪನ್ನಗಳಾಗಿರುತ್ತವೆ. 100 ಮಿಲಿಗ್ರಾಮ್ ಡೋಸ್‌ನ ಆಸ್ಪಿರಿನ್ ಮಾತ್ರೆಯಲ್ಲಿ ಅಷ್ಟೇ ಪ್ರಮಾಣದ ಔಷಧ ಇರಬೇಕು, ಇದ್ದೇ ಇರುತ್ತದೆ.

ಮುಂದುವರಿದು, ವಿವಿಧ ಸಂಸ್ಥೆಗಳು ತಯಾರಿಸುವ ಉತ್ಪನ್ನಗಳಲ್ಲಿ ಬಳಕೆ ಮಾಡಲಾಗಿರುವ ಎಲ್ಲಾ ರಾಸಾಯನಿಕ ಸಂಯುಕ್ತಗಳನ್ನು ಪ್ರಮಾಣದ ಸಮೇತ ಪಟ್ಟಿ ಮಾಡಲೇಬೇಕು. ಬಳಸಲಾದ ಯಾವುದೇ ಪದಾರ್ಥಗಳು ನಿಮ್ಮ ದೇಹಕ್ಕೆ ಸೂಕ್ತವಲ್ಲದಿದ್ದರೆ ಅಥವಾ ಬಳಸಲು ನಿಮಗೆ ಇಷ್ಟವಿಲ್ಲದಿದ್ದರೆ, ಸೂಕ್ತ ನಿರ್ಧಾರ ಕೈಗೊಳ್ಳಲು ನಿಮಗೆ ಈ ವಿವರಗಳು ಉಪಯುಕ್ತವಾಗುತ್ತವೆ. ಅಷ್ಟರ ಮಟ್ಟಿಗೆ ಈ ವ್ಯವಸ್ಥೆ ಪಾರದರ್ಶಕತೆಯನ್ನು ಕಾಪಾಡಲು ಪ್ರಯತ್ನಿಸುತ್ತದೆ.

## ಅತಿಯಾದರೆ ಅಮೃತವೂ ವಿಷ

1990ರಲ್ಲಿ, ಜೀವರಸಾಯನಶಾಸ್ತ್ರಜ್ಞ ಬ್ರೂಸ್ ಏಮ್ಸ್ ಅವರು ಪ್ರತಿಷ್ಠಿತ 'ಪ್ರೊಸೀಡಿಂಗ್ಸ್ ಆಫ್ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್' (ಯುಎಸ್‌ಎ) ಪತ್ರಿಕೆಯಲ್ಲಿ ಪ್ರಕಟಿಸಿದ ಎರಡು ಅಧ್ಯಯನಗಳಲ್ಲಿ ನೈಸರ್ಗಿಕ ಮತ್ತು ಸಂಶ್ಲೇಷಿತ ಸಂಯುಕ್ತಗಳ ಹಾನಿಕಾರಕ ಸಾಮರ್ಥ್ಯಗಳನ್ನು ಪರೀಕ್ಷಿಸಿದ್ದರು. ಮೊದಲ ಅಧ್ಯಯನದಲ್ಲಿ ನೈಸರ್ಗಿಕ ಮತ್ತು ಕೃತಕವಾಗಿ ತಯಾರಿಸಲಾದ ರಾಸಾಯನಿಕಗಳಿಗೆ ಸರಿ ಸಮಾನವಾದ ಹಾನಿಕಾರಕ ಸಾಮರ್ಥ್ಯಗಳಿವೆ ಎನ್ನುವುದು ತಿಳಿದುಬಂದಿತು. ಇನ್ನೊಂದು ಅಧ್ಯಯನದಲ್ಲಿ ನೈಸರ್ಗಿಕ ಮತ್ತು ಕೃತಕ ಕ್ರಿಮಿನಾಶಕಗಳನ್ನು ಅಭ್ಯಸಿಸಲಾಗಿ, ಎರಡೂ ಬಗೆಯ ರಾಸಾಯನಿಕಗಳೂ ಕ್ಯಾನ್ಸರ್, ರೂಪಾಂತರಗಳು ಅಥವಾ ಜನ್ಮದೋಷಗಳನ್ನು ಉಂಟುಮಾಡಬಹುದು ಎನ್ನುವುದು ತಿಳಿಯಿತು. ಇದರಿಂದಾಗಿ, ವಿಷ ಎನ್ನುವುದು ವಸ್ತುವಿನ ಮೂಲದ ಮೇಲೆ ಅವಲಂಬಿತವಾಗಿಲ್ಲ, ಬದಲಿಗೆ ಅದರ ಪ್ರಮಾಣದ (ಡೋಸ್) ಮೇಲೆ ಅವಲಂಬಿತವಾಗಿದೆ ಎಂಬುದು ಈ ಅಧ್ಯಯನಗಳಿಂದ ತಿಳಿದುಬಂತು.

ಮೂಲದ ಆಧಾರದ ಮೇಲೆ ಇದು ಒಳ್ಳೆಯದು ಅಥವಾ ಕೆಟ್ಟದ್ದು ಎಂದು ತೀರ್ಮಾನಿಸುವುದು ಸೂಕ್ತವಲ್ಲ. ಎಲ್ಲಾ ನೈಸರ್ಗಿಕ ರಾಸಾಯನಿಕಗಳು ಆರೋಗ್ಯಕರವೇ? ಖಂಡಿತಾ ಅಲ್ಲ. ಸಂಶ್ಲೇಷಿತ ದ್ರವ್ಯಗಳೆಲ್ಲವೂ ಅತ್ಯುತ್ತಮವೇ ಮತ್ತು ಬಳಕೆಗೆ ಅರ್ಹವೇ? ಅದು ಸಹ ತಪ್ಪು. 'ಅತಿಯಾದರೆ ಅಮೃತವೂ ವಿಷ' ಎಂಬ ಗಾದೆಯಂತೆ, ಯಾವುದು ಒಳ್ಳೆಯದು ಎನ್ನುವುದಕ್ಕಿಂತ ಎಷ್ಟು ಪ್ರಮಾಣದಲ್ಲಿ ಒಳ್ಳೆಯದು ಎನ್ನುವುದು ಮುಖ್ಯ. ಜಾಸ್ತಿ ನೀರನ್ನು ಕುಡಿದರೂ ಸಾವು ಬರುವ ಸಾಧ್ಯತೆಯಿದೆ. ನೀತಿಯಿಷ್ಟೇ– 'ಕೆಮಿಕಲ್' ಎಂಬ ನೆಪದಲ್ಲಿ ಜೀವ ಉಳಿಸುವ ಔಷಧಿಯನ್ನು ತಳ್ಳಿಹಾಕುವ ಹುಂಬತನ ಬೇಡ. ಹಾಗಂತ ಯೋಚಿಸದೆ ಎಲ್ಲವನ್ನೂ ಒಪ್ಪಿಕೊಳ್ಳುವ ಮೌಢ್ಯವೂ ಬೇಡ. ನೈಸರ್ಗಿಕವಾಗಲಿ, ಸಂಶ್ಲೇಷಿತವಾಗಲಿ, ಯಾವುದನ್ನೂ ಕುರುಡಾಗಿ ನಂಬದೆ, ಕುರುಡಾಗಿ ತಿರಸ್ಕರಿಸದೆ, ಅದರ ಸ್ವರೂಪವನ್ನು ತಿಳಿದು, ಪ್ರಮಾಣವನ್ನು ಅರಿತು, ಅಪಾಯ ಮತ್ತು ಲಾಭಗಳೆರಡನ್ನೂ ಅಳೆದು ಪ್ರಮಾಣೀಕರಿಸಿದ ಬಳಕೆ ಮಾಡುವುದು ಉತ್ತಮ. 'ರಾಸಾಯನಿಕ' ಎಂದಮಾತ್ರಕ್ಕೇ ವಿಷವಲ್ಲ, ಅದು ಬದುಕಿನ ಮೂಲ ಎಂಬುದನ್ನು ಮರೆಯದಿರೋಣ...

**(ಲೇಖಕರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರಾಂಟ್ಸ್ ಮ್ಯಾನೇಜರ್)**

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:242

## ಸಮಾಚಾರ ಸಣ್ಣದಲ್ಲ

### ಕಿರ್ಕ್ ಹತ್ಯೆಯ ಶಂಕಿತ ಆರೋಪಿ ಬಂಧನ

**ವಾಷಿಂಗ್ಟನ್:** ಬಲಪಂಥೀಯ ಕಾರ್ಯಕರ್ತ ಚಾರ್ಲಿ ಕಿರ್ಕ್ ಹತ್ಯೆಯ ಶಂಕಿತನನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಕುರಿತು ಮಾಧ್ಯಮ ಸಂದರ್ಶನದಲ್ಲಿ ಮಾತನಾಡಿದ ಟ್ರಂಪ್, ಶಂಕಿತ ಆರೋಪಿ ಸಿಕ್ಕಿಬಿದ್ದಿದ್ದಾನೆಂದು ನಾನು ಖಚಿತವಾಗಿ ಹೇಳಬಲ್ಲೆ. ಆರೋಪಿಗೆ ಹತ್ತಿರವಿದ್ದವರೇ ಆತನನ್ನು ಹಿಡಿದು ಒಪ್ಪಿಸಿದ್ದಾರೆ ಎಂದು ತಿಳಿಸಿದ್ದಾರೆ. ಬುಧವಾರ ಉತಾಹ್‌ನಲ್ಲಿ ಭಾಷಣ ಮಾಡುತ್ತಿದ್ದಾಗ ಅನಾಮಿಕನೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಕಿರ್ಕ್ ಸಾವನ್ನಪ್ಪಿದ್ದರು. ಅಲ್ಲಿನ ಗವರ್ನರ್ ಇದನ್ನು ರಾಜಕೀಯ ಪ್ರೇರಿತ ಹತ್ಯೆ ಎಂದು ಕರೆದಿದ್ದಾರೆ. ಟ್ರಂಪ್ ಅವರ ಆಪ್ತ ಮತ್ತು ಕಟ್ಟಾ ಬಲಪಂಥೀಯ ಕಾರ್ಯಕರ್ತ ಕಿರ್ಕ್, ಟರ್ನಿಂಗ್ ಪಾಯಿಂಟ್ WTí ರಾಜಕೀಯ ಸಂಸ್ಥೆಯ ಸಹಸಂಸ್ಥಾಪಕರಾಗಿದ್ದರು. ಬುಧವಾರ ಚಾರ್ಲಿ ಕಿರ್ಕ್ ಮೇಲೆ ಗುಂಡಿನ ದಾಳಿ ನಡೆಸಿದ ಆರೋಪಿ ಸ್ಥಳದಿಂದ ಪರಾರಿಯಾಗುತ್ತಿರುವ ದೃಶ್ಯಗಳು ಮತ್ತು ಫೋಟೋಗಳ ಸರಣಿಯನ್ನು ಎಫ್‌ಬಿಐ ಬಿಡುಗಡೆ ಮಾಡಿತ್ತು.

### ಅಮೆರಿಕಕ್ಕೆ ಭಾಗವತ್ ತಿರುಗೇಟು



**ನಾಗ್ಪುರ:** ನಮ್ಮ ದೇಶವು ಆರ್ಥಿಕವಾಗಿ ಸದೃಢವಾಗಬಹುದು ಎಂಬ ಆತಂಕದಿಂದಲೇ, ಅಮೆರಿಕ ನಮ್ಮ ಮೇಲೆ ಹೆಚ್ಚಿನ ಸುಂಕ ವಿಧಿಸಲಾಗಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ತಿಳಿಸಿದರು. ಆದರೆ ಇಂತಹ ಕ್ರಮಗಳು ಸ್ವಯಂ ಕೇಂದ್ರಿತ ವಿಧಾನದ ಪರಿಣಾಮ ಗಳಾಗಿವೆ' ಎಂದು ಯಾವುದೇ ದೇಶದ ಹೆಸರು ಉಲ್ಲೇಖಿಸದೆ ಅವರು ಪ್ರಸ್ತಾಪಿಸಿದರು. ಇಲ್ಲಿ ನಡೆದ ಬ್ರಹ್ಮಕುಮಾರಿಯ 'ವಿಶ್ವಶಾಂತಿ ಸರೋವರ'ದ 7ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಭಾರತವು ಹೆಚ್ಚು ಶಕ್ತಿಶಾಲಿಯಾಗಿ ಬೆಳೆದರೆ ಏನಾಗಬಹುದೋ ಎಂದು ಇಡೀ ಜಗತ್ತು ಆತಂಕದಲ್ಲಿದೆ. ಹೀಗಾಗಿಯೇ, ಭಾರತದ ವಸ್ತುಗಳಿಗೆ ಹೆಚ್ಚು ಸುಂಕ ವಿಧಿಸಲಾಗುತ್ತಿದೆ. ಆದರೆ ನಾವೇನೂ ಮಾಡಿಲ್ಲ, ಏಳು ಸಮುದ್ರದಿಂದ ದೂರವಿರುವಾಗ, ಯಾವುದೇ ಸಂಪರ್ಕ ಇಲ್ಲದಿರುವಾಗ ನಮಗೇಕೆ ಭಯ?' ಎಂದು ಅವರು ಇದೇ ವೇಳೆ ಪ್ರಶ್ನಿಸಿದರು.

ವಿರಾಮ
ಪ್ರತಿ ಭಾನುವಾರ

ಸಿ.ಪಿ.ಆರ್ ಭಾರತದ 15ನೇ ಉಪರಾಷ್ಟ್ರಪತಿ | ಮೋದಿ, ಧನ್‌ಕರ್ ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿ ಭಾಗಿ

# ಸಿ.ಪಿ ರಾಧಾಕೃಷ್ಣನ್ ಉಪರಾಷ್ಟ್ರಪತಿಯಾಗಿ ಪ್ರಮಾಣ ವಚನ

**ದೆಹಲಿ:** ನೂತನ ಉಪ ರಾಷ್ಟ್ರಪತಿಯಾಗಿ ಸಿ.ಪಿ ರಾಧಾಕೃಷ್ಣನ್ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣವಚನ ಬೋಧಿಸಿದರು. ಅವರು ದೇಶದ 15ನೇ ಉಪರಾಷ್ಟ್ರಪತಿಯಾಗಿದ್ದು, ಪ್ರಮಾಣವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮಾಜಿ ಉಪರಾಷ್ಟ್ರಪತಿಗಳಾದ ಜಗದೀಪ್ ಧನ್‌ಕರ್, ಎಂ. ವೆಂಕಯ್ಯ ನಾಯ್ಡು, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲ ಹೊಂದಿರುವ ಸಿ.ಪಿ.ಆರ್ ಅವರ ವಿರುದ್ಧ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಇಂಡಿ ಮೈತ್ರಿ ಒಕ್ಕೂಟದ ಅಭ್ಯರ್ಥಿಯಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಸ್ಪರ್ಧಿಸಿದ್ದರು. ಎನ್‌ಡಿಎ ಮೈತ್ರಿಪಕ್ಷಗಳ ಸದಸ್ಯರು ರಾಧಾಕೃಷ್ಣನ್‌ಗೆ ಮತ ಹಾಕಿದ್ದರೆ, ಇಂಡಿಯಾ ಒಕ್ಕೂಟದ ಕೆಲವು ಸದಸ್ಯರು ಅಡ್ಡ ಮತದಾನ ಮಾಡಿದ್ದರು. ಹಾಗಾಗಿ 752 ಒಟ್ಟು ಮತಗಳ ಪೈಕಿ 452 ಮತ ಪಡೆದು, 152 ಮತಗಳ ಅಂತರದಲ್ಲಿ ಸಿ.ಪಿ. ರಾಧಾಕೃಷ್ಣನ್ ಗೆಲುವು ಸಾಧಿಸಿದ್ದರು. ಎಸ್.ರಾಧಾಕೃಷ್ಣನ್ (1952 ರಿಂದ 1962) ಮತ್ತು ಆರ್.ವೆಂಕಟರಾಮನ್ (1984ರಿಂದ 1987) ನಂತರ, ರಾಧಾಕೃಷ್ಣನ್ ತಮಿಳುನಾಡು ಮೂಲದ ಮೂರನೇ ಉಪರಾಷ್ಟ್ರಪತಿಯಾಗಿದ್ದಾರೆ.

ನೂತನ ಉಪರಾಷ್ಟ್ರಪತಿ ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಮಾಣವಚನ ಬೋಧನೆ

**ವಿರೋಧ ಪಕ್ಷಗಳ ಒಗ್ಗಟ್ಟು ವಿಫಲ:** ಈ ಬಾರಿಯ ಉಪರಾಷ್ಟ್ರಪತಿ ಚುನಾವಣೆ ಈ ಬಾರಿಯೂ ಗೌಪ್ಯವಾಗಿ ಬ್ಯಾಲೆಟ್ ಪೇಪರ್‌ನಲ್ಲಿ ನಡೆದಿತ್ತು. ಆದರೆ ಚುನಾವಣೆಯ ಫಲಿತಾಂಶವು ಅಡ್ಡ ಮತದಾನ ಆಗಿರುವುದನ್ನು ಸಾಬೀತುಪಡಿಸಿತು. ಈ ಫಲಿತಾಂಶವು ಎನ್‌ಡಿಎ ಅಭ್ಯರ್ಥಿಗೆ ನಿರ್ಣಾಯಕ ಗೆಲುವು ತಂದುಕೊಟ್ಟಿದ್ದು ಒಂದು ಕಡೆಯಾದರೆ, ಇನ್ನೊಂದು ಕಡೆ ರಾಜಕೀಯ ಭಿನ್ನಾಭಿಪ್ರಾಯದ ನಡುವೆಯೂ ವಿರೋಧ ಪಕ್ಷಗಳು ಒಗ್ಗೂಡುವ ಸಾಮರ್ಥ್ಯದ ಬಗ್ಗೆ ನಿರ್ಣಾಯಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

### ಇದುವರೆಗೆ ಉಪರಾಷ್ಟ್ರಪತಿಗಳಾಗಿದ್ದವರು

1. ಡಾ. ಎಸ್. ರಾಧಾಕೃಷ್ಣನ್: ಅವಧಿ: 13 ಮೇ, 1952 -12 ಮೇ, 1962
2. ಡಾ. ಜಾಕಿರ್ ಹುಸೇನ್: 13 ಮೇ, 1962 -12 ಮೇ, 1967
3. ವಿ. ವಿ. ಗಿರಿ: 13 ಮೇ, 1967-3 ಮೇ, 1969
4. ಗೋಪಾಲ್ ಸ್ವರೂಪ ಪಾಠಕ್: 31 ಆಗಸ್ಟ್, 1969 -30 ಆಗಸ್ಟ್, 1974
5. ಬಿ. ಡಿ. ಜತ್ತಿ: 31 ಆಗಸ್ಟ್, 1974-30 ಆಗಸ್ಟ್, 1979
6. ಮೊಹಮ್ಮದ್ ಹಿದಾಯತುಲ್ಲಾ: 31 ಆಗಸ್ಟ್, 1979-30 ಆಗಸ್ಟ್, 1984
7. ಆರ್. ವೆಂಕಟರಾಮನ್: 31 ಆಗಸ್ಟ್, 1984-24 ಜುಲೈ, 1987
8. ಡಾ. ಶಂಕರ್ ದಯಾಳ್ ಶರ್ಮಾ: 3 ಸೆಪ್ಟೆಂಬರ್, 1987-24 ಜುಲೈ, 1992
9. ಕೆ. ಆರ್. ನಾರಾಯಣನ್: 21 ಆಗಸ್ಟ್ 1992 24 ಜುಲೈ 1997
10. ಕೃಷ್ಣಕಾಂತ್: 21 ಆಗಸ್ಟ್, 1997-27 ಜುಲೈ, 2002
11. ಭೈರೋನ್ ಸಿಂಗ್ ಶೇಖಾವತ್: 19 ಆಗಸ್ಟ್, 2002-21 ಜುಲೈ, 2007
12. ಮೊಹಮ್ಮದ್ ಅನ್ಸಾರಿ: 11 ಆಗಸ್ಟ್, 2007-10 ಆಗಸ್ಟ್, 2017-2 ಅವಧಿ
13. ಎಂ. ವೆಂಕಯ್ಯ ನಾಯ್ಡು: 11 ಆಗಸ್ಟ್, 2017-10 ಆಗಸ್ಟ್, 2022
14. ಜಗದೀಪ್ ಧನಕರ್: 11 ಆಗಸ್ಟ್, 2022- 21 ಜುಲೈ, 2025ರ ವರೆಗೆ



ಪ್ರಧಾನಿ ಮೋದಿ ಮತ್ತು ರಾಷ್ಟ್ರಪತಿಯ ಜೊತೆ ನೂತನ ಉಪರಾಷ್ಟ್ರಪತಿ ಸಿ.ಪಿ.ಆರ್

### ಸಾರ್ವಜನಿಕವಾಗಿ ಕಾಣಿಸಿಕೊಂಡ ಧನ್‌ಕರ್

ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ಜಗದೀಪ್ ಧನ್‌ಕರ್ ಮೊದಲ ಬಾರಿಗೆ ಶುಕ್ರವಾರ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಸಿ.ಪಿ. ಆರ್. ಅವರ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಧನ್‌ಕರ್ ಪಾಲ್ಗೊಂಡು ಅಭಿನಂದನೆ ಸಲ್ಲಿಸಿದ್ದಾರೆ. ಅನಾರೋಗ್ಯದ ಕಾರಣ ನೀಡಿ ಜುಲೈ 21ರಂದು ಉಪರಾಷ್ಟ್ರಪತಿ ಹುದ್ದೆಗೆ ಧನ್‌ಕರ್ ರಾಜೀನಾಮೆ ಸಲ್ಲಿಸಿದ ಬಳಿಕ, ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿರಲಿಲ್ಲ.

ಕಠ್ಮಂಡುವಿನಲ್ಲಿ ಪ್ರಯಾಣಿಕರಿದ್ದ ಬಸ್‌ನ ಕಿಟಕಿಗಳು ಪುಡಿ ಪುಡಿ

## ಭಾರತೀಯರಿದ್ದ ಬಸ್ ಮೇಲೆ ಕಲ್ಲು ತೂರಾಟ

**ಕಠ್ಮಂಡು:** ನೇಪಾಳದಲ್ಲಿ ಅಶಾಂತಿ ಮುಂದುವರೆದಿರುವಂತೆಯೇ ಕಠ್ಮಂಡುವಿನ ಪಶುಪತಿನಾಥ ದೇವಾಲಯದಿಂದ ವಾಪಸಾಗುತ್ತಿದ್ದಾಗ ಭಾರತದ ಪ್ರವಾಸಿ ಬಸ್‌ವೊಂದರ ಮೇಲೆ ಪ್ರತಿಭಟನಾಕಾರರು ದಾಳಿ ನಡೆಸಿದ್ದಾರೆ. ಇದರಿಂದಾಗಿ ಅನೇಕ ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಬಸ್ ಚಾಲಕ ಹೇಳಿದ್ದಾರೆ.

ಭಾರತ-ನೇಪಾಳ ಗಡಿಯಲ್ಲಿರುವ ಸೊನೌಲಿ ಬಳಿ ಈ ಘಟನೆ ನಡೆದಿದ್ದು, 49 ಭಾರತೀಯ ಪ್ರವಾಸಿಗರಿದ್ದ ಬಸ್ ಮೇಲೆ ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿದ್ದು, ಕಿಟಕಿಗಳು ಪುಡಿ ಪುಡಿಯಾಗಿವೆ. ಮಹಿಳೆಯರು, ವೃದ್ಧರು ಸೇರಿದಂತೆ ಅನೇಕ ಮಂದಿ ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಚಾಲಕ ಹೇಳಿದ್ದಾರೆ. ಸ್ಥಳೀಯ ಅಧಿಕಾರಿಗಳು ಗಾಯಾಳುಗಳನ್ನು ಕಠ್ಮಂಡುವಿನ ಆಸ್ಪತ್ರೆಗೆ ದಾಖಲಿಸಿದ್ದಾರೆ, ಉಳಿದ ಪ್ರಯಾಣಿಕರನ್ನು ನೇಪಾಳ ಸರಕಾರದ ನೆರವಿನಿಂದ ಭಾರತೀಯ ರಾಯಭಾರ ಕಚೇರಿ ವ್ಯವಸ್ಥೆ ಮಾಡಿದ ವಿಶೇಷ ವಿಮಾನದಲ್ಲಿ ಭಾರತಕ್ಕೆ ವಾಪಸ್ ಕಳುಹಿಸಲಾಗಿದೆ. ಸೋನೌಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಸ್ ಚಾಲಕ ರಾಮು ನಿಶಾದ್, ಪಶುಪತಿನಾಥ ದೇವಾಲಯ ದಲ್ಲಿ ದರ್ಶನ ಮುಗಿಸಿ ಹಿಂತಿರುಗುತ್ತಿದ್ದಾಗ ಇದ್ದಕ್ಕಿದ್ದಂತೆ ಗುಂಪೊಂದು ನಮ್ಮ ಬಸ್ ಅನ್ನು ಸುತ್ತುವರೆದು ವಿನಾಕಾರಣ ದಾಳಿ ಮಾಡಿತು. ಮಹಿಳಾ ಮತ್ತು ವೃದ್ಧ ಪ್ರಯಾಣಿಕರಿದ್ದರು. ಆದರೆ ಪ್ರತಿಭಟನಾಕಾರರು ಅದನ್ನು ಲೆಕ್ಕಿಸಲಿಲ್ಲ ಎಂದು ಹೇಳಿದರು.

### ಉ.ಪ್ರ ಮಹಿಳೆಯ ಸಾವು

ಕಠ್ಮಂಡುವಿನಲ್ಲಿ ಪ್ರತಿಭಟನಾಕಾರರು ಹೋಟೆಲ್‌ಗೆ ಬೆಂಕಿ ಹಚ್ಚಿದ್ದರಿಂದ ಉತ್ತರ ಪ್ರದೇಶದ ಗಾಜಿಯಾಬಾದ್ ಮೂಲದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಮೃತ ಮಹಿಳೆಯನ್ನು ರಾಜೇಶ್ ಗೋಲಾ (57) ಎಂದು ಗುರುತಿಸಲಾಗಿದೆ. ಅವರು ತಮ್ಮ ಪತಿ ರಾಮ್‌ವೀರ್ ಸಿಂಗ್ ಗೋಲಾ ಜೊತೆ ಸೆ.7ರಂದು ನೇಪಾಳಕ್ಕೆ ತೆರಳಿದ್ದರು. ರಾಮ್‌ವೀರ್ ಸಿಂಗ್ ಕುಟುಂಬ ತಂಗಿದ್ದ ಹೋಟೆಲ್‌ಗೆ ಸೆ.9 ರಂದು ಬೆಂಕಿ ಹಚ್ಚಿದ್ದರು. ಹೊತ್ತಿ ಉರಿಯುತ್ತಿದ್ದ ಹೋಟೆಲ್‌ನಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಗೋಲಾ ದಂಪತಿ ಪರದಾಡಿದ್ದರು. ಆ ವೇಳೆ ರಾಜೇಶ್ ಗೋಲಾ ಪತಿಯಿಂದ ಬೇರ್ಪಟ್ಟು, ಜೀವ ಉಳಿಸಿಕೊಳ್ಳಲು ಕಟ್ಟಡದಿಂದ ಜಿಗಿದಾಗ, ದುರಾದೃಷ್ಟವಶಾತ್ ಅವರು ಸಾವನ್ನಪ್ಪಿದ್ದಾರೆ.

ವಾಷಿಂಗ್ ಮೆಷಿನ್ ವಿಚಾರಕ್ಕೆ ವಾಗ್ವಾದ | ಪತ್ನಿ- ಪುತ್ರನ ಎದುರೇ ಹತ್ಯೆ

## ಅಮೆರಿಕದಲ್ಲಿ ರಾಜ್ಯದ ವ್ಯಕ್ತಿಯ ಶಿರಚ್ಛೇದ

**ಡಲ್ಲಾಸ್:** ಅಮೆರಿಕದ ಡಲ್ಲಾಸ್‌ನಲ್ಲಿ ಕರ್ನಾಟಕ ಮೂಲದ ವ್ಯಕ್ತಿಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಈ ಘಟನೆ ಸೆಪ್ಟೆಂಬರ್ 10ರಂದು ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿರುವ ಡೌನ್‌ಟೌನ್ ಸೂಟ್ಸ್ ಮೋಟೆಲ್‌ನಲ್ಲಿ ನಡೆದಿದೆ. 50 ವರ್ಷದ ಚಂದ್ರ ನಾಗಮಲ್ಲಯ್ಯ ಅವರನ್ನು ಅವರ ಪತ್ನಿ ಮತ್ತು ಮಗನ ಎದುರೇ ರುಂಡ ಕತ್ತರಿಸಿ ಕೊಲೆ ಮಾಡಲಾಗಿದೆ.

ಡಲ್ಲಾಸ್ ಪೊಲೀಸರು ಯೋರ್ಡಾನಿಸ್ ಕೊಬೋಸ್-ಮಾರ್ಟಿನೆಜ್ ಅವರನ್ನು ಕೊಲೆ ಪ್ರಕರಣದಲ್ಲಿ ಶಂಕಿತ ಎಂದು ಗುರುತಿಸಿದ್ದು ಆತನನ್ನು ಬಂಧಿಸಿ, ಕೊಲೆ ಆರೋಪ ಹೊರಿಸಲಾಗಿದೆ. ಜೈಲು ದಾಖಲೆಗಳ ಪ್ರಕಾರ, ಆರೋಪಿಗೆ ಬಾಂಡ್ ರಹಿತ ಬಂಧನ ಆದೇಶ ಹೊರಡಿಸಲಾಗಿದೆ.

ನಾಗಮಲ್ಲಯ್ಯನು ತನ್ನ ಸಹೋದ್ಯೋಗಿ ಯೋರ್ಡಾನಿಸ್ ಕೋಬೋಸ್-ಮಾರ್ಟಿನೆಜ್ ಜೊತೆ ಒಡೆದ ವಾಷಿಂಗ್ ಮೆಷಿನ್ ಬಗ್ಗೆ ನಡೆದ ವಾಗ್ವಾದದ ನಂತರ ಹತ್ಯೆ ಮಾಡಲಾಗಿದೆ. ಸಿಸಿಟಿವಿ ದೃಶ್ಯಗಳಲ್ಲಿ ಕೋಬೋಸ್-ಮಾರ್ಟಿನೆಜ್ ಚಾಕುವನ್ನು ಹೊರತೆಗೆದು ನಾಗಮಲ್ಲಯ್ಯ ಮೇಲೆ ಹಲ್ಲೆ ನಡೆಸುತ್ತಿರುವುದು ಕಂಡುಬಂದಿದೆ. ಸೆರೆಯಾದ ದೃಶ್ಯಾವಳಿಗಳಲ್ಲಿ ಕೋಬೋಸ್-ಮಾರ್ಟಿನೆಜ್ ಮಚ್ಚು ಹೊರ ತೆಗೆದು ನಾಗಮಲ್ಲಯ್ಯನವರ ಮೇಲೆ ಸತತವಾಗಿ ಹಲ್ಲೆ ನಡೆಸುತ್ತಿರುವುದು ಸೆರೆಯಾಗಿದೆ. ಗಾಯಗೊಂಡ ನಾಗಮಲ್ಲಯ್ಯ ಅವರು ಪತ್ನಿ ಮತ್ತು 18 ವರ್ಷದ ಪುತ್ರನಿದ್ದ ಮೋಟೆಲ್ ಕಚೇರಿಯತ್ತ ಓಡಿಹೋಗಿದ್ದಾರೆ. ಆದರೆ ಆರೋಪಿ ಅವರನ್ನು ಹಿಂಬಾಲಿಸಿ, ನಿರಂತರವಾಗಿ ಮಚ್ಚಿನಿಂದ ಹಲ್ಲೆ ಮಾಡಿದ್ದಾನೆ ಎಂದು ತಿಳಿದು ಬಂದಿದೆ. ಕೋಬೋಸ್-ಮಾರ್ಟಿನ್ ಹೂಸ್ಟನ್‌ನಲ್ಲಿ ವಾಹನ ಕಳ್ಳತನ ಮತ್ತು ಹಲ್ಲೆ ಸೇರಿದಂತೆ ಅಪರಾಧ ಹಿನ್ನೆಲೆ ಹೊಂದಿದ್ದಾನೆ. ನಾಗಮಲ್ಲಯ್ಯ ತುಂಬಾ ಮೃದು ಸ್ವಭಾವದವರು ಎನ್ನಲಾಗುತ್ತಿದೆ. ಈ ಊಹಿಸಲಾಗದ ಘಟನೆ ಹಠಾತ್ ಮಾತ್ರವಲ್ಲ, ಅತ್ಯಂತ ಆಘಾತ ಉಂಟು ಮಾಡಿದೆ ಎಂದು ಸ್ನೇಹಿತರು ಹೇಳಿದ್ದಾರೆ.

ಆರೋಪಿ ಯೋರ್ಡಾನಿಸ್ ಕೊಬೋಸ್ ಮಾರ್ಟಿನೆಜ್ ಮತ್ತು ಹತ್ಯೆಗೀಡಾದ ಚಂದ್ರ ನಾಗಮಲ್ಲಯ್ಯ

### ರಾಯಭಾರಿ ಕಚೇರಿಯ ಸಂತಾಪ

ನಾಗಮಲ್ಲಯ್ಯ ಅವರ ದುರಂತ ಸಾವಿಗೆ ಭಾರತೀಯ ರಾಯಭಾರಿ ಕಚೇರಿ ಸಂತಾಪ ಸೂಚಿಸಿದೆ. ಅವರ ಕೆಲಸದ ಸ್ಥಳದಲ್ಲಿ ಅವರನ್ನು ಕ್ರೂರವಾಗಿ ಕೊಲ್ಲಲಾಗಿದೆ ಎಂದು ಹೇಳಿದ್ದು, ಕುಟುಂಬದೊಂದಿಗೆ ನಾವು ಸಂಪರ್ಕದಲ್ಲಿದ್ದೇವೆ ಹಾಗೂ ಸಾಧ್ಯವಿರುವ ಎಲ್ಲ ರೀತಿಯ ನೆರವು ನೀಡುತ್ತೇವೆ, ಆರೋಪಿ ಡಲ್ಲಾಸ್ ಪೊಲೀಸರ ವಶದಲ್ಲಿದ್ದಾನೆ ಎಂದು ರಾಯಭಾರಿ ಕಚೇರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

## ವೈಷ್ಣೋದೇವಿ ಯಾತ್ರೆ ಪುನರಾರಂಭ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದಲ್ಲಿ ಸುರಿದ ಭಾರಿ ಮಳೆ, ಭೂಕುಸಿತ ಮತ್ತು ಪ್ರತಿಕೂಲ ಹವಾಮಾನದ ಕಾರಣದಿಂದ ಸ್ಥಗಿತಗೊಂಡಿದ್ದ ವೈಷ್ಣೋದೇವಿ ಯಾತ್ರೆ ಪುನರಾರಂಭಕ್ಕೆ ದಿನಾಂಕ ನಿಗದಿಯಾಗಿದೆ. ಸೆಪ್ಟೆಂಬರ್ 14ರಂದು ವೈಷ್ಣೋ ದೇವಿ ಯಾತ್ರೆಯನ್ನು ಮತ್ತೆ ಆರಂಭಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಭೂಕುಸಿತ, ಮೇಘಸ್ಫೋಟ ಸೇರಿದಂತೆ ಪ್ರತಿಕೂಲ ಹವಾಮಾನದ ಕಾರಣದಿಂದ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ವೈಷ್ಣೋದೇವಿ ದೇವಾಲಯದ ಯಾತ್ರೆ ಕಳೆದ 19 ದಿನಗಳಿಂದ ಸ್ಥಗಿತಗೊಂಡಿತ್ತು. ಭಾರಿ ಮಳೆಯ ಕಾರಣದಿಂದ ತ್ರಿಕೂಟ ಬೆಟ್ಟದಲ್ಲಿ ಭೂಕುಸಿತ ಉಂಟಾಗಿತ್ತು. ಈ ವೇಳೆ ಸುಮಾರು 34 ಯಾತ್ರಿಕರು ಜೀವ ಕಳೆದುಕೊಂಡು ಹಲವರು ಗಾಯಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸ್ಥಳೀಯಾಡಳಿತ ವೈಷ್ಣೋ ದೇವಿ ಯಾತ್ರೆಯನ್ನು ಸ್ಥಗಿತಗೊಳಿಸಿತ್ತು. ಅದಾದ ಬಳಿಕ ಈ ದಾರಿಯನ್ನು ಸಂಪೂರ್ಣವಾಗಿ ಮುಚ್ಚಲಾಗಿತ್ತು. ಹೀಗಾಗಿ ನೂರಾರು ಮಂದಿ ಕತ್ರಾದಲ್ಲಿ ವಾಸ್ತವ್ಯ ಹೂಡಿ ಯಾತ್ರೆ ಪುನರಾರಂಭಕ್ಕಾಗಿ ಕಾಯುತ್ತಿದ್ದರು.

ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗೆ ಬಾಂಬ್ ಬೆದರಿಕೆಯ ಇ-ಮೇಲ್

## ನ್ಯಾಯಾಲಯಗಳಿಗೆ ಬಾಂಬ್ ಬೆದರಿಕೆ

**ಮುಂಬೈ:** ದೆಹಲಿ ಹೈಕೋರ್ಟ್‌ಗೆ ಬಾಂಬ್ ಬೆದರಿಕೆ ಬೆನ್ನಲ್ಲೇ ಬಾಂಬೆ ಹೈಕೋರ್ಟ್‌ಗೂ ಶುಕ್ರವಾರ ಮಧ್ಯಾಹ್ನ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದ್ದು, ಇದು ತೀವ್ರ ಭೀತಿಯನ್ನು ಸೃಷ್ಟಿಸಿದ ಕಾರಣ, ಕೋರ್ಟ್ ಕಲಾಪವನ್ನು ಸ್ಥಗಿತಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಬೆದರಿಕೆ ಇ-ಮೇಲ್ ಬಂದ ನಂತರ, ಹೈಕೋರ್ಟ್ ಸಂಕೀರ್ಣವನ್ನು ಖಾಲಿ ಮಾಡಲಾಯಿತು ಮತ್ತು ಶೋಧ ಕಾರ್ಯಾಚರಣೆ ಪ್ರಾರಂಭಿಸಲಾ ಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ. ಬಾಂಬೆ ಹೈಕೋರ್ಟ್‌ನ ಅಧಿಕೃತ ಇ-ಮೇಲ್ ವಿಳಾಸಕ್ಕೆ ಬೆದರಿಕೆ ಇ-ಮೇಲ್ ಬಂದಿದ್ದು, ಕಟ್ಟಡದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಾಹಿತಿ ಪಡೆದ ನಂತರ, ಪೊಲೀಸ್ ಸಿಬ್ಬಂದಿ ಹೈಕೋರ್ಟ್‌ಗೆ ಧಾವಿಸಿದರು. ಎಲ್ಲಾ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ಹಾಗೂ ಸಂದರ್ಶಕರನ್ನು ಮುನ್ನೆಚ್ಚರಿಕೆ ಕ್ರಮವಾಗಿ ಆವರಣವನ್ನು ಖಾಲಿ ಮಾಡುವಂತೆ ಕೇಳಕೊಳ್ಳಲಾಯಿತು ಎಂದು ಅವರು ಹೇಳಿದರು. ಕಟ್ಟಡವನ್ನು ಖಾಲಿ ಮಾಡಿಸಿ, ಬಾಂಬ್ ಪತ್ತೆ ಮತ್ತು ವಿಲೇವಾರಿ ದಳ(ಃಆಆಖ) ಮತ್ತು ಶ್ವಾನ ದಳದ ಸಹಾಯದಿಂದ ಪ್ರಸ್ತುತ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಗರದ ವಿವಿಧ ಪ್ರಮುಖ ಸಂಸ್ಥೆಗಳು ಮತ್ತು ಶಾಲೆಗಳಿಗೆ ಇದೇ ರೀತಿಯ ಬಾಂಬ್ ಬೆದರಿಕೆಗಳು ಬಂದಿವೆ. ಯಾರೂ ಭಯಪಡುವ ಅಗತ್ಯವಿಲ್ಲ ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

## ಟ್ರಂಪ್ ವಿಚಿತ್ರ ವರ್ತನೆ: ತರೂರ್ ತೀವ್ರ ವಾಗ್ದಾಳಿ

**ಸಿಂಗಾಪುರ:** ಅಮೆರಿಕ ವಿಧಿಸಿರುವ ಸುಂಕಗಳು ಭಾರತದ ಮೇಲೆ ಪರಿಣಾಮ ಬೀರಿದ್ದು, ಜನರು ಈಗಾಗಲೇ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಶುಕ್ರವಾರ ಹೇಳಿದ್ದಾರೆ. ಇದಕ್ಕಿದ್ದಂತೆ ಮನಸ್ಸು ಬದಲಾಯಿಸುವ ಟ್ರಂಪ್, ರಾಜತಾಂತ್ರಿಕ ನಡವಳಿಕೆಯ ಸಾಂಪ್ರದಾಯಿಕ ಮಾನದಂಡಗಳನ್ನು ಗೌರವಿಸುತ್ತಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ರಷ್ಯಾದಿಂದ ತೈಲ ಖರೀದಿಗಾಗಿ ಶೇ. 25ರಷ್ಟು ಹೆಚ್ಚುವರಿ ಸುಂಕ ಸೇರಿದಂತೆ ಒಟ್ಟಾರೆ ಶೇ. 50ರಷ್ಟು ಸುಂಕವನ್ನು ಅಮೆರಿಕ ವಿಧಿಸಿದೆ. ಸುಂಕದ ಪರಿಣಾಮವನ್ನು ತಗ್ಗಿಸಲು ಭಾರತವು ರಫ್ತು ಮಾರುಕಟ್ಟೆಗಳನ್ನು ವೈವಿಧ್ಯಗೊಳಿಸಬೇಕಾಗಿದೆ ಎಂದು ಹೇಳಿದ ತರೂರ್, ಸೂರತ್‌ನಲ್ಲಿ ಚಿನ್ನಾಭರಣ, ಸಮುದ್ರ ಆಹಾರ ಮತ್ತು ಉತ್ಪಾದನಾ ವಲಯಗಳಲ್ಲಿ 1.35 ಲಕ್ಷ ಜನರು ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ರಿಯಲ್ ಎಸ್ಟೇಟ್ ವಲಯದ ಭಾರತದ ಅತ್ಯುನ್ನತ ಉದ್ಯಮ ಸಂಸ್ಥೆಯಾದ ಕ್ರೆಡಾಯ್ ಆಯೋಜಿಸಿದ್ದ ಸಮ್ಮೇಳನದಲ್ಲಿ ಭಾರತ-ಅಮೆರಿಕ ಸಂಬಂಧ ಮತ್ತು ಸುಂಕಗಳ ಹೇರಿಕೆಗೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ತರೂರ್, ಟ್ರಂಪ್ ಇದ್ದಕ್ಕಿದ್ದಂತೆ ಮನಸ್ಸನ್ನು ಬದಲಾಯಿಸುವ ವ್ಯಕ್ತಿಯಾಗಿದ್ದಾರೆ. ಅಮೆರಿಕದ ವ್ಯವಸ್ಥೆಯು ಅಧ್ಯಕ್ಷರಿಗೆ ಅದ್ಭುತವಾದ ಅವಕಾಶ ನೀಡಿದೆ. ಅವರಿಗಿಂತ ಮುನ್ನ ಅಮೆರಿಕದಲ್ಲಿ ಆಳ್ವಿಕೆ ನಡೆಸಿದ 44 ಅಥವಾ 45 ಅಧ್ಯಕ್ಷರು ಶ್ವೇತಭವನದಲ್ಲಿ ಎಂದಿಗೂ ಈ ರೀತಿ ವರ್ತಿಸಿರಲಿಲ್ಲ ಎಂದು ಟೀಕಾ ಪ್ರಹಾರ ನಡೆಸಿದರು.

ಟಿಎಂಸಿಗೆ 2, ಬಿಜೆಡಿಗೆ 3 ಮತ್ತು ಟಿಡಿಪಿಗೆ 4ನೇ ಸ್ಥಾನ

## ಬಿಆರ್‌ಎಸ್ ಶ್ರೀಮಂತ ಪ್ರಾದೇಶಿಕ ಪಕ್ಷ

**ವಿಜಯವಾಡ:** ಆಂಧ್ರ ಪ್ರದೇಶದ ಆಡಳಿತಾರೂಢ ತೆಲುಗು ದೇಶಂ ಪಕ್ಷ(ಟಿಡಿಪಿ) ತನ್ನ ಆದಾಯದಲ್ಲಿ ಮೂರು ಪಟ್ಟು ಹೆಚ್ಚಿಸಿಕೊಂಡಿದ್ದು, 2023-24ರ ಆರ್ಥಿಕ ವರ್ಷದಲ್ಲಿ 285.07 ಕೋಟಿ ರು. ಆದಾಯ ಗಳಿಸಿದೆ ಎಂದು ವರದಿ ತಿಳಿಸಿದೆ.

ಟಿಡಿಪಿ 2022-23ರ ಆರ್ಥಿಕ ವರ್ಷದಲ್ಲಿ 63.9 ಕೋಟಿ ರು. ಆದಾಯ ಗಳಿಸಿತ್ತು. ಅಧಿಕಾರಕ್ಕೆ ಬಂದ ನಂತರ ತನ್ನ ಆದಾಯವನ್ನು ಮೂರು ಪಟ್ಟು ಹೆಚ್ಚಿಸಿಕೊಳ್ಳುವ ಮೂಲಕ ದೇಶದ ನಾಲ್ಕನೇ ಶ್ರೀಮಂತ ಪ್ರಾದೇಶಿಕ ಪಕ್ಷವಾಗಿ ಹೊರಹೊಮ್ಮಿದೆ, ಅಲ್ಲದೆ ದೇಣಿಗೆಗಳನ್ನು ಪಡೆಯುವಲ್ಲಿ ಅಗ್ರಸ್ಥಾನದಲ್ಲಿದೆ.

ವಿರೋಧ ಪಕ್ಷವಾದ ವೈಎಸ್‌ಆರ್‌ಸಿಪಿ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ 191 ಕೋಟಿ ರು. (1.6 ಪಟ್ಟು ಹೆಚ್ಚಳ) ಆದಾಯ ಗಳಿಸಿದೆ. ಪ್ರಾದೇಶಿಕ ಪಕ್ಷಗಳ ಆದಾಯದ ಗಳಿಕೆಯನ್ನು ಭಾರತದ ಚುನಾವಣಾ ಆಯೋಗದಿಂದ (ಇಸಿಐ) ದಿಂದ ಪಡೆಯಲಾಗಿದೆ ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ತಿಳಿಸಿದೆ. ಆಂಧ್ರ ರಾಜ್ಯದ ಪ್ರಸ್ತುತ ಉಪಮುಖ್ಯಮಂತ್ರಿ ಕೆ. ಪವನ್ ಕಲ್ಯಾಣ್ ಸ್ಥಾಪಿಸಿದ ಜನ ಸೇನಾ ಪಕ್ಷವು ಇಸಿಐಗೆ ಸಲ್ಲಿಸಿದ ಆದಾಯ ಮತ್ತು ವೆಚ್ಚದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. 2013ರಲ್ಲಿ ಸ್ಥಾಪನೆಯಾದ ಈ ಪಕ್ಷವು 2019 ಮತ್ತು 2024ರಲ್ಲಿ ಎರಡು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿತ್ತು.

ವರದಿಯ ಪ್ರಕಾರ, ಭಾರತೀಯ ರಾಷ್ಟ್ರ ಸಮಿತಿ (ಬಿಆರ್‌ಎಸ್) 685.5 ಕೋಟಿ ರು. ಆದಾಯದೊಂದಿಗೆ ಅಗ್ರಸ್ಥಾನದಲ್ಲಿದೆ. ನಂತರ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್ (ಎಐಟಿಎಂಸಿ) 646 ಕೋಟಿ ರು. ಆದಾಯದೊಂದಿಗೆ ಎರಡನೇ ಸ್ಥಾನದಲ್ಲಿದ್ದು, ಬಿಜು ಜನತಾ ದಳ(ಬಿಜೆಡಿ) 297 ಕೋಟಿ ರು., ತೆಲುಗು ದೇಶಂ ಪಕ್ಷ(ಟಿಡಿಪಿ) 287 ಕೋಟಿ ರೂ. ಮತ್ತು ಯುವಜನ ರೈತ ಶ್ರಮಿಕ ಕಾಂಗ್ರೆಸ್ ಪಕ್ಷ(ವೈಎಸ್‌ಆರ್‌ಸಿಪಿ) 191 ಕೋಟಿ ರೂ. ಆದಾಯದೊಂದಿಗೆ ನಂತರದ ಸ್ಥಾನಗಳಲ್ಲಿವೆ.

ಕಳೆದ ವರ್ಷ ನಡೆದ ಚುನಾವಣೆಗಳಲ್ಲಿ ಟಿಡಿಪಿ 121 ಕೋಟಿ ರು. ಮತ್ತು ವೈಎಸ್‌ಆರ್‌ಸಿ 295 ಕೋಟಿ ರು. ಖರ್ಚು ಮಾಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

40 ಪ್ರಾದೇಶಿಕ ರಾಜಕೀಯ ಪಕ್ಷಗಳ ಒಟ್ಟು ಆದಾಯ 1,796 ಕೋಟಿ ರು.ಆಗಿದ್ದು, ಶೇಕಡಾ 70ಕ್ಕಿಂತ ಹೆಚ್ಚು ಚುನಾವಣಾ ಬಾಂಡ್‌ಗಳ(ಇಬಿ) ಮೂಲಕ ದೇಣಿಗೆ ಬಂದಿದೆ ಎಂದು ಇಸಿಐಗೆ ಸಲ್ಲಿಸಿದ ದಾಖಲೆಗಳಿಂದ ತಿಳಿದು ಬಂದಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ
ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 11/2025-26/724-28 ದಿನಾಂಕ: 11-09-2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1 ರನ್ವಯ ಏಕಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಮಡಿಕೇರಿ ಹಾಗೂ ಸೋಮವಾರಪೇಟೆ ಉಪ-ವಿಭಾಗದ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 3054-ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ಅಡಿಯ ಒಟ್ಟು -2 ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: 27437, 27488) ಹಾಗೂ ಲೆಕ್ಕಶೀರ್ಷಿಕೆ: 3054-ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ ಅಡಿಯ ಒಟ್ಟು -21 ಕಾಮಗಾರಿಗಳಿಗೆ (ಇಂಡೆಂಟ್ ಸಂಖ್ಯೆ: 27620, 27623, 27624, 27572, 27528, 27429, 27537, 27424, 27425, 27428, 27435, 27426, 27436, 27597, 27602, 27438, 27440, 27430, 27489, 27491, 27439) ಒಟ್ಟಾರೆ -23 ಕಾಮಗಾರಿಗಳನ್ನು ಇ-ಸಂಗ್ರಹಣಾ ವೇದಿಕೆ ಮೂಲಕ 1ನೇ ಕರೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್ ಗಿಟ್ಟ ಮೊತ್ತ ರೂ. 5.06 ಲಕ್ಷ ಮತ್ತು ಗರಿಷ್ಠ ರೂ. 13.53 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18-09-2025 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ
ಕೊಡಗು ವಿಭಾಗ, ಮಡಿಕೇರಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಸಿ (ಉ.ಕ.)
ಕ್ರಮ ಸಂಖ್ಯೆ: ಕೃಉಮಾಸ/ಶಿರಸಿ/ಅಭಿವೃದ್ಧಿ/273 /2025-26 ದಿನಾಂಕ: 03/09/2025
ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಶಿರಸಿ ವತಿಯಿಂದ 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999 ಹಾಗೂ ನಿಯಮಗಳು 2000 ರಂತೆ Standard Tender Document KW-3 ಪ್ರಕಾರ ಕೆಪಿಪಿಪಿ ಪೋರ್ಟಲ್ ಮುಖಾಂತರ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲಿನ ವೆಬ್‌ಸೈಟ್‌ನಲ್ಲಿ ಮತ್ತು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

| ಕ್ರ ಸಂ | ಟೆಂಡರ್ ಇಂಡೆಂಟ್ ನಂಬರ್ | ಟೆಂಡರ್‌ಗಿಟ್ಟ ಮೊತ್ತ ರೂ. (GST ಹೊರತುಪಡಿಸಿ) | ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ. |
|---|---|---|---|
| 1 | APMC/2025-26/OW/ WORK_INDENT669 | 89,75,560-37 | Date: 04-10-2025 Time : 4.00 PM |
| 2 | APMC/2025-26/OW/ WORK_INDENT668 | 91,18,660-83 | |

ಸಹಿ/- ಕಾರ್ಯದರ್ಶಿ,
ಕೃ.ಉ.ಮಾ.ಸ. ಶಿರಸಿ(ಉ.ಕ.).
ಸಹಿ/-ಆಡಳಿತಾಧಿಕಾರಿಗಳು,
ಕೃ.ಉ.ಮಾ.ಸ. ಶಿರಸಿ(ಉ.ಕ.)
DIPR/ADK/KSMCA/484/25-26 dt. 12.09.2025

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ
ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 06/2025-26
ದಿನಾಂಕ: 14.08.2025
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-I & II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 15.09.2025ರ 16.30 ರವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 16.09.2025ರಂದು 4.35 ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಹಿಂದಿರುಗಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:183/ಕೆಎಸ್‌ಎಂಸಿಎ/2025-26

2 ವರ್ಷಗಳ ಬಳಿಕ ಪ್ರಧಾನಿ ಈಶಾನ್ಯ ರಾಜ್ಯ ಪ್ರವಾಸ

## ಮೋದಿ ಇಂದು ಮಣಿಪುರ ಭೇಟಿ

**ಇಂಫಾಲ್:** ಈಶಾನ್ಯ ರಾಜ್ಯ ಭೀಕರ ಜನಾಂಗೀಯ ಹಿಂಸಾಚಾರಕ್ಕೆ ತುತ್ತಾಗಿ ಎರಡು ವರ್ಷಗಳ ನಂತರ, ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಮಣಿಪುರಕ್ಕೆ ಭೇಟಿ ನೀಡುತ್ತಿದ್ದು, 8,500 ಕೋಟಿ ರು. ಮೊತ್ತದ ಅಭಿವೃದ್ಧಿ ಯೋಜನೆ ಗಳನ್ನು ಅನಾವರಣಗೊಳಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಕಿಗಳು ಬಹುಸಂಖ್ಯಾತರಾಗಿರುವ ಚುರಾಚಂದ್‌ಪುರದ ಪೀಸ್ ಗ್ರೌಂಡ್‌ನಲ್ಲಿ ಪ್ರಧಾನಿ ಮೋದಿ 7,300 ಕೋಟಿ ರು.ಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಡಿಪಾಯ ಹಾಕಲಿದ್ದಾರೆ. ಮೈಟೈ ಬಹುಸಂಖ್ಯಾತ ಇಂಫಾಲ್‌ನಲ್ಲಿ ಒಟ್ಟು 1,200 ಕೋಟಿ ರು.ಗಳ ಮೂಲ ಸೌಕರ್ಯ ಯೋಜನೆಗಳನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.

ಮಣಿಪುರದಲ್ಲಿ ಹಿಂಸಾಚಾರದಿಂದ ಮೇ 2023 ರಿಂದ ಇದುವರೆಗೆ 260ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ. ಕುಕಿ ಮತ್ತು ಮೈಟೈ ಸಮುದಾಯಗಳ ನಡುವಿನ ಜನಾಂಗೀಯ ಕಲಹದ ನಂತರ ರಾಜ್ಯಕ್ಕೆ ಭೇಟಿ ನೀಡದ ಬಗ್ಗೆ ವಿರೋಧ ಪಕ್ಷಗಳು ಪದೇ ಪದೇ ಟೀಕಿಸುತ್ತಿರುವ ನಡುವೆಯೇ ಪ್ರಧಾನಿ ಮೋದಿ ನಾಳೆ ಭೇಟಿ ನೀಡುತ್ತಿದ್ದಾರೆ.

ಗುರುವಾರ ಸಂಜೆ ಚುರಾಚಂದ್‌ಪುರದ ಪೀಸ್ ಗ್ರೌಂಡ್ ಮತ್ತು ಇಂಫಾಲ್‌ನ ಕಾಂಗ್ಲಾ ಕೋಟೆಯಲ್ಲಿ ಪ್ರಧಾನಿಯವರ ಕಾರ್ಯಕ್ರಮದ ದೊಡ್ಡ ದೊಡ್ಡ ಜಾಹೀರಾತು ಫಲಕ ಕಾಣಿಸಿಕೊಂಡಿದೆ. ಇಂಫಾಲ್‌ನ ಪ್ರಮುಖ ಸ್ಥಳವಾದ ಕೀಸಂಪತ್ ಜಂಕ್ಷನ್‌ನಲ್ಲಿ ಈ ಹೋರ್ಡಿಂಗ್ ಕಾಣಿಸಿಕೊಂಡಿದ್ದು, ಇದು ಬಿಜೆಪಿ ರಾಜ್ಯ ಪ್ರಧಾನ ಕಚೇರಿಗೂ ಹತ್ತಿರದಲ್ಲಿದೆ. ಪೀಸ್ ಗ್ರೌಂಡ್‌ನಲ್ಲಿ ನಡೆಯುವ ವಿವಿಐಪಿ ಕಾರ್ಯಕ್ರಮಕ್ಕೆ ಹಾಜರಾಗುವ ಸಾರ್ವಜನಿಕರು ಕೀ, ಪೆನ್ನು, ನೀರಿನ ಬಾಟಲಿ, ಬ್ಯಾಗ್, ಕರವಸ್ತ್ರ, ಛತ್ರಿ, ಲೈಟರ್, ಬೆಂಕಿಕಡ್ಡಿ ಪೆಟ್ಟಿಗೆ, ಬಟ್ಟೆಯ ತುಂಡು, ಯಾವುದೇ ಚೂಪಾದ ವಸ್ತುಗಳು ಅಥವಾ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ತರಬಾರದು ಎಂದು ರಾಜ್ಯ ಪೊಲೀಸ್ ಇಲಾಖೆ ಮನವಿ ಮಾಡಿದೆ.

ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ರಾಜೀನಾಮೆ ನೀಡಿದ ನಂತರ ಫೆಬ್ರವರಿಯಿಂದ ಮಣಿಪುರ ರಾಷ್ಟ್ರಪತಿ ಆಳ್ವಿಕೆಯಲ್ಲಿದೆ

## ಸ್ಪೈಸ್ ಜೆಟ್ ವಿಮಾನ: ತುರ್ತು ಲ್ಯಾಂಡಿಂಗ್

**ಮುಂಬೈ:** ಕಾಂಡ್ಲಾ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ನಂತರ ಸ್ಪೈಸ್‌ಜೆಟ್ ವಿಮಾನದ ಚಕ್ರ ಕಳಚಿ ಬಿದ್ದಿದ್ದು, ವಿಮಾನ ಮುಂಬೈ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಮೂಲಗಳು ತಿಳಿಸಿವೆ. ಶುಕ್ರವಾರದದು, ಕಾಂಡ್ಲಾದಿಂದ ಮುಂಬೈಗೆ ಪ್ರಯಾಣಿಸುತ್ತಿದ್ದ ಸ್ಪೈಸ್‌ಜೆಟ್ ಕ್ಯೂ400 ವಿಮಾನದ ಹೊರ ಚಕ್ರವು ಟೇಕ್ ಆಫ್ ಆದ ನಂತರ ರನ್‌ವೇಯಲ್ಲಿ ಕಳಚಿ ಬಿದ್ದಿರುವುದು ಕಂಡುಬಂದಿದೆ. ಆದರೂ ವಿಮಾನ ಮುಂಬೈಗೆ ತನ್ನ ಪ್ರಯಾಣವನ್ನು ಮುಂದುವರೆಸಿತು ಮತ್ತು ಸುರಕ್ಷಿತವಾಗಿ ಲ್ಯಾಂಡ್ ಆಗಿದೆ ಎಂದು ವಿಮಾನಯಾನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಸುರಕ್ಷಿತ ಲ್ಯಾಂಡಿಂಗ್ ನಂತರ, ವಿಮಾನವು ತನ್ನದೇ ಆದ ಸಾಮರ್ಥ್ಯದಿಂದ ಟರ್ಮಿನಲ್‌ಗೆ ಆಗಮಿಸಿದಾಗ ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿ ಇಳಿದರು ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ. ವಿಮಾನವು ಮುಂಬೈ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಮೂಲಗಳು ತಿಳಿಸಿವೆ.

## ಸಮಾಚಾರ ಸಣ್ಣದಲ್ಲ

### ಅದಾನಿ ಸಮೂಹದಿಂದ ಎಫ್‌ಆರ್‌ಎ ಉಲ್ಲಂಘನೆ

**ದೆಹಲಿ:** ಆದಾನಿ ಸಮೂಹವು, ಮಧ್ಯಪ್ರದೇಶದಲ್ಲಿ ಕಲ್ಲಿದ್ದಲು ಗಣಿ ಯೋಜನೆಗಾಗಿ ಸರಕಾರಿ ಮತ್ತು ಅರಣ್ಯ ಪ್ರದೇಶದಲ್ಲಿನ ಮರಗಳನ್ನು ಕಡೆಯುವ ಮೂಲಕ ಅರಣ್ಯ ಹಕ್ಕುಗಳ ಕಾಯ್ದೆಯನ್ನು (ಎಫ್‌ಆರ್‌ಎ) ಸ್ಪಷ್ಟವಾಗಿ ಉಲ್ಲಂಘಿಸಿದೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಮಧ್ಯ ಪ್ರದೇಶ ಸರಕಾರ ಈ ಆರೋಪವನ್ನು ಆಧಾರರಹಿತ ಎಂದು ಅಲ್ಲಗಳೆದಿದ್ದು, ಕೇಂದ್ರ ಪರಿಸರ ಸಚಿವಾಲಯವು ಈ ಯೋಜನೆಗೆ ಅಂತಿಮ ಅನುಮೋದನೆ ನೀಡಿದೆ ಎಂದು ಹೇಳಿದೆ. ಮೋದಿ ಸರಕಾರವು 2019ರಲ್ಲಿ ಅದಾನಿ ಸಮೂಹಕ್ಕೆ ಈ ಯೋಜನೆಯನ್ನು ಹಂಚಿಕೆ ಮಾಡಿತ್ತು. 2025ರಲ್ಲಿ ಯಾವುದೇ ಕಾನೂನಿನ ಅನುಮತಿಗಳನ್ನು ಪಡೆಯದೆ ಯೋಜನೆ ಜಾರಿಗೊಳಿಸಲಾಗುತ್ತಿದೆ. ಇದು ಮೋದಾನಿ' ಕಾನೂನು ವ್ಯವಸ್ಥೆ ಎಂದು ಜೈರಾಮ್ ರಮೇಶ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

### ಎ.ಐನಿಂದ ಕೃಷಿ ಕ್ಷೇತ್ರದಲ್ಲಿ ಕ್ರಾಂತಿ

**ನಾಗ್ಪುರ:** ಕೃಷಿ ವಲಯದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಕ್ರಾಂತಿಕಾರಕ ಬದಲಾವಣೆ ತರಲಿದ್ದು, ಇದರಿಂದ ರೈತರ ಜೀವನ ಮಟ್ಟ ಸುಧಾರಿಸಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದರು. ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯ ದೇಶದಲ್ಲಿ 350ರಿಂದ 400 ಕಾರ್ಖಾನೆಗಳು ಎಥೆನಾಲ್ ಉತ್ಪಾದಿಸುತ್ತಿವೆ. ಜೋಳದಿಂದ ಎಥೆನಾಲ್ ಉತ್ಪಾದಿಸುವುದರಿಂದ ರೈತರಿಗೆ 45 ಸಾವಿರ ಕೋಟಿಯಷ್ಟು ಆದಾಯ ಸಿಗುತ್ತಿದೆ. ಮೊದಲು ಜೋಳಕ್ಕೆ ಕ್ವಿಂಟಲ್‌ಗೆ 1,200 ದರ ಇತ್ತು. ಈಗ ಅದು 2.800ಕ್ಕೆ ಏರಿಕೆಯಾಗಿದೆ ಎಂದರು. ದೇಶದಾದ್ಯಂತ ಶೇ 20ರಷ್ಟು ಎಥನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ-20) ಬಳಕೆ ಜಾರಿಯಿಂದ ಗಡ್ಕರಿ ಅವರ ಇಬ್ಬರು ಪುತ್ರರಿಗೆ ಲಾಭ ಆಗುತ್ತದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಇಬಿಪಿ-20' ವಿರೋಧಿಸುತ್ತಿರುವವರಿಗೆ ಬೇರೆಯದೇ ಕಾರಣಗಳಿವೆ' ಎಂದರು.

### ಬಿಆರ್‌ಎಲ್-79 ಕಾರ್ಯಕ್ರಮ

**ಬೆಂಗಳೂರು:** ಸಪ್ನಾ ಬುಕ್ ಹೌಸ್ ಮತ್ತು ಸಂಗೀತ ಧಾಮದ ಸಂಯುಕ್ತ ಆಶ್ರಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬಿ.ಆರ್. ಎಲ್-75 ಕಾರ್ಯಕ್ರಮವು ಇದೇ ಭಾನುವಾರ (ಸೆ.14) ನಗರದ ಡಾ.ಸಿ. ಅಶ್ವತ್ಥ್ ಕಲಾಭವನದಲ್ಲಿ ಇದೇ ಭಾನುವಾರ ನಡೆಯಲಿದೆ. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಖ್ಯಾತಿ ಸಾಹಿತಿ ಮತ್ತು ಪತ್ರಕರ್ತರಾದ ಚ.ಹ. ರಘುನಾಥ್ ಮತ್ತು ಖ್ಯಾತ ಸಾಹಿತಿ ಮತ್ತು ವಿಮರ್ಶಕರಾದ ಡಾ.ಎಚ್. ಎಸ್. ಸತ್ಯನಾರಾಯಣ ಭಾಗವಹಿಸಲಿದ್ದಾರೆ. ಬಿ. ಆರ್ ಲಕ್ಷ್ಮಣರಾವ್ ಅವರು ಉಪಸ್ಥಿತರಿರುವ ಕಾರ್ಯಕ್ರಮದಲ್ಲಿ ಅವರು ರಚಿಸಿರುವ 'ವಿಪುಲ ರೂಪ ಧಾರಿಣಿ' ಕೃತಿ ಮತ್ತು 'ಕೊಂಚ ಸಮಯ ಬೇಕು' ದೃಶ್ಯಗೀತೆಗಳ ಲೋಕಾರ್ಪಣೆಯಾಗಲಿದೆ. ಶ್ರೀ ಮೃತ್ಯುಂಜಯ ದೊಡ್ಡವಾದ ಮತ್ತು ಕು.ಅನನ್ಯಾ ಭಟ್ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ.

### ಹಸಿರು ಹೈಡ್ರೋಜನ್ ಸಂಶೋಧನೆಗೆ ನೆರವು

**ದೆಹಲಿ:** ಹಸಿರು ಹೈಡ್ರೋಜನ್ ಸಂಶೋಧನೆ ಮತ್ತು ಅಭಿವೃದ್ಧಿನಿರತ ನವೋದ್ಯಮಗಳಿಗೆ ಕೇಂದ್ರ ಸರಕಾರ ಒಟ್ಟಾರೆ 100 ಕೋಟಿ ರು. ಆರ್ಥಿಕ ನೆರವು ನೀಡಲಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದರು. ದೆಹಲಿಯಲ್ಲಿ ಶುಕ್ರವಾರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ಆಯೋಜಿಸಿದ್ದ ಮೊದಲ ವಾರ್ಷಿಕ ಹಸಿರು ಹೈಡ್ರೋಜನ್ ಸಂಶೋಧನೆ ಮತ್ತು ಅಭಿವೃದ್ಧಿ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ನವೋದ್ಯಮಗಳ ಪ್ರತೀ ಯೋಜನೆಗೆ ಗರಿಷ್ಠ 5 ಕೋಟಿ ನೆರವು ನೀಡುವುದಾಗಿ ಘೋಷಿಸಿದರು. ಹಸಿರು ಹೈಡ್ರೋಜನ್ ನಾವೀನ್ಯತೆಯಲ್ಲಿ ನವೋದ್ಯಮಗಳನ್ನು ಬೆಂಬಲಿಸಲು 100 ಕೋಟಿ ಆರ್ಥಿಕ ನೆರವಿಗೆ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ. ನವೀನ ಜಲಜನಕ ಉತ್ಪಾದನೆ, ಸಂಗ್ರಹಣೆ, ಸಾರಿಗೆ ಮತ್ತು ಬಳಕೆಯಲ್ಲಿ ತಂತ್ರಜ್ಞಾನ ಅಳವಡಿಕೆಯ ಪ್ರತಿ ಯೋಜನೆಗೆ 5 ಕೋಟಿ ವರೆಗೆ ಒದಗಿಸುತ್ತದೆ. ಎಲೆಕ್ಟ್ರೋಲೈಜರ್ ಉತ್ಪಾದನೆಯಿಂದ ಹಿಡಿದು ೦ಖ-ಚಾಲಿತ 25 ನವೋದ್ಯಮಗಳು ನಾವೀನ್ಯತೆ ಪ್ರದರ್ಶಿಸುತ್ತಿವೆ ಎಂದರು. ಹಸಿರು ಅಮೋನಿಯಾ 49.75 ಕಡಿಮೆ ಬೆಲೆ: ರಸಗೊಬ್ಬರಗಳಲ್ಲಿ ಭಾರತ ಮೊದಲ ಹಸಿರು ಅಮೋನಿಯಾ ಹರಾಜು ನಡೆಸಿದ್ದು, 2024ರಲ್ಲಿ ಪ್ರತಿ ಕೆ.ಜಿಗೆ 100.28ಕ್ಕೆ ಇದ್ದರೆ, ಇದೀಗ ಪ್ರತಿ ಕೆಜಿಗೆ ಅದರ ಅರ್ಧದಷ್ಟು ಅಂದರೆ ಕೇವಲ 49.75 ಐತಿಹಾಸಿಕ ಕಡಿಮೆ ಬೆಲೆ ದಾಖಲಾಗಿದೆ. ಒಡಿಶಾದ ಪ್ಯಾರದೀಪ್ ಫಾಸ್ಫೇಟ್‌ಗಳಲ್ಲಿ ಸರಬರಾಜು ಪ್ರಾರಂಭವಾಗಲಿದೆ ಎಂದು ಹೇಳಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

---

ಯತ್ನಾಳ್‌ಗೆ ಬೆಂಬಲ ಕಂಡು ಕನಲಿದ ಕಮಲಿಗರು | ಬಿಜೆಪಿಯಲ್ಲಿ ಮತ್ತೆ ತಳಮಳ ಶುರು

# ಬಿಜೆಪಿಯಲ್ಲಿ ಮುಗಿಯದ ಮುನಿಸು

ವಿಶ್ವವಾಣಿ ವಿಶೇಷ ಬೆಂಗಳೂರು

ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವಂತಾಗಿದ್ದು ರಾಜ್ಯ ಸರಕಾರದ ವಿರುದ್ಧದ ಹೋರಾಟದಲ್ಲೂ ಒಂಥರಾ ಮಂಕು ಕವಿದಂತಿದೆ. ಅಲ್ಲದೆ ಅಡ್ಜಸ್ಟ್‌ಮೆಂಟ್ ಇನ್ನೂ ಮುಂದುವರೆದಿದೆ ಎನ್ನುವುದು ಈಗ ಪಕ್ಷದೊಳಗೆ ಗುಟ್ಟಾಗಿ ಉಳಿದಿಲ್ಲ. ಇದೇ ವೇಳೆ ಮದ್ದೂರು ಗಲಭೆಯಲ್ಲಿ ಬಿಜೆಪಿಯ ನಾಯಕರಿಗಿಂತ ಉಚ್ಚಾಟಿತ ನಾಯಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಕಾಂಗ್ರೆಸ್ ಹಾಗೂ ಜೆಡಿಎಸ್ ಕೋಟೆಯಲ್ಲಿ ಭರ್ಜರಿ ಸ್ವಾಗತ ಸಿಕ್ಕಿರುವುದು ಬಿಜೆಪಿಯಲ್ಲಿ ತಳಮಳ ಆರಂಭವಾಗಿದೆ.

ರಾಜ್ಯ ಬಿಜೆಪಿಯೊಳಗಿನ ಗುಂಪುಗಾರಿಕೆ ಇನ್ನೂ ಇದೆ. ಇದರಲ್ಲಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ, ತಟಸ್ಥರ ಬಣ, ಅತೃಪ್ತರ ಬಣ, ಪ್ರತಿಪಕ್ಷ ನಾಯಕ ಅಶೋಕ ಬಣದ ಜತೆಗೆ ಮತ್ತೊಂದು ಬೆಂಗಳೂರು ಬಣಗಳಾಗಿ ವಿಂಗಡಣೆಯಾಗಿ ಪಕ್ಷದಲ್ಲಿ ಒಗ್ಗಟ್ಟು ಕಾಣಿಸಿ ಕೊಳ್ಳದೆ, ಕಾಂಗ್ರೆಸ್ ಸರಕಾರದ ವಿರುದ್ಧ ಯಾವುದೇ ಸಂಘಟಿತ ಹೋರಾಟ ಕಾಣುತ್ತಿಲ್ಲ. ಮಾತ್ರವಲ್ಲದೇ, ಯಾವ ಹೋರಾಟಕ್ಕೂ ತಾರ್ಕಿಕ ಅಂತ್ಯ ಸಿಗುತ್ತಿಲ್ಲ ಎಂಬ ಮಾತುಗಳು ಆ ಪಕ್ಷದ ಕಾರ್ಯಕರ್ತರಲ್ಲೇ ಗಂಭೀರ ಚರ್ಚೆಗಳು ನಡೆಯುತ್ತಿದೆ.

ಗಣೇಶೋತ್ಸವ ಸಮಯದಲ್ಲಿ ಉಂಟಾದ ಕೋಮು ಗಲಭೆಯ ಲಾಭ ಪಡೆಯಲು ರಾಜ್ಯ ಬಿಜೆಪಿ ಪಡೆಯಲು ಪ್ರಯತ್ನಿಸಿತು. ಆದರೆ ಅಲ್ಲೂ ಕೂಡ ಪಕ್ಷದ ನಾಯಕರಲ್ಲಿ ಒಗ್ಗಟ್ಟು ಕಾಣಿಸಿಕೊಳ್ಳದೆ ಮದ್ದೂರಿನ ಹೋರಾಟದಲ್ಲಿ ಹಿನ್ನಡೆ ಉಂಟಾಯಿತು. ಬಿಜೆಪಿಯ ಪ್ರಮುಖ ನಾಯಕರಲ್ಲಿ ಒಗ್ಗಟ್ಟು ಇಲ್ಲ ಎನ್ನುವುದು ಅವರ ನಡೆಗಳಿಂದಲೇ ಎದ್ದು ಕಾಣುತ್ತಿತ್ತು. ಒಂದೆಡೆ ಮದ್ದೂರಿನಲ್ಲಿ ವೇದಿಕೆ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಬರಲಿಲ್ಲ, ಅತ್ತ ವೇದಿಕೆಗೆ ವಿಪಕ್ಷ ನಾಯಕ ಆರ್. ಅಶೋಕ ಬರುತ್ತಿದ್ದಂತೆ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ನಿರ್ಗಮಿಸಿದ್ದರು.

ಮತ್ತೊಂದೆಡೆ ಅಶ್ವತ್ಥ್ ನಾರಾಯಣ್ ಮೆರವಣಿಗೆಯಲ್ಲಿ ಬರುತ್ತಿದ್ದಾಗಲೇ ವೇದಿಕೆ ಕಾರ್ಯಕ್ರಮದಲ್ಲಿ ಇತ್ತ ಆರ್. ಅಶೋಕ ಎದ್ದು ಹೋಗಿದ್ದರು. ಅಶ್ವತ್ಥ್ ನಾರಾಯಣ ಹೋದ ಬಳಿಕ, ಬಿಜೆಪಿಯ ಮಿತ್ರ ಪಕ್ಷ ಜೆಡಿಎಸ್ ಆನಂತರ ಏಕಾಂಗಿಯಾಗಿ ಹೋರಾಟ ಮಾಡುವಂತಾಗಿದೆ. ಈ ಎಲ್ಲ ಬೆಳವಣಿಗೆ ಗಮನಿಸಿರುವ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರು ಇವರೆಲ್ಲ ಕಾಟಾಚಾರಕ್ಕೆ ಬಂದು ಭಾಷಣ ಮಾಡಿ ಹೋದರು ಅಷ್ಟೇ ಎಂದು ಮಾತಾಡಿಕೊಂಡಿದ್ದಾರೆ. ಇದಕ್ಕೆ ಸರಿಯಾಗಿ ಮಾರನೇ ದಿನವೇ ಬಸನಗೌಡ ಪಾಟೀಲ್ ಅವರಿಗೆ ಭರ್ಜರಿ ಸ್ವಾಗತ ಸಿಕ್ಕಿರುವುದು ಎಂದು ಹೇಳಲಾಗುತ್ತಿದೆ.

### ಹೋರಾಟಗಳಲ್ಲಿ ತಾಕತ್ತಿಲ್ಲ

ಬಿಜೆಪಿಯಲ್ಲಿ ಬಿ.ವೈ. ವಿಜಯೇಂದ್ರ ನಾಯಕತ್ವಕ್ಕೆ ಪ್ರಬಲ ವಿರೋಧ ಇದೆ ಅನ್ನುವುದು ಗುಟ್ಟಾಗಿ ಉಳಿದಿಲ್ಲ. ಪಕ್ಷದ ರಾಷ್ಟ್ರಾಧ್ಯಕ್ಷ ನೇಮಕದ ನಂತರವಷ್ಟೇ ರಾಜ್ಯದ ಸಮಸ್ಯೆ ಬಗೆಹರಿಬಹುದು. ಇದೇ ವೇಳೆ ವಿಜಯೇಂದ್ರಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಬೇಡ ಎಂದು ಒಂದು ಗುಂಪು ಪ್ರಬಲವಾಗಿ ಹೋರಾಟ ಮಾಡಿತ್ತಾದರೂ, ವಿಜಯೇಂದ್ರ ಅವರನ್ನು ಬದಲಿಸಲು ಮುಂದಾಗದ ವರಿಷ್ಠರು ಬಹಿರಂಗವಾಗಿ ಸಡ್ಡು ಹೊಡೆದು ನಿಂತಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನೇ ಪಕ್ಷದಿಂದ ಉಚ್ಚಾಟನೆ ಮಾಡಿದ್ದರು. ಈ ಪ್ರಕರಣದಿಂದ ತಮಗೂ ಆ ಗತಿ ಬರುವುದು ಬೇಡ ಎಂದು ಪ್ರಬಲ ಗುಂಪು ಈಗ ಸುಮ್ಮನಾಗಿದೆ. ಸಹಕಾರ ಕೊರತೆಯಿಂದ ಬಿಜೆಪಿಯಲ್ಲಿ ಯಾವುದೇ ಒಗ್ಗಟ್ಟಿನ ಹೋರಾಟಗಳು ಕಾಣುತ್ತಿಲ್ಲ. ಮುಂಚೂಣಿ ನಾಯಕರು ಹೋರಾಟದಲ್ಲಿ ಕಾಣಿಸಿಕೊಂಡರೂ ನಾನೊಂದು ತೀರ ನೀನೊಂದು ತೀರ ಎನ್ನುವಂತಾಗಿದೆ.

### ಮದ್ದು ಅರೆಯಲು ಮುಂದಾದ ಸಂಘ

ರಾಜ್ಯ ಬಿಜೆಪಿಯ ಗುಂಪುಗಾರಿಕೆಗೆ ಮದ್ದು ಅರೆಯಲು ಮುಂದಾಗಿದ್ದು, ಶಿಸ್ತು, ಸಂಘಟನೆ, ಸಿದ್ಧಾಂತ ವಿಚಾರವಾಗಿ ಸಂಘ ಪಾಠ ಮಾಡಲು ನಿರ್ಧರಿಸಿದೆ. ಹೀಗಾಗಿ ಚಿಂತನ ಶಿಬಿರದ ಹೆಸರಲ್ಲಿ ನೀತಿ ಪಾಠ ಮಾಡಲು ಇದೇ ಸೆ.18, 19ರಂದು ಖಾಸಗಿ ಹೋಟೆಲ್‌ನಲ್ಲಿ ಶಿಬಿರ ಆಯೋಜಿಸಿದೆ. ಈ ಶಿಬಿರದಲ್ಲಿ ಪಕ್ಷದ ಉದ್ದೇಶ, ಸಿದ್ಧಾಂತದ ಬಗ್ಗೆ ನಾಯಕರಿಗೆ ಭೋದನೆ ಮಾಡಲಿದ್ದು, ಪಕ್ಷದಲ್ಲಿ ಒಡಕಿಗೆ ಮದ್ದು ಅರೆದು ಸಂಘಟಿತ ಹೋರಾಟಕ್ಕೆ ಕರೆ ನೀಡುವ ಸಾಧ್ಯತೆ ಇದೆ.

### 3 ಪಕ್ಷಗಳಲ್ಲಿ ತಳಮಳ

ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಹಿಂದೂ ಫೈರ್‌ಬ್ರ್ಯಾಂಡ್ ಎಂದೇ ಬಿಂಬಿತರಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಏಕಾಂಗಿಯಾಗಿ ಗುರುವಾಗ ಮದ್ದೂರಿಗೆ ಹೋಗಿದ್ದರು. ಈ ವೇಳೆ ಹಿಂದೂ ಕಾರ್ಯಕರ್ತರು ಬೈಕ್ ರ್‍ಯಾಲಿ ಮೂಲಕ ಸ್ವಾಗತಿಸಿದ್ದಲ್ಲದೆ, ಯತ್ನಾಳ್ ಬರುತ್ತಿದ್ದಾರೆ ಎನ್ನುವ ಸುದ್ದಿ ತಿಳಿಯುತ್ತಿದ್ದಂತೆಯೇ ನೂರಾರು ಹಿಂದೂ ಕಾರ್ಯಕರ್ತರು ಸ್ವಯಂ ಪ್ರೇರಿತರಾಗಿ ಆಗಮಿಸಿ ಅದ್ಧೂರಿಯಾಗಿ ಬರ ಮಾಡಿಕೊಂಡಿದ್ದಾರೆ. ಬಿಜೆಪಿ ನಾಯಕರ ಮದ್ದೂರು ಚಲೋ ವೇಳೆ ಸೇರದಷ್ಟು ಜನ ಯತ್ನಾಳ್ ಸ್ವಾಗತದಲ್ಲಿ ಭಾರೀ ಬೆಂಬಲ ವ್ಯಕ್ತವಾಗಿರುವುದು ಕಂಡು ಬಂದಿದೆ.

ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಪರಂಪರಾನುಗತ ಜಾತಿ ಹಾಗೂ ಮತಗಳು ಹೆಚ್ಚಿರುವಲ್ಲಿಯೇ ಬಿಜೆಪಿ ಮತಗಳಿಗಿಂತ ಹೆಚ್ಚಾಗಿ ಹಿಂದೂ ಕಾರ್ಯಕರ್ತರು ಜಮಾಯಿಸಿರುವುದು ಈಗ ಮೂರು ಪಕ್ಷದಲ್ಲಿ ಗಂಭೀರ ಚರ್ಚೆಗೆ ನಾಂದಿ ಹಾಡಿದೆ. ಇದಲ್ಲದೆ, ಬಿಜೆಪಿ ರಿಪೇರಿಯಾದರೆ ಬಿಜೆಪಿ ಜೊತೆ ಹೋಗುತ್ತೇನೆ, ಇಲ್ಲದಿದ್ದರೆ ಹೊಸ ಪಕ್ಷ ಕಟ್ಟಿ ಸಿಎಂ ಆಗುತ್ತೇನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.

ಕಾರ್ಯಕರ್ತರು ಮದ್ದೂರಿಗೆ ಬರಬೇಕು ಎಂದು ಕೇಳುತ್ತಿದ್ದರು. ಬಿಜೆಪಿ ನಾಯಕರು ಹೋದಾಗ ಯತ್ನಾಳ ಯತ್ನಾಳ ಅಂತ ಕೂಗಿದರು. ಅವರ ಹೃದಯದಲ್ಲಿ ನನ್ನ ಮೇಲೆ ಪ್ರೀತಿ ಇದೆ. ಬಿಜೆಪಿ ನಾಯಕರು ಕೂಡ ಅಡ್ಜಸ್ಟ್‌ಮೆಂಟ್ ರಾಜಕಾರಣ ಮಾಡುತ್ತಾರೆ. ಮುಸ್ಲಿಂ ಸಮುದಾಯಕ್ಕೆ ಆಗೋ ಕೆಲಸ ಹಿಂದುಗಳಿಗೆ ಆಗುತ್ತಿಲ್ಲ ಎಂದಿರುವುದು ಕೂಡ ಮೂರು ಪಕ್ಷಗಳಿಗೆ ನುಂಗಲಾರದ ತುತ್ತಾಗಿದೆ.

---

## ಸಿಕ್ಕಿಂನಲ್ಲಿ ಭೂಕುಸಿತ: ನಾಲ್ವರ ಸಾವು

**ಗ್ಯಾಂಗ್‌ಟಾಕ್:** ನಿರಂತರ ಮಳೆ ಯಿಂದಾಗಿ ಸಿಕ್ಕಿಂನ ಗ್ಯಾಲ್ಶಿಂಗ್ ಜಿಲ್ಲೆ ಯಲ್ಲಿ ಗುರುವಾರ ತಡರಾತ್ರಿ ಮನೆ ಮೇಲೆ ಭೂಕುಸಿತ ಸಂಭವಿಸಿದ್ದು, ಘಟನೆಯಲ್ಲಿ ಒಂದೇ ಕುಟುಂಬದ ನಾಲ್ವರು ಸದಸ್ಯರು ಸಾವನ್ನಪ್ಪಿದ್ದಾರೆ. ಮನೆಯಲ್ಲಿ ಒಂದು ಮಗು ತೀವ್ರವಾಗಿ ಗಾಯಗೊಂಡಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪ್ಪರ್ ರಿಂಬಿ ಪ್ರದೇಶದಲ್ಲಿ ಗುರುವಾರ ಮಧ್ಯರಾತ್ರಿ ಕುಟುಂಬ ಮನೆ ಯಲ್ಲಿ ನಿದ್ರಿಸುತ್ತಿದ್ದಾಗ ಈ ದುರಂತ ಸಂಭವಿಸಿದೆ. ಭೂಕುಸಿತವು ಮನೆ ಯನ್ನು ಸಂಪೂರ್ಣವಾಗಿ ನಾಶಪಡಿಸಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಯೊಬ್ಬರು ದೃಢಪಡಿಸಿದ್ದಾರೆ. ಸಿಕ್ಕಿಂ ಪೊಲೀಸರು, ಸಶಸ್ತ್ರ ಸೀಮಾ ಬಲ್ (ಎಸ್‌ಎಸ್‌ಬಿ) ಸಿಬ್ಬಂದಿ ಮತ್ತು ಸ್ಥಳೀಯ ನಿವಾಸಿಗಳು ನಿರಂತರ ಮಳೆಯ ಹೊರ ತಾಗಿಯೂ ಘಟನಾ ಸ್ಥಳಕ್ಕೆ ತೆರಳಿ ಕ್ಷಿಪ್ರವಾಗಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು ಎಂದು ಪೊಲೀಸ್ ವರಿಷ್ಠಾಧಿಕಾರಿ ತ್ಸೆರಿಂಗ್ ತಿಳಿಸಿದ್ದಾರೆ. ಆರು ಕುಟುಂಬ ಸದಸ್ಯರಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯ ಗೊಂಡ ಇಬ್ಬರು ಮಹಿಳೆಯರನ್ನು ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿದ್ದು, ಅಲ್ಲಿ ಒಬ್ಬ ಮಹಿಳೆ ಸಾವನ್ನಪ್ಪಿದರು ಎಂದು ಪೊಲೀಸರು ಹೇಳಿದ್ದಾರೆ. ಅವಶೇಷ ಗಳಿಂದ ಏಳು ವರ್ಷದ ಬಾಲಕನನ್ನು ಜೀವಂತವಾಗಿ ಹೊರ ತೆಗೆದು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

---

ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪ

## ಶಾಸಕರ ವಿರುದ್ಧ ಬಲವಂತದ ಕ್ರಮ ಬೇಡ: ಹೈಕೋರ್ಟ್



**ಬೆಂಗಳೂರು:** ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಿ.ಪಿ. ಹರೀಶ್ ವಿರುದ್ಧ ಬಲವಂತದ ಕ್ರಮಕ್ಕೈಗೊಳ್ಳದಂತೆ ಹೈಕೋರ್ಟ್ ಶುಕ್ರವಾರ ಆದೇಶಿಸಿದ್ದು, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದೆ.

ಶಾಸಕ ಬಿ.ಪಿ. ಹರೀಶ್ ಅವರು ಎಫ್‌ಐಆರ್ ರದ್ದತಿ ಕೋರಿ ಸಲ್ಲಿಸಿರುವ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಪಿ.ವೆಂಕಟೇಶ್ ದಳವಾಯಿ ಅವರು, ಹರೀಶ್ ಅವರು ಪೊಲೀಸ್ ವರಿಷ್ಠಾಧಿಕಾರಿ ಘನತೆಗೆ ಧಕ್ಕೆ ತರುವ ಉದ್ದೇಶದಿಂದ ಈ ಹೇಳಿಕೆ ನೀಡಿಲ್ಲ. ಸ್ಥಳೀಯ ಸಚಿವರು ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಇತರ ಉನ್ನತಮಟ್ಟದ ಅಧಿಕಾರಿಗಳಿಗೆ ಗೌರವ ನೀಡದೆ ಮನಬಂದಂತೆ ನಡೆಸಿಕೊಳ್ಳುತ್ತಾರೆ ಎಂಬ ನೆಲೆಯಲ್ಲಿ ಹಾಗೆ ಹೇಳಿದ್ದಾರೆ. ಈ ಬಗ್ಗೆ ಸ್ಪಷ್ಟನೆ ನೀಡಿ ಈಗಾಗಲೇ ಪತ್ರಿಕಾ ಪ್ರಕಟಣೆಯೂ ಹೊರಡಿಸಲಾಗಿದೆ ಎಂದು ವಿವರಿಸಿದರು.

ಹರೀಶ್ ಅವರು ವರಿಷ್ಠಾಧಿಕಾರಿಯ ಹೆಸರನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಬದಲಿಗೆ ವ್ಯವಸ್ಥೆ ಟೀಕಿಸುವ ಬರದಲ್ಲಿ ಈ ರೀತಿ ಹೇಳಿಕೆ ನೀಡಿದ್ದಾರೆ. ಇದೀಗ ಘಟನೆಗೆ ರಾಜಕೀಯ ಸ್ವರೂಪ ನೀಡಿ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿದೆ. ಈ ಮುಖೇನ ಕಾನೂನು ಪ್ರಕ್ರಿಯೆ ದುರುಪಯೋಗಪಡಿಸಿಕೊಳ್ಳಲಾಗಿದೆ. ಹೀಗಾಗಿ, ಮೇಲಿನ ಎಲ್ಲ ಅಂಶ ಪರಿಗಣಿಸಿ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿದರು. ವಾದ ಆಲಿಸಿದ ಪೀಠವು ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ನಿರ್ದೇಶಿಸಿ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದೆ.

**ಪ್ರಕರಣದ ಹಿನ್ನೆಲೆ:** ಹರಿಹರ ಶಾಸಕ ಬಿ.ಪಿ. ಹರೀಶ್ ಅವರು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ದಾವಣಗೆರೆ ಪೊಲೀಸ್ ವರಿಷ್ಠಾಧಿಕಾರಿ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದರು. ಪೊಲೀಸ್ ವರಿಷ್ಠಾಧಿಕಾರಿ ಶಾಸಕರಿಗೆ ಬೆಲೆಯನ್ನೇ ಕೊಡುವುದಿಲ್ಲ. ಶಾಸಕರು ಸಭೆಯಲ್ಲಿ ಇದ್ದರೆ ಮುಖ ತಿರುಗಿಸಿ ಕೂರುತ್ತಾರೆ. ಗಂಟೆಗಟ್ಟಲೆ ಶಾಮನೂರು ಮನೆಯ ಬಾಗಿಲನ್ನು ನಾಯಿಯ ರೀತಿ ಕಾಯುತ್ತಾರೆ. ಪೊಲೀಸ್ ವರಿಷ್ಠಾಧಿಕಾರಿ ಶಾಮನೂರು ಕುಟುಂಬದ ಪೊಮೆರಿಯನ್ ನಾಯಿಯಂತೆ ವರ್ತಿಸುತ್ತಾರೆ.

ಇವರಿಗೆ ಅಧಿಕಾರದಲ್ಲಿರು ವವರು ಮಾತ್ರ ಮುಖ್ಯವಾಗಿ ಕಾಣುತ್ತಾರೆ ಎನ್ನಿಸುತ್ತದೆ. ಎಲ್ಲಾ ಜನಪ್ರತಿನಿಧಿಗಳನ್ನು ಸಮಾನವಾಗಿ ಕಾಣುವ ದೃಷ್ಟಿಕೋನ ಇಲ್ಲ. ಈ ಅಧಿಕಾರ ತಾತ್ಕಾಲಿಕ ಅನ್ನುವುದನ್ನು ಎಸ್ಪಿ ಅರಿತುಕೊಳ್ಳಬೇಕು ಎಂದು ಟೀಕಿಸಿದ್ದರು.

## ಹಣ ಹೂಡಿಕೆ ಹೆಸರಲ್ಲಿ ಲಕ್ಷಾಂತರ ರು. ವಂಚನೆ

**ಮೈಸೂರು:** ಕಂಪ್ಯೂಟರ್ ತರಬೇತುದಾರನಿಗೆ ಲಕ್ಷಾಂತರ ರುಪಾಯಿ ಹಣ ಹಾಗೂ ಚಿನ್ನಾಭರಣ ಪಡೆದು ವಂಚಿಸಿರುವ ಪ್ರಕರಣ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಬೋಗಾದಿಯ ವಿಜಯ್ ವಾಸುದೇವನ್, ಆತನ ಪತ್ನಿ ಜೆನೆಟ್ ಜನ್ನಿಫರ್ ವಿರುದ್ಧ ಚಿನ್ನ ಹಾಗೂ ಹಣ ವಂಚನೆ ಆರೋಪ ಮಾಡಲಾಗಿದೆ. ಮೈಸೂರಿನ ರೈಲ್ವೆ ಬಡಾವಣೆ ನಿವಾಸಿ ಪ್ರೀತಾ ಆರೋಪ ಮಾಡಿದ್ದಾರೆ. ಐಟಿ ಉದ್ಯೋಗಿ ಪ್ರೀತಾ 2005ರಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿ ಇನ್‌ಸ್ಟಿಟ್ಯೂಟ್‌ನಲ್ಲಿ ಕಂಪ್ಯೂಟರ್ ತರಬೇತಿ ನೀಡುತ್ತಿದ್ದರು. ಪ್ರೀತಾ ಅವರ ಪತಿ ಮುರಳಿ ಕೃಷ್ಣನ್ ಅವರು ನಿಧನರಾದ ಬಳಿಕ ಕೆಲವು ವರ್ಷಗಳ ಹಿಂದೆ ವಿಜಯ್ ವಾಸುದೇವನ್ ರವರು ಪ್ರೀತಾರನ್ನು ಪರಿಚಯಿಸಿಕೊಂಡು ನಿಮ್ಮ ಬಳಿ ನಾನು ಕಂಪ್ಯೂಟರ್ ತರಬೇತಿ ಪಡೆದಿದ್ದೇನೆ. ನಿಮ್ಮ ವಿದ್ಯಾರ್ಥಿ ಎಂದು ಹೇಳಿ ಆತ್ಮೀಯತೆ ಬೆಳೆಸಿಕೊಂಡು ಸ್ಪಾಟ್ 1 ಎಂಬ ಕಂಪನಿ ನಡೆಸುತ್ತಿದ್ದು, ಇದರಲ್ಲಿ ಹಣ ಹೂಡಿದರೆ ಹೆಚ್ಚಿನ ಲಾಭಾಂಶ ಬರುತ್ತದೆಂದು ವಾಸುದೇವನ್ ನಂಬಿಸಿ ವಂಚಿಸಿದ್ದಾರೆ.

---

## ಗಣೇಶ ಮೆರವಣಿಗೆಯಲ್ಲಿ ಭೀಕರ ದುರಂತ: 8 ಸಾವು

← ಮೊದಲಪುಟದಿಂದ

**ಬೈಕ್ ಸವಾರನ ಉಳಿಸಲು ಹೋಗಿ, ಅಪಘಾತ:** ಗಣೇಶನ ವಿಸರ್ಜನೆ ಮೆರವಣಿಗೆ ಎದುರಿನಿಂದ ಕ್ಯಾಂಟರ್ ಮುಂಭಾಗದಲ್ಲಿದ್ದ ಬೈಕ್‌ಗೆ ಗುದ್ದುವುದನ್ನು ತಪ್ಪಿಸಲು ಚಾಲಕ ಹೋಗಿ ದ್ದಾನೆ. ಆದರೆ ಈ ವೇಳೆ ವಾಹನದ ನಿಯಂತ್ರಣ ತಪ್ಪಿ, ಮೆರ ವಣಿಗೆಯತ್ತ ಕ್ಯಾಂಟರ್ ನುಗ್ಗಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ವಾಹನ ಚಲಾಯಿಸುತ್ತಿದ್ದ ಚಾಲಕ ಮದ್ಯಪಾನ ಮಾಡಿದ್ದ ಎನ್ನುವ ಮಾತುಗಳು ಕೇಳಿ ಬಂದಿದೆ. ಇದ ರಿಂದಲೇ, ಕ್ಯಾಂಟರ್ ನಿಯಂತ್ರಣಕ್ಕೆ ಸಿಕ್ಕಿಲ್ಲ ಎನ್ನುವುದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

> ಗಣೇಶ ವಿಸರ್ಜನೆ ಮೆರವಣಿಗೆಯಲ್ಲಿ ಭಾಗವಹಿಸಿದ್ದವರ ಮೇಲೆ ವಾಹನ ಕ್ಯಾಂಟರ್ ಹರಿದು ಎಂಟು ಜನ ದುರ್ಮರಣಕ್ಕೀಡಾಗಿ 20 ಜನ ಗಾಯಗೊಂಡಿರುವ ಘಟನೆ ದಿಗ್ಭ್ರಮೆ ತರಿಸಿದೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮೊಸಳೆ ಹೊಸಳ್ಳಿಯಲ್ಲಿ ಗಣಪತಿ ವಿಸರ್ಜನಾ

> ಮೆರವಣಿಗೆ ವೇಳೆ ಭೀಕರ ಅಪಘಾತ ಸಂಭವಿಸಿ ಹಲವರು ಜೀವ ಕಳೆದುಕೊಂಡು, 20ಕ್ಕೂ ಹೆಚ್ಚು ಜನ ಗಂಭೀರ ವಾಗಿ ಗಾಯಗೊಂಡಿರುವ ಸುದ್ದಿ ಕೇಳಿ ತೀವ್ರ ಆಘಾತ ಉಂಟಾಯಿತು.
> -ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಎಲ್ಲರಿಗೂ ಸಮಾನವಾಗಿ ನೀರಿನ ಹಂಚಿಕೆ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

## ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುವೆ: ಡಿಕೆಶಿ

**ಶಿವಮೊಗ್ಗ:** ಹೇಮಾವತಿ ಲಿಂಕ್ ಕೆನಾಲ್ ಯೋಜನೆಯ ಕಾಮಗಾರಿ ಸ್ಥಳ ಪರಿಶೀಲನೆ ಮಾಡಿದ್ದು, ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವ ಕುಮಾರ್ ಭರವಸೆ ನೀಡಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿಯಿಂದ 177 ಟಿಎಂಸಿ ನೀರನ್ನು ತಮಿಳು ನಾಡಿಗೆ ಬಿಡಬೇಕು. ಈ ಹೇಮಾವತಿ, ಹಾರಂಗಿ, ಕಬಿನಿ, ಕೆಆರ್‌ಎಸ್ ಜಲಾಶಯದಿಂದ ಈ ವರ್ಷ ಈಗಾಗಲೇ 220 ಟಿಎಂಸಿ ನೀರು ಹೋಗಿದೆ.

ಇನ್ನು ನಾಲ್ಕೈದು ತಿಂಗಳು ಮಳೆ ಬರುವ ಸಾಧ್ಯತೆ ಇದೆ. ಸುಮಾರು 200 ಟಿಎಂಸಿ ನೀರು ಸಮುದ್ರ ಸೇರುವ ನಿರೀಕ್ಷೆ ಇದೆ. ಇದನ್ನು ತಡೆದು ನಮ್ಮ ರೈತರಿಗೆ ಸಹಾಯ ಮಾಡಬೇಕು. ಇದಕ್ಕಾಗಿ ಕಾಲುವೆಗಳಲ್ಲಿ ನೀರು ಹರಿಸಬೇಕು. ನೀರು ಹೆಚ್ಚಾಗಿದ್ದಾಗ ಮಾತ್ರ ಬಳಸಲು ಈ ಯೋಜನೆ ತಂದಿದ್ದೇವೆ, ನಮಗೆ ಎಲ್ಲಾ ತಾಲೂಕುಗಳು ಒಂದೇ ಎಂದೂ ಅವರು ತಿಳಿಸಿದರು.

> ಈಗಾಗಲೇ ತೀರ್ಮಾನ ಮಾಡಿರುವ ಯೋಜನೆಯಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ಬೇರೆ ತಾಲೂಕುಗಳಿಗೆ ಸಿಗಬೇಕಾದ ನೀರಿನಲ್ಲಿ ಯಾವುದೇ ಅಡಚಣೆಯಾಗ ದಂತೆ ನೋಡಿಕೊಳ್ಳಲಾಗುವುದು. ಎಲ್ಲರಿಗೂ ಸಮಾನವಾಗಿ ನೀರನ್ನು ಹರಿಸಲಾಗುವುದು.
> -ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಕಾಮಗಾರಿ ಸ್ಥಳವನ್ನು ಪರಿಶೀಲನೆ ಮಾಡಿದೆ. ತಮಿಳುನಾಡು, ಮಹಾರಾಷ್ಟ್ರ ಜತೆಗಿನ ಜಲ ವಿವಾದದಂತೆ ನಮ್ಮೊಳಗೆ ವಿವಾದಗಳಾಗಬಾರದು. ಆಲಮಟ್ಟಿ ಜಲಾಶಯದ ಮಟ್ಟ ಎತ್ತರಿಸಿದರೆ ನ್ಯಾಯಾಲಯದ ಮೆಟ್ಟಿಲೇರುವುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಹೇಳಿದ್ದಾರೆ.

ಅವರಂತೆ ನಮ್ಮ ಸ್ಥಳೀಯರು ಅಡ್ಡಿಪಡಿಸ ಬಾರದು. ನಾನು ಎಲ್ಲಾ ಶಾಸಕರಿಗೆ ಈ ವಿಚಾರವಾಗಿ ಹೇಳಿದ್ದೇನೆ. ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಬೇಡ. ಕಳೆದ 20 ವರ್ಷಗಳಿಂದ ಈ ಯೋಜನೆಯ ಕೊನೆ ಭಾಗದ ರೈತರಿಗೆ ಸರಿಯಾಗಿ ನ್ಯಾಯ ಒದಗಿಸಲು ಸಾಧ್ಯವಾಗಿಲ್ಲ. ಹೀಗಾಗಿ ಈ ಯೋಜನೆ ತಂದಿದ್ದೇವೆ ಎಂದರು.

**ಎತ್ತಿನಹೊಳೆ ಯೋಜನೆ:** ನಾವು ಎತ್ತಿನಹೊಳೆ ಯೋಜನೆ ಮೂಲಕ ಕೋಲಾರ ಹಾಗೂ ಚಿಕ್ಕಬಳ್ಳಾ ಪುರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಕೈಗೊಂಡಿದ್ದು, ಹೆಚ್ಚಿನ ನೀರು ಸಂಗ್ರಹವಾದಾಗ ಈ ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸಲಾಗುವುದು, ಕೆರೆಗಳಿಗೆ ನೀರು ಹರಿಸುವುದಿಲ್ಲ ಎಂದು ತೀರ್ಮಾನ ಮಾಡಬಹುದಾಗಿತ್ತು.

ಆದರೆ ನೀರು ಹೆಚ್ಚಾಗಿದ್ದಾಗ ನಾವು ವ್ಯರ್ಥ ಮಾಡಬಾರದು ಎಂದು ಈ ಯೋಜನೆ ಮಾಡಿದ್ದೇವೆ. ಇದಕ್ಕಾಗಿ 20 ಸಾವಿರ ಕೋಟಿ ಹಣ ಖರ್ಚು ಮಾಡುತ್ತಿದ್ದೇವೆ, ಆ ಮೂಲಕ ನಾವು ಅಂತರ್ಜಲ ಹೆಚ್ಚಳಕ್ಕೆ ಕ್ರಮ ಕೈಗೊಂಡಿದ್ದೇವೆ ಎಂದು ತಿಳಿಸಿದರು.

---

1 ಸಾವಿರ ಕೋಟಿ ಬೆಲೆ ಬಾಳುವ 300 ಎಕರೆ ಸರಕಾರಿ ಜಾಗ ರಕ್ಷಣೆ | ಬೆಂಗಳೂರು ಜಿಲ್ಲಾಡಳಿತದಿಂದ ವಿಕ್ರಮ

# ಭೂಗಳ್ಳರ ವಿರುದ್ಧ ಕಂದಾಯ ಇಲಾಖೆ ಸಮರ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು



ಸರಕಾರಿ ಜಾಗ ಒತ್ತುವರಿ ತೆರವುಗೊಳಿಸುವಲ್ಲಿ ಹೊಸ ವಿಕ್ರಮ ಸಾಧಿಸಿರುವ ಕಂದಾಯ ಇಲಾಖೆ ಈಗ ಬಾಕಿ ಪ್ರಕರಣಗಳ ವಿಲೇವಾರಿಯಲ್ಲೂ ದಾಖಲೆ ನಿರ್ಮಿಸಿದೆ. ರಾಜಧಾನಿ ಬೆಂಗಳೂರು ನಗರ ಒಂದರಲ್ಲೇ ಸುಮಾರು 10 ಸಾವಿರ ಕೋಟಿ ಬೆಲೆ ಬಾಳುವ 300 ಎಕರೆಗೂ ಹೆಚ್ಚು ಸರಕಾರಿ ಜಾಗವನ್ನು ಭೂಗಳ್ಳರ ಒತ್ತುವರಿಂದ ರಕ್ಷಿಸಿದೆ.

ಒಟ್ಟಾರೆ ರಾಜ್ಯದಲ್ಲಿ ಒತ್ತುವರಿಯಾಗಿರುವ ಸುಮಾರು 10000 ಎಕರೆ ಸರಕಾರಿ ಜಾಗದಲ್ಲಿ ಸುಮಾರು 900 ಎಕರೆಗಳಷ್ಟು ಸರಕಾರಿ ಜಾಗ ತೆರವುಗೊಳಿಸಿ ರಕ್ಷಣೆ ಮಾಡಲಾಗಿದೆ. ಅದರಲ್ಲಿ 300 ಎಕರೆಯಷ್ಟು ಜಾಗ ಬೆಂಗಳೂರು ಒಂದರಲ್ಲೇ ತೆರವುಗೊಳಿಸಲಾಗಿದ್ದು ಇದರ ಮೌಲ್ಯ ರಾಜ್ಯದ ಇತರ ಭಾಗಗಳಿಗಿಂತ ಅತ್ಯಧಿಕವಾಗಿದೆ. ಇದರೊಂದಿಗೆ ಇದೇ ಮೊದಲ ಬಾರಿಗೆ ವಿವಿಧ ಕಾರಣಗಳಿಗೆ ಸುಮಾರು 10 ವರ್ಷಗಳಿಂದ ಬಾಕಿ ಉಳಿದಿದ್ದ 4000ಕ್ಕೂ ಹೆಚ್ಚು ಭೂಮಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು ಇದು ರಾಜ್ಯದ ಒಟ್ಟಾರೆ ವಿಲೇವಾರಿ ಪ್ರಕರಣಗಳಿಗೆ ಹೋಲಿಸಿದರೆ ಬೆಂಗ ಳೂರು ನಗರ ಜಿಲ್ಲೆಯು ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಬಹುದು.

ಅಚ್ಚರಿ ಎಂದರೆ ಕಳೆದ ಅನೇಕ ವರ್ಷಗಳಿಂದ ಕೋರ್ಟ್ ಆದೇಶವಿದ್ದರೂ ವಿಲೇವಾರಿಗೆ ತೆಗೆದುಕೊಳ್ಳದೆ ಬಾಕಿ ಉಳಿಸಿಕೊಂಡಿದ್ದ ಕೇಸುಗಳು ಸಾವಿರಾರು. ಅದ ರಲ್ಲೂ ಶೇ.80ರಷ್ಟು ಪ್ರಕರಣಗಳು ಭೂಮಿ ಹಾಗೂ ಭೂ ದಾಖಲೆ ಮತ್ತು ವಿವಾದಗಳಿಗೆ ಸಂಬಂಧಿಸಿದ್ದರೆ ಆಗಿದ್ದವು, ಅಂದರೆ ಅದೆಲ್ಲವೂ ನಕಲಿ ದಾಖಲೆಗಳ ಸೃಷ್ಟಿ, ಒತ್ತುವರಿ ಭೂಗಳ್ಳರು ಹಾಗೂ ಏಜೆಂಟರುಗಳಿಂದ ಆಕ್ಷೇಪ ಮತ್ತು ಒತ್ತುವರಿ ಸೇರಿದಂತೆ ಅನೇಕ ಪ್ರಕರಣಗಳಿದ್ದವು. ಅದೆಲ್ಲವನ್ನು ಸಮಾರೋಪಾದಿಯಲ್ಲಿ ಕಡಿಮೆ ಅವಧಿಯಲ್ಲಿ ಈಗ ಜಿಲ್ಲಾಡಳಿತ ವಿಲೇವಾರಿ ಮಾಡಿದೆ. ಇನ್ನು ಸರಕಾರಿ ಜಾಗ ಒತ್ತುವರಿ ತೆರವಿಗಾಗಿ ಜಿಲ್ಲಾಡಳಿತ ವಿಶೇಷ ಕಾನೂನು ತಜ್ಞರ ತಂಡ ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ತಂಡ ರಚಿಸಿ ತೆರವು ಕಾರ್ಯ ನಡೆಸುತ್ತಿದ್ದು ಬೆಂಗಳೂರಿನಲ್ಲಿ ಸುಮಾರು ಇನ್ನೂ 4 ಸಾವಿರಕ್ಕೂ ಹೆಚ್ಚು ಎಕರೆ ಸರಕಾರಿ ಜಾಗ ಒತ್ತುವರಿಯಾಗಿದೆ. ಇದರ ವಿರುದ್ಧ ಕ್ರಮ ಕೈಗೊಳ್ಳಲು ಕಾರ್ಯತಂತ್ರ ರೂಪಿಸಲಾಗಿದೆ.

ಒಟ್ಟಾರೆ ಸರಕಾರಿ ಜಾಗ ರಕ್ಷಣೆಗೆ ನಮ್ಮ ಇಲಾಖೆ ಕಟ್ಟಿ ಬದ್ಧವಾಗಿದ್ದು ಒತ್ತುವರಿ ತೆರವು ವಿಚಾರದಲ್ಲಿ ನಾವು ಯಾವುದೇ ಪ್ರಭಾವಕ್ಕೆ ಮಣಿಯುತ್ತಿಲ್ಲ. ನಾನು ಜಿಲ್ಲಾಧಿಕಾರಿಯಾಗಿ ಸರಕಾರಿ ಜಾಗ ಉಳಿಸಲು ಯಾವುದೇ ಸಂದರ್ಭದಲ್ಲೂ ಕೋರ್ಟ್ ಕಟಕಟೆಯಲ್ಲಿ ನಿಲ್ಲಲು ಸಿದ್ಧ. ಸರಕಾರಿ ಜಾಗ ರಕ್ಷಣೆ ನಮ್ಮ ಗುರಿ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಹೇಳಿದ್ದಾರೆ.

### ಖಾಸಗಿ ಸಂಸ್ಥೆಗಳ ಮೇಲೆ ಕಣ್ಣು

ಒತ್ತುವರಿ ತೆರವು ಮಾಡುವುದರ ಜೊತೆಗೆ ಸರಕಾರ ಈಗ ಖಾಸಗಿ ಸಂಸ್ಥೆಗಳಿಗೆ ನೀಡಿರುವ ಜಾಗಗಳನ್ನು ವಾಪಸ್ ಪಡೆಯಲು ಕಾರ್ಯತಂತ್ರ ರೂಪಿಸಿದೆ. ರಾಜ್ಯದಲ್ಲಿ ನೂರಾರು ಎಕರೆಗಳಷ್ಟು ಸರಕಾರಿ ಜಾಗಗಳನ್ನು ವಿವಿಧ ಉದ್ದೇಶಗಳಿಗಾಗಿ ಖಾಸಗಿ ಸಂಸ್ಥೆಗಳಿಗೆ ನೀಡಿದ್ದು ವಾಣಿಜ್ಯ ಅಥವಾ ಇತರ ದುರುದ್ದೇಶ ಗಳಿಗೆ ಬಳಕೆಯಾಗುತ್ತಿರುವ ಬಗ್ಗೆ ಮಾಹಿತಿ ಲಭಿಸಿದೆ. ಏಕೆಂದರೆ ಕಂದಾಯ ಇಲಾಖೆ ಸರಕಾರಿ ಜಾಗ ಪಡೆದಿರುವ ಖಾಸಗಿ ಸಂಸ್ಥೆಗಳ ವಿವರ ಮತ್ತು ಅವುಗಳ ಚಟುವಟಿಕೆ ಸಂಗ್ರಹಿಸಲು ಅಧಿಕಾರಿಗಳು ಮತ್ತು ಕಾನೂನು ತಜ್ಞರ ತಂಡ ರಚಿಸಿ ತನ್ನ ಜಾಗವನ್ನು ಹೇಗೆ ವಾಪಸ್ ಪಡೆಯಬಹುದು ಎನ್ನುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಿದೆ. ಈ ಕಾರ್ಯಾಚರಣೆ ಸದ್ದಿಲ್ಲದೆ ಆರಂಭವಾಗಿದ್ದು ಬೆಂಗಳೂರು ಸೇರಿದಂತೆ ರಾಜ್ಯದ ಮಹಾನಗರಗಳು ಮತ್ತು ಪಟ್ಟಣಗಳಲ್ಲಿ ಸರಕಾರಿ ಜಾಗ ಪಡೆದಿರುವ ಸಂಸ್ಥೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಹಾಗೆ ಆ ಸಂಸ್ಥೆಗಳ ಜಾಗದ ದುರ್ಬಳಕೆ ವಿರುದ್ಧ ಕೇಸುಗಳನ್ನು ದಾಖಲಿಸಲಾಗಿದ್ದು ಇನ್ನು ಕೆಲವೇ ತಿಂಗಳಲ್ಲಿ ಈ ಕಾರ್ಯಾಚರಣೆ ಫಲ ನೀಡಲಿದೆ ಎಂದು ಕಂದಾಯ ಇಲಾಖೆ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

### ಸರಕಾರದಿಂದ ಲ್ಯಾಂಡ್ ಬ್ಯಾಂಕ್

2023ರ ಅವಧಿಯಲ್ಲಿ ಸರ್ಕಾರಿ ಜಾಗಗಳ ಒತ್ತುವರಿ ಸುಮಾರು 28,000 ಎಕರೆ ಇತ್ತು. ಆದರೆ ಅದರ ಪ್ರಮಾಣ ಈಗ 12,000 ಎಕರೆಗೆ ಇಳಿದಿದೆ. ಇದರಲ್ಲಿ ಶೇ. 50 ರಷ್ಟು ಜಾಗಗಳು ಬೆಂಗಳೂರಿನಲ್ಲೇ ಇದ್ದವು. ಅವು ಈಗ ಒತ್ತುವರಿಯಿಂದ ತೆರವಾ ಗಿವೆ. ಬೆಂಗಳೂರಿನಲ್ಲಿ ಇನ್ನೂ 4000 ಎಕರೆಯಿಂದ 5000 ವರೆಗೂ ಎಕರೆ ವರೆಗೂ ಸರಕಾರಿ ಜಾಗ ಒತ್ತುವರಿಯಾಗಿದೆ ಎಂದು ಅಂದಾಜಿಸಲಾಗಿದೆ. ಇದನ್ನು ಸುಧಾರಿತ ತಂತ್ರಜ್ಞಾನದಿಂದ ಸುಲಭವಾಗಿ ಗುರುತಿಸಲಾಗುತ್ತಿದ್ದು ಕಾಲಮಿತಿಯಲ್ಲಿ ತೆರವು ಗೊಳಿಸಲಾಗುತ್ತದೆ. ಹೀಗೆ ತೆರವಾಗುವ ಸರಕಾರಿ ಜಾಗವನ್ನು ಲ್ಯಾಂಡ್ ಬ್ಯಾಂಕ್ ಮಾಡಿ ಜನೋಪಕಾರಿ ಯೋಜನೆಗಳಿಗೆ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

> ಸರಕಾರಿ ಜಾಗ ಒತ್ತುವರಿ ಮಾಡಿರುವ ದಾಖಲೆ ನೋಡಿದರೆ ಬರೀ ರಾಜಕಾರಣಿಗಳು, ಅಧಿಕಾರಿಗಳು, ಪ್ರಭಾವಿಗಳು, ಸಂಘ ಸಂಸ್ಥೆಗಳು ಹಾಗೂ ಭೂಗಳ್ಳರು, ಏಜೆಂಟರು ಹೆಚ್ಚಾಗಿದ್ದಾರೆ. ಇವರ ಪ್ರಭಾವ ಮತ್ತು ಬೆದರಿಕೆಯನ್ನು ಲೆಕ್ಕಿಸದೆ ಸರಕಾರ ಮುನ್ನುಗ್ಗುತ್ತಿದೆ. ಇದು ಸದ್ಯದಲ್ಲೇ ಫಲ ನೀಡಲಿದೆ.
> -ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ

## ಮತ ಕಳ್ಳತನ ಚರ್ಚೆ ದೇಶದ ಪ್ರಮುಖ ವಿಷಯ: ರಾಹುಲ್

**ಜುನಾಗಢ್:** ಮಣಿಪುರ ಬಹಳ ಸಮಯದಿಂದ ಸಮಸ್ಯೆಯಿಂದ ಬಳಲುತ್ತಿದೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಈಗ ಗಲಭೆ ಪೀಡಿತ ರಾಜ್ಯಕ್ಕೆ ಭೇಟಿ ನೀಡುವುದು ದೊಡ್ಡ ವಿಷಯವಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದ್ದಾರೆ. ವೋಟ್ ಚೋರಿ (ಮತ ಕಳ್ಳತನ) ಪ್ರಸ್ತುತ ದೇಶದ ಮುಂದಿರುವ ಅತ್ಯಂತ ಪ್ರಮುಖ ವಿಷಯವಾಗಿದೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ಒತ್ತಿ ಹೇಳಿದರು. ಗುಜರಾತ್‌ನ ಜುನಾಗಢ್ ಜಿಲ್ಲೆಯ ಕೆಶೋಡ್ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ, ಎಲ್ಲೆಡೆ ಜನ ಮತ ಕಳ್ಳತನ ಬಗ್ಗೆ ಮಾತನಾಡುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಶನಿವಾರ ಮಣಿಪುರಕ್ಕೆ ಭೇಟಿ ನೀಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ರಾಹುಲ್ ಗಾಂಧಿ, ಅವರು ಮಣಿಪುರಕ್ಕೆ ಭೇಟಿ ನೀಡುತ್ತಿರುವುದು ಒಳ್ಳೆಯ ವಿಚಾರ. ಆದರೆ ಮಣಿಪುರ ಬಹಳ ದಿನಗಳಿಂದ ಸಮಸ್ಯೆ ಯಲ್ಲಿದೆ. ಪ್ರಧಾನಿ ಈಗ ಅಲ್ಲಿಗೆ ಹೋಗಲು ನಿರ್ಧರಿಸಿದ್ದಾರೆ. ಆದರೆ ಈಗ ಅದು ದೊಡ್ಡ ವಿಷಯವಲ್ಲ. ದೇಶದ ಪ್ರಮುಖ ವಿಷಯ ವೆಂದರೆ ಮತ ಕಳ್ಳತನ ಎಂದು ರಾಹುಲ್ ಗಾಂಧಿ ಹೇಳಿದರು. ಹರಿಯಾಣ ಮತ್ತು ಮಹಾ ರಾಷ್ಟ್ರದ ಚುನಾವಣೆಯಲ್ಲಿ ಅವರು ಮತ ಕದ್ದಿದ್ದಾರೆ. ಇತ್ತೀಚೆಗೆ ಕರ್ನಾಟಕದಲ್ಲಿ ನಾವು ಅದನ್ನು ಸಾಬೀತು ಪಡಿಸಿದ್ದೇವೆ. ಆದ್ದರಿಂದ ಈಗ ಬಹುಮುಖ್ಯ ಚರ್ಚೆಯಾಗ ಬೇಕಾದ ವಿಷಯವೆಂದರೆ ಮತ ಕಳ್ಳತನ. ಎಲ್ಲೆಡೆ ಜನ ಅದರ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ರಾಯ್‌ಬರೇಲಿಯ ಲೋಕಸಭಾ ಸಂಸದ ತಿಳಿಸಿದರು.

# ನೆಪೋ ವಿರುದ್ಧ ಜೆನ್‌ಝೀ ನೇಪಾಳ ಧಗ-ಧಗ

**ನೆಪೋ ಕಿಡ್ಸ್ ಮೇಲಿನ ಆಕ್ರೋಶ, ಆಳುಗ ವರ್ಗದ ಭ್ರಷ್ಟಾಚಾರ ಜೆನ್‌ಝೀ ಸಮೂಹವನ್ನು ಕೆರಳಿ ಕೆಂಡ ವಾಗಿಸಿತು. 2 ದಿನಗಳ ಜೆನ್‌ಝೀ ಯುವ ಸಮೂಹದ ಆಕ್ರೋಶದ ಫಲ. ನೇಪಾಳ ಸರಕಾರ ಪತನ ಗೊಂಡಿತು. ಪ್ರಧಾನಿ ಕೆ.ಪಿ. ಶರ್ಮಾ ಓಲಿ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರು. ಸದ್ಯ ಕಠ್ಮಂಡುವಿನಲ್ಲಿ ಪರಿಸ್ಥಿತಿ ತಹಬದಿಗೆ ಬಂದಿದ್ದು, ಮಧ್ಯಂತರ ಸರಕಾರ ರಚನೆ ಆಗಿದೆ. ಮಾಜಿ ಮುಖ್ಯ ನ್ಯಾಯಮೂರ್ತಿ ಸುಶೀಲಾ ಕರ್ಕಿ ಮಧ್ಯಂತರ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಯಾರಿವರು ನೆಪೋ ಕಿಡ್ಸ್? ಜೆನ್‌ಝೀ ಸಮೂಹ ಇವರ ಮೇಲೆ ಏಕೆ ಆಕ್ರೋಶ ಎನ್ನುವುದನ್ನು ಇಲ್ಲಿ ತಿಳಿಯೋಣ.**

ಕರಿಯಪ್ಪ ಹೆಗ್ಗಡದಿನ್ನಿ

ಬಾಲಿವುಡ್ ನೆಪೋಟಿಸಂ ಆಗಾಗ ಚರ್ಚೆಯಾಗುತ್ತಿರುವ ವಿಷಯ. ಸಾಮಾನ್ಯರ ಮಕ್ಕಳಿಗಿಂತ ಚಿತ್ರೋದ್ಯಮದಲ್ಲಿ ನೆಲೆಯೂರಿದ ಹೈ ಪ್ರೊಫೈಲ್ ವ್ಯಕ್ತಿಗಳ ಸಂತತಿಯೇ ಹೆಚ್ಚು ಅವಕಾಶಗಳನ್ನು ಪಡೆಯುತ್ತಿದೆ ಎನ್ನುವುದು ಆರೋಪ. ನೆರೆಯ ನೇಪಾಳದಲ್ಲಿಯೂ ರಾಜಕಾರಣಿಗಳ ಮಕ್ಕಳು ಐಷರಾಮಿ ಜೀವನ, ಪೋಷಕರ ಕೃಪೆಯಿಂದ ಆಯಕಟ್ಟಿನ ಜಾಗದಲ್ಲಿ ಅಧಿಕಾರ ಮಾಡುತ್ತಿರುವುದು. ಸಾಮಾನ್ಯರ ಮಕ್ಕಳಾದ ಜೆನ್‌ಝೀ ಸಮೂಹವನ್ನು ಕೆರಳಿಸಿತು. ಮಿತಿ ಮೀರಿದ ನಿರುದ್ಯೋಗ, ಏರುತ್ತಿರುವ ಹಣದುಬ್ಬರ, ತೀವ್ರ ಬಡತನ ತಾಂಡವ ಆಡುತ್ತಿರುವ ಹೊತ್ತಿನಲ್ಲಿ ರಾಜಕಾರಣಿ ಮಕ್ಕಳು ತಾವು ಅನುಭವಿಸುತ್ತಿರುವ ಐಷಾರಾಮಿ ಜೀವನವನ್ನು ಜಾಲತಾಣಗಳಲ್ಲಿ ಎಲ್ಲರ ಎದುರು ಪ್ರದರ್ಶಿಸಿರುವುದು ಜೆನ್‌ಝೀ ಕೆಂಗಣ್ಣಿಗೆ ಗುರಿ ಆಯ್ತು. ಇನ್ನೊಂದು ಕಡೆ ಸರಕಾರದ ನಿಯಮಾವಳಿಗೆ ಒಳಪಟ್ಟಿಲ್ಲ ಎಂದು ನೇಪಾಳ ಸರಕಾರ ದಿಢೀರ್ ಆಗಿ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಸ್ನ್ಯಾಪ್‌ಚಾಟ್, ಎಕ್ಸ್, ಟಿಕ್‌ಟಾಕ್ ಸೇರಿ 26 ಸೋಷಿಯಲ್ ಮೀಡಿಯಾಗಳನ್ನು ನಿಷೇಧ ಮಾಡಿತು. 1996 ರಿಂದ 2010 ಕಾಲಾವಧಿಯಲ್ಲಿ ಜನಿಸಿದ ಜೆನ್‌ಝೀ. ಸದಾ ಮೊಬೈಲ್ ಹಾಗೂ ಸೋಷಿಯಲ್ ಮೀಡಿಯಾದಲ್ಲೇ ಮುಳುಗಿದ ಯುವ ಸಮೂಹ. ಸೋಷಿಯಲ್ ಮೀಡಿಯಾ ನಿಷೇಧ ಜೀರ್ಣಿಸಿಕೊಳ್ಳಲು ಇವರಿಗೆ ಆಗಲಿಲ್ಲ. ಸರಕಾರದ ಭ್ರಷ್ಟಾಚಾರ, ಸೋಷಿಯಲ್ ಮೀಡಿಯಾ ನಿಷೇಧ ಸೇರಿ ಹಲವು ಕಾರಣವನ್ನಿಟ್ಟುಕೊಂಡು ಕೆ.ಪಿ.ಓಲಿ ನೇತೃತ್ವದ ಸರಕಾರವನ್ನು ಹಣಿಯಲು ಯುವ ಸಮೂಹ ಕಠ್ಮಂಡುವಿನಲ್ಲಿ ಕ್ಷಿಪ್ರ ಕ್ರಾಂತಿಯನ್ನೇ ಮಾಡಿ ಬಿಟ್ಟಿತು. ಪ್ರತಿಭಟನೆಯಲ್ಲಿ 26 ಮಂದಿ ಸಾವನ್ನಪ್ಪಿದರು. ಉದ್ರಿಕ್ತರು ಅಧ್ಯಕ್ಷರ ನಿವಾಸಕ್ಕೆ ನುಗ್ಗಿ ಬೆಂಕಿ ಇಟ್ಟ ಬೆನ್ನಲ್ಲೇ ಬಚಾವ್ ಆಗಲು ಪ್ರಧಾನಿ ಹುದ್ದೆಗೆ ಖಡ್ಗ ಪ್ರಸಾದ್ ಶರ್ಮಾ ಓಲಿ ರಾಜೀನಾಮೆ ನೀಡಿ ದೇಶ ಬಿಟ್ಟು ಪಲಾಯನ ಮಾಡಿದರು.

## ಯಾರಿವರು ನೆಪೋ ಕಿಡ್ಸ್?

ನೆಪೋಟಿಸಂ ಎಂದರೆ, ಪ್ರಭಾವಿ ಸ್ಥಾನದಲ್ಲಿರುವ ಜನರು ತಮ್ಮ ಸ್ಥಾನಮಾನವನ್ನು ಬಳಸಿಕೊಂಡು ತಮ್ಮ ಸಂಬಂಧಿಕರಿಗೆ, ವಿಶೇಷವಾಗಿ ಮಕ್ಕಳಿಗೆ, ಅನಗತ್ಯ ಲಾಭಗಳು ಮತ್ತು ಅವಕಾಶಗಳನ್ನು ಒದಗಿಸುವುದು. ಈ ಪ್ರಕ್ರಿಯೆಯಿಂದಾಗಿ, ಅರ್ಹತೆ ಇಲ್ಲದಿದ್ದರೂ, ಸುಲಭವಾಗಿ ಉನ್ನತ ಸ್ಥಾನಗಳನ್ನು ಅಥವಾ ಅವಕಾಶಗಳನ್ನು ಪಡೆಯುತ್ತಾರೆ. ಚಲನಚಿತ್ರ ಮತ್ತು ಮನರಂಜನಾ ಉದ್ಯಮ, ಪ್ರಸಿದ್ಧ ನಟ-ನಟಿಯರು ಅಥವಾ ನಿರ್ದೇಶಕರ ಮಕ್ಕಳು. ಇವರು ತಮ್ಮ ಪೋಷಕರ ಪ್ರಭಾವದಿಂದಾಗಿ ಸುಲಭವಾಗಿ ಚಿತ್ರರಂಗಕ್ಕೆ ಪ್ರವೇಶ ಪಡೆಯುತ್ತಾರೆ. ರಾಜಕೀಯ ಕ್ಷೇತ್ರದಲ್ಲೂ ನೆಪೋಟಿಸಂ ಬಲವಾಗಿ ಬೇರೂರಿದೆ. ಪ್ರಭಾವಿ ರಾಜಕಾರಣಿಗಳ ಮಕ್ಕಳು. ಇವರು ಯಾವುದೇ ಸಾರ್ವಜನಿಕ ಅನುಭವವಿಲ್ಲದಿದ್ದರೂ, ತಮ್ಮ ಕುಟುಂಬದ ಪ್ರಭಾವದಿಂದಾಗಿ ರಾಜಕೀಯದಲ್ಲಿ ಉನ್ನತ ಸ್ಥಾನಗಳನ್ನು ಪಡೆಯುತ್ತಾರೆ. ಕಾರ್ಪೊರೇಟ್ ಮತ್ತು ಉದ್ಯಮ ಕ್ಷೇತ್ರದಲ್ಲೂ ದೊಡ್ಡ ಕಂಪನಿಗಳ ಮಾಲೀಕರ ಮಕ್ಕಳು. ತಮಗೆ ಯಾವುದೇ ಅನುಭವವಿಲ್ಲದಿದ್ದರೂ, ನೇರವಾಗಿ ಕಂಪನಿಯ ನಿರ್ವಾಹಕ ಸ್ಥಾನಗಳಿಗೆ ಅಥವಾ ಪ್ರಮುಖ ಹುದ್ದೆಗಳಿಗೆ ಬಂದು ಸೇರುತ್ತಾರೆ. ಹಾಗಾಗಿ, ನೆಪೋ ಕಿಡ್ಸ್ ಎಂಬ ಪದವನ್ನು ಹೆಚ್ಚಾಗಿ ನಕಾರಾತ್ಮಕ ಅರ್ಥದಲ್ಲಿ ಬಳಸಲಾಗುತ್ತದೆ. ಇದು ಅರ್ಹತೆ ಮತ್ತು ಕಷ್ಟಪಟ್ಟು ದುಡಿಯುವವರಿಗೆ ಸಿಗಬೇಕಾದ ಅವಕಾಶಗಳನ್ನು ಕಬಳಿಸುತ್ತದೆ ಎಂಬ ಭಾವನೆಯನ್ನು ಸೃಷ್ಟಿಸುತ್ತದೆ. ನೇಪಾಳದ ಸಂದರ್ಭದಲ್ಲಿ, ರಾಜಕೀಯ ಮತ್ತು ಆರ್ಥಿಕ ಅಧಿಕಾರವು ಕೆಲವೇ ಕೆಲವು ಕುಟುಂಬಗಳ ಕೈಯಲ್ಲಿ ಕೇಂದ್ರೀಕೃತವಾಗಿರುವುದನ್ನು ವಿರೋಧಿಸಲು ನೇಪೋಟಿಸಂ ಎಂಬ ಪದ ಬಳಸಲಾಗುತ್ತದೆ.

### ಸುಡಾನ್ ಗುರುಂಗ್ ಸಂದೇಶ ಪ್ರತಿಭಟನೆಗೆ ಕಿಚ್ಚು

**ನೇಪಾಳಿ ಜೆನ್‌ಝೀ ಯುವ ಸಮೂಹದ ಪ್ರತಿಭಟನೆಯ ಹಿಂದೆಯಿದ್ದ ವ್ಯಕ್ತಿ 36 ವರ್ಷದ ಸುಡಾನ್ ಗುರುಂಗ್, ನೇಪಾಳದ ಹಾಮಿ ನೇಪಾಳ ಎಂಬ ಎನ್‌ಜಿಒ ಹೊಂದಿರುವ ಈತ ಸರಕಾರದ ವಿರುದ್ಧ ಪ್ರತಿಭಟನೆ ನಡೆಸುವಂತೆ, ಶಾಂತಿಯುತ ರ್‍ಯಾಲಿ ನಡೆಸುವಂತೆ ಸಾಮಾಜಿಕ ಜಾಲತಾಣಗಳಲ್ಲಿ ಕರೆ**

**ನೀಡಿದ್ದ. ಇನ್‌ಸ್ಟಾಗ್ರಾಂ ನಿರ್ಬಂಧದಕ್ಕೂ ಮುನ್ನ ಪ್ರತಿಭಟನೆಯ ಮಾರ್ಗ ಮತ್ತು ಸುರಕ್ಷತಾ ಸೂಚನೆಗಳನ್ನು ಪೋಸ್ಟ್ ಮಾಡಿದ್ದ. ಈತನ ಕರೆ ಮೇರೆಗೆ ಪ್ರತಿಭಟನೆ ನಡೆ ಸಿದ್ದರು. ಗುರುಂಗ್ ಸಂದೇಶವೇ ನೇಪಾಳ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಲು ಕಾರಣ.**

## ನೇಪಾಳದ ರಾಜಕಾರಣ

17ನೇ ಶತಮಾನದಿಂದಲೂ 2008ರ ವರೆಗೆ ನೇಪಾಳ ರಾಜಪ್ರಭುತ್ವ ಆಳ್ವಿಕೆಗೆ ಒಳಪಟ್ಟಿತ್ತು. 1961ರಲ್ಲಿ ರಾಜನಾಗಿದ್ದ ಮಹೇಂದ್ರ ಸಿಂಗ್ ಕಾಲಾವಧಿಯಲ್ಲಿ ನೇಪಾಳದಲ್ಲಿ ಮೊದಲ ಬಾರಿ ಪ್ರಜಾಪ್ರಭುತ್ವದ ಕೂಗು ಮೊಳಗಿತು. ಪ್ರಜಾಪ್ರಭುತ್ವ ರಾಷ್ಟ್ರ ಘೋಷಣೆಗಾಗಿ 1961 ರಿಂದ 2008ರ ವರೆಗೆ ಸಾಕಷ್ಟು ನಾಗರಿಕ ಹೋರಾಟಗಳು ಆಗಿವೆ. 2006ರಲ್ಲಿ ತೀವ್ರ ಗತಿಯಲ್ಲಿ ನಡೆದ ನಾಗರಿಕ ಹೋರಾಟದ ಫಲವಾಗಿ 2008ರಲ್ಲಿ ರಾಜಪ್ರಭುತ್ವ ಕೊನೆಗೊಂಡಿತು. ಕೊನೆಯ ರಾಜ ಜ್ಞಾನೇಂದ್ರ, ನೇಪಾಳವನ್ನು ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಬಿಟ್ಟು ಕೊಟ್ಟರು. 2015ರಲ್ಲಿ ನೇಪಾಳ ಹೊಸ ಸಂವಿಧಾನ ಅಂಗೀಕರಿಸಿತು. ಕೆ.ಪಿ.ಶರ್ಮಾ ಓಲಿ ಅಕ್ಟೋಬರ್ 2015ರಲ್ಲಿ ಮೊದಲ ಬಾರಿಗೆ ನೇಪಾಳದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು. ಪುನಃ 2018 ಮತ್ತು 2021ರಲ್ಲಿ ಪ್ರಧಾನಿಯಾದರು. 2024ರಲ್ಲಿ ನಾಲ್ಕನೇ ಬಾರಿಗೆ ಓಲಿ ಮತ್ತೆ ಪ್ರಧಾನಿಯಾಗಿ ಆಯ್ಕೆಯಾದರು. 2015ರಿಂದ ನೆಪೋ ಕಿಡ್ಸ್ ಹಾವಳಿ ಹಾಗೂ ಓಲಿಯ ಸರಕಾರದ ತೀವ್ರ ಭಷ್ಟಾಚಾರದಿಂದ ಬೇಸತ್ತು ಜೆನ್‌ಝೀ ಯುವ ಸಮೂಹ ದಂಗೆ ಎದ್ದಿತು. ಕಠ್ಮಂಡುವಿನ ಸಂಸತ್ ಭವನಕ್ಕೆ ನುಗ್ಗಿ ದಾಂದಲೆ ನಡೆಸಿ, ಓಲಿ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿತು. ಸದ್ಯ ಮಧ್ಯಂತರ ಸರಕಾರ ರಚನೆ ಆಗಿದೆ.

ಕೆ.ಪಿ.ಶರ್ಮಾ ಓಲಿ

### ಯುವ ದಂಗೆ

**ಜಾಗತಿಕ ಹವಾಮಾನ ಮುಷ್ಕರ**
**2018-2019** ಗ್ರೇಟಾ ಥನ್‌ಬರ್ಗ್‌ನಿಂದ ಪ್ರಾರಂಭವಾದ ಜಾಗತಿಕ ಹವಾಮಾನ ವೈಪರಿತ್ಯದ ಕುರಿತ ಪ್ರತಿಭಟನೆ.163 ದೇಶಗಳಿಗೆ ವ್ಯಾಪಿಸಿತು. ಲಕ್ಷಾಂತರ ಯುವಜನರು ಹೋರಾಟಕ್ಕೆ ಬೆಂಬಲಿಸಿದರು. ಹಸಿರು ಮನೆ ಅನಿಲದ ಪರಿಣಾಮ, ಓಜೋನ್ ಪದರ ಕ್ಷೀಣತೆ ಮೇಲೆ ಆಯಾ ದೇಶಗಳ ಸರಕಾರಗಳು ತುರ್ತು ಕ್ರಮ ಕೈಗೊಳ್ಳಲು ಸಹಕಾರಿ ಆಯಿತು.

**ಬ್ಲ್ಯಾಕ್ ಲೈವ್ಸ್ ಮ್ಯಾಟರ್**
**2020** ಅಮೆರಿಕಾದಲ್ಲಿ ಜಾರ್ಜ್ ಫ್ಲಾಯ್ಡ್ ಹತ್ಯೆಯ ನಂತರ ಯುವ ಜನಾಂಗ ನ್ಯಾಯ ಮತ್ತು ವ್ಯವಸ್ಥಿತ ಪೊಲೀಸ್ ಹಿಂಸೆಯ ಅಂತ್ಯಕ್ಕೆ ಆಗ್ರಹಿಸಿತು. ಜನಾಂಗೀಯ ಅಸಮಾನತೆ ವಿರೋಧಿಸಿ ಪ್ರತಿಭಟನೆ ವಿಶ್ವದಲ್ಲೇ ಗಮನ ಸೆಳೆಯಿತು.

**ಹಾಂಗ್ ಕಾಂಗ್**
**2019-2020** ವಿದ್ಯಾರ್ಥಿಗಳು ಮತ್ತು ಯುವಜನರು ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಮತ್ತು ಹಾಂಗ್ ಕಾಂಗ್‌ನ ಸ್ವಾಯತ್ತತೆಗೆ ಧಕ್ಕೆ ತರುವಂತಹ ಗಡಿಪಾರು ಕಾನೂನು ಗಳನ್ನು ವಿರೋಧಿಸಿ ಬೃಹತ್ ಹೋರಾಟ ನಡೆಸಿದರು. ಈ ಹೋರಾಟ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಡಿಪಾರು ಕಾನೂನುಗಳ ವಿಮರ್ಶೆಗೆ ಕಾರಣವಾಯಿತು.

**ಥೈಲ್ಯಾಂಡ್**
**2020-2022** ಥೈಲ್ಯಾಂಡ್‌ನಲ್ಲಿ ರಾಜಪ್ರಭುತ್ವ ಪ್ರಶ್ನಿಸಿ ಸಾವಿರಾರು ವಿದ್ಯಾರ್ಥಿಗಳು ತೀವ್ರ ಹೋರಾಟ ನಡೆಸಿದರು. ಸಾಂವಿಧಾನಿಕ ಸುಧಾರಣೆಗಳಿಗಾಗಿ ಒತ್ತಾಯಿಸಿದರು.

**ಫ್ರೆಂಚ್ ವಿದ್ಯಾರ್ಥಿ ಕಿಡಿ**
**1968** ಫ್ರೆಂಚ್ ವಿದ್ಯಾರ್ಥಿಗಳು ನಿರಂಕುಶ ಪ್ರಭುತ್ವ, ಬಂಡವಾಳಶಾಹಿ ಮತ್ತು ಸಾಂಪ್ರದಾಯಿಕ ವ್ಯವಸ್ಥೆ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಿದರು. ಇದು ಫ್ರಾನ್ಸ್‌ನಲ್ಲಿ ಸಾಂಸ್ಕೃತಿಕ ಮತ್ತು ರಾಜಕೀಯ ಬದಲಾವಣೆ ತರಲು ಕಾರಣ ವಾಯಿತು.

### ನೇಪಾಳ ಆಡಳಿತ

- 1951ಕ್ಕಿಂತ ಮೊದಲು, ನೇಪಾಳವನ್ನು ವಿವಿಧ ರಾಜವಂಶಗಳ ರಾಜರು ಆಳುತ್ತಿದ್ದರು. ಅದರಲ್ಲಿ ರಾಜರು ಪ್ರಧಾನಮಂತ್ರಿಯನ್ನು ಅನುವಂಶಿಕವಾಗಿ ಪಡೆದ ವ್ಯವಸ್ಥೆಯ ಮೂಲಕ ಆಯ್ಕೆ ಮಾಡುತ್ತಿದ್ದರು. 1951ರಲ್ಲಿ ಪ್ರಜಾಪ್ರಭುತ್ವ ಪರ ಚಳವಳಿಗಳಿಂದ ರಾಜರನ್ನು ಪದಚ್ಯುತಿಗೊಳಿಸಲಾಯಿತು. ಸಂಸದೀಯ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟಿತು.



- 1961ರಲ್ಲಿ ರಾಜಮಹೇಂದ್ರನು ರಾಜಕೀಯ ಪಕ್ಷಗಳನ್ನು ನಿಷೇಧಿಸಿ ಪಂಚಾಯತ್ ಎಂದು ಕರೆಯಲ್ಪಡುವ ತನ್ನ ಅಧಿಕಾರವನ್ನು ಬಲಪಡಿಸುವ ಕೇಂದ್ರೀಕೃತ ಸರಕಾರಿ ವ್ಯವಸ್ಥೆಗೆ ಮರಳುವಂತೆ ಹೇರಿದನು.
- 1990ರಲ್ಲಿ ಕೆಲವು ಪಕ್ಷಗಳು ಬಹು-ಪಕ್ಷ ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಲು ಅಭಿಯಾನವನ್ನು ಪ್ರಾರಂಭಿಸಿ ಪ್ರತಿಭಟನೆಗಳನ್ನು ನಡೆಸಿದಾಗ ವ್ಯವಸ್ಥೆಯ ಬಗ್ಗೆ ಜನ ಆಕ್ರೋಶ ವ್ಯಕ್ತಪಡಿಸಿದರು. ಆಗಿನ ರಾಜ ಬೀರೇಂದ್ರ, ಅವರನ್ನು ರಾಜಕೀಯ ಪಕ್ಷಗಳ ಮೇಲಿನ ನಿಷೇಧವನ್ನು ತೆಗೆದುಹಾಕಲು ಒತ್ತಾಯಿಸಿತು. ಪಂಚಾಯತ್ ವ್ಯವಸ್ಥೆಯನ್ನು ಕೊನೆಗೊಳಿಸಿತು.
- 1996 ನೇಪಾಳದ ಎಡಪಂಥೀಯ ಮಾವೋವಾದಿಗಳು ರಾಜಮನೆತನದ ಸಂಸದೀಯ ವ್ಯವಸ್ಥೆಯನ್ನು ಜನತಾ ಗಣರಾಜ್ಯದೊಂದಿಗೆ ಬದಲಾಯಿಸಲು ಹಿಂಸಾತ್ಮಕ ಪ್ರಯತ್ನವನ್ನು ಪ್ರಾರಂಭಿಸಿದರು. ಇದು ದಶಕದ ಕಾಲದ ಅಂತರ್ಯುದ್ಧಕ್ಕೆ ಕಾರಣವಾಯಿತು.

**2006-2015**

- 2006ರಲ್ಲಿ ನಾಗರಿಕರು ರಾಜಪ್ರಭುತ್ವದ ವಿರುದ್ಧ ಪ್ರತಿಭಟಿಸಿದರು. 2008ರಲ್ಲಿ ನೇಪಾಳ ದೇಶ ಒಕ್ಕೂಟ ವ್ಯವಸ್ಥೆಯ ಪ್ರಜಾಪ್ರಭುತ್ವ ದೇಶವಾಯಿತು. 2015ರಲ್ಲಿ ನೇಪಾಳ ಹೊಸ ಸಂವಿಧಾನ ಅಂಗೀಕರಿಸಿತು.

ಮೈಸೂರಿನ ಯುವ ದಸರಾ ಸಂಭ್ರಮದ ಸಾಂಸ್ಕೃತಿಕ ಉತ್ಸವದಲ್ಲಿ ರಾಜ್ಯದ ನಾನಾ ಜಿಲ್ಲೆಗಳ ಯುವ ಕಲಾ ತಂಡಗಳು ನೀಡಿದ ನೃತ್ಯ ಪ್ರದರ್ಶನವನ್ನು ವೀಕ್ಷಿಸಿದ ಪ್ರೇಕ್ಷಕರು.

**ಕಾಟಾಚಾರದ ಸಭೆಗಳು | ಗ್ರಾಪಂಗಳ ಅವ್ಯವಸ್ಥೆಗೆ ಸಾಕ್ಷಿ | ಜಿಪಂ ಹಿರಿಯ ಅಧಿಕಾರಿಗಳು ಈ ಬಗ್ಗೆ ಮೌನಕ್ಕೆ ಶರಣು**

# ಪಂಚಾಯಿತಿ ಜಮಾಬಂದಿ, ಕಳ್ಳಾಟದ ಜುಗಲ್ಬಂದಿ

ಕೆ.ಎಸ್.ಮಂಜುನಾಥ ರಾವ್

**ಕೋಲಾರ:** ವರ್ಷಕ್ಕೊಮ್ಮೆ ಗ್ರಾಮ ಪಂಚಾಯತಿಯಲ್ಲಿ ನಡೆಯುವ ಜಮಾಬಂದಿ ಒಂದು ಪ್ರಹಸನವೆಂಬಂತೆ ನಡೆಯುತ್ತದೆ. ಬೆರಳೆಣಿಕೆ ಮಂದಿ ಕೂರಿಸಿ ಕೊಂಡು ರಹಸ್ಯವಾಗಿ ನಡೆಸುವ ಸಭೆಯಾಗಿ ಮಾರ್ಪಟ್ಟಿದೆ..!

ಇಡೀ ವರ್ಷದ ಗ್ರಾಮ ಪಂಚಾಯಿತಿಯ ಖರ್ಚು, ವೆಚ್ಚವನ್ನು ಜನರ ಮುಂದಿರಿಸಿ ಅನುಮೋದನೆ ಪಡೆದು ಕೊಂಡು ತಪ್ಪುಒಪ್ಪುಗಳಿಗೆ ಸಾರ್ವಜನಿಕರಿಂದ ಸಲಹೆ ಪಡೆದುಕೊಂಡು ಆಡಳಿತವನ್ನು ಪಾರದರ್ಶಕವಾಗಿ ನಡೆಸಬೇಕೆನ್ನುವುದು ಈ ಜಮಾಬಂದಿ ಸಭೆ ಉದ್ದೇಶ. ಆದರೆ ಕಳ್ಳಕಳ್ಳವಾಗಿ ನಡೆಯುತ್ತಿರುವುದು ಇಡೀ ವ್ಯವಸ್ಥೆಯ ಅವ್ಯವಸ್ಥೆಗೆ ಸಾಕ್ಷಿಯಾಗಿದೆ. ಜಮಬಂದಿ ಸಭೆಗೆ ಮುನ್ನ ಪತ್ರಿಕೆಗಳಿಗೆ ಕಾರ್ಯಕ್ರಮದ ಕುರಿತಾಗಿ ಜಾಹೀರಾತು ನೀಡುವ ಜತೆಗೆ ವ್ಯಾಪಕ ಪ್ರಚಾರ ಗ್ರಾಪಂ ಕೈಗೊಳ್ಳಬೇಕು.



**ಜಮಾಬಂದಿ ಸಭೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಹಳ್ಳಿಯಿಂದ ಕನಿಷ್ಠ 10 ಜನರನ್ನಾದರೂ ಸಂಘಟಿಸಬೇಕು. ಜತೆಗೆ ವರ್ಷದ ಖರ್ಚು-ವೆಚ್ಚದ ವಿವರ ಗಳನ್ನು ಒಳಗೊಂಡ ಪ್ರತಿಯನ್ನು ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಒದಗಿಸಬೇಕು. ಸಭೆ ಕುರಿತಂತೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು.**

**- ರಮೇಶ್‌ಕೃಷ್ಣಪ್ಪ,** ಮುಖ್ಯಸ್ಥರು, ವೃಷಭಾದ್ರಿ ಫೌಂಡೇಷನ್

## ಶಾಸ್ತ್ರಕ್ಕೆಂಬಂತೆ ಸಭೆ

ಸಭೆಯಲ್ಲಿ ಭಾಗವಹಿಸುವಂತೆ ಮಾಡಬೇಕೆಂಬ ನಿಯಮ ಬಹುತೇಕ ಗ್ರಾಪಂಗಳು ಪಾಲನೆ ಮಾಡು ತ್ತಿಲ್ಲ. ಶಾಸ್ತ್ರಕ್ಕೆಂಬಂತೆ ಸದಸ್ಯರನ್ನು ಕರೆಸಿ ಜಮಾಬಂದಿ ನಡೆಸುವ ಜತೆಗೆ ಅಂದೇ ಸಾಮಾನ್ಯ ಸಭೆ ನಡೆಸುವ ಪದ್ಧತಿ ಜಮಾಬಂದಿಗೆ ಸ್ಪಂದನೆ ಇಲ್ಲದಂತಾಗಿದೆ. ಒಂದು ವರ್ಷದ ಖರ್ಚು-ವೆಚ್ಚದ ಮಾಹಿತಿ ಹೊಂದಿ ರುವ ಜಮಾಬಂದಿ ಕಿರುಹೊತ್ತಿಗೆ ಎಲ್ಲ ಸದಸ್ಯರಿಗೂ ಸಭೆ ಆರಂಭವಾಗುವ ಮೊದಲೇ ಕೊಡಬೇಕು. ಕೆಲ ವೊಂದು ಪ್ರತಿಗಳನ್ನು ಸಭೆಗೆ ಆಗಮಿಸುವ ಸಾರ್ವ ಜನಿಕರಿಗೂ ಒದಗಿಸಬೇಕು ಎಂಬ ನಿಯಮವಿದ್ದರೂ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೂ ಪ್ರತಿಯನ್ನು ನೀಡುವ ಸೌಜನ್ಯ ತೋರದ ಸಿಬ್ಬಂದಿ ಕಾಟಾಚಾರಕ್ಕೆ ಎಂಬಂತೆ ಆತುತಾತುರವಾಗಿ ಓದಿ ಸಭೆ ಮುಗಿಸುವ ಮೂಲಕ ಆಡಳಿತಾತ್ಮಕ ವೆಚ್ಚದ ಗೌಪ್ಯತೆಯನ್ನು ಕಾಪಾಡಿ ಕೊಳ್ಳುತ್ತಿದ್ದಾರೆ.





ಬೆರಳೆಣಿಕೆ ಮಂದಿ ಮುಂದೆ ಜಮಾಬಂದಿ ಖರ್ಚು ಓದುತ್ತಿರುವ ಪಂಚಾಯತಿ ಸಿಬ್ಬಂದಿ

### ಸರಕಾರ ಜಿಪಂ-ತಾಪಂ ಚುನಾವಣೆ ನಡೆಸಲಿ

**ಪಂಚಾಯತ್ ರಾಜ್ ವ್ಯವಸ್ಥೆ ಎಂದರೆ ಸರಕಾರಕ್ಕೆ ಬೇಕಾಗಿಲ್ಲ. ಮೊದಲು ವ್ಯವಸ್ಥೆಯ ಬಗ್ಗೆ ಉನ್ನತ ಸ್ಥಾನದಲ್ಲಿ ಇರುವ ವರಿಗೆ ನಂಬಿಕೆ ಬಂದರೆ ತಂತಾನೆ ಕೆಳ ಹಂತದಲ್ಲಿ ಸರಿಹೋಗುತ್ತದೆ. ಜಿಲ್ಲಾ ಪಂಚಾಯತಿ ಸಿಇಒ ಅವರು ಪಂಚಾಯತಿ ಜಮಾಬಂದಿ ಸಭೆಯ ಕುರಿತು ನೇರ ನಿಗಾ ವಹಿಸಬೇಕು. ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಚುನಾವಣೆಗಳು ನಡೆದು ಎಷ್ಟು ವರ್ಷ ಆಯಿತು? ಮೀಸಲು ಹಂಚಿಕೆ ಕುಂಟು ನೆಪಗಳನ್ನು ಹೇಳುತ್ತಾ ಇಷ್ಟು ವರ್ಷ ಕಲ ಕಳೆದಿದೆ. ಈಗಲಾದರೂ ಈ ಗೊಂದಲ ಬಗೆಹರಿಸಿ ಚುನಾವಣೆ ನಡೆಸಲಿ ಎಂದು ಪಂಚಾಯತಿ ಸದಸ್ಯರೊಬ್ಬರು ಆಗ್ರಹಿಸಿದ್ದಾರೆ.**

## ನೋಡಲ್ ಅಧಿಕಾರಿ ಗೈರು

ಜಮಾಬಂದಿ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿ ಸಿದರೆ ಕಳ್ಳ ಬಿಲ್‌ಗಳ ಮಾಹಿತಿ ಜನರಿಗೆ ಗೊತ್ತಾಗಿ ಬಂಡ ವಾಳ ಬಯಲಾಗುತ್ತದೆ ಎಂಬ ಆತಂಕದಿಂದಾಗಿ ಪಂಚಾಯ್ತಿ ಸಿಬ್ಬಂದಿ ಮಹತ್ವದ ಜಮಾಬಂದಿ ಕಾರ್ಯ ಕ್ರಮವನ್ನು ಹೇಗೋ ಮುಗಿಸುವ ಮೂಲಕ ಕೈ ತೊಳೆದು ಕೊಳ್ಳುತ್ತಿದ್ದಾರೆ. ಪಂಚಾಯತಿ ಜಮಾಬಂದಿ ಯನ್ನು ನೋಡಲ್ ಅಧಿಕಾರಿ ಸಮ್ಮುಖದಲ್ಲೇ ಮಾಡಬೇಕೆಂಬ ನಿಯಮವಿದ್ದರೂ ಕೆಲವರು ತಮ್ಮ ಅಧೀನ ಸಿಬ್ಬಂದಿಯನ್ನು ಸಭೆಗೆ ಕಳುಹಿಸಿ ಕಾರ್ಯಕ್ರಮ ನಡೆಸಿದ ಉದಾಹರಣೆಗಳನ್ನೂ ಕಾಣಬಹುದಾಗಿದೆ.

## ಟೆಂಡರ್ ಇಲ್ಲ

ಕೊಟೇಷನ್ ಗೊತ್ತಿಲ್ಲ- ಪ್ರತಿ ಪಂಚಾಯ್ತಿಯಲ್ಲೂ ಲಕ್ಷಾಂತರ ರೂ. ಖರೀದಿ ಹಾಗೂ ಕಾಮಗಾರಿ ನಡೆದರೂ ಒಂದಕ್ಕೂ ಟೆಂಡರ್ ಅಥವಾ ಕೊಟೇಷನ್ ಆಗಲಿ ಇರುವುದಿಲ್ಲ, ಪ್ರತಿಯೊಂದನ್ನೂ ತುಂಡಾಗಿ ಮಾಡಿ ಅನಧಿಕೃತ ಚಿಕ್ಕ ಮೊತ್ತವಾಗಿಸಿ ಕೆಲಸ ಮಾಡಿಸಿ ಟೆಂಡರ್ ಅಥವಾ ಕೊಟೇಷನ್ ಬಾರದಂತೆ ಜಾಣತನ ತೋರಲಾಗುತ್ತಿದೆ. ಆಡಿಟ್ ಸಂದರ್ಭದಲ್ಲಿ ಸಂಬಂಧಿ ಸಿದ ಅಧಿಕಾರಿಗಳನ್ನು ಒಲಿಸಿಕೊಂಡು ಆಕ್ಷೇಪ ಆಗ ದಂತೆ ಎಚ್ಚರ ವಹಿಸುವ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಬುದ್ಧಿವಂತಿಕೆಯಿಂದಾಗಿ ಅಕ್ರಮವೇ ಸಕ್ರಮವಾಗುತ್ತಿದ್ದರೂ ಹಿರಿಯ ಅಧಿಕಾರಿಗಳು ಈ ಸಂಬಂಧ ಮೌನಕ್ಕೆ ಶರಣಾಗಿರುವುದು ಏಕೆಂದು ಗೊತ್ತಾಗುತ್ತಿಲ್ಲ..!

ಪಂಚಾಯತ್ ಕಾಯ್ದೆಯಂತೆ 20 ಸಾವಿರ ರೂ. ಕಾಮಗಾರಿಗೆ ಕೊಟೇಷನ್ ಬೇಕಾಗಿರುವುದರಿಂದಾಗಿ ಪ್ರತಿಯೊಂದನ್ನೂ 10 ರಿಂದ 15 ಸಾವಿರಕ್ಕೆ ಮಿತಿಗೊಳಿ ಸುವ ಮೂಲಕ ನೇರವಾಗಿ ಕೆಲಸಗಳನ್ನು ಮಾಡಿಸ ಲಾಗುತ್ತಿರುವುದು ಅಕ್ರಮಕ್ಕೆ ದಾರಿ ಮಾಡಿಕೊಟ್ಟಿದೆ.

ಪಂಚಾಯ್ತಿ ಸದಸ್ಯರಲ್ಲಿ ಹಲವಾರು ಗುಂಪುಗಳು ಸಾಮಾನ್ಯ ವಾಗಿರುವುದನ್ನು ದುರ್ಬಳಕೆ ಮಾಡಿ ಕೊಳ್ಳುವ ಸಿಬ್ಬಂದಿ ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿ ಕಟ್ಟುವ ಮೂಲಕ ತಮ್ಮ ಅಕ್ರಮಗಳು ಬಯಲಿಗೆ ಬಾರದಂತೆ ಎಚ್ಚರ ವಹಿಸುವ ಜಾಣತನ ಕಾಣು ತ್ತಿವೆ. ಸಿಬ್ಬಂದಿ ಕೊರತೆಯಿಂದಾಗಿ ಒಬ್ಬ ಪಿಡಿಒಗೆ ಕನಿಷ್ಠ ಎರಡ್ಮೂರು ಗ್ರಾಮ ಪಂಚಾಯಿತಿಗಳು ಪ್ರಭಾರ ಇರುವ ಕಾರಣ ವಾರವಾದರೂ ಅಧಿಕಾರಿ ದರ್ಶನ ಆಗುವುದಿಲ್ಲ ಎಂಬುದು ಜನತೆ ಅಳಲಾಗಿದೆ.

# ಸೆ.22ರಿಂದ ರಾಜ್ಯಮಟ್ಟದ ದಸರಾ ಕ್ರೀಡಾಕೂಟ

ಕೆ.ಜೆ.ಲೋಕೇಶ್ ಬಾಬು

ಮೈಸೂರು: ದಸರಾ ಮಹೋತ್ಸವ ಕೇವಲ ಆನೆ, ಅಂಬಾರಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೀಮಿತವಾಗದೆ ಕ್ರೀಡೆಗೂ ಅವಕಾಶ ನೀಡುವ ಒಂದು ವೇದಿಕೆಯಾಗಿದೆ. ಪರಿಣಾಮ ಕುಸ್ತಿ, ಮಲ್ಲಕಂಬದಂತಹ ಗಂಡುಕಲೆ ಮಾತ್ರ ವಲ್ಲದೆ, ಗ್ರಾಮೀಣ ಪ್ರದೇಶದ ಕ್ರೀಡೆ ಗಳು ಕೂಡ ಇಂದಿನ ತಂತ್ರಜ್ಞಾನದ ನಾಗಾಲೋಟದ ನಡುವೆಯೂ ತನ್ನ ಅಸ್ಮಿತೆ ಉಳಿಸಿಕೊಂಡಿವೆ. ಅದರೊಟ್ಟಿಗೆ ಮಿಕ್ಕೆಲ್ಲಾ ಕ್ರೀಡೆಗಳು ಇಂದಿಗೂ ಜೀವಂತವಾಗಿವೆ. ಅದಕ್ಕೆ ದಸರಾ ಮಹೋತ್ಸವ ಕೂಡ ಪೂರಕವಾಗಿ ನಿಂತಿದೆ.

**ಸೆ.22ರಿಂದ 25ರವರೆಗೆ ರಾಜ್ಯ ಮಟ್ಟದ ಕ್ರೀಡಾಕೂಟ ಆಯೋಜಿಸುವಂತೆ ಆದೇಶ ಬಂದಿದೆ. ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್ ಕ್ರೀಡಾಂಗಣಗಳಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿವೆ.**

**-ಭಾಸ್ಕರ್ ನಾಯಕ್,** ಸಹಾಯಕ ನಿರ್ದೇಶಕ, ಕ್ರೀಡಾ ಇಲಾಖೆ, ಮೈಸೂರು

## ನಾಲ್ಕು ದಿನ ಕ್ರೀಡೆ

ಪ್ರತೀ ವರ್ಷದಂತೆ ಈ ಬಾರಿಯೂ ದಸರಾ ಕ್ರೀಡಾಕೂಟ ಹೆಚ್ಚಿನ ರಂಗು ಪಡೆದಿದೆ. ಸೆ.22ರಿಂದ 25ರವರೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್ ಸೇರಿದಂತೆ ನಾನಾ ಕ್ರೀಡಾಂಗಣಗಳಲ್ಲಿ ನಾಲ್ಕು ದಿನಗಳ ಕಾಲ ರಾಜ್ಯಮಟ್ಟದ ಕ್ರೀಡಾಕೂಟ ನಡೆಯಲಿದೆ.

## ಐದು ವಿಭಾಗವಾರು

ಇಡೀ ರಾಜ್ಯವನ್ನು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ,

ಕಲಬುರಗಿ, ಮೈಸೂರು, ಬೆಳಗಾವಿ ಎಂದು 5 ವಿಭಾಗಗಳಾಗಿ ಮಾಡಲಾಗಿದೆ. ರಾಜ್ಯದ ಪ್ರತಿ ತಾಲೂಕು ಹಾಗೂ ಜಿಲ್ಲಾ ಮಟ್ಟದ ಕ್ರೀಡಾಕೂಟ ಆಯೋಜನೆಗೆ ಆಯಾ ಜಿಲ್ಲಾ ಪಂಚಾಯಿತಿಗಳಿಂದ ಅನುದಾನ ನೀಡಲಾಗುತ್ತಿದೆ. ವಿಭಾಗ ಮಟ್ಟದ ಕ್ರೀಡಾಕೂಟಗಳಿಗೆ ಕ್ರೀಡಾ ಇಲಾಖೆ ಹಣ ನೀಡಲಿದೆ. ಪ್ರತಿ ವಿಭಾಗಕ್ಕೆ ತಲಾ 7 ರಿಂದ 8 ಜಿಲ್ಲೆಗಳನ್ನು ಸೇರಿಸಲಾಗಿದೆ. ಮೈಸೂರು ವಿಭಾಗದಲ್ಲಿ ಮಂಗಳೂರು, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ, ಚಾಮರಾಜನಗರ, ಮಂಡ್ಯ, ಮೈಸೂರು ಜಿಲ್ಲೆ ಒಳಗೊಂಡಿದ್ದರೆ, ಬೆಂಗಳೂರು ನಗರ ವಿಭಾಗಕ್ಕೆ ಬೆಂಗಳೂರು ನಗರ ಜಿಲ್ಲೆ ಸೇರಿಸಲಾಗಿದೆ.

## ಹಲವು ಹಂತದ ಕ್ರೀಡಾಕೂಟ

ಈ ಬಾರಿ ನೇರವಾಗಿ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸದೆ ತಾಲೂಕು, ಜಿಲ್ಲೆ, ವಿಭಾಗ ಹಾಗೂ ರಾಜ್ಯ ಮಟ್ಟ ಹೀಗೆ ಹಂತ ಹಂತವಾಗಿಯೇ ಕ್ರೀಡಾಕೂಟ ಆಯೋಜಿಸಲು ಕ್ರೀಡಾ ಇಲಾಖೆ ತೀರ್ಮಾನಿಸಿ ಆದೇಶ ಹೊರಡಿಸಿದ್ದು, ಎಲ್ಲಾ ಕ್ರೀಡಾಸ್ಪರ್ಧೆ ಈಗಾಗಲೇ ಆರಂಭವಾಗಿ ಮುಗಿದಿವೆ. ತದನಂತರ ಮೈಸೂರಿನಲ್ಲಿ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ನಡೆಯಲಿದೆ.

ದಸರಾ ಕ್ರೀಡಾಕೂಟವನ್ನು ತಾಲೂಕು ಮಟ್ಟದಿಂದಲೇ ಆಯೋಜಿಸಲು ಕ್ರೀಡಾ ಇಲಾಖೆ ಸಕಲ ಸಿದ್ಧತೆ ನಡೆಸಿತ್ತು. ಮಾತ್ರವಲ್ಲ, ರಾಜ್ಯಮಟ್ಟದಲ್ಲಿ 27 ಹಾಗೂ ದಸರಾ ಉಪ ಸಮಿತಿಯ ಸ್ಥಳೀಯ 6 ಸೇರಿದಂತೆ 33ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಪಟ್ಟಿ ಮಾಡಲಾಗಿದೆ.

## ಯಾವ್ಯಾವ ಆಟಗಳು

ಜಿಮ್ನಾಸ್ಟಿಕ್, ವಾಲಿಬಾಲ್, ಕಬಡ್ಡಿ, ಖೋ-ಖೋ, ಷಟಲ್ ಬ್ಯಾಡ್ಮಿಂಟನ್, ಬಾಸ್ಕೆಟ್ಬಾಲ್, ಹ್ಯಾಂಡ್ಬಾಲ್, ಟೇಬಲ್ ಟೆನಿಸ್, ಟೆನಿಸ್, ಫುಟ್ಬಾಲ್, ಬ್ಯಾಡ್ಮಿಂಟನ್, ಹಾಕಿ ಪಂದ್ಯಾವಳಿ. ಅಥ್ಲೆಟಿಕ್ಸ್ ನಲ್ಲಿ 100, 200, 400, 800, 1500 ಮೀ. ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, 4X100 ಮೀ. ಹಾಗೂ 4X400 ಮೀ. ರಿಲೇ ಸ್ಪರ್ಧೆಗಳು ನಡೆಯಲಿವೆ. ಪುರುಷರಿಗೆ 5000 ಮೀ. ಓಟ, 110 ಮೀ. ಹರ್ಡಲ್ಸ್ ನಡೆಯಲಿದೆ. ಮಹಿಳೆಯರಿಗೆ 3000 ಮೀ. ಓಟ, 100 ಮೀ. ಹರ್ಡಲ್ಸ್ ಓಟ ನಡೆಯಲಿದೆ. ಈಜು ಸ್ಪರ್ಧೆ: 100, 200, 400 ಮೀ. ಫ್ರೀ ಸ್ಟೈಲ್, 100, 200 ಮೀ. ಬ್ಯಾಕ್ ಸ್ಟ್ರೋಕ್, 100 ಮೀ. ಬಟರ್ ಫ್ಲೈ, 100, 200 ಮೀ. ಬ್ರೆಸ್ಟ್ ಸ್ಟ್ರೋಕ್, 200 ಮೀ. ಇಂಡುವಿಜುವಲ್ ಮಿಡ್ಲೆ, 4X100 ಮೀ. ಫ್ರೀಸ್ಟೈಲ್ ರಿಲೇ ಸ್ಪರ್ಧೆಗಳು ನಡೆಯಲಿವೆ.

ವಿಶೇಷವಾಗಿ ಸೈಕ್ಲೋಥಾನ್, ದೇಹದಾರ್ಢ್ಯ, ಮ್ಯಾರಥಾನ್ ಸ್ಪರ್ಧೆ ಮೈಸೂರಿನಲ್ಲಿ ರಾಜ್ಯ ಮಟ್ಟದಲ್ಲಿ ಮಾತ್ರ ನಡೆಸಲು ನಿರ್ಧರಿಸಲಾಗಿದೆ.

ವಿಶ್ವವಾಣಿ
@vishwavaninews
# ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 13-09-2025 ಶನಿವಾರ

## ಚಿತ್ತವಿಹಾರ

### ಜೇನಿಟ್ಟವ ನೀನು

• ನೀ. ಶ್ರೀಶೈಲ, ಹುಲ್ಲೂರು

ಧೂಳು ಮೆತ್ತಿದ ತುಂಬಿದೆದೆ
ಯೊಳಗೆ ಮಿಂಮಿಣಿ ಮಿಂಚುವ
ಕೋಲ್ಮಿಂಚನಿಟ್ಟವ ನೀನು
ಹಾಳು ಮನದ ತುಂಬ
ಹೂನಗೆಯ ಬಿತ್ತಿ ನೀರುಣಿಸಿ
ಸಂಭ್ರಮಪಟ್ಟವ ನೀನು
ಅಲ್ಲಲ್ಲೋ ಅಲೆಯುತಿರುವ

ಅಲೆಮಾರಿಯ ಎದೆಯಲಮಾರಿಯಲಿ
ಕಮನೀಯತೆಯ ಕನಸು
ಕದಪು ಕಂಗಳ ತುಂಬ
ಹೊಳೆ ಹೊಳೆವ ಚುಕ್ಕಿ ಚಂದ್ರಮರ
ಹೊಳಪನಿಟ್ಟವ ನೀನು
ಎಂಜಲೆಲೆಯ ಕಿತ್ತುಕೊಳ್ಳಲು
ಶ್ವಾನಗಳೊಂದಿಗೆ ಸ್ಪರ್ಧೆಗಿಳಿದು
ಸೋತ ಜೀವವಿದು
ಒಲವಿನ ರಸದೂಟವನುಣಿಸಿ
ತೋಳ ತೂಗುಯ್ಯಾಲೆಯಲಿ ತೂಗಿ
ಖುಷಿಪಟ್ಟವ ನೀನು
ಮಣ್ಣಲ್ಲಿ ಮಣ್ಣಾಗಿ ಹಳಸಿ
ಬೆಸುಗೆಯ ಬಿಸಿಯಾಸೆಯಲೂ
ಬರದ ಬೀಜಮುಗಲು
ಗುಡಿಸಲಿರಮನೆಯಲೆ ಮಧುಮಂಚ
ನಾಚಿಸುವ ರಸಗವಳವನುಣಿಸಿ
ಹರುಷಪಟ್ಟವ ನೀನು
ಗೋಳುಗಳ ಗೋಳದಲಿ
ಗಿರಕಿ ಹೊಡೆಯುತ್ತ ಗಿರಾಕಿಯೆಡೆಗೆ
ಕೈಚಾಚಿದ ಭಾವವಿದು
ನಿನ್ನುಸಿರನೆ ಹಾಸಿ ಹೊದಿಸಿ
ಲಾಲಿ ಹಾಡಿ ಇರುಳರಳಿಸಿ 'ಸಿರಿ'ನಗೆಯ
ನಡುವಲಿ ಜೇನಿಟ್ಟವ ನೀನು

## ಅನರ್ಥವೋ ಅನ್ವರ್ಥವೋ.... ಒಟ್ಟಲ್ಲಿ ಇವು ನಾಮಧೇಯಗಳು!

• ಕೆ.ಎಸ್. ಸೋಮೇಶ್ವರ, ಬೆಂಗಳೂರು

'ಅಂದದೂರು ಬೆಂಗಳೂರು, ಆನಂದದ ತವರೂರು' ಎಂಬ ಕನ್ನಡ ಚಿತ್ರಗೀತೆಯನ್ನು ಕೇಳದವರಿಲ್ಲ. ಬೆಂಗಳೂರಿನ ಸಾಕಷ್ಟು ಬಡಾವಣೆಗಳು ಹಲವು ರೀತಿಯಲ್ಲಿ ಬದಲಾದರೂ, ಹಳೆಯ ಹೆಸರುಗಳೇ ಕೆಲವೆಡೆ ಇನ್ನೂ ಬಳಕೆಯಲ್ಲಿವೆ. ಆದರೆ, ಆ ಹೆಸರಿಗೂ ಈಗಿನ ಸಾಮಾಜಿಕ/ವಾಣಿಜ್ಯಕ ಪರಿಸರಕ್ಕೂ ತಾಳಮೇಳವಿಲ್ಲದಂತಿದೆ ಎಂಬುದು ಗಮನಾರ್ಹ. ಇಷ್ಟಾದರೂ, ಈ ಬೆಂಗಳೂರು ಅಂದದೂರೇ..!

ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು, ಈ ನಗರಕ್ಕೆ ವೈವಿಧ್ಯವನ್ನು ತುಂಬಲೆಂದು ನಾನಾ ರೀತಿಯ ಕುಶಲಕರ್ಮಿಗಳನ್ನು ಮತ್ತು ವ್ಯಾಪಾರಿಗಳನ್ನು ಬೇರೆ ಬೇರೆ ಸ್ಥಳಗಳಿಂದ ಕರೆಸಿ, ಅವರು ಇಲ್ಲಿಯೇ ನೆಲೆಸಿ ತಮ್ಮ ವ್ಯಾಪಾರ-ವಹಿವಾಟು ನಡೆಸಲು ಅನುಕೂಲ ಮಾಡಿಕೊಟ್ಟರು. ಅವರವರ ಕಸುಬಿಗೆ ತಕ್ಕಂತೆ ಪ್ರತ್ಯೇಕ ಸ್ಥಳಗಳನ್ನೂ, ಅವಕ್ಕೆ ಅನ್ವರ್ಥಕವಾಗುವ ಹೆಸರುಗಳನ್ನೂ ನೀಡಿದರು. ಕುಂಬಾರಪೇಟೆ, ನಗರ್ತಪೇಟೆ, ಅಕ್ಕಿಪೇಟೆ, ಬಳೆಪೇಟೆ, ಗಾಣಿಗರ ಪೇಟೆ, ಕಿಲಾರಿ ರಸ್ತೆ ಇತ್ಯಾದಿಗಳು ಅಸ್ತಿತ್ವಕ್ಕೆ ಬಂದಿದ್ದು ಹೀಗೆಯೇ.

ಆದರೆ, ಕುಂಬಾರ ಪೇಟೆಯುದ್ದಕ್ಕೂ ನಾವೀಗ ಕಾಣುವುದು ಪ್ಲಾಸ್ಟಿಕ್ ಅಥವಾ ಲೋಹದ ವಸ್ತುಗಳನ್ನೇ ವಿನಾ, ಮಣ್ಣಿನ ಮಡಕೆ-ಕುಡಿಕೆಗಳನ್ನಲ್ಲ. ಇಲ್ಲಿ ತಿಗರಿ ತಿರುಗುವ 'ಗರಗರ' ಸದ್ದೇ ಇಲ್ಲವಾಗಿದೆ. ಅಕ್ಕಿಪೇಟೆ, ನಾಗರಿಕ ಪೇಟೆ, ಅರಳೇಪೇಟೆಗಳ ಕಥೆಯೂ ಬಹುತೇಕ ಇಂಥದೇ! ಇಲ್ಲಿನ ಪೇಟೆಗಳನ್ನೆಲ್ಲಾ ನುಂಗಿ ನೀರು ಕುಡಿದಿವೆ ಮಹಲುಗಳು, ಮಾಲ್‌ಗಳು, ಶಾಪಿಂಗ್ ಕಾಂಪ್ಲೆಕ್ಸುಗಳು ಇಲ್ಲವೇ ಅಪಾರ್ಟ್‌ಮೆಂಟುಗಳು!

ಇನ್ನು 'ಕಿಲಾರಿ ರಸ್ತೆ'ಯ ವಿಷಯಕ್ಕೆ ಬರೋಣ. 'ಕಿಲಾರಿ' ಎಂದರೆ, 'ಗೋವಳಿಗ' ಅಂತೆ. ಆದರೆ ಈ ರಸ್ತೆಯಲ್ಲೀಗ ಯಾವ ಗೋವಳಿಗನನ್ನೂ, ನಂದಿನಿಯನ್ನೂ ಕಾಣಲಿಕ್ಕಿಲ್ಲ, 'ನಂದಿನಿ' ಹಾಲಿನ ಮಳಿಗೆ ಸಿಕ್ಕೀತು. ಕೆಲ ದಿನಗಳಲ್ಲೇ 'ಅಮುಲ್' ಎಂಬ ಇನ್ನೊಂದು ಕಾಮಧೇನುವೂ ನಮಗೆ ಹಾಲುಣಿಸಬಹುದೇನೋ! ಈ 'ಕಿಲಾರಿ ರಸ್ತೆ'ಯ ಬಗ್ಗೆ ಬೀಚಿಯವರ ತಿಂಮನ ವಿಶ್ಲೇಷಣೆಯನ್ನು ನೋಡೋಣ. ಈ ತಿಮ್ಮ ಮಹಾಶಯ ತನ್ನದೊಂದು ಅಪೇಕ್ಷೆಯನ್ನು ಹೊತ್ತು ದೊಡ್ಡ ಜ್ಯೋತಿಷಿಯೊಬ್ಬರನ್ನು ಕೇಳಲುಹೋದ. ತಿಂಮ ಒಳಹೋಗಿ ಆ ಜ್ಯೋತಿಷಿಯ ಕಾಲಿಗೆ ಬಿದ್ದ. ಆತ ಬಾಯ್ತೆರೆಯುವ ಮೊದಲೇ, ''ನಿನ್ನ ಕೆಲಸ ಆಗುತ್ತೆ ಹೋಗ್'' ಅಂದರಂತೆ ಜ್ಯೋತಿಷಿ. ತಿಂಮ ತನ್ನ ಅನುಮಾನದ ಪರಿಹಾರಾರ್ಥವಾಗಿ ಮತ್ತೆ ಕೇಳ ಹೊರಟಾಗ, ಜ್ಯೋತಿಷಿಗೆ ತನ್ನ ಅತ್ಯಿತ್ತದ ಪ್ರಶ್ನೆ ಎದುರಾಗಿ ಅವನನ್ನು ಹೊರದಬ್ಬಿದರು. ಅಲ್ಲಿಂದ ಹೊರಬಿದ್ದವನೇ ತಿಂಮ ತನ್ನ ಗೆಳೆಯನೊಬ್ಬನ ಬಳಿ ಬಂದು ಹೊರಳಾಡಿ ನಗತೊಡಗಿದ. ಇದಕ್ಕೆ ಕಾರಣವೇನು ಗೊತ್ತೇ? 'ಮೈಸೂರಿನ ಚಾಮುಂಡಿ ಬೆಟ್ಟವನ್ನು ಬೆಂಗಳೂರಿನ ಕಿಲಾರಿ ರಸ್ತೆಗೆ ತರುವುದು' ತಿಂಮನ ಅಪೇಕ್ಷೆಯಾಗಿತ್ತು! ಆದರೆ ಅತ ಬಾಯಿಬಿಟ್ಟ ಪ್ರಶ್ನೆ ಕೇಳುವ ಮೊದಲೇ ಆ ಸರಿಯ ಜ್ಯೋತಿಷಿಯು ''ನಿನ್ನ ಕೆಲಸ ಆಗುತ್ತೆ ಹೋಗ್...'' ಎಂದುಬಿಟ್ಟಿದ್ದರು!

ಇನ್ನು, ಬೆಂಗಳೂರಿನ ಕಲಾಸಿಪಾಳ್ಯದ ಬಳಿಯಿರುವ 'ಜರ್ನಲಿಸ್ಟ್ ಕಾಲೊನಿ'ಯಲ್ಲಿ ಇಂದು ಯಾವೊಬ್ಬ ಪತ್ರಿಕಾ ಸಂಪಾದಕರಾಗಲೀ, ವರದಿಗಾರರಾಗಲೀ ಅಥವಾ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಯಾವ ವಸ್ತುವಾಗಲೀ ಕಾಣುವುದಿಲ್ಲ; ಇಲ್ಲಿ ಕಾಲಿಟ್ಟಲ್ಲೆಲ್ಲ ಸಿಗುವುದು ವಾಹನದ ಬಿಡಿಭಾಗಗಳು. ಅವನ್ನು ತಂದು ಎಲ್ಲಿಗೆ ಜೋಡಿಸಿಕೊಳ್ಳುವುದು?!

ಹೆಸರಿಗೆ 'ಮಹಾತ್ಮ ಗಾಂಧಿ ರಸ್ತೆ' ಆಗಿದ್ದರೂ ಅಧಿಕೃತ ಹಲ್ಲಿಗೆ ಸಿಕ್ಕಿ 'ಎಂ.ಜಿ.ರಸ್ತೆ' ಆಗಿರುವ ತಾಣದ ಕಥೆ ಇನ್ನೊಂದು ತೆರನಾದದ್ದು. ಅಂದು, ಪಾನನಿಷೇಧದ ಬಗ್ಗೆ ಇನ್ನಿಲ್ಲದ ಒಲವು ತೋರಿದ್ದರು ಗಾಂಧೀಜಿ, ಆದರೀಗ ಈ ರಸ್ತೆಯ ಬಾರುಗಳ ತವರೂರೇ ಆಗಿಬಿಟ್ಟಿದೆ! ಇನ್ನು ಬಸವನಗುಡಿಯ 'ಬೆಣ್ಣೆ ಗೋವಿಂದಪ್ಪ ರಸ್ತೆ'ಗೆ ಬನ್ನಿ. ಈ ಮಹಾಶಯರು ಕಡೆದು ತೆಗೆದ 'ಬೆಣ್ಣೆ'ಯೆಲ್ಲಾ ಕರಗಿ ಹರಿದು ಈಗ ಕಟ್ಟಡಗಳ 'ಟಾರು' ರಸ್ತೆ ಮಾತ್ರ ಇದೆ ಎನಿಸುತ್ತದೆ.

ಕನ್ನಡದ ಹೆಸರಾಂತ ಸಾಹಿತಿಯೂ, 'ಮಂಕುತಿಮ್ಮನ ಕಗ್ಗ'ದ ಕರ್ತೃವೂ ಆದ ಡಾ. ಡಿ.ವಿ.ಗುಂಡಪ್ಪ ಅವರ ಹೆಸರನ್ನು ಬಸವನಗುಡಿಯ ಮುಖ್ಯರಸ್ತೆಗೆ (ನಾಗಸಂದ್ರ ರಸ್ತೆಗೆ) ನಾಮಕರಣ ಮಾಡಲಾಗಿದೆ. ಆದರೆ ನಮಗೀಗ ಅಷ್ಟುದ್ದದ ಹೆಸರನ್ನು ಹೇಳಲು ಸಮಯವಿಲ್ಲದ ಅದನ್ನು 'ಡಿವಿಜಿ ರಸ್ತೆ'ಯನ್ನಾಗಿ ಮಾಡಿದ್ದೇವೆ. ಅಂತೆಯೇ, 'ಕೆಂಗಲ್ ಹನುಮಂತಯ್ಯ ರಸ್ತೆ' ಅಂತ ಇಷ್ಟುದ್ದ ಹೇಳೋಕ್ಕೆ ಆಗಲ್ಲ ಅಂತ ಅದನ್ನು 'ಕೆ.ಎಚ್. ರಸ್ತೆ' ಮಾಡಿಬಿಟ್ಟಿದ್ದೇವೆ. ಅದನ್ನೂ ಹೇಳಲಿಕ್ಕೆ ಕಷ್ಟ ಅಂತಾದರೆ 'ಡಬಲ್ ರೋಡ್' ಎಂಬ ಪರ್ಯಾಯನಾಮ ಇದ್ದೇ ಇದೆಯಲ್ಲಾ! ಆದರೆ ಮಲ್ಲೇಶ್ವರದಲ್ಲಿರುವ 'ಸಂಪಿಗೆ ರಸ್ತೆ' ಮತ್ತು 'ಬೇವಿನ ಮರದ ರಸ್ತೆ'ಗಳಿಗೆ ಮರುನಾಮಕರಣ ಮಾಡುವ ಆಲೋಚನೆ ಸದ್ಯ ಯಾರ ತಲೆಗೂ ಬಂದಿಲ್ಲವಾದರೂ, 'ಬೇವಿನ ಮರದ ರಸ್ತೆ'ಯನ್ನು ಕೆಲವರು ಭಾಷಾಂತರಿಸಿಕೊಂಡು 'ಮಾರ್ಗೋಸಾ ರೋಡ್' ಎನ್ನುವುದೂ ಇದೆ!

ಇನ್ನು ದಂಡು ಪ್ರದೇಶಕ್ಕೆ ಬರೋಣ. ಇಲ್ಲಿನ 'ರೆಸಿಡೆನ್ಸಿ ರಸ್ತೆ' ಮತ್ತು 'ರಿಚ್‌ಮಂಡ್ ರಸ್ತೆ'ಗಳು ಕ್ರಮವಾಗಿ 'ಫೀಲ್ಡ್ ಮಾರ್ಷಲ್ ಕಾರಿಯಪ್ಪ ರಸ್ತೆ' ಮತ್ತು 'ಜನರಲ್ ತಿಮ್ಮಯ್ಯ ರಸ್ತೆ'ಗಳಾಗಿ ಹಾಗೂ 'ಕಾಕ್ಸ್ ಟೌನ್', 'ಫ್ರೇಜರ್ ಟೌನ್', 'ಬ್ರಾಸ್ಟರ್ ಟೌನ್'ಗಳು ಕ್ರಮವಾಗಿ 'ಸರ್ವಜ್ಞನಗರ', 'ಪುಲಿಕೇಶಿ ನಗರ', 'ಸ್ವಾಮಿ ಶಿವಾನಂದಪುರ' ಎಂದು ಮರುನಾಮಕರಣಗೊಂಡಿದ್ದರೂ, ಇಲ್ಲಿನ ಕೆಲ ನಾಗರಿಕರಿಗೆ ಹಳೆಯ ಹೆಸರುಗಳೇ ಅಚ್ಚುಮೆಚ್ಚು ಎಂಬುದು ಗಮನಾರ್ಹ. 'ಭೈರಸಂದ್ರ-ತಾವರೆಕೆರೆ-ಮಡಿವಾಳ' ಎಂಬ 3 ಬಡಾವಣೆಗಳ ನಡುವೆ ನೆಲೆಗೊಂಡಿರುವ ಕಾರಣಕ್ಕೆ ಅವುಗಳ ಇಂಗ್ಲಿಷ್ ಪ್ರಥಮಾಕ್ಷರವನ್ನು ಸ್ವರೂಪದಲ್ಲಿ ಕಲೆಹಾಕಿಕೊಳ್ಳುತ್ತಿದ್ದ 'ಬಿಟಿಎಂ' ಲೇಔಟ್‌ಗೆ ಕೆಲವೊಮ್ಮೆ 'ಕುವೆಂಪು ನಗರ' ಎಂದು ಕರೆಯಲಾಗುತ್ತದೆಯಾದರೂ, ಜನರಿಗೆ 'ಬಿಟಿಎಂ ಲೇಔಟ್' ಎಂದರೇನೇ ಗೊತ್ತಾಗೋದು!

ಇನ್ನು, ಸಾಕಷ್ಟು ವರ್ಷಗಳ ಕಾಲ ನಮ್ಮನ್ನು ಆಳಿದ ಬ್ರಿಟಿಷ್ ಮಂದಿಗಳ ನೆನಪು ಮಾಸಲು ಹೇಗೆ ಸಾಧ್ಯ? ಅವರು ಕಳಿಸಿದ ಪ್ರಜಾಸೇವಕರೇ ನಮ್ಮಲ್ಲಿ ಇನ್ನೂ ಮೆರೆಯುತ್ತಿದ್ದಾರೆ. 'ಸೇಂಟ್ ಮಾರ್ಕ್ಸ್ ರಸ್ತೆ', 'ಲೇಡಿ ಕರ್ಜನ್ ರಸ್ತೆ', 'ಕ್ವೀನ್ಸ್ ರೋಡ್', 'ಮಿಂಟೋ ಕಣ್ಣಿನ ಆಸ್ಪತ್ರೆ', 'ವಿಕ್ಟೋರಿಯಾ ಆಸ್ಪತ್ರೆ', 'ಬೌರಿಂಗ್ ಆಸ್ಪತ್ರೆ' ಮುಂತಾದವು ಈ ವಿಷಯದಲ್ಲಿ ಮಾಸದ ನೆನಪುಗಳು. ಇಷ್ಟಾಗಿಯೂ, 'ಬೋರೇಗೌಡ ಬೆಂಗಳೂರಿಗೆ ಬಂದ' ಎಂಬ ಕನ್ನಡ ಚಲನಚಿತ್ರದ 'ಅಂದದೂರು ಬೆಂಗಳೂರು, ಆನಂದದ ತವರೂರು, ಬಡವರಿಗೆ ಇಲ್ಲಿ ನಾವ್ ಬಿಡುಕರೇನು, ಸುಖವ ಪಡಲು ಈ ಊರಲಿ ನಾವಿರಬೇಕು' ಎಂಬ ಗೀತೆಯು ಈಗಲೂ ಬಹುತೇಕರಿಗೆ ಅಪ್ಯಾಯಮಾನವಾಗಿದೆ. ಅದಕ್ಕೆ ಸಾಕಷ್ಟು ಕಾರಣಗಳಿವೆ ಬಿಡಿ...!

## ತೆಪ್ಪಗೆ ಇರಲು ಕಲಿಯೋಣ

• ಕೆ. ಸುಮಂಗಲಾ ಅಡೂರು, ಸುಳ್ಯ

ಹಾಲು ಮಾರುವಾಕೆಯೊಬ್ಬಳು ಒಮ್ಮೆ ತಲೆಯ ಮೇಲೆ ಹಾಲಿನ ಗಡಿಗೆಯನ್ನು ಇಟ್ಟುಕೊಂಡು ವರ್ತನೆಗೆ ದಿನವೂ ಹಾಲನ್ನು ಕೊಳ್ಳುವವರ ಮನೆಗೆ ಹೋಗುತ್ತಿದ್ದಳು. ಅದೇ ಸಮಯಕ್ಕೆ ಆಕಾಶದಲ್ಲಿ ಗರುಡ ಪಕ್ಷಿಯೊಂದು ತನ್ನ ಆಹಾರವಾದ ಹಾವನ್ನು ಕಚ್ಚಿಕೊಂಡು ಹೋಗುತ್ತಿತ್ತು. ಹಾವು ನೋವನ್ನು ತಡೆಯಲಾಗದೆ ವಿಷವನ್ನು ಕಕ್ಕುತ್ತಿತ್ತು. ಆ ವಿಷದ ಒಂದು ತೊಟ್ಟು, ಆ ಹಾಲಿನ ಗಡಿಗೆಯೊಳಗೆ ಬಿತ್ತು. ಇದನ್ನು ಅರಿಯದ ಹಾಲಿನವಳು ಎಂದಿನಂತೆ ನಿಗದಿತ ಮನೆಗೆ ಹಾಲನ್ನು ಕೊಟ್ಟು ಹಿಂದಿರುಗಿದಳು. ಆ ಮನೆಯಾಕೆ ಅದನ್ನು ಕಾಯಿಸಿ ತನ್ನ ಮಗುವಿಗೆ ಕುಡಿಯಲು ಕೊಟ್ಟಾಗ ವಿಷದ ಪ್ರಭಾವದಿಂದಾಗಿ ಮಗು ಸತ್ತುಹೋಯಿತು. ಎಲ್ಲವೂ ವಿಧಿಲೀಲೆಯಂತೆ ನಡೆದುಹೋಯಿತು. ಆ ತಾಯಿಯ ರೋದನವನ್ನು ಕೇಳಿ ಸುತ್ತಮುತ್ತಲಿನವರೆಲ್ಲಾ ಅಲ್ಲಿ ನೆರೆದರು. ಆ ಗುಂಪಿನಲ್ಲಿದ್ದ ಅಜ್ಜಿಯೊಬ್ಬಳು, 'ಛೇ! ಹಾಲಿನವಳು ವಿಷ ಹಾಕಿ ಮಗುವನ್ನು ಕೊಂದಳಲ್ಲಾ' ಎಂದು ಬೊಬ್ಬಿಟ್ಟಳು.ಮೇಲಿನ ದುರ್ಘಟನೆಯಲ್ಲಿ, ಪೂರ್ವಾಪರ ತಿಳಿಯದೆ ತನ್ನ ಊಹೆಯಿಂದ ಯಾರ ಮೇಲೋ ಆರೋಪ ಹೊರಿಸಿದ ಮುದುಕಿಯದ್ದು ಸರ್ವಥಾ ತಪ್ಪು ಎನಿಸುವುದಿಲ್ಲವೇ? ಹೆಚ್ಚಿನ ಸಂದರ್ಭಗಳಲ್ಲಿ ನಾವು ಕೂಡ ದುಡುಕಿ ಇಂಥ ತಪ್ಪುಗಳನ್ನು ಮಾಡುತ್ತಲೇ ಇರುತ್ತೇವೆ. ಒಂದು ವಸ್ತು ಅಥವಾ ವಿಷಯದ ಬಗ್ಗೆ ಸಂಪೂರ್ಣ ತಿಳಿಯದೆಯೇ ಅದರ ಬಗ್ಗೆ ಮಾತಾಡುವುದು ಸರಿಯಲ್ಲ. 'ಪ್ರತ್ಯಕ್ಷ ಕಂಡರೂ ಪರಾಂಬರಿಸಿ ನೋಡು' ಎಂಬ ಗಾದೆಯೇ ಇದೆಯಲ್ಲವೇ?

ಈ ಲೋಕದಲ್ಲಿ ಪ್ರತಿ ಘಟನೆಗೂ ಅನೇಕ ಮುಖಗಳಿರುತ್ತವೆ. ಭಗವದ್ಗೀತೆಯಲ್ಲಿ ಹೇಳಿದಂತೆ, ಕರ್ಮದ ಗತಿಯು ಗಹನವಾಗಿ-ನಿಗೂಢವಾಗಿ ಇರುತ್ತದೆ. ಆದ್ದರಿಂದ ಇತರರ ಸರಿ-ತಪ್ಪುಗಳನ್ನು ವಿಮರ್ಶಿಸುವಷ್ಟು ಬುದ್ಧಿ ನಮ್ಮಲ್ಲಿಲ್ಲ ಎಂಬುದನ್ನು ನಾವು ಯಾವಾಗಲೂ ಅರಿತಿರಬೇಕು. ರಾಮಾಯಣದಲ್ಲಿ ಶ್ರೀರಾಮನು ಮರೆಯಲ್ಲಿ ನಿಂತು ವಾಲಿಯ ಮೇಲೆ ಬಾಣ ಬಿಟ್ಟಿದ್ದೂ ಸರಿಯೇ; ಮಹಾಭಾರತ ಯುದ್ಧವು 'ಧರ್ಮಯುದ್ಧ'ವೇ ಆದರೂ, ಕೆಸರಿನಲ್ಲಿ ಹೂತುಹೋಗಿದ್ದ ತನ್ನ ರಥದ ಚಕ್ರವನ್ನು ಮೇಲೆತ್ತುವ ಪ್ರಯತ್ನದಲ್ಲಿದ್ದ ಕರ್ಣನ ಮೇಲೆ ಅರ್ಜುನ ಬಾಣಪ್ರಯೋಗಿಸಿ ಸಂಹರಿಸಿದ್ದೂ ಸರಿಯೇ. ಏಕೆಂದರೆ, ಅಲ್ಲೆಲ್ಲಾ ಧರ್ಮರಕ್ಷಣೆಯಾಗಬೇಕಿತ್ತು. ಇದನ್ನು ರಾಮ ಮತ್ತು ಕೃಷ್ಣರು ಅರಿತಿದ್ದರು. ಆದ್ದರಿಂದ, ಮತ್ತೊಬ್ಬರ ಸರಿ-ತಪ್ಪುಗಳ ವಿಮರ್ಶೆಯಲ್ಲಿ ನಾವು ತೊಡಗದೆ, ಅದನ್ನು ಭಗವಂತನಿಗೆ ಬಿಟ್ಟುಬಿಡೋಣ; ನಾವು ಕೇವಲ ವೀಕ್ಷಕರೆಂಬು ದನ್ನು ಅರಿತು ತೆಪ್ಪಗಿರಲು ಕಲಿಯೋಣ. 'ಮಾತು ಬೆಳ್ಳಿ, ಮೌನ ಬಂಗಾರ' ಎನ್ನುವಂತೆ ಅಗತ್ಯವಿದ್ದಲ್ಲಿ ಮಾತ್ರವೇ ಮೌನವನ್ನು ಮುರಿಯೋಣ...

## ಹವಾನಿಯಂತ್ರಣ ವ್ಯವಸ್ಥೆ: ಒಂದಿಷ್ಟು ಮಾಹಿತಿಗಳು...

• ಬೆಂ.ಮು. ಮಾರುತಿ, ಬೆಂಗಳೂರು

ಬಿಸಿಲ ಬೇಗೆಯಲ್ಲಿ ಬೆಂದವರು ಹವಾನಿಯಂತ್ರಣ ವ್ಯವಸ್ಥೆಗೆ (ಏರ್-ಕಂಡೀಷನಿಂಗ್) ತವಕಿಸುವುದು ಅಚ್ಚರಿಯೇನಲ್ಲ. ಕಾರಣ, ಹವಾನಿಯಂತ್ರಕವು (ಏರ್ -ಕಂಡೀಷನರ್) ಹೆಚ್ಚು ಆರಾಮದಾಯಕ ವಾತಾವರಣವನ್ನು ಒದಗಿಸುತ್ತದೆ ಮತ್ತು ಚೈತನ್ಯವನ್ನು ನೀಡುತ್ತದೆ. ಇದು ಬೆವರುವಿಕೆಯನ್ನು ಮತ್ತು ಒಟ್ಟಾರೆ ಆರ್ದ್ರತೆಯನ್ನು ತಗ್ಗಿಸುವುದರಿಂದ, ಶಾಖದ ಹೊಡೆತದ ಅಪಾಯವೂ ಕಡಿಮೆಯಾಗುತ್ತದೆ. ಹವಾನಿಯಂತ್ರಕಗಳು ಗಾಳಿಯನ್ನು ಫಿಲ್ಟರ್ ಮಾಡಿ, ಪರಾಗಕಣ ಮತ್ತು ಒಳಾಂಗಣದ ಅಲರ್ಜಿನ್‌ಗಳಂಥ ಕಿರಿಕಿರಿ ಉಂಟುಮಾಡುವ ಅಂಶಗಳನ್ನು ತೆಗೆದುಹಾಕುತ್ತವೆ ಎಂಬುದು ತಜ್ಞರ ಅಭಿಮತ.

ಈ ಎಲ್ಲಾ ಅಂಶಗಳನ್ನು ಅವಲೋಕಿಸಿದಾಗ, ಹವಾನಿಯಂತ್ರಕಗಳು ಅತ್ಯಂತ ಉಪಯುಕ್ತ ಸಾಧನಗಳಂತೆ ಅನಿಸುತ್ತವೆಯಾದರೂ, ಅವು ಮಾನವ ದೇಹದ ಮೇಲೆ ಹಾನಿಕಾರಕ ಪರಿಣಾಮವನ್ನೂ ಬೀರಬಹುದು ಎಂಬ ಸಂಗತಿಯು ಬಹುತೇಕರಿಗೆ ಅಚ್ಚರಿಯನ್ನು ಉಂಟುಮಾಡಬಹುದು.

- ಹವಾನಿಯಂತ್ರಕವು ಸೃಷ್ಟಿಸುವ ಅತೀವ ಶೀತದ ವಾತಾವರಣದಿಂದಾಗಿ ತಲೆನೋವು ಕಾಣಿಸಿಕೊಳ್ಳಬಹುದು. ಈ ಸಾಧನವು ಬಿಡುಗಡೆ ಮಾಡುವ ಬಾಷ್ಪಶೀಲ ರಾಸಾಯನಿಕಗಳೇ ಇದಕ್ಕೆ ಕಾರಣ. ಮಾತ್ರವಲ್ಲದೆ ಗಂಟಲುನೋವು, ವಾಕರಿಕೆ ಮತ್ತು ಶೀತದ ಲಕ್ಷಣಗಳೂ ಕೆಲವರಲ್ಲಿ ಕಾಣಿಸಿಕೊಳ್ಳಬಹುದು.
- ಹವಾನಿಯಂತ್ರಕದ ಅತಿಯಾದ ಬಳಕೆಯು ಕಾಲಾನಂತರದಲ್ಲಿ ಚರ್ಮದ ಸ್ವಾಭಾವಿಕ ತೇವಾಂಶದ ಸಮತೋಲನವು ತಗ್ಗುವುದಕ್ಕೆ ಕಾರಣವಾಗುತ್ತದೆ. ಹೀಗಾಗಿ, ಚರ್ಮದ ಗ್ರಂಥಿಗಳಿಂದ ಸಾಕಷ್ಟು ಎಣ್ಣೆಗಳು ಬಿಡುಗಡೆಯಾಗದೆ ಚರ್ಮವು ಒಣಗುತ್ತದೆ ಮತ್ತು ಅದರ ವಯಸ್ಸಾಗುವಿಕೆಯ ಪ್ರಕ್ರಿಯೆಯು ತೀವ್ರವಾಗುತ್ತದೆ.
- ಹವಾನಿಯಂತ್ರಣದ ಪರಿಸರಕ್ಕೆ ನಿರಂತರವಾಗಿ ಒಡ್ಡಿಕೊಳ್ಳುವುದು ಆಲಸ್ಯಕ್ಕೂ ಕಾರಣವಾಗಬಹುದು. ಈ ಪರಿಸರದ ತಾಪಮಾನವು ಮಾನವರ ದೇಹದ ಉಷ್ಣತೆಯ ಮಟ್ಟಕ್ಕಿಂತ ಕಡಿಮೆಯಿರುತ್ತದೆಯಾದ್ದರಿಂದ, ದೇಹವು ಸ್ವಲ್ಪ ಸಮಯದ ನಂತರ ಅದಕ್ಕೆ ಪ್ರತಿಕ್ರಿಯಿಸಲು ಪ್ರಾರಂಭಿಸುತ್ತದೆ ಹಾಗೂ ಇದರಿಂದಾಗಿ ಆಲಸ್ಯದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅತಿ ಕಡಿಮೆ ತಾಪಮಾನದಿಂದಾಗಿ ಹೊರಾಂಗಣದ ಸಂವೇದನೆಯ ಪ್ರಕ್ರಿಯೆಯೂ ಸ್ವಲ್ಪ ನಿಧಾನವಾಗುತ್ತದೆ ಮತ್ತು ಶಾಖವನ್ನು ನಿಭಾಯಿಸುವ ದೇಹದ ಒಟ್ಟಾರೆ ಶಕ್ತಿಯು ಕಡಿಮೆಯಾಗುತ್ತದೆ.
- ಹವಾನಿಯಂತ್ರಕಗಳು ವಾತಾವರಣದ ಆರ್ದ್ರತೆಯನ್ನು ತಗ್ಗಿಸುವುದರಿಂದ ಕಣ್ಣುಗಳ ನೀರಿನ ಪದರ ಒಣಗುವುದಕ್ಕೆ ಅದು ಕಾರಣವಾಗುತ್ತದೆ. ಅಂದರೆ, ಕಣ್ಣುಗಳಲ್ಲಿನ ಗ್ರಂಥಿಗಳು ಸರಿಯಾಗಿ ಕಾರ್ಯನಿರ್ವಹಿಸುವುದಿಲ್ಲ, ಪರಿಣಾಮವಾಗಿ ಗ್ರಂಥಿಸ್ರಾವವು ಸೂಕ್ತಪ್ರಮಾಣದಲ್ಲಿರದೆ ಕಣ್ಣುಗಳ ಶುಷ್ಕತೆಗೆ ಅದು ಕಾರಣವಾಗುತ್ತದೆ.
- ದೊಡ್ಡ ಹವಾನಿಯಂತ್ರಕ ಘಟಕಗಳು ಕೆಲವು ಬ್ಯಾಕ್ಟೀರಿಯಾಗಳ ಪಾಲಿಗೆ ಅಭಿವೃದ್ಧಿ ಹೊಂದುವ ವಾತಾವರಣವನ್ನು ಕಲ್ಪಿಸಿಬಿಡುತ್ತವೆ. ಹವಾನಿಯಂತ್ರಿತ ವಾತಾವರಣದಲ್ಲಿ ತೇವಾಂಶವು ಸಂಗ್ರಹವಾಗುವುದು ಅವುಗಳ ಹೆಚ್ಚಳಕ್ಕೆ ಕಾರಣವಾಗಬಹುದು.

ಆದ್ದರಿಂದ, ಮಾನವ ದೇಹದ ಮೇಲೆ ಹವಾನಿಯಂತ್ರಕಗಳು ಉಂಟುಮಾಡಬಹುದಾದ ಪ್ರತಿಕೂಲ ಪರಿಣಾಮಗಳಿಂದ ರಕ್ಷಿಸಿಕೊಳ್ಳಬೇಕಾದ್ದು ಮುಖ್ಯ. ಇದಕ್ಕೆಂದು ನಮ್ಮ ದೈನಂದಿನ ಜೀವನದಲ್ಲಿ ಒಂದಷ್ಟು ಮುನ್ನೆಚ್ಚರಿಕೆಗಳು ಮತ್ತು ಸರಳ ಕ್ರಮಗಳನ್ನು ಅನುಸರಿಸಬಹುದು. ಅವೆಂದರೆ-

- ದೀರ್ಘಕಾಲದವರೆಗೆ ಹವಾನಿಯಂತ್ರಿತ ವಾತಾವರಣದಲ್ಲಿ ಕೆಲಸಮಾಡುವಾಗ ಎದುರಾಗುವ ನಿರ್ಜಲೀಕರಣ ಮತ್ತು ತಲೆನೋವಿನ ಸಮಸ್ಯೆಯನ್ನು ತಡೆಯಲು ಕಾಲಾನುಕಾಲಕ್ಕೆ ಸೂಕ್ತ ಪ್ರಮಾಣದಲ್ಲಿ ನೀರನ್ನು ಸೇವಿಸಬೇಕು.
- ಮಾಯಿಶ್ಚರೈಸರ್ ಅನ್ನು ಬಳಸುವುದರಿಂದ ಚರ್ಮಕ್ಕೆ ರಕ್ಷಣಾತ್ಮಕ ಗುರಾಣಿ ಒದಗಿದಂತಾಗುತ್ತದೆ. ಇದರಿಂದಾಗಿ ಚರ್ಮದ ಒಣಗುವಿಕೆ, ಸುಕ್ಕಾಗುವಿಕೆ ಮತ್ತಿತರ ಸಮಸ್ಯೆಗಳನ್ನು ತಡೆಯಬಹುದು.
- ಹವಾನಿಯಂತ್ರಕದ ಫಿಲ್ಟರ್‌ಗಳನ್ನು ನಿಯತವಾಗಿ ಸ್ವಚ್ಛಗೊಳಿಸುವುದರಿಂದ ಬ್ಯಾಕ್ಟೀರಿಯಾಗಳ ಸಂವರ್ಧನೆ ತಗ್ಗಿ, ಸೋಂಕುಗಳ ಸಾಧ್ಯತೆ ಕಡಿಮೆಯಾಗುತ್ತದೆ.
- ನಿಯತ ಅಂತರಗಳಲ್ಲಿ ಹವಾನಿಯಂತ್ರಕಗಳನ್ನು ಆಫ್ ಮಾಡುವುದರಿಂದ ದೇಹವು ಕಾಲಕಾಲಕ್ಕೆ ಮಧ್ಯಮ ತಾಪಮಾನಕ್ಕೆ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ. ಹವಾನಿಯಂತ್ರಕದ ತಾಪಮಾನವನ್ನು 24-25 ಡಿಗ್ರಿ ಸೆಲ್ಸಿಯಸ್‌ನಲ್ಲಿ ನಿರ್ವಹಿಸುವುದು ಸೂಕ್ತ.

## ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

| | | | | | | | | |
|---|---|---|---|---|---|---|---|---|
| 1 | 2 | | 3 | ■ | 4 | ■ | 5 | 6 |
| ■ | | ■ | 7 | | | ■ | ■ | |
| 8 | | 9 | ■ | ■ | 10 | | 11 | |
| | ■ | 12 | | 13 | | ■ | | ■ |
| | ■ | | ■ | | ■ | 14 | ■ | 15 |
| ■ | 16 | ■ | 17 | | | | ■ | |
| 18 | | | | ■ | ■ | 19 | 20 | |
| | ■ | ■ | 21 | | 22 | ■ | | ■ |
| 23 | | ■ | | ■ | 24 | | | |

### ಎಡದಿಂದ ಬಲಕ್ಕೆ

1. ತನ್ನತ್ತ ಸೆಳೆ (4)
5. ರೇಖಾಗಣಿತದಲ್ಲಿ ಎರಡು ಕೋನಗಳನ್ನು ಸೇರಿಸುವ ರೇಖೆ, ತೋಳು (2)
7. ಪುಸ್ತಕದಲ್ಲಿ ಓದಿದ್ದೆಲ್ಲ ಈ ತಲೆಗೆ ಹೋದರೆ ಎಷ್ಟು ಚೆನ್ನ (3)
8. ಊರಲ್ಲಿ ಕಾಣಿಸಿದ ಹಾವು (3)
10. ದಮಯಂತಿಯ ಪತಿಯ ರುಚಿಯಾದ ಅಡುಗೆ (4)
12. ನೋಡಲು ಸೊಗಸಾದ (4)
17. ಮನಸ್ಸು ಬಿಚ್ಚಿ ಮಾತನಾಡದಿರುವಿಕೆ (4)
18. ನಮ್ಮ ರಾಜ್ಯವನ್ನು ಹೀಗೆಯೂ ಕರೆಯುವರು (4)
19. ಮನೆ ಅಥವಾ ವಾಸಸ್ಥಳ (3)
21. ಒಂದು ಪಠ್ಯವಿಷಯ, ಅಂಕಶಾಸ್ತ್ರ (3)
23. ಬಟ್ಟೆಯನ್ನು ತಯಾರಿಸಲು ಬೇಕಾದ ಅರಳೆ (2)
24. ನಾಳೆಯ ದಿವಸ (4)

### ಮೇಲಿಂದ ಕೆಳಕ್ಕೆ

2. ಕಬ್ಬಿಣದ ಕೆಲಸ ಮಾಡುವವನು (3)
3. ಹೂವು ಎರಡಕ್ಷರದಲ್ಲಿ (2)
4. ಸೂರ್ಯ ಇಲ್ಲಿ ಅಸ್ತವ್ಯಸ್ತವಾಗಿ ಬಂದಿದ್ದಾನೆ (4)
6. ಸ್ನಾನಕ್ಕೆ ಮತ್ತೊಂದು ಹೆಸರು (3)
8. ಅಪಾಯವನ್ನು ಎದುರಿಸಲು ಬೇಕಾದ ಯುಕ್ತಿ (3)
9. ಚಿತ್ತವಿರುವ ಲಕ್ಷ್ಯ (3)
11. ಬರೆಯುವ ಕಪ್ಪು ಹಲಗೆಯಿದು (2)
13. ಸಮುದ್ರದಲ್ಲಿ ಸಾಗುವ ಜಹಜು (3)
14. ಹೊಸದಾಗಿ ಕಂಡ ಮನುಷ್ಯ (3)
15. ಸಖಿ, ಸ್ನೇಹಿತೆ (3)
16. ಮರ, ಗಿಡವು ಗಟ್ಟಿಯಾಗಿ ನಿಲ್ಲಲು ಬೇಕಾದ ಭೂಮಿಯೊಳಗಿನ ಭಾಗ (2)
17. ಎಲ್ಲರಿಗೂ ಬೇಕಾದ ಬಂಧವಿಮೋಚನೆ (4)
18. ಹಲವರು ನಡೆಸಿದ ಜಗಳ (3)
20. ಇದೊಂದು ವಾದ್ಯವಿಶೇಷ (3)
22. ಕತ್ತಲೆ ಅಥವಾ ಅಜ್ಞಾನ (2)

### ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಆಕರ್ಷಿಸು 5.ಭುಜ 7.ಮಸ್ತಕ 8.ಉರಗ 10.ನಳಪಾಕ 12 ಮನೋಹರ 17.ಬಿಗುಮಾನ 18. ಕರುನಾಡು 19.ವಸತಿ 21.ಗಣಿತ 23.ಹತ್ತಿ 24.ಮರುದಿನ

ಮೇಲಿಂದ ಕೆಳಕ್ಕೆ
2.ಕಮ್ಮಾರ 3.ಸುಮ 4.ದಿಕನರ 6.ಜಳಕ 8.ಉಪಾಯ 9.ಗಮನ 11.ಪಾಟಿ 13.ಹಡಗು 14.ಮಾನವ 15.ಗೆಳತಿ 16.ಬೇರು 17.ಬಿಡುಗಡೆ 18.ಕಲಹ 20.ಸನಾದಿ 22.ತಮ

## ನಂಬಿದವರ ಹೃದಯದೊಳಗೆ ನೆಲೆಸುವ ಶ್ರೀಕೃಷ್ಣ

ಅದು ಓರ್ವ ಧನಿಕನ ಮನೆ. ಅಲ್ಲಿ ಬ್ರಾಹ್ಮಣನೊಬ್ಬ ಶ್ರೀಮದ್ಭಾಗವತದ ಉಪನ್ಯಾಸವನ್ನು ನೀಡುತ್ತಿದ್ದ. ಅದೇ ಸಮಯದಲ್ಲಿ ಕಳ್ಳನೊಬ್ಬ ಆ ಧನಿಕನ ಮನೆಗೆ ನುಗ್ಗಿದ, ಒಂದು ಮೂಲೆಯಲ್ಲಿ ಅಡಗಿ ಕುಳಿತ. ಸಹಜವಾಗಿ ಶ್ರೀಮದ್ಭಾಗವತದ ಕಥೆಯು ಕಳ್ಳನ ಕಿವಿಗೆ ಬೀಳುತ್ತಿತ್ತು.

ಶ್ರೀಮದ್ಭಾಗವತ ಎಂದರೆ ಶ್ರೀಕೃಷ್ಣನ ಅಪಾರ ಮಹಿಮೆಯ ಅದ್ಭುತ ಕಥೆಗಳ ಸಂಗ್ರಹ. ಬಾಲಕೃಷ್ಣನು ಧರಿಸಿದ್ದ ಸುಂದರ ಆಭರಣಗಳನ್ನು ಆ ಬ್ರಾಹ್ಮಣ ವರ್ಣಿಸುತ್ತಿದ್ದ. ತಾಯಿ ಯಶೋದೆಯು ಪುಟ್ಟ ಕೃಷ್ಣನಿಗೆ ಯಾವ ರೀತಿ ಶೃಂಗಾರ ಮಾಡಿ ಗೋವುಗಳೊಂದಿಗೆ ಕಳುಹಿಸುತ್ತಿದ್ದಳು ಎಂಬುದನ್ನು ಮನಮುಟ್ಟುವಂತೆ ವಿವರಿಸುತ್ತಿದ್ದ.

ವಿಸ್ಮಿತನಾಗಿ ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಿದ್ದ ಕಳ್ಳ, 'ಹೇಗಾದರೂ ಮಾಡಿ ಆ ಪುಟ್ಟ ಹುಡುಗನನ್ನು ಹುಡುಕಿ, ಅವನು ಧರಿಸಿರುವ ಆಭರಣಗಳನ್ನೆಲ್ಲಾ ಸೆಳೆದು ನನ್ನದಾಗಿಸಿಕೊಂಡರೆ, ಪ್ರತಿನಿತ್ಯವೂ ಸಣ್ಣಪುಟ್ಟ ಕಳ್ಳತನ ಮಾಡುವ ಕಷ್ಟ ತಪ್ಪುತ್ತದೆ' ಎಂದು ಆಲೋಚಿಸಿದ. ಆ ಪುಟ್ಟ ಹುಡುಗ ಎಲ್ಲಿರುತ್ತಾನೆ ಎಂದು ತಿಳಿಯಬಯಸಿದ ಕಳ್ಳನು ಆ ಬ್ರಾಹ್ಮಣನನ್ನು ಹಿಂಬಾಲಿಸಿ ನಡೆದ. ಕಳ್ಳನನ್ನು ಕಂಡ ಬ್ರಾಹ್ಮಣ, ಪ್ರವಚನದಲ್ಲಿ ದೊರೆತ ಅಲ್ಪ ದಕ್ಷಿಣೆಯನ್ನು ಕಳೆದುಕೊಳ್ಳುವ ಭಯದಲ್ಲಿ ಕಂಗಾಲಾಗಿ, ''ನನ್ನಲ್ಲಿ ಏನೂ ಇಲ್ಲ'' ಎಂದು ಬಡಬಡಿಸಿದ.

## ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

''ನನಗದೆಲ್ಲಾ ಬೇಡ. ಆಗಲೇ ನೀನು ಹೇಳಿದಂತೆ ಆ ಬಾಲಕೃಷ್ಣ ಎಲ್ಲಿ ಸಿಗುತ್ತಾನೆ? ಆ ಸ್ಥಳದ ಗುರುತು ಹೇಳು, ನಾನು ಅಲ್ಲಿಗೆ ಹೋಗಬೇಕು'' ಎಂದ ಕಳ್ಳ.

ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಆಲೋಚನೆಯಲ್ಲಿ ಆ ವಿಪ್ರನು, ''ವೃಂದಾವನದಲ್ಲಿ ಯಮುನಾ ನದಿಯ ದಡದಲ್ಲಿ ಇಬ್ಬರು ಬಾಲಕರು ಗೋವುಗಳನ್ನು ಮೇಯಿಸುತ್ತಿರುತ್ತಾರೆ. ಅವರಲ್ಲಿ ಒಬ್ಬ ಬೆಳ್ಳಗಿದ್ದಾನೆ, ಮತ್ತೊಬ್ಬ ಕಪ್ಪಗಿದ್ದಾನೆ. ಕಪ್ಪು ಹುಡುಗನ ಕೈಯಲ್ಲಿ ಒಂದು ಕೊಳಲು ಇದೆ, ತಲೆಯಲ್ಲೊಂದು ನವಿಲುಗರಿಯಿದೆ. ಅವನೇ ಶ್ರೀಕೃಷ್ಣ'' ಎಂದ. ಇದನ್ನು ಸಂಪೂರ್ಣವಾಗಿ ನಂಬಿದ ಕಳ್ಳ ಕೂಡಲೇ ವೃಂದಾವನದ ಕಡೆಗೆ ತೆರಳಿದ. ಆ ಬ್ರಾಹ್ಮಣನು ಶ್ರೀಮದ್ಭಾಗವತದ ಉಪನ್ಯಾಸದಲ್ಲಿ ವಿವರಿಸಿದಂತೆ ಆ ಸುಂದರವಾದ ಸ್ಥಳವನ್ನು ಹುಡುಕಿ, ಅಲ್ಲಿಯೇ ಮರವೊಂದನ್ನು ಹತ್ತಿ, ಹುಡುಗರಿಗಾಗಿ ಕಾದುಕುಳಿತ. ಸೂರ್ಯೋದಯವಾಯಿತು, ಹುಡುಗರಿಬ್ಬರೂ ಬರುವುದನ್ನು ನೋಡಿ ಕಳ್ಳ ಮರದಿಂದ ಕೆಳಗಿಳಿದು, ಅವರ ಬಳಿಗೆ ನಡೆದ. ಮನಮೋಹಕ ಬಾಲಕೃಷ್ಣನನ್ನು ಕಂಡು ಮೈಮರೆತ. ತನಗೇ ಅರಿವಿಲ್ಲದಂತೆ ಕೈಗಳನ್ನೆತ್ತಿ ಜೋಡಿಸಿದ. ಅವನ ಕಣ್ಣುಗಳು ಆನಂದದಿಂದ ತುಂಬಿಬಂದವು...

ಕಣ್ಣ ನೋಟವನ್ನು ಶ್ರೀಕೃಷ್ಣನ ಮೇಲಿಂದ ಕದಲಿಸಿ ಬೇರೆಡೆಗೆ ಹರಿಸುವುದು ಕಳ್ಳನಿಗೆ ಸಾಧ್ಯವಾಗಲೇ ಇಲ್ಲ. ಇಂಥ ತೇಜೋಮೂರ್ತಿಗಳನ್ನು ಇಷ್ಟೊಂದು ಬೆಲೆಬಾಳುವ ಆಭರಣಗಳಿಂದ ಸಿಂಗರಿಸಿ ನದೀತೀರಕ್ಕೆ ಕಳುಹಿಸಿದ ಆ ತಾಯಿಯನ್ನು ನೆನೆದು ದಿಗ್ಭ್ರಮೆಗೊಂಡ. ''ನಿಲ್ಲು'' ಎನ್ನುತ್ತಾ ಶ್ರೀಕೃಷ್ಣನ ಕೈಹಿಡಿದು ಕೂಗಿದ....

ಗೋವಿಂದನನ್ನು ಸ್ಪರ್ಶಿಸಿದ ಆ ಕ್ಷಣವೇ ಅವನ ಹಿಂದಿನ ಪಾಪಗಳೆಲ್ಲವೂ ಬೆಂಕಿಯಲ್ಲಿ ಸುಟ್ಟ ಹತ್ತಿಯ ಉಂಡೆಗಳಂತೆ ಕ್ಷಯಿಸಿಬಿಟ್ಟವು. ಅವನ ಕೈಯಿಂದ ಬಿಡಿಸಿಕೊಳ್ಳಲು ತುಂಟಕೃಷ್ಣನು, ''ನನ್ನ ಈ ಎಲ್ಲಾ ಆಭರಣಗಳನ್ನು ತೆಗೆದುಕೋ, ನನ್ನನ್ನು ಬಿಟ್ಟುಬಿಡು'' ಎಂದ.

ಗೊಂದಲಗೊಂಡ ಕಳ್ಳ, ''ಹೀಗೆ ಎಲ್ಲವನ್ನೂ ನನಗೆ ಕೊಟ್ಟರೆ ನಿನ್ನ ತಾಯಿ ನಿನ್ನನ್ನು ಗದರುವುದಿಲ್ಲವೇ?'' ಎಂದು ಕೇಳಿದ.

ಕೃಷ್ಣನು ನಗುನಗುತ್ತಾ, ''ನಾನು ನಿನಗಿಂತ ದೊಡ್ಡ ಕಳ್ಳ. ಇಂಥವು ನನ್ನಲ್ಲಿ ಹೇರಳವಾಗಿವೆ, ಅದರ ಬಗ್ಗೆ ಚಿಂತೆ ಮಾಡಬೇಡ. ಆದರೆ ನನಗೂ ನಿನಗೂ ಒಂದು ವ್ಯತ್ಯಾಸವಿದೆ. ಅದೇನೆಂದರೆ, ನಾನು ಕದ್ದರೆ ಯಾರೂ ದೂರುವುದಿಲ್ಲ, ಹಾಗಾಗಿಯೇ ನಾನು ಚಿತ್ತಚೋರ. ನಿನಗೆ ಇದು ಗೊತ್ತಿಲ್ಲ, ಎಲ್ಲರ ಚಿತ್ತವನ್ನೂ ಕದ್ದು ನನ್ನಲ್ಲೇ ಇಟ್ಟುಕೊಳ್ಳುವ ಕಳ್ಳ ನಾನು...'' ಎಂದ. ನಂತರ ಇಬ್ಬರು ಹುಡುಗರೂ ಅಲ್ಲಿಂದ ಮಾಯವಾದರು. ಆಶ್ಚರ್ಯ! ಕಳ್ಳನ ಕೈಯಲ್ಲಿ ಆಭರಣಗಳಿಂದ ತುಂಬಿದ ಚೀಲವೊಂದಿತ್ತು.

ಕೃಷ್ಣನ ಕಥೆ ಹೇಳಿದ್ದ ಬ್ರಾಹ್ಮಣನ ಮನೆಗೆ ಬಂದ ಕಳ್ಳ, ನಡೆದಿದ್ದೆಲ್ಲವನ್ನೂ ಅವರಿಗೆ ವಿವರಿಸಿದ. ಆನಂದಬಾಷ್ಪಭರಿತನಾದ ಸಜ್ಜನ ಬ್ರಾಹ್ಮಣನು, ಆ ಕಪ್ಪು ಹುಡುಗನನ್ನು ಕಳ್ಳನು ನೋಡಿದ ಜಾಗಕ್ಕೆ ಅವನನ್ನು ಕರೆದುಕೊಂಡು ಹೋದ. ಆದರೆ ಎಷ್ಟು ಕಾದರೂ ಅಲ್ಲಿ ಯಾರೂ ಕಾಣಿಸಲಿಲ್ಲ.

''ಹೇ ದೇವದೇವಾ! ಕಳ್ಳನಿಗೆ ಕಂಡವನು ನನಗೆ ಕಾಣಿಸಲಾರೆಯಾ?'' ಎಂದು ಬ್ರಾಹ್ಮಣ ಮೊರೆಯಿಟ್ಟ. ಕೃಷ್ಣ ಕಾಣಿಸಲಿಲ್ಲ, ಆದರೆ ಅವನ ದನಿ ಕೇಳಿಸಿತು. ''ನೀನು ಶ್ರೀಮದ್ಭಾಗವತದ ಕಥೆಯನ್ನು ಇತರ ಎಲ್ಲಾ ಕಥೆಗಳಂತೆಯೇ ಸುಮ್ಮನೇ ಓದಿದೆಯಷ್ಟೇ; ಆದರೆ ನೀನು ಹೇಳಿದ ಕಥೆಯನ್ನು ಮತ್ತು ನನ್ನ ಬಗೆಗಿನ ವಿವರಗಳನ್ನು ಈತ ಕಳ್ಳನಾದರೂ ನಂಬಿ ನಡೆದ, ಅದನ್ನು ಒಪ್ಪಿ ನನ್ನನ್ನು ನೋಡಲು ಬಂದ. ನನ್ನನ್ನು ನಂಬಿದವರಿಗೆ ನಾನು ಖಂಡಿತ ಕಾಣಿಸುವೆ, ನಂಬಿ ನಡೆದರೆ ನಿನ್ನೊಳಗೂ ನೆಲೆಸುವೆ'' ಎಂದ ಶ್ರೀಕೃಷ್ಣ...

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

## ಸಮಾಚಾರ ಸಣ್ಣದಲ್ಲ

### ಹಾಂಕಾಂಗ್ ಬ್ಯಾಡ್ಮಿಂಟನ್: ಸೆಮೀಸ್‌ಗೆ ಚಿರಾಗ್-ಸಾತ್ವಿಕ್

**ಹಾಂಗ್ಕಾಂಗ್:** ಭಾರತದ ಅಗ್ರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಹಾಂಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದು ಪ್ರಶಸ್ತಿಯತ್ತ ಚಿತ್ತ ನೆಟ್ಟಿದೆ. ಪ್ರಶಸ್ತಿ ಸುತ್ತಿಗೆ ಇನ್ನೊಂದು ಹೆಜ್ಜೆ ದೂರದಲ್ಲಿದ್ದಾರೆ. ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತೀಯ ಜೋಡಿ ಮಲೇಷ್ಯಾದ ಜುನೈದಿ ಆರಿಫ್ ಮತ್ತು ರಾಯ್ ಕಿಂಗ್ ಯಾಪ್‌ರನ್ನು 21-14, 20-22, 21-16 ಅಂತರದಿಂದ ಸೋಲಿಸಿ ಸೆಮಿಫೈನಲ್ ತಲುಪಿದರು. ಮೂರು ಗೇಮ್‌ಗಳ ಮ್ಯಾರಥಾನ್ ಪೈಪೋಟಿಯಲ್ಲಿ ಭಾರತೀಯ ಜೋಡಿ ಮೊದಲ ಗೇಮ್ ಅನ್ನು ಅತ್ಯಂತ ಸುಲಭವಾಗಿ ಗೆದ್ದಿತು. ಆದರೆ ಎರಡನೇ ಗೇಮಲ್ಲಿ ಗೆಲುವಿಗೆ ಉಭಯ ತಂಡಗಳ ಆಟಗಾರರು ತೀವ್ರ ಪೈಪೋಟಿ ನಡೆಸಿದರು. ಅಂತಿಮವಾಗಿ ಮಲೇಷ್ಯಾ ಜೋಡಿ 22-20 ಅಂತರದಿಂದ ಗೆದ್ದು ಸಮಬಲ ಸಾಧಿಸಿತು. 3ನೇ ಹಾಗೂ ನಿರ್ಣಾಯಕ ಗೇಮ್ ಕೂಡ ಅತ್ಯಂತ ಜಿದ್ದಾಜಿದ್ದಿಯಿಂದ ಕೂಡಿರಬಹುದು ಎಂದು ನಿರೀಕ್ಷೆ ಮಾಡಲಾಯಿತು. ಆದರೆ ಭಾರತೀಯ ಜೋಡಿಯ ಆಕ್ರಮಣಕಾರಿ ಆಟದ ಮುಂದೆ ಮಲೇಷ್ಯಾ ಜೋಡಿ ಸಂಪೂರ್ಣ ಮಂಕಾಯಿತು. 21-16 ಅಂಕಕ್ಕೆ ಸೀಮಿತವಾಗಿ ಶರಣಾದರು.

### ಗೋವಾದಲ್ಲಿ ಫುಟ್ಬಾಲ್ ಆಡ್ತಾರಾ ರೊನಾಲ್ಡೊ?



**ನವದೆಹಲಿ:** ಪೋರ್ಚುಗಲ್‌ನ ಫುಟ್ಬಾಲ್ ದಂತಕಥೆ ಕ್ರಿಸ್ಟಿಯಾನೊ ರೊನಾಲ್ಡೊ, ಅಕ್ಟೋಬರ್ ತಿಂಗಳಲ್ಲಿ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ. ಎಎಫ್‌ಸಿ ಚಾಂಪಿಯನ್ಸ್ ಲೀಗ್-2 ಪಂದ್ಯದಲ್ಲಿ ಅವರು ಅಲ್ ನಾಸರ್ ಪರ ಎಫ್‌ಸಿ ಗೋವಾ ವಿರುದ್ಧದ ಆಡುವ ಸಾಧ್ಯತೆಗಳಿವೆ. ಎಎಫ್‌ಸಿ ಚಾಂಪಿಯನ್ಸ್ ಲೀಗ್-2 ಫುಟ್‌ಬಾಲ್ ಟೂರ್ನಿಯ ಡ್ರಾ ಬಿಡುಗಡೆಗೊಂಡಿದ್ದು, ಇದರಲ್ಲಿ ರೊನಾಲ್ಡೊ ತಂಡ ಅಲ್ ನಾಸರ್ ಹಾಗೂ ಭಾರತದ ಗೋವಾ ಎಫ್‌ಸಿ ತಂಡಗಳು ಒಂದೇ ಗುಂಪಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ. ಲೀಗ್‌ನಲ್ಲಿ ಪ್ರತಿ ತಂಡ ತನ್ನ ತವರಿನಲ್ಲಿ ಒಂದು ಪಂದ್ಯ, ಎದುರಾಳಿ ಕ್ಲಬ್‌ನ ತವರಿನಲ್ಲಿ ಒಂದ್ಯ ಪಂದ್ಯವನ್ನಾಡಲಿವೆ. ಹೀಗಾಗಿ ಅಲ್ ನಾಸರ್ ಭಾರತಕ್ಕೆ ಆಗಮಿಸಿ ಗೋವಾ ವಿರುದ್ಧ ಆಡಬೇಕಿದೆ. ಈ ಪಂದ್ಯ ಅಕ್ಟೋಬರ್ 22ರಂದು ನಿಗದಿಯಾಗಿದೆ. ಕಳೆದ ವರ್ಷ, ರೊನಾಲ್ಡೊ ಇದೇ ಟೂರ್ನಮೆಂಟಲ್ಲಿ ಸೌದಿಯಿಂದ ಹೊರಕ್ಕೆ ಕೇವಲ ಒಂದು ಪಂದ್ಯವನ್ನು ಮಾತ್ರ ಆಡಿದ್ದರು.

### ಮೊಹಮ್ಮದ್ ಹ್ಯಾರಿಸ್ ಅರ್ಧ ಶತಕ | ಒಮಾನ್‌ಗೆ ಹೀನಾಯ ಸೋಲು

# ಏಷ್ಯಾ ಕಪ್: ಪಾಕ್‌ಗೆ 93 ರನ್ ಜಯ

**ದುಬೈ:** ಇಲ್ಲಿ ಶುಕ್ರವಾರ ನಡೆದ ಏಷ್ಯಾ ಕಪ್ ಟೂರ್ನಿಯ ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಒಮಾನ್ ತಂಡವನ್ನು 93 ರನ್‌ಗಳಿಂದ ಸೋಲಿಸಿತು.

161 ರನ್‌ಗಳ ಗೆಲುವಿನ ಗುರಿಯನ್ನು ಪಡೆದಿದ್ದ ಒಮಾನ್ ತಂಡವು ಆರಂಭದಿಂದಲೇ ಮುಗ್ಗರಿಸಿತು. ಆರಂಭಿಕ ಆಟಗಾರ ಜತಿಂದರ್ ಸಿಂಗ್ ಕೇವಲ 1 ರನ್ ಗಳಿಸಿ ಪೆವಿಲಿಯನ್ ಸೇರಿದರು. ಆದರೆ ಅಬ್ದುಲ್ ಕಲೀಮ್ ಮತ್ತು ಅಹಮ್ಮದ್ ಮಿರ್ಜ ಮೂರನೇ ಜತೆಯಾಟದಲ್ಲಿ ಉತ್ತಮವಾಗಿ ಆಡಿದರು. ಕಲೀಮ್ 13 ರನ್ ಬಾರಿಸಿದರೆ,

ಮಿರ್ಜಾ 27 ರನ್ ಗಳಿಸಿ ಪೆವಿಲಿಯನ್ ಸೇರಿದರು. ಇನ್ನುಳಿದಂತೆ ಒಮಾನ್ ತಂಡದ ಯಾರೂ ಉತ್ತಮವಾಗಿ ಬ್ಯಾಟಿಂಗ್ ಮಾಡಲಿಲ್ಲ.

ಒಮಾನ್ ತಂಡವು 10 ಓವರ್‌ಗಳಲ್ಲಿ ಕೇವಲ 67 ರನ್ ಗಳಿಸಿ ಆಲೌಟ್ ಆಯಿತು.

ಟಾಸ್ ಗೆದ್ದ ಪಾಕಿಸ್ತಾನ ತಂಡವು ಮೊದಲು ಬ್ಯಾಟಿಂಗ್ ಆರಿಸಿ ಕೊಂಡಿತು. ಪಾಕ್‌ನ ಆರಂಭ ತೀರಾ ಕಳಪೆ ಮಟ್ಟದ್ದಾಗಿತ್ತು. ಸಹಿಬ್‌ಜಾದ ಫರ್ಹಾನ್ ಮತ್ತು ಸಯಿಮ್ ಅಯೂಬ್ ಆರಂಭಿಕ ಆಟಗಾರರಾಗಿ ಮೈದಾನಕ್ಕಿಳಿದರು. ಅಯೂಬ್ ಒಂದು ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ಔಟ್ ಆದರು. ಬಳಿಕ ಫರ್ಹಾನ್ ಮತ್ತು ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಮೊಹಮ್ಮದ್ ಹ್ಯಾರಿಸ್ ಮಧ್ಯೆ ಉತ್ತಮ ಜತೆಯಾಟ ಸಾಗಿತು. ಅವರಿಬ್ಬರೂ ಎರಡನೇ ವಿಕೆಟ್‌ಗೆ 85 ರನ್‌ಗಳ ಜತೆಯಾಟ ಪ್ರದರ್ಶಿಸಿದರು.

29 ಬಾಲ್‌ಗಳಲ್ಲಿ 29 ರನ್ ಗಳಿಸಿದ ಫರ್ಹಾನ್ ಪಾಕ್ ತಂಡದ ಮೊತ್ತ 89 ರನ್ ಇದ್ದಾಗ ತಮ್ಮ ವಿಕೆಟ್ ಕಳೆದುಕೊಂಡರು. ಆ ಬಳಿಕ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಮೊಹಮ್ಮದ್ ಹ್ಯಾರಿಸ್ ತಮ್ಮ ವೈಯಕ್ತಿಕ ಮೊತ್ತ 66 ರನ್ ತಲುಪಿದಾಗ ವಿಕೆಟ್ ಒಪ್ಪಿಸಿದರು.

ಈ ಮಧ್ಯೆ ಬ್ಯಾಟಿಂಗ್‌ಗೆ ಬಂದ ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಆಘಾ ಕೇವಲ ಒಂದು ಬಾಲ್ ಎದುರಿಸಿ ಯಾವುದೇ ರನ್ ಗಳಿಸದೆ ಪೆವಿಲಿಯನ್‌ಗೆ ತೆರಳಿದರು. ನಂತರ ಪಾಕ್ ಪರವಾಗಿ ಕ್ರೀಸ್‌ಗೆ ಬಂದ ಮೊಹಮ್ಮದ್ ನವಾಸ್ 10 ಬಾಲ್ ಎದುರಿಸಿ 19 ರನ್ ಗಳಿಸುವಲ್ಲಿ ಶಕ್ತರಾದರು.

ಕೊನೆಯಲ್ಲಿ ಪಾಕ್ ಪರ ಫಖರ್ ಜಮಾನ್ 23 ರನ್ ಗಳಿಸಿ ಮತ್ತು ಶಹೀನ್ ಅಫ್ರಿದಿ 8 ರನ್ ಗಳಿಸಿ ಅಜೇಯರಾಗಿ ಉಳಿದರು.

### ಮಹಿಳಾ ಏಕದಿನ: ನಾಳೆಯಿಂದ ಭಾರತ-ಆಸೀಸ್ ಸರಣಿ ಆರಂಭ

**ನವದೆಹಲಿ:** ಪ್ರವಾಸಿ ಆಸ್ಟ್ರೇಲಿಯಾ ಮಹಿಳಾ ತಂಡ ಮತ್ತು ಭಾರತ ಮಹಿಳಾ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಗೆ ವೇದಿಕೆ ಸಜ್ಜಾಗಿದೆ. ಎರಡೂ ತಂಡಗಳು ಸೆಪ್ಟೆಂಬರ್ 14, 17 ಮತ್ತು 20ರಂದು ಮೂರು ಏಕದಿನ ಪಂದ್ಯಗಳಲ್ಲಿ ಪರಸ್ಪರ ಸೆಣಸಲಿವೆ. ಮೊದಲ ಎರಡು ಪಂದ್ಯಗಳು ನವ ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮೂರನೇ ಏಕದಿನ ಪಂದ್ಯ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದೇ ತಿಂಗಳ ಅಂತ್ಯದಲ್ಲಿ ಆರಂಭಗೊಳ್ಳಲಿರುವ ಏಕದಿನ ವಿಶ್ವಕಪ್ ಟೂರ್ನಿಗೂ ಮುನ್ನ ಪೂರ್ವಸಿದ್ಧತೆ ನಡೆಸುವ ನಿಟ್ಟಿನಲ್ಲಿ ಇತ್ತಂಡಗಳಿಗೂ ಈ ಸರಣಿ ಮಹತ್ವದ್ದಾಗಿದೆ. ಆಸ್ಟ್ರೇಲಿಯಾ ಮತ್ತು ಭಾರತದ ಮಹಿಳೆ ತಂಡ ಏಕದಿನ ಕ್ರಿಕೆಟ್‌ನಲ್ಲಿ 56 ಬಾರಿ ಪರಸ್ಪರ ಮುಖಾಮುಖಿಯಾಗಿದ್ದು, ಆಸ್ಟ್ರೇಲಿಯಾ 46 ಗೆಲುವುಗಳನ್ನು ದಾಖಲಿಸಿದ್ದರೆ, ಭಾರತ ಕೇವಲ 10 ಬಾರಿ ಮಾತ್ರ ಗೆದ್ದಿದೆ. ಭಾರತ ಕೊನೆಯ ಐದು ಏಕದಿನ ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಕಾರಣ ವಿಶ್ವಾಸದಲ್ಲಿದೆ.

### ಬಿಸಿಸಿಐ ಅಧ್ಯಕ್ಷ ಪಟ್ಟ: ಸಚಿನ್ ತೆಂಡೂಲ್ಕರ್ ನಿರಾಕರಣೆ

**ನವದೆಹಲಿ:** ರೋಜರ್ ಬಿನ್ನಿ ಅವರ ಬಳಿಕ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಅಧ್ಯಕ್ಷ ಸ್ಥಾನವನ್ನು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅಲಂಕರಿಸಲಿದ್ದಾರೆಂಬ ಸುದ್ದಿಗಳು ಇತ್ತೀಚೆಗೆ ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿವೆ. ಇದೀಗ ಈ ಬಗ್ಗೆ ಸ್ಪಷ್ಟನೆ ಸಿಕ್ಕಿದೆ.

ಬಿಸಿಸಿಐಗೆ ಮುಂದಿನ ಅಧ್ಯಕ್ಷರಾಗುವ ಸ್ಪರ್ಧೆಯಲ್ಲಿದ್ದಾರೆ ಎಂಬ ಊಹಾಪೋಹಗಳನ್ನು ದಿಗ್ಗಜ ಬ್ಯಾಟರ್ ಮತ್ತು ಭಾರತದ ಮಾಜಿ ನಾಯಕ ಸಚಿನ್ ತೆಂಡೂಲ್ಕರ್ ಗುರುವಾರ ತಳ್ಳಿಹಾಕಿದ್ದಾರೆ. ಅವರ ನಿರ್ವಹಣಾ ಸಂಸ್ಥೆಯು ಅಂತಹ ಎಲ್ಲಾ ಮಾತುಕತೆಗಳನ್ನು 'ಆಧಾರರಹಿತ' ಎಂದು ಕರೆದಿದೆ. ತೆಂಡೂಲ್ಕರ್ ನಿರ್ವಹಣಾ ಸಂಸ್ಥೆಯು ಅವರ ಪರವಾಗಿ ಹೇಳಿಕೆ ನೀಡಿದ್ದು, ರೋಜರ್ ಬಿನ್ನಿ ಅವರ ಸಂಭಾವ್ಯ ಉತ್ತರಾಧಿಕಾರಿಯಾಗಬಹುದು ಎಂಬ ಊಹಾಪೋಹಗಳಿಗೆ ಅಂತ್ಯ ಹಾಡಿದೆ.

### ಇಂದಿನಿಂದ ವಿಶ್ವ ಅಥ್ಲೆಟಿಕ್ಸ್: ಭಾರತಕ್ಕೆ ನೀರಜ್ ನಾಯಕ

**ಟೋಕಿಯೊ:** ಸೆ.13ರಿಂದ ಟೋಕಿಯೋದಲ್ಲಿ ಆರಂಭವಾಗಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ 19 ಸದಸ್ಯರ ತಂಡ ಸ್ಪರ್ಧಿಸಲಿದೆ. ಹಾಲಿ ಪುರುಷರ ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ ನೇತೃತ್ವದಲ್ಲಿ ಭಾರತ ಕಣಕ್ಕಿಳಿಯಲಿದೆ. ಒಂಬತ್ತು ದಿನಗಳ ಈ ಕ್ರೀಡಾಕೂಟ ಸೆಪ್ಟೆಂಬರ್ 13ರಿಂದ 21ರವರೆಗೆ ನಡೆಯಲಿದೆ. 2023ರಲ್ಲಿ ಬುಡಾಪೆಸ್ಟ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್‌ಗೆ ಭಾರತ 28 ಕ್ರೀಡಾಪಟುಗಳನ್ನು ಕಳುಹಿಸಿತ್ತು. ಆದರೆ ಈ ಬಾರಿ ಯಾವುದೇ ರಿಲೇ ತಂಡಗಳು ಭಾಗವಹಿಸದ ಕಾರಣ, ತಂಡವು ಜಾವೆಲಿನ್ ತಾರೆಗಳಿಂದ ಪ್ರಾಬಲ್ಯ ಹೊಂದಿದೆ. ಇತಿಹಾಸದಲ್ಲಿ ಮೊದಲ ಬಾರಿಗೆ, ಭಾರತವು ಐದು ಜಾವೆಲಿನ್ ಎಸೆತಗಾರರನ್ನು (ಪುರುಷರ ವಿಭಾಗದಲ್ಲಿ ನಾಲ್ವರು) ಕಣಕ್ಕಿಳಿಸುತ್ತಿದೆ. ನೀರಜ್ ಚೋಪ್ರಾ ಅವರು ಜೂಲಿಯನ್ ವೆಬರ್ (ಜರ್ಮನಿ) ಮತ್ತು ಒಲಿಂಪಿಕ್ ಚಾಂಪಿಯನ್ ಅರ್ಶದ್ ನದೀಮ್ (ಪಾಕಿಸ್ತಾನ) ವಿರುದ್ಧ ತಮ್ಮ ಪ್ರಶಸ್ತಿಯನ್ನು ಉಳಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ. 4 ವರ್ಷಗಳ ಹಿಂದೆ ನೀರಜ್ ಟೋಕಿಯೋದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಚಿನ್ನದ ಪದಕ ಜಯಿಸಿದ್ದರು.

## ಭಾರತ-ಪಾಕ್ ಪಂದ್ಯದ ಟಿಕೆಟ್‌ಗೆ ಬೇಡಿಕೆಯಿಲ್ಲ?

### ಏಷ್ಯಾ ಕಪ್: ಟಿಕೆಟ್ ಮಾರಾಟ ನಿಧಾನ ಆಪರೇಷನ್ ಸಿಂದೂರದ ಪರಿಣಾಮ?

**ದುಬೈ:** ಅಭಿಮಾನಿಗಳು ಕಾತರದಿಂದ ಕಾಯುತ್ತಿರುವ ಭಾರತ ಮತ್ತು ಪಾಕಿಸ್ತಾನ ನಡುವಣ ಏಷ್ಯಾಕಪ್ ಟಿ20 ಹೈವೋಲ್ಟೇಜ್ ಪಂದ್ಯ ದುಬೈನಲ್ಲಿ ಸೆ.14(ಭಾನುವಾರ)ರಂದು ನಡೆಯಲಿದೆ. ಹಿಂದೆಲ್ಲ ಕೆಲವು ಗಂಟೆಗಳಲ್ಲಿ, ಕೆಲವು ನಿಮಿಷಗಳಲ್ಲಿ ಮಾರಾಟವಾಗುತ್ತಿದ್ದ ಟಿಕೆಟ್‌ಗಳು ಗುರುವಾರದ ವರೆಗೂ ಅರ್ಧದಷ್ಟು ಬಾಕಿಯುಳಿದಿದ್ದವು. ಫೆಬ್ರವರಿಯಲ್ಲಿ ಇದೇ ತಂಡಗಳ ನಡುವೆ ಇದೇ ಮೈದಾನದಲ್ಲಿ ಚಾಂಪಿಯನ್ಸ್ ಟ್ರೋಫಿ ಪಂದ್ಯ ನಡೆದಿತ್ತು. ಅಲ್ಲಿ 4 ನಿಮಿಷಗಳಲ್ಲಿ ಮಾರಾಟವಾದ ಟಿಕೆಟ್‌ಗಳು ಈಗೇಕೆ ಇಷ್ಟು ತಡವಾಯಿತು ಎಂಬ ಪ್ರಶ್ನೆ ಕುತೂಹಲ ಮೂಡಿಸಿದೆ.

ಟಿಕೆಟ್ ದರ ದುಬಾರಿ ಎನ್ನುವುದು ಒಂದು ಕಾರಣ. ಇಲ್ಲಿನ ಪಂದ್ಯಗಳ ಆರಂಭಿಕ ಬೆಲೆಯೇ 13 ಡಾಲರ್ (1457 ರೂ.)ಗಳಿಂದ ಶುರುವಾಗುತ್ತದೆ. ಇವೆಲ್ಲ ಮಾರಾಟವಾಗಿವೆ. ಸದ್ಯ ಲಭ್ಯವಿರುವ ಟಿಕೆಟ್‌ಗಳ ಪೈಕಿ ಆರಂಭಿಕ ಬೆಲೆ 99 ಡಾಲರ್ (8738 ರೂ.), ಗರಿಷ್ಠ 4 ಲಕ್ಷ ರೂ.ವರೆಗೂ ಬೆಲೆಯಿದೆ. ಇನ್ನು ಕೆಲವು ವಿಐಪಿ ಸ್ಟ್ಯಾಂಡ್‌ಗಳ ಕೇವಲ 2 ಟಿಕೆಟ್‌ಗಳಿಗೆ 2.5 ಲಕ್ಷ ರೂ.ಗೂ ಅಧಿಕ ಬೆಲೆ ಇದೆ. ಇದರಲ್ಲಿ ಆಹಾರ, ಪಾನೀಯ, ಪಾರ್ಕಿಂಗ್ ಪಾಸ್, ಖಾಸಗಿ ಪ್ರವೇಶದ್ವಾರದಂಥ ವ್ಯವಸ್ಥೆಗಳಿವೆ. ರಾಯಲ್ ಬಾಕ್ಸ್‌ನ 2 ಟಿಕೆಟ್‌ಗಳಿಗೆ 2.30 ಲಕ್ಷ ರೂ., ಸ್ಕೈಬಾಕ್ಸ್‌ನ 2 ಟಿಕೆಟ್‌ಗಳಿಗೆ 1.67 ಲಕ್ಷ ರೂ., ಮಧ್ಯಮ ದರ್ಜೆಯ ಪ್ಲಾಟಿನಂ 75 ಸಾವಿರ ರೂ., ಗ್ರ್ಯಾಂಡ್ ಲಾಂಜ್ 41 ಸಾವಿರ ರೂ. ನಿಗದಿ ಮಾಡಲಾಗಿದೆ. ಇವು ದುಬಾರಿ ಎನಿಸಿವೆ.

**ಆಪರೇಷನ್ ಸಿಂದೂರದ ಪರಿಣಾಮ?:** ಇನ್ನೊಂದು ವಿಶ್ಲೇಷಣೆ ಪ್ರಕಾರ ಪಹಲ್ಗಾಮ್ ಉಗ್ರರ ದಾಳಿ ಮತ್ತು ಅದರ ಪರಿಣಾಮವಾಗಿ ಭಾರತ ನಡೆಸಿದ ಆಪರೇಷನ್ ಸಿಂದೂರದ ಹಿನ್ನೆಲೆಯಲ್ಲಿ ಪಾಕ್ ವಿರುದ್ಧದ ಪಂದ್ಯ ಬಹಿಷ್ಕರಿಸಲು ಕೆಲವು ಕ್ರಿಕೆಟಿಗರು ಕರೆ ನೀಡಿದ್ದಾರೆ. ಇದರಿಂದಲೂ ಜನ ಖರೀದಿಗೆ ಹಿಂದೇಟು ಹಾಕಿರಬಹುದು ಎನ್ನಲಾಗಿದೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿಯಂತಹ ಕ್ರಿಕೆಟಿಗರು ಈ ಬಾರಿ ಆಡದಿರುವುದೂ ಪ್ರೇಕ್ಷಕರ ಅನಾಸಕ್ತಿಗೆ ಕಾರಣವಾಗಿದೆ ಎಂಬ ವಿಶ್ಲೇಷಣೆಗಳೂ ಇವೆ.

### ಫಿಟ್ನೆಸ್‌ಗಾಗಿ ಈಗ ಯೋ-ಯೋ ಅಲ್ಲ ಬ್ರಾಂಕೊ ಟೆಸ್ಟ್!

**2017ರಿಂದ ಭಾರತ ಕ್ರಿಕೆಟ್ ತಂಡ ಫಿಟ್ನೆಸ್‌ಗಾಗಿ ಬಳಸುತ್ತಿದ್ದ ಯೋ-ಯೋ ಟೆಸ್ಟ್ ಈಗ ಬದಿಗೆ ಸರಿದಿದೆ. ಅದರ ಬದಲು ಬ್ರಾಂಕೊ ಟೆಸ್ಟ್‌ನ ಕಾಲ ಆರಂಭವಾಗಿದೆ. ನೂತನ ದೈಹಿಕ ತರಬೇತುದಾರ ಅಡ್ರಿಯಾನ್ ಲೆ ರೌಕ್ಸ್ ಇದನ್ನು ಪರಿಚಯಿಸಿದ್ದಾರೆ. ಈ ಟೆಸ್ಟ್ 20, 40, 60 ಮೀಟರ್ ಓಟದ 3 ಸೆಟ್‌ಗಳನ್ನೊಳಗೊಂಡಿದೆ. ಈ ಮೂರೂ ಸೇರಿದ ಓಟವನ್ನು 5 ಬಾರಿ ವಿಶ್ರಾಂತಿಯಿಲ್ಲದೇ ಮುಗಿಸಬೇಕು. ಒಟ್ಟಾರೆ ಇದಕ್ಕೆ ಅವಧಿ 6 ನಿಮಿಷ. ಹೀಗೆ ಒಬ್ಬ ಆಟಗಾರ 1200 ಮೀ. ಓಡಿರಬೇಕಾಗುತ್ತದೆ. ಇದರಿಂದ ಆಟಗಾರನ ಪಕ್ಕಾ ಕ್ಷಮತೆ ಗೊತ್ತಾಗುತ್ತದೆ. ಯೋ ಯೋದಲ್ಲಿ ಒಬ್ಬ ಆಟಗಾರ 20 ಮೀ.ಗಳನ್ನು 2 ಬಾರಿ ಓಡಿದರೆ 10 ಸೆಕೆಂಡ್ ವಿಶ್ರಾಂತಿ ಪಡೆಯಬಹುದು. ಆದರೆ ವೇಗವನ್ನು ವರ್ಧಿಸಿಕೊಳ್ಳುತ್ತಲೇ ಇರಬೇಕು. ಒಮ್ಮೆ ವೇಗ ಏರಿಸಲು ಸಾಧ್ಯವಿಲ್ಲ ಎಂದು ಗೊತ್ತಾದಾಗ ಪರೀಕ್ಷೆ ನಿಲ್ಲುತ್ತಿತ್ತು. ಕನಿಷ್ಠ 17.1 ಅಂಕ ಪಡೆದರೆ ಈ ಪರೀಕ್ಷೆಯಲ್ಲಿ ಆಟಗಾರನೊಬ್ಬ ಉತ್ತೀರ್ಣನಾಗುತ್ತಾನೆ.**

## ವಿಟಾಕೀಸ್

## ಮಧ್ಯಮ ವರ್ಗದ ಹುಡುಗರ ಕಥೆ ವ್ಯಥೆ

ಮಧ್ಯಮ ವರ್ಗದ ಕುಟುಂಬದ ಹುಡುಗರಿಗೆ ಹುಡಗಿ ಸಿಗೋದಿರಲಿ ಹುಡಕೋದೇ ಕಡು ಕಷ್ಟ. ಅದೇ ರಾಮಾಯಣ, ಅದು ಮುಗಿಯದ ಕಥೆಯಾಗಿದೆ. ಆತ ಕೃಷ್ಣ, ತಾಯಿಯ ಮುದ್ದಿನ ಮಗ. ಕೃಷ್ಣನಿಗೆ ತಾನು ಜೀವನದಲ್ಲಿ ಸೆಟಲ್ ಆಗಬೇಕು ಎಂಬ ಆಸೆ. ಆತ ಜೀವನದ ಬಗ್ಗೆ ಹಲವು ಕನಸುಗಳನ್ನು ಕಟ್ಟಿಕೊಂಡಿರುತ್ತಾನೆ. ಆತನ ತಾಯಿಗೆ ತನ್ನ ಮಗನಿಗೆ ಒಳ್ಳೆಯ ವಧು ನೋಡಿ ಮದುವೆ ಮಾಡಬೇಕು ಎಂಬ ಹಂಬಲ. ಅದಕ್ಕಾಗಿ ವಧು ಅನ್ವೇಷಣೆಯೂ ನಡೆಯುತ್ತದೆ. ಒಂದಾ ಎರಡು ಹತ್ತಾರು ಹುಡುಗಿಯರನ್ನು ನೋಡಿದರೂ ಕೃಷ್ಣನ್ನಿಗೆ ವಧು ಸೆಟ್ ಆಗೋದೇ ಇಲ್ಲ. ಅದಕ್ಕೆ ಕಾರಣ ಆತ ಮಿಡಲ್ ಕ್ಲಾಸ್ ಹುಡುಗ ಅನ್ನೋದು. ಅದಕ್ಕೂ ಹೆಚ್ಚಾಗಿ ಆತನಿಗೆ ಸರಿಯಾದ ಕೆಲಸವಿಲ್ಲ ಎಂಬುದೇ ಅವನಿಗೆ ತೊಡಕಾಗಿರುತ್ತದೆ. ಹೀಗಿದ್ದ ಮೇಲೆ ಒಳ್ಳೆಯ ಜೀವನ ಕಟ್ಟಿಕೊಳ್ಳೋದು ಹೇಗೆ ಎಂಬ ಅನುಮಾನ ಹೆಣ್ಣು ಹೆತ್ತವರಲ್ಲಿರುತ್ತದೆ. ಈ ನಡುವೆಯೇ ಸೌಂದರ್ಯಾ, ಕೃಷ್ಣನಿಗೆ ಒಪ್ಪಿಗೆಯಾಗುತ್ತಾಳೆ. ಕೃಷ್ಣ ಸುಂದರಿ ಸೌಂದರ್ಯಾ ಹಾಗೂ ಕೃಷ್ಣನ ವಿವಾಹ ನೆರವೇರುತ್ತದೆಯೆ. ಇಬ್ಬರ ಮದುವೆಗೆ ಯಾವೆಲ್ಲಾ ಸವಾಲುಗಳು ಕಾಡುತ್ತವೆ. ಕೃಷ್ಣನ ಕಸನು ನನಸಾಗುತ್ತದೆಯೆ ಹೀಗೆ ಎಲ್ಲವನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ಚಿತ್ರ: ಮಿಡಲ್ ಕ್ಲಾಸ್ ರಾಮಾಯಣ
ನಿರ್ದೇಶನ: ಧನುಷ್ ಗೌಡ
ನಿರ್ಮಾಣ: ಜಯರಾಮ್
ತಾರಾಗಣ: ವಿನು, ಮೋಕ್ಷಿತಾ, ಯುಕ್ತಾ, ವೀಣಾ ಸುಂದರ್, ಎಸ್. ನಾರಾಯಣ್ ಮುಂತಾದವರು.
ರೇಟಿಂಗ್ : ★★★

ಇಲ್ಲಿ ಕಾಮಿಡಿ ಇದೆ, ಎಮೋಷನ್ ಇದೆ, ಮಧ್ಯಮ ವರ್ಗದ ಕುಟುಂಬದಿಂದ ಬಂದ ಹುಡುಗರ ಕಥೆ ವ್ಯಥೆಯೂ ಇದೆ. ಮಿಡಲ್ ಕ್ಲಾಸ್ ರಾಮಾಯಣ ಕಾಲ್ಪನಿಕ ಕಥೆಯಾದರೂ ನಮ್ಮ ಸುತ್ತಮುತ್ತಲೇ ನಡೆಯುತ್ತಿರುವ ಘಟನೆಗಳನ್ನು ನೆನಪಿಸುತ್ತದೆ. ಇಂತಹ ಕಥೆಯನ್ನು ಆಯ್ದು ಅದನ್ನು ಎಲ್ಲರಿಗೂ ಕನೆಕ್ಟ್ ಆಗುವಂತೆ ಕಟ್ಟಿಕೊಟ್ಟಿಕೊಡುವಲ್ಲಿ ನಿರ್ದೇಶಕ ಧನುಷ್ ಗೌಡ ಯಶಸ್ವಿಯಾಗಿದ್ದಾರೆ. ಇದು ಇಂದಿನ ಟ್ರೆಂಡ್‌ಗೆ ಹೇಳಿ ಮಾಡಿಸಿದ ಕಥೆಯಾಗಿದ್ದು ಎಲ್ಲರನ್ನೂ ಸೆಳೆಯುತ್ತದೆ.

ವಿನು ಗೌಡ ನಾಯಕನಾಗಿ ನಟಿಸಿದ್ದು ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಮೋಕ್ಷಿತಾ ಪೈ ಸೌಂದರ್ಯಾಳ ಪಾತ್ರದಲ್ಲಿ ಡಿ ಗ್ಲಾಮರ್ ಆಗಿ ಮಿಂಚಿದ್ದು, ತಮ್ಮ ಪಾತ್ರಕ್ಕೆ ಜೀವ ತುಂಬಿ ನಟಿಸಿದ್ದಾರೆ. ಎಸ್ .ನಾರಾಯಣ್, ವೀಣಾ ಸುಂದರ್ ಅವರ ಸಾದಾ ಸೀದಾ ಅಭಿನಯ ಇಲ್ಲಿಯೂ ಮುಂದುವರಿದಿದೆ. ಯುಕ್ತಾ, ಜಗ್ಗಪ್ಪ, ತುಕಾಲಿ ಸಂತು, ಶೋಭರಾಜ್ ಹೀಗೆ ಎಲ್ಲರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಸಂಗೀತ, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಮಿಡಲ್ ಕ್ಲಾಸ್ ರಾಮಾಯಣ ಎಲ್ಲರಿಗೂ ಹೊಂದುವ ಕಥೆಯಾಗಿದ್ದು ಮನೆಮಂದಿಯೆಲ್ಲಾ ಕುಳಿತು ನೋಡಬಹುದಾದ ಸಿನಿಮಾವಾಗಿದೆ.

## ಶಾಲೆ ಉಳಿಸಲು ಮಕ್ಕಳ ಸಾಹಸ

ಇಂದು ನಗರ ಮಾತ್ರವಲ್ಲ ಗ್ರಾಮೀಣ ಪ್ರದೇಶಗಳಲ್ಲಿಯೂ ವಿದ್ಯಾರ್ಥಿಗಳಿಲ್ಲದೆ ಸರಕಾರಿ ಶಾಲೆಗಳು ಮುಚ್ಚುತ್ತಿವೆ. ಹೀಗೆ ಶಾಲೆಗಳು ಮುಚ್ಚಲು ಕಾರಣವೇನು ಎಂಬುದನ್ನು ಗುರಿ ಚಿತ್ರದ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಅದು ಕೋಲಾರದ ಕುಪ್ಪಹಳ್ಳಿಯ ಸರಕಾರಿ ಶಾಲೆ. ಆ ಶಾಲೆಯಲ್ಲಿ ವಿದ್ಯಾರ್ಥಿಗಳು ಸಂತಸದಿಂದ ವ್ಯಾಸಂಗ ಮಾಡುತ್ತಿರುತ್ತಾರೆ. ಹೀಗಿರುವಾಗಲೇ ಆ ಊರಿನ ಪಕ್ಕದಲ್ಲಿ ಖಾಸಗಿ ಶಾಲೆ ತೆರೆಯುತ್ತದೆ. ಖಾಸಗಿ ಶಾಲೆಯವರು ಪೋಷಕರಿಗೆ ಆಮಿಷವೊಡ್ಡಿ ಸರಕಾರಿ ಶಾಲೆಯ ಮಕ್ಕಳನ್ನು ತಮ್ಮ ಶಾಲೆಗೆ ಸೇರುವಂತೆ ಮಾಡುತ್ತಾನೆ. ಇತ್ತ ಹಳ್ಳಿಯ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿಯುತ್ತದೆ. ಭ್ರಷ್ಟ ಅಧಿಕಾರಿಗಳು ಹಣದಾಸೆಗಾಗಿ ವಿದ್ಯಾರ್ಥಿಗಳಿಲ್ಲದ ಸರಕಾರಿ ಶಾಲೆಯನ್ನು ಮುಚ್ಚಿಸುತ್ತಾರೆ. ಇದರಿಂದ ಕೆಲವು ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬೇಕಾಗುತ್ತದೆ. ಆ ಮಕ್ಕಳು ತಮ್ಮ ಶಾಲೆಯನ್ನು ತೆರೆಯಬೇಕು ಎಂಬ ಛಲತೊಟ್ಟು ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಬೆಂಗಳೂರಿಗೆ ಬರುತ್ತಾರೆ. ಮೊದಲೇ ಹಳ್ಳಿ ಮಕ್ಕಳು ಗೊತ್ತಿಲ್ಲದ ಮಹಾನಗರಕ್ಕೆ ಬಂದು ಯಾವೆಲ್ಲಾ ಸಮಸ್ಯೆಗಳನ್ನು ಎದಿರಿಸುತ್ತಾರೆ. ತಾವು ಗುರಿ ಇಟ್ಟುಕೊಂಡಂತೆ ಮುಚ್ಚಿದ್ದ ಶಾಲೆಯನ್ನು ಮರಳಿ ತೆರೆಸುವಲ್ಲಿ ಯಶಸ್ವಿಯಾಗುತ್ತಾರಾ ಎಂಬುದೇ ಕಥೆಯ ಸಾರಾಂಶ. ಅದೆಲ್ಲವನ್ನು ತೆರೆಯಲ್ಲಿ ನೋಡಿದರೆ ಚೆಂದ.

ಚಿತ್ರ : ಗುರಿ
ನಿರ್ದೇಶನ : ಎಂ.ಸೆಲ್ವಂ
ನಿರ್ಮಾಣ : ವಿಷ್ಣುದುರ್ಗಾ ಪ್ರೊಡಕ್ಷನ್ಸ್
ತಾರಾಗಣ : ಅಚ್ಯುತ್ ಕುಮಾರ್, ಅವಿನಾಶ್, ಜೀವಿತ್, ಮಹಾನಿಧಿ ಮುಂತಾದವರು.
ರೇಟಿಂಗ್ : ★★★

ಗುರಿ ಸಾಮಾಜಿಕ ಸಂದೇಶ ಸಾರುವ ಸಿನಿಮಾವಾಗಿದ್ದು, ಎಲ್ಲರೂ ಅರಿತುಕೊಳ್ಳಬೇಕಾದ, ಸರಕಾರಿ ಶಾಲೆಯನ್ನು ಉಳಿಸಬೇಕಾದ ಎಂಬ ವಿಚಾರಗಳು ಸಿನಿಮಾದಲ್ಲಿವೆ. ಸರಕಾರಿ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುವ ಕುರಿತಂತೆ ನಿರ್ದೇಶಕ ಎಂ.ಸೆಲ್ವಂ ಅವರ ಈ ಪ್ರಯತ್ನವನ್ನು ಮೆಚ್ಚಲೇಬೇಕು.

ಹಿರಿಯ ನಟ ಅಚ್ಯುತ್ ಕುಮಾರ್ ಶಿಕ್ಷಕರಾಗಿ ಅಭಿನಯಿಸಿದ್ದು, ಆ ಪಾತ್ರಕ್ಕೆ ಹೇಳಿ ಮಾಡಿಸಿದಂತೆ ಹೊಂದಿಕೊಂಡಿದ್ದಾರೆ. ಉಗ್ರಂ ಮಂಜು ಇಲ್ಲಿಯೂ ಉಗ್ರಾವತಾರ ತಾಳಿದ್ದು, ಮನಗೆಲ್ಲುತ್ತಾರೆ. ಚಂದ್ರ ಪ್ರಭ ಕಾಮಿಡಿ ಕಮಾಲ್ ಮಾಡಿದ್ದಾರೆ. ಅವಿನಾಶ್, ಮಹಾನಿಧಿ, ಜೀವಿತ್, ಜಯಶ್ರೀ ತಮ್ಮ ಪಾತ್ರಗಳಿಗೆ ಜೀವತುಂಬಿದ್ದಾರೆ. ಸದ್ಯ ಕಾಡುತ್ತಿರುವ ಸರಕಾರಿ ಶಾಲೆಗಳ ಸಮಸ್ಯೆಗಳ ಕುರಿತಂತೆ ಬೆಳಕು ಚೆಲ್ಲುವ ಗುರಿ ಚಿತ್ರವನ್ನು ಎಲ್ಲರೂ ನೋಡಬಹುದು ಮತ್ತು ನೋಡಲೇಬೇಕಾದ ಸಿನಿಮಾವಾಗಿದೆ.

## ಮುತ್ತರಸನಾದ ಮಡೆನೂರು ಮನು

ರಿಯಾಲಿಟಿ ಶೋ ಮೂಲಕ ಜನಪ್ರಿಯತೆ ಪಡೆದಿದ್ದ ಮಡೆನೂರು ಮನು, ಕುಲದಲ್ಲಿ ಕೀಳ್ಯಾವುದೊ ಚಿತ್ರದ ಮೂಲಕ ನಾಯಕನಾಗಿ ಪರಿಚಿತರಾದರು. ಈಗ ಮನು ಮುತ್ತರಸನಾಗಿ ಮಿಂಚಲು ಸಿದ್ಧವಾಗುತ್ತಿದ್ದಾರೆ. ಜೆ.ಕೆ.ಮೂವೀಸ್ ಲಾಂಛನದಲ್ಲಿ ಕೆ.ಎಂ.ನಟರಾಜ್ ನಿರ್ಮಿಸುತ್ತಿರುವ ಮತ್ತರಸ ಚಿತ್ರದಲ್ಲಿ ಮನು ನಾಯಕನಾಗಿ ನಟಿಸುತ್ತಿದ್ದಾರೆ. ಪದ್ಮಶ್ರೀ ಪುರಸ್ಕೃತರಾದ ಮಂಜಮ್ಮ ಜೋಗತಿ ಮತ್ತರಸ ಚಿತ್ರದ ಶೀರ್ಷಿಕೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕೆಲವು ದಿನಗಳ ಹಿಂದೆ ನನ್ನ ಜೀವನದಲ್ಲಿ ಆದ ಕಹಿ ಘಟನೆಗಳನೆಲ್ಲಾ ಮರೆತಿದ್ದೇನೆ, ಸದ್ಯಕ್ಕೆ ಯಾವುದೇ ಸಮಸ್ಯೆಗಳು ಇಲ್ಲ, ಹಾಗಾಗಿ ಮತ್ತೆ ನಟನೆಯತ್ತ ಗಮನಹರಿಸಿದ್ದೇನೆ. ಸದ್ಯ ನನ್ನ ಹೊಸ ಸಿನಮಾದ ಶೀರ್ಷಿಕೆ ಬಿಡುಗಡೆಯಾಗಿದ್ದು, ಮತ್ತರಸ ಟೈಟಲ್‌ನಲ್ಲಿ ಸಿನಿಮಾ ಮೂಡಿಬರಲಿದೆ. ನಾನು ವಸಿಷ್ಠ ಸಿಂಹ ಅವರೊಂದಿಗೆ ತಲ್ವಾರ್ ಪೇಟೆ ಚಿತ್ರದಲ್ಲಿ ನಟಿಸಿದ್ದೇನೆ. ಈಗ ವಸಿಷ್ಠ ಸಿಂಹ ನಮ್ಮ ಸಿನಿಮಾಗೆ ಶುಭಕೋರಿರುವುದು ಖುಷಿಕೊಟ್ಟಿದೆ. ನಿರ್ದೇಶಕ ರಾಮ್ ನಾರಾಯಣ್ ಮುತ್ತರಸ ಚಿತ್ರದ ಶೀರ್ಷಿಕೆ ಸೂಚಿಸಿದರು, ಇದು ಕೇಳಲು ಪಂಚಿಂಗ್ ಆಗಿದೆ. ಮುಂದಿನ ತಿಂಗಳಿನಿಂದ ಈ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಆದಷ್ಟು ಬೇಗ ಶೂಟಿಂಗ್ ಮುಗಿಸಿ ತೆರೆಗೆ ತರುವ ಪ್ಲಾನ್ ಇದೆ. ಆ್ಯಕ್ಷನ್ ಜತೆಗೆ ಥ್ರಿಲ್ಲಿಂಗ್ ಅಂಶಗಳು ಕೂಡ ಚಿತ್ರದಲ್ಲಿ ಬೆರೆತಿವೆ. ಸ್ಟಾರ್ ನಿರ್ದೇಶಕರೊಬ್ಬರು ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದು, ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಈ ವರ್ಷದ ಅಂತ್ಯಕ್ಕೆ ನಾನು ನಟಿಸಿರುವ ವಿಚಾರಣೆ ಚಿತ್ರ ಕೂಡ ತೆರೆಗೆ ಬರಲಿದೆ ಎಂದು ಮನು ತಿಳಿಸಿದರು. ಮನು ನನ್ನ ಹಿಂದಿನ ನಿರ್ಮಾಣದ ಚಿತ್ರದಲ್ಲೂ ನಟಿಸಿದ್ದರು. ಈಗ ನನ್ನ , ಅವರ ಕಾಂಬಿನೇಷನ್‌ನಲ್ಲಿ ಎರಡನೇ ಚಿತ್ರ ಮೂಡಿಬರುತ್ತಿದೆ ಎಂದು ಚಿತ್ರದ ನಿರ್ಮಾಪಕ ನಟರಾಜ್ ತಿಳಿಸಿದರು.

## ಮರಳಿ ಮನಸಾಗಿದೆ ಎಂದ ಪ್ರೇಮ

ಬೆನಕ ಟಾಕೀಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಮರಳಿ ಮನಸಾಗಿದೆ ಚಿತ್ರದ ಮತ್ತೊಂದು ಹಾಡು ಬಿಡುಗಡೆಯಾಗಿದೆ. ನಟಿ ಪ್ರೇಮಾ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕೆ.ಕಲ್ಯಾಣ್ ರಚಿಸಿರುವ ಓಡುವ ನದಿಗೆ.. ಎಂಬ ಹಾಡು ಇದಾಗಿದ್ದು, ಅನುರಾಧಾ ಭಟ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ. ಸದ್ಯ ಸಂಗೀತ ಪ್ರಿಯರ ಮನಗೆದ್ದಿರುವ ಈ ಗೀತೆಗೆ ವಿನು ಮನಸು ಸಂಗೀತ ಸಂಯೋಜಿಸಿದ್ದಾರೆ. ನಿರ್ದೇಶಕ ನಾಗರಾಜ್ ಶಂಕರ್ ಅವರೆ ಚಿತ್ರಕ್ಕೆ ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ಅರ್ಜುನ್ ವೇದಾಂತ್ ನಾಯಕನಾಗಿ ನಟಿಸಿದ್ದಾರೆ. ನಿರೀಕ್ಷಾ ಶೆಟ್ಟಿ ನಾಯಕಿಯಾಗಿ ಅಭಿನಯಿಸಿದ್ದಾರೆ.

ಟಿ.ಎಸ್.ನಾಗಭರಣ, ಸ್ವಾತಿ, ಸಂಗೀತ, ಮಾನಸಿ ಸುಧೀರ್, ಭೋಜರಾಜ್ ವಾಮಂಜೂರ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಈವರೆಗೂ ಬಿಡುಗಡೆಯಾಗಿರುವ ಚಿತ್ರದ ಮೂರು ಹಾಡುಗಳು ಕೂಡ ಜನಮನಸೂರೆಗೊಂಡಿದೆ. ಈಗ ನಾಲ್ಕನೇಯ ಹಾಡು ಸಂಗೀತ ಪ್ರಿಯರನ್ನು ಸೆಳೆಯುವ ನಿರೀಕ್ಷೆ ಇದೆ. ಯುವಜನತೆಯ ಮನಸೂರೆಗೊಳ್ಳುವ ಪ್ರೇಮಕಥೆಯ ಜತೆಗೆ ಸೆಂಟಿಮೆಂಟ್ ಸ್ಟೋರಿಯೂ ಸಿನಿಮಾದಲ್ಲಿದೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ಭರದಿಂದ ಸಾಗುತ್ತಿವೆ. ಎಸ್.ಹಾಲೇಶ್ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಅಲ್ಟಿಮೇಟ್ ಶಿವು ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.